ದೂರದರ್ಶನ ಧಾರಾವಾಹಿಗಳಲ್ಲಿ ಕನ್ನಡ

(ಆಯ್ದ ಧಾರಾವಾಹಿಗಳನ್ನು ಅನುಲಕ್ಷಿಸಿ)

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕರು
ಕುಮಾರ ಸಿ. ನಿರಂಜನಪ್ಪ ಸಿ.

ಮಾರ್ಗದರ್ಶಕರು
ಡಾ. ಪಿ. ಮಹಾದೇವಯ್ಯ
ಪ್ರಾಧ್ಯಾಪಕರು

ಕನ್ನಡ ಭಾಷಾಧ್ಯಯನ ವಿಭಾಗ
ಭಾಷಾನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೧೫

ದೂರದರ್ಶನ ಧಾರಾವಾಹಿಗಳಲ್ಲಿ ಕನ್ನಡ

(ಆಯ್ದ ಧಾರಾವಾಹಿಗಳನ್ನು ಅನುಲಕ್ಷಿಸಿ)

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ. ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕರು

ಕುಮಾರ ಸಿ. ನಿರಂಜನಪ್ಪ ಸಿ.

ಮಾರ್ಗದರ್ಶಕರು

ಡಾ. ಪಿ. ಮಹಾದೇವಯ್ಯ

ಪ್ರಾಧ್ಯಾಪಕರು

ಕನ್ನಡ ಭಾಷಾಧ್ಯಯನ ವಿಭಾಗ

ಭಾಷಾನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೧೫

ಮಾರ್ಗದರ್ಶಕರ ದೃಢೀಕರಣ ಪತ್ರ

ಕುಮಾರ ಸಿ.ನಿರಂಜನಪ್ಪ ಸಿ. ಇವರು ಪಿಎಚ್.ಡಿ. ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ **ದೂರದರ್ಶನ ಧಾರಾವಾಹಿಗಳಲ್ಲಿ ಕನ್ನಡ(ಆಯ್ದ ಧಾರಾವಾಹಿಗಳನ್ನು ಅನುಲಕ್ಷಿಸಿ)** ಎಂಬ ಈ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ **ಕನ್ನಡ ಭಾಷಾಧ್ಯಯನ ವಿಭಾಗಕ್ಕೆ** ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರೇ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ದೃಢೀಕರಿಸಲಾಗಿದೆ.

ಮಾರ್ಗದರ್ಶಕರು

ಡಾ. ಪಿ. ಮಹಾದೇವಯ್ಯ
ಪ್ರಾಧ್ಯಾಪಕರು
ಕನ್ನಡ ಭಾಷಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಸ್ಥಳ: ವಿದ್ಯಾರಣ್ಯ
ದಿನಾಂಕ: ೪.೬.೧೫

ಸಂಶೋಧಕರ ಘೋಷಣಾ ಪತ್ರ

ದೂರದರ್ಶನ ಧಾರಾವಾಹಿಗಳಲ್ಲಿ ಕನ್ನಡ(ಆಯ್ದ ಧಾರಾವಾಹಿಗಳನ್ನು ಅನುಲಕ್ಷಿಸಿ) ಎಂಬ ಈ ಮಹಾಪ್ರಬಂಧವನ್ನು ಪಿಎಚ್.ಡಿ.ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯ, **ಕನ್ನಡ ಭಾಷಾಧ್ಯಯನ ವಿಭಾಗದ** ಸಹ ಪ್ರಾಧ್ಯಾಪಕರಾದ ಡಾ.ಪಿ.ಮಹಾದೇವಯ್ಯ ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರೇ ಉದ್ದೇಶಗಳಿಗೆ ಬಳಸಿಕೊಂಡಿಲ್ಲ ವೆಂದು ಈ ಮೂಲಕ ಘೋಷಿಸುತ್ತೇನೆ.

ಸಂಶೋಧಕರು

ಕುಮಾರ ಸಿ.ನಿರಂಜನಪ್ಪ ಸಿ.
ಪಿಎಚ್.ಡಿ.ಸಂಶೋಧನ ವಿದ್ಯಾರ್ಥಿ
ಕನ್ನಡ ಭಾಷಾಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಸ್ಥಳ : ವಿದ್ಯಾರಣ್ಯ
ದಿನಾಂಕ : ೨೧. ೯. ೨೦೧೫

ಪರಿವಿಡಿ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಹಾಗೂ ವಿಧಾನ

೧.೧. ಅಧ್ಯಯನದ ಉದ್ದೇಶ

೧.೨. ಅಧ್ಯಯನದ ವ್ಯಾಪ್ತಿ

೧.೩. ಅಧ್ಯಯನದ ಸ್ವರೂಪ

೧.೪. ಅಧ್ಯಯನದ ವಿಧಾನ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ ಸ್ವರೂಪ ಹಾಗೂ ವಿಧಾನ

ಕನ್ನಡ ನಾಡು ನುಡಿ ಸಂಸ್ಕೃತಿಯನ್ನು ಉಳಿಸಿ, ಬೆಳೆಸುವಲ್ಲಿ ಸಮೂಹ ಮಾಧ್ಯಮಗಳು ಅವಿರತವಾಗಿ ದುಡಿಯುತ್ತಿವೆ ಎಂದರೆ ತಪ್ಪಾಗಲಾರದು. ಕನ್ನಡ ಭಾಷೆಯನ್ನು ಉಳಿಸಿ, ಬೆಳೆಸಲು ಸಮೂಹ ಮಾಧ್ಯಮಗಳಾದ ದಿನಪತ್ರಿಕೆಗಳು, ವಾರಪತ್ರಿಕೆಗಳು, ನಿಯತಕಾಲಿಕೆಗಳು, ಅರ್ಧಮಾಸಿಕ, ಮಾಸಿಕ, ತ್ರೈಮಾಸಿಕ ಪತ್ರಿಕೆಗಳು ಹಾಗೂ ದೃಕ್ ಶ್ರವಣೋಪಕರಣಗಳಾದ ಬಾನುಲಿ, ದೂರದರ್ಶನ, ನಾಟಕ, ಮೊಬೈಲ್, ಚಲನಚಿತ್ರಗಳು ಮುಂತಾದ ಸಮೂಹ ಮಾಧ್ಯಮಗಳು ಕೆಲಸ ಮಾಡುತ್ತಿವೆ. ಮಾಧ್ಯಮಗಳು ಇಂದು ಕೇವಲ ಸುದ್ದಿಮಾಹಿತಿಯನ್ನು ಬಿತ್ತರಿಸುವುದಷ್ಟೆ ಅಲ್ಲದೆ ನಾಡು ನುಡಿ, ಸಂಸ್ಕೃತಿ ಹಾಗೂ ಸಾಮಾಜಿಕ, ರಾಜಕೀಯ, ಆಡಳಿತಾತ್ಮಕ ವಿಧಾನವನ್ನು ಕುರಿತು ಅನೇಕ ಮನೋರಂಜನೆ ಕಾರ್ಯಕ್ರಮಗಳನ್ನು ಬಿತ್ತರಿಸುತ್ತಿವೆ. ಇವುಗಳಲ್ಲಿ ಪರಿಣಾಮಕಾರಿಯಾಗಿ ಹಾಗೂ ಜನಪ್ರಿಯವಾಗಿರುವ ಮಾಧ್ಯಮವೇ ದೂರದರ್ಶನ. ದೂರದರ್ಶನವು ಇಂದು ಬಡವ-ಬಲ್ಲಿದ, ಹೆಣ್ಣು-ಗಂಡು, ಜಾತಿ-ವಿಜಾತಿ ಎಂಬ ಸಂಕರಗಳಿಲ್ಲದೆ ಎಲ್ಲರ ಗಮನವನ್ನು ಸೆಳೆದಿರುವ ಮಾಧ್ಯಮವಾಗಿ ಹೊರಹೊಮ್ಮಿದೆ. ದೂರದರ್ಶನವು ಹಲವು ಕಾರ್ಯಕ್ರಮಗಳನ್ನು ಪ್ರಸಾರ ಮಾಡುತ್ತದೆ. ಅವುಗಳಲ್ಲಿ ಧಾರಾವಾಹಿಗಳ ಪಾತ್ರ ತುಂಬ ಪರಿಣಾಮಕಾರಿಯಾದದ್ದು. ಏಕೆಂದರೆ ಸಾಮಾಜಿಕ ಹಾಗೂ ಕೌಟುಂಬಿಕ ಬದುಕನ್ನು ಬಿಂಬಿಸುವಲ್ಲಿ ಧಾರಾವಾಹಿಗಳು ಸಾಂಸಾರಿಕ ಬದುಕಿನ ವಿವರಗಳನ್ನು ಭಾಷಿಕವಾಗಿ ಭಿನ್ನ ನೆಲೆಯಲ್ಲಿ ಬಳಸಿ ನಿರೂಪಿಸಲಾಗುತ್ತಿದೆ. ಪ್ರಾದೇಶಿಕ ಉಪಭಾಷೆಗಳ ಬಳಕೆ, ಅನ್ಯ ಭಾಷಾಬಳಕೆ, ಗಾದೆ ಮಾತುಗಳ ಬಳಕೆ, ನುಡಿಬೆರಕೆ-ನುಡಿಜಿಗಿತ ಹಾಗೂ ಲಿಂಗಸಂಬಂಧಿ ಆಯಾಮಗಳು ಸಾಮಾಜಿಕ ಬದುಕಿನ ವಿವರಗಳನ್ನು ಧಾರಾವಾಹಿಗಳಲ್ಲಿ ಭಿನ್ನ ಭಿನ್ನ ನೆಲೆಯಲ್ಲಿ ಭಾಷೆ ಪ್ರಯೋಗವಾಗುವುದನ್ನು ನಾವು ಅನೇಕ ಧಾರಾವಾಹಿಗಳಲ್ಲಿ ಗುರುತಿಸಬಹುದು.

ಧಾರಾವಾಹಿಗಳಲ್ಲಿ ಒಂದು ಸಾಮಾಜಿಕ ಕಳಕಳಿಯನ್ನು ಹೊಂದಿರುವ ವಿಷಯವನ್ನು ಕುರಿತು ಚಿತ್ರಿಸಿದರೂ ಕೂಡ ಧಾರಾವಾಹಿಗಳು ಬುದ್ಧಿಜೀವಿಗಳ ಸೂಕ್ಷ್ಮವಾದ ವಿರೋಧಕ್ಕೆ ಒಳಗಾಗುತ್ತಿದ್ದವು. ಆದರೆ ಇಂದು ಪ್ರಸಾರಗೊಳ್ಳುತ್ತಿರುವ ಧಾರಾವಾಹಿಗಳು ಒಂದು ಸಾಮಾಜಿಕ ಕಳಕಳಿಯನ್ನು ಹೊಂದಿರುವುದಕ್ಕಿಂತ ಆಧುನಿಕತೆಯ ವಾಹಕವಾಗಿ, ಸಮಾಜ ಎಂದರೆ ಹೀಗೆ ಇರಬೇಕು, ಮಹಿಳೆಯೆಂದರೆ ಹೀಗೆಯೇ ಇರಬೇಕು, ಕೌಟುಂಬಿಕ ವ್ಯವಸ್ಥೆಯೆಂದರೆ ಹೀಗೆ ಇರಬೇಕು ಎಂಬ ನೀತಿಯನ್ನು ಪರೋಕ್ಷವಾಗಿ ಸಮಾಜದಲ್ಲಿ ನೆಲೆಯೂರುವಂತೆ ಮಾಡುತ್ತಿವೆ. ದೂರದರ್ಶನವು ಇಂದು ಯಾರ ವಿರೋಧಕ್ಕೂ ಕಿವಿಗೊಡದೆ ತಾನು ನಡೆದದ್ದೇ ದಾರಿ ಎಂಬಂತೆ ಮುಂದುವರೆಯುತ್ತಿವೆ. ದಿನನಿತ್ಯ ಲಕ್ಷಾಂತರ ಜನರನ್ನು ತಲುಪುವ ದೂರದರ್ಶನದಲ್ಲಿ ಪ್ರಸಾರಗೊಳ್ಳುತ್ತಿರುವ ಕಾರ್ಯಕ್ರಮಗಳು ಮತ್ತು ಧಾರಾವಾಹಿಗಳು ಒಂದು ವರ್ಗದ, ಒಂದು ಸಮುದಾಯದವರ ಮನಸ್ಥಿತಿಯನ್ನು ಮತ್ತು ಯೋಚನಾಶಕ್ತಿಯನ್ನೇ ಬದಯಲಾಯಿಸಿ ಬಿಡುವಂತಹ ಸಾಮರ್ಥ್ಯ ಹೊಂದಿರುತ್ತದೆ ಎಂಬುದನ್ನು ಅಲ್ಲಗಳೆಯುವಂತಿಲ್ಲ.

ಇಂದು ದೂರದರ್ಶನದಲ್ಲಿ ಪ್ರಸಾರಗೊಳ್ಳುವ ಧಾರಾವಾಹಿಗಳ ನಿರ್ಮಾಣವನ್ನು ಗಮನಿಸಿದರೆ ಅವು ಮುಕ್ತವಾಗಿ ಆಗುವುದಿಲ್ಲ. ಯಾವುದೇ ಒಂದು ವಸ್ತುವಿನ ಉತ್ಪಾದನೆ ಮಾಡುವಾಗ ಆ ವಸ್ತುವಿಗೆ ಸಂಬಂಧಿಸಿದಂತಹ ಬಂಡವಾಳ, ಮಾರುಕಟ್ಟೆ, ತಂತ್ರಜ್ಞಾನ, ವಿಜ್ಞಾನ ಅದರ ಪ್ರಯೋಜನಗಳು ಮತ್ತು ಪರಿಣಾಮಗಳನ್ನು ಕುರಿತು ಚಿಂತನೆ ಮಾಡಿ ಉತ್ಪಾದಿಸಬೇಕಾಗುತ್ತದೆ. ಹಾಗೆಯೇ ಧಾರಾವಾಹಿಗಳನ್ನು ನೋಡುವವರ ಹಿತಾಸಕ್ತಿಗಳನ್ನು ಗಮನದಲ್ಲಿಟ್ಟುಕೊಂಡು ನಿರ್ಮಾಣ ಮಾಡಬೇಕಾಗುತ್ತದೆ. ನಿರ್ಮಾಣಗೊಳ್ಳುತ್ತಿರುವ ಧಾರಾವಾಹಿ ಗಳು ಹಲವು ಕಥಾವಸ್ತುವನ್ನಿಟ್ಟುಕೊಂಡು ನಿರ್ಮಾಣಗೊಳ್ಳುತ್ತವೆ. ಅದರಲ್ಲೂ ಭಾಷಾ ಬಳಕೆಯನ್ನು ಸಂದರ್ಭಕ್ಕೆ ಹಾಗೂ ಸನ್ನಿವೇಶಕ್ಕೆ ಹೊಂದಿಕೊಳ್ಳುವಂತೆ ಭಿನ್ನ ನೆಲೆಯಲ್ಲಿ ಬಳಕೆಗೊಳ್ಳುತ್ತದೆ. ಧಾರಾವಾಹಿಗಳಲ್ಲಿನ ಭಾಷೆ ಪ್ರಾದೇಶಿಕವೇ, ಸಾಮಾಜಿಕವೇ, ಪ್ರಮಾಣೀಕರಣವೇ ಎಂಬುದನ್ನು ಕುರಿತು ವಿಶ್ಲೇಷಿಸುವುದು ಈ ಅಧ್ಯಯನದ ಪ್ರಮುಖ ಉದ್ದೇಶವಾಗಿದೆ. ಸಮುದಾಯದಲ್ಲಿನ ಕೌಟುಂಬಿಕ ಸನ್ನಿವೇಶಗಳನ್ನು ನಿರೂಪಿಸುವ ಸಂದರ್ಭದಲ್ಲಿ ಸಾಮಾಜಿಕವಾಗಿ ಮೇಲ್ವರ್ಗದ ವ್ಯಕ್ತಿಗಳ ಭಾಷಾ ಬಳಕೆ, ಮಧ್ಯಮವರ್ಗದ ವ್ಯಕ್ತಿಗಳ ಭಾಷಾ ಬಳಕೆ ಹಾಗೂ ಕೆಳವರ್ಗದ ವ್ಯಕ್ತಿಗಳ ಭಾಷಾ ಬಳಕೆ ಹೇಗೆ ಭಿನ್ನವಾಗಿದೆ ಎಂಬುದನ್ನು ಕುರಿತು ವಿಶ್ಲೇಷಿಸುವುದು ಸಹ ಅಧ್ಯಯನದ ಉದ್ದೇಶವಾಗಿದೆ.

ಧಾರಾವಾಹಿಗಳಲ್ಲಿ ಕನ್ನಡ ಭಾಷೆಯ ಮೇಲಾಗಿರುವ ಆಧುನಿಕತೆಯ ಫಲವಾಗಿ ಅನ್ಯ ಭಾಷಾ ಬಳಕೆ ಕುರಿತು ವಿವರಿಸುವುದು ಅಗತ್ಯವಾಗಿದೆ. ಅದರಲ್ಲೂ ವಿಶೇಷವಾಗಿ ಇಂಗ್ಲಿಷ್ ಭಾಷೆಯನ್ನು ಕುರಿತು ವಿಶ್ಲೇಷಿಸುವುದು ಅವಶ್ಯವೆನಿಸುತ್ತದೆ. ಧಾರಾವಾಹಿಗಳಲ್ಲಿ ಬಳಕೆಗೊಳ್ಳುವ ಪುರುಷರ ಭಾಷೆಗಿಂತ ಸ್ತ್ರೀಯರ ಭಾಷೆ ಭಿನ್ನವಾಗಿರುತ್ತದೆ ಎಂಬುದು ವಿದ್ವಾಂಸರ ಅಭಿಪ್ರಾಯ ವಾಗಿದೆ. ಇದು ನಿಜವೇ? ಒಂದು ವೇಳೆ ನಿಜವಾಗಿದ್ದರೆ ಅಂತಹ ಭಾಷಿಕ ಅಂಶಗಳನ್ನು

ಕುರಿತು ವಿಶ್ಲೇಷಿಸುವುದು ಅಧ್ಯಯನದ ಪ್ರಮುಖ ಅಂಶವಾಗಿದೆ.

ಸಮೂಹ ಮಾಧ್ಯಮಗಳ ಪ್ರಭಾವದಿಂದ ಕನ್ನಡ ಭಾಷೆಗೆ ದಕ್ಕೆಯಾಗಿದೆ ಅಂದರೆ ಕನ್ನಡ ಭಾಷಾ ಬಳಕೆ ಗೌಣವಾಗುತ್ತಿದೆ ಎನ್ನುವ ಅಭಿಪ್ರಾಯಗಳಿವೆ. ಹಾಗೆಯೇ ದೂರದರ್ಶನಗಳ ಮುಖಾಂತರವೇ ಕನ್ನಡ ಉಳಿಯುತ್ತಿದೆ ಎನ್ನುವ ಅಭಿಪ್ರಾಯವೂ ಇದೆ. ಈ ಎರಡು ಅಭಿಪ್ರಾಯಗಳಲ್ಲಿ ಯಾವುದು ಸರಿ, ಯಾವುದು ತಪ್ಪು ಎನ್ನುವುದನ್ನು ಶೋಧಿಸುವುದು ಮತ್ತು ಈ ಎರಡು ಅಭಿಪ್ರಾಯಗಳ ಸರಿಯೇ ಎಂಬುದನ್ನು ಶೋಧಿಸುವುದಾಗಿದೆ. ಈ ಎಲ್ಲಾ ಪ್ರಶ್ನೆಗಳನ್ನು ಹಾಕಿಕೊಂಡು ಪ್ರಸ್ತುತ ಅಧ್ಯಯನವನ್ನು ಮುಂದುವರೆಸಲಾಗಿದೆ.

ಇನ್ನು ಹೆಚ್ಚಿನ ಅಭಿಪ್ರಾಯಗಳನ್ನು ಧಾರಾವಾಹಿಗಳನ್ನು ವೀಕ್ಷಿಸುವ ಪ್ರೇಕ್ಷಕರನ್ನು ಹಾಗೂ ವಿದ್ವಾಂಸರನ್ನು ಸಂದರ್ಶಿಸಿ ಮಾಹಿತಿ ಪಡೆಯಲಾಗಿದೆ. ಸ್ವತಃ ನಾನೇ ಧಾರಾವಾಹಿಗಳನ್ನು ವೀಕ್ಷಿಸುವ ಮೂಲಕ ವಿಶ್ಲೇಷಣೆ ಮಾಡಿದ್ದೇನೆ. ಈವರೆಗೂ ಈ ವಿಷಯವನ್ನು ಕುರಿತು ಭಾಷಿಕವಾದ ಅಧ್ಯಯನಗಳು ನಡೆಯದೆ ಇರುವುದರಿಂದ ಪ್ರಸ್ತುತತೆಗೆ ಸೂಕ್ತವಾಗಬಹುದೆಂದು ಅಧ್ಯಯನ ಮಾಡಲಾಗಿದೆ. ಈವರೆಗೆ ಕೇವಲ ಧಾರಾವಾಹಿಗಳ ಬಗ್ಗೆ ವಿಮರ್ಶಾ ಲೇಖನಗಳು ಹಾಗೂ ಮಾಹಿತಿಪೂರ್ಣವಾದ ಲೇಖನಗಳು ಬಿಡಿ ಬಿಡಿ ಪತ್ರಿಕೆಗಳಲ್ಲಿ ಬಂದಿವೆ ವಿನಾ ಸಂಶೋಧನಾ ಲೇಖನಗಳು ಬಂದಿಲ್ಲ. ೨೦೧೨ರಲ್ಲಿ ಕನ್ನಡ ವಿಶ್ವವಿದ್ಯಾಲಯದ ಮಹಿಳಾ ಅಧ್ಯಯನ ವಿಭಾಗದಿಂದ "ದೂರದರ್ಶನ ಧಾರಾವಾಹಿಗಳಲ್ಲಿ ಮಹಿಳಾ ಪ್ರತಿನಿಧೀಕರಣ" ಎಂಬ ನಿಬಂಧ ರಚನೆಯಾಗಿದೆ. ಇದರ ಹೊರತಾಗಿ ಪತ್ರಿಕೆಗಳಲ್ಲಿ ಕೇವಲ ಮಾಹಿತಿ ನೀಡುವ ಆಕರಗಳಿವೆ.

ಧಾರಾವಾಹಿಗಳ ಚಾರಿತ್ರಿಕ ಹಿನ್ನೆಲೆ, ಸಾಮಾಜಿಕ ವಿನ್ಯಾಸ, ನುಡಿಬೆರಕೆ-ನುಡಿಜಗಿತ, ಅನ್ಯಭಾಷಾಬಳಕೆ ಮತ್ತು ಗಾದೆ ಮಾತುಗಳ ಬಳಕೆಯನ್ನು ಭಾಷಿಕವಾಗಿ ವಿಶ್ಲೇಷಿಸಲಾಗಿದೆ. ಇಲ್ಲಿ ಪ್ರಮುಖವಾಗಿ ಶಿಕ್ಷಿತ/ಅಶಿಕ್ಷಿತ, ಮೇಲ್ವರ್ಗ/ಮಧ್ಯಮವರ್ಗ ಮತ್ತು ಕೆಳವರ್ಗ, ನಗರವಾಸಿ/ಗ್ರಾಮೀಣ ಹಾಗೂ ರಾಜಕೀಯ, ಆಡಳಿತಾತ್ಮಕ ಲಿಂಗ ಹಾಗೂ ವಯಸ್ಸು ಈ ಅಂಶಗಳನ್ನು ಆಧಾರವಾಗಿಟ್ಟುಕೊಂಡು ಭಾಷಿಕ ವಿವರಗಳನ್ನು ಅಧ್ಯಯನ ಮಾಡಲಾಗಿದೆ.

ಅಧ್ಯಾಯ ೧: ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಹಾಗೂ ವಿಧಾನ

೧.೧. ಅಧ್ಯಯನದ ಉದ್ದೇಶ: ವಿವಿಧ ವಲಯಗಳಲ್ಲಿ ಬಳಕೆಯಾಗುವ ಕನ್ನಡ ನುಡಿ ಧಾರಾವಾಹಿಗಳಲ್ಲಿ ಹೇಗೆ ಬಳಕೆಯಲ್ಲಿವೆ ಎಂಬುದನ್ನು ಅಧ್ಯಯನ ಮಾಡುವುದಾಗಿದೆ. ಚಾರಿತ್ರಿಕವಾಗಿ ಕನ್ನಡ ಧಾರಾವಾಹಿಗಳಲ್ಲಿ ಭಾಷೆಯ ಬಳಕೆ, ಕಾಲ, ವಸ್ತು, ವಿಷಯಕ್ಕನು ಗುಣವಾಗಿ ಹೇಗೆ ಬಳಕೆ ಆಗಿದೆ ಎಂಬುದನ್ನು ಸಹ ಪ್ರಸ್ತುತ ಅಧ್ಯಯನದಲ್ಲಿ ಚರ್ಚೆ ಮಾಡಲಾಗಿದೆ. ಧಾರಾವಾಹಿಗಳು ಹಲವು ಕಥಾವಸ್ತುವನ್ನಿಟ್ಟುಕೊಂಡು ನಿರ್ಮಾಣ ಗೊಳ್ಳುತ್ತವೆ. ಅದರಲ್ಲಿ ಭಾಷೆಯು ಸಂದರ್ಭಕ್ಕೆ ತಕ್ಕಂತೆ ಸನ್ನಿವೇಶಕ್ಕೆ ಹೊಂದಿಕೊಳ್ಳುವಂತೆ ಭಿನ್ನ ನೆಲೆಯಲ್ಲಿ ಬಳಕೆಗೊಳ್ಳುತ್ತದೆ. ಧಾರಾವಾಹಿಗಳ

ಭಾಷೆ ಪ್ರಾದೇಶಿಕವೇ, ಸಾಮಾಜಿಕವೇ ಅಥವಾ ಪ್ರಮಾಣೀಕರಣವೇ ಎಂಬುದನ್ನು ಕುರಿತು ವಿಶ್ಲೇಷಿಸುವುದು ಈ ಅಧ್ಯಯನದ ಪ್ರಮುಖ ಉದ್ದೇಶವಾಗಿದೆ. ಸಮುದಾಯದಲ್ಲಿನ ಕೌಟುಂಬಿಕ ಸನ್ನಿವೇಶಗಳನ್ನು ನಿರೂಪಿಸುವ ಸಂದರ್ಭದಲ್ಲಿ ಸಾಮಾಜಿಕವಾಗಿ ಮೇಲ್ವರ್ಗದ ವ್ಯಕ್ತಿಗಳ ಭಾಷಾ ಬಳಕೆ ಸಾಮಾನ್ಯ ಕುಟುಂಬದ ವ್ಯಕ್ತಿಗಳ ಭಾಷಾಬಳಕೆ ಹಾಗೂ ಕೆಳವರ್ಗದ ವ್ಯಕ್ತಿಗಳ ಭಾಷಾಬಳಕೆ ಹೇಗೆ ಭಿನ್ನವಾಗಿದೆ ಎಂಬುದನ್ನು ಕುರಿತು ವಿಶ್ಲೇಷಿಸುವುದು ಸಹ ಅಧ್ಯಯನ ಉದ್ದೇಶವಾಗಿದೆ(ಆರ್ಥಿಕತೆಯನ್ನು ಆಧರಿಸಿ ಮೇಲ್ವರ್ಗ, ಮಧ್ಯಮವರ್ಗ, ಕೆಳವರ್ಗವೆಂದು ವಿಂಗಡಿಸಿಕೊಳ್ಳಲಾಗಿದೆ). ಹಾಗೆಯೇ ಧಾರಾವಾಹಿಗಳಲ್ಲಿ ಭಾಷಾಬಳಕೆ ಕುರಿತು ಇಲ್ಲಿಯವರೆಗೆ ಸಮಗ್ರವಾಗಿ ಅಧ್ಯಯನವನ್ನು ಕೈಗೊಳ್ಳದೇ ಇರುವುದರಿಂದ ಪ್ರಸ್ತುತ ಅಧ್ಯಯನವನ್ನು ಮಾಡಲಾಗಿದೆ. ಧಾರಾವಾಹಿಗಳಲ್ಲಿ ಭಾಷೆಯು ಸಂದರ್ಭಕ್ಕೆ ತಕ್ಕಂತೆ ಸನ್ನಿವೇಶಕ್ಕೆ ಹೊಂದಿಕೊಂಡು ಭಿನ್ನ ನೆಲೆಯಲ್ಲಿ ಬಳಕೆಯಾಗುತ್ತದೆ. ಸಮುದಾಯದಲ್ಲಿನ ಕೌಟುಂಬಿಕ ಸನ್ನಿವೇಶಗಳನ್ನು ರೂಪಿಸುವ ಸಂದರ್ಭದಲ್ಲಿ ಸಾಮಾಜಿಕವಾಗಿ ಮೇಲ್ವರ್ಗ, ಮಧ್ಯಮವರ್ಗ, ಕೆಳವರ್ಗಕ್ಕೆ ಸೇರಿದ ಕುಟುಂಬಗಳ ಭಾಷಾಬಳಕೆಯು ಸಂದರ್ಭಕ್ಕೆ ತಕ್ಕಂತೆ ಭಿನ್ನವಾಗಿದೆ. ಹೀಗೆ ಭಿನ್ನ ನೆಲೆಯನ್ನು ಗಮನಿಸಿದಾಗ ಪ್ರಮಾಣೀಕರಣಕನ್ನಡ ಹಾಗೂ ಆಡುನುಡಿಯ ಕನ್ನಡ ಹೇಗೆ ಭಿನ್ನತೆಯಿಂದ ಕೂಡಿದೆ ಎಂಬುದನ್ನು ಕುರಿತು ವಿಶ್ಲೇಸುವುದು ಈ ಅಧ್ಯಯನದ ಉದ್ದೇಶವಾಗಿದೆ.

೧.೨. ಅಧ್ಯಯನದ ಸ್ವರೂಪ: ದಿನನಿತ್ಯ ನಡೆಯುವ ಘಟನೆಗಳನ್ನು ದೃಶ್ಯಮಾಧ್ಯಮವಾದ ದೂರದರ್ಶನಕ್ಕೆ ಅಳವಡಿಸಿದಾಗ ಆಗುವ ತಲ್ಲಣಗಳ ಬಗ್ಗೆ ಗಮನಿಸಲಾಗಿದೆ. ಇಲ್ಲಿ ಧಾರಾವಾಹಿಗಳನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿಕೊಂಡು ಅಧ್ಯಯನ ಮಾಡಲಾಗಿದೆ. ಅಂದರೆ ಕೌಟುಂಬಿಕ, ಪ್ರಾದೇಶಿಕ, ಹಾಸ್ಯ, ಚಾರಿತ್ರಿಕ ಎಂಬ ನಾಲ್ಕು ಅಂಶಗಳ ಹಿನ್ನೆಲೆಯಲ್ಲಿ ವಿಭಾಗಿಸಿಕೊಳ್ಳಲಾಗಿದೆ. ಪ್ರಮುಖವಾಗಿ ಪ್ರಾದೇಶಿಕ ಭಾಷಾಬಳಕೆ, ಅನ್ಯಭಾಷಾ ಬಳಕೆ, ನುಡಿಬೆರಕೆ, ನುಡಿಜಗಿತ, ಗಾದೆ ಮಾತುಗಳ ಬಳಕೆ, ಸಾಮಾಜಿಕ ವಿನ್ಯಾಸ ಹಾಗೂ ಒಳನುಡಿಗಳ ಬಳಕೆಯಲ್ಲಿ ಕನ್ನಡ ಭಾಷೆಯ ಸ್ವರೂಪವನ್ನು ವಿಶ್ಲೇಷಿಸಿಕೊಳ್ಳುವ ಪ್ರಯತ್ನ ಮಾಡಲಾಗಿದೆ. ಇದುವರೆಗೂ ನಡೆದಿರುವ ಅಧ್ಯಯನಗಳ ಸಮೀಕ್ಷೆ ಹಾಗೂ ಚಾರಿತ್ರಿಕ ಹಿನ್ನೆಲೆಯನ್ನು ಗುರಿಯಾಗಿಸಿಕೊಂಡು ಅಧ್ಯಯನ ನಡೆಸಲಾಗಿದೆ. ಪ್ರಮುಖವಾಗಿ ದೂರದರ್ಶನದಲ್ಲಿ ಪ್ರಸಾರವಾಗುವ ಧಾರಾವಾಹಿಗಳಲ್ಲಿ ಪ್ರಸ್ತುತ ಸಂದರ್ಭವನ್ನು ಇಟ್ಟುಕೊಂಡು ಭಿನ್ನ ಭಿನ್ನವಾದ ತಂತ್ರಗಾರಿಕೆಯನ್ನು ರೂಪಿಸುವುದರ ಮೂಲಕ ನಿರ್ದೇಶಕರು ಕನ್ನಡ ಭಾಷಾಬಳಕೆಯನ್ನು ಉಳಿಸುವಲ್ಲಿ ಹೇಗೆ ಯಶಸ್ವಿಯಾಗಿದ್ದಾರೆ ಎಂಬುದನ್ನು ಗಮನಿಸಲಾಗಿದೆ.

೧.೩. ಅಧ್ಯಯನದ ವ್ಯಾಪ್ತಿ: ಅಧ್ಯಯನದ ವ್ಯಾಪ್ತಿಗೆ ಸಂಬಂಧಿಸಿದಂತೆ ಪ್ರಸ್ತುತ ಪ್ರತಿದಿನ ಪ್ರಸಾರವಾಗುವ ಕನ್ನಡ ಧಾರಾವಾಹಿಗಳನ್ನು ಒಂದು ಮಿತಿಯಲ್ಲಿ ಅಧ್ಯಯನ ಮಾಡಲಾಗಿದೆ. ಇದು ಅನಿವಾರ್ಯವೂ ಹೌದು. ಒಂದು ಅಧ್ಯಯನಕ್ಕೆ ವ್ಯಾಪ್ತಿ ಇರದೇ ಹೋದರೆ ಅದು

ನಿರ್ದಿಷ್ಟವಾದ ಉದ್ದೇಶವನ್ನು ಈಡೇರಿಸುವಲ್ಲಿ ವಿಫಲವಾಗಬಹುದು. ಈ ದೃಷ್ಟಿಕೋನದಿಂದ ಧಾರಾವಾಹಿಗಳ ಕ್ಷೇತ್ರ ವಿಶಾಲವಾದದ್ದು. ಆದ್ದರಿಂದ ವಿವಿಧ ವಾಹಿನಿಯಲ್ಲಿ ಪ್ರಸಾರವಾಗುವ ಕೆಲವು ಧಾರಾವಾಹಿಗಳನ್ನು ಅಂತರ್‌ಜಾಲದಲ್ಲಿ ಲಭ್ಯವಿರುವ ಯುಟ್ಯೂಬ್ ಮೂಲಕ ಕೆಲವು ಧಾರಾವಾಹಿಗಳನ್ನು ಡೌನ್‌ಲೋಡ್ ಮಾಡಿಕೊಳ್ಳಲಾಗಿದೆ ಮತ್ತು ಕೆಲವು ಧಾರಾವಾಹಿಗಳು ಸಿ.ಡಿ.ರೂಪದಲ್ಲಿ ಲಭ್ಯವಿರುವ ಧಾರಾವಾಹಿಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಆಯ್ಕೆ ಮಾಡಿಕೊಂಡಿರುವ ಧಾರಾವಾಹಿಗಳನ್ನು ೨೦ಕ್ಕೂ ಹೆಚ್ಚು ಎಪಿಸೋಡ್‌ಗಳನ್ನು ವೀಕ್ಷಿಸಿ ಮಾಹಿತಿ ಸಂಗ್ರಹಿಸಿ ಅಧ್ಯಯನ ಮಾಡಲಾಗಿದೆ. ವಿವಿಧ ವಾಹಿನಿಗಳಾದ ಚಂದನ, ಉದಯ ಟಿ.ವಿ., ಈಟಿವಿ ಕನ್ನಡ, ಜಿ–ಕನ್ನಡ, ಸುವರ್ಣ ಟಿವಿಗಳಲ್ಲಿ ಪ್ರಸಾರವಾಗಿರುವ ಆಯ್ದ ಕೌಟುಂಬಿಕ, ಪ್ರಾದೇಶಿಕ, ಹಾಸ್ಯ, ಚಾರಿತ್ರಿಕ ಧಾರಾವಾಹಿಗಳನ್ನು ಆಯ್ಕೆ ಮಾಡಿಕೊಂಡು ಅಧ್ಯಯನ ಮಾಡಲಾಗಿದೆ.

ಧಾರಾವಾಹಿಗಳಲ್ಲಿ ಭಾಷಾ ಬಳಕೆ ಕುರಿತು ಅಧ್ಯಯನ ಮಾಡುವುದಕ್ಕೆ ೧೯೯೪ಳರಿಂದ ಇಲ್ಲಿಯವರೆಗೆ ಪ್ರಸಾರಗೊಳ್ಳುತ್ತಿರುವ ಕೆಲವು ಧಾರಾವಾಹಿಗಳನ್ನು ಮಾತ್ರ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಮುಖ್ಯವಾಗಿ ಇತ್ತೀಚಿನ ಧಾರಾವಾಹಿಗಳಲ್ಲಿ ಭಾಷಾ ಬಳಕೆಯನ್ನು ಕುರಿತು ವಿದ್ವಾಂಸರು ಆತಂಕಪಡುತ್ತಿರುವ ಅಂಶವನ್ನು ಗಮನಿಸಿ ಅದನ್ನು ಸಾಕ್ಷಿಕರಿಸಲು ಪ್ರಸ್ತುತ ಧಾರಾವಾಹಿಗಳನ್ನು ಗಮನಿಸಲಾಗಿದೆ.

೧.೪. ಅಧ್ಯಯನದ ವಿಧಾನ: ಧಾರಾವಾಹಿಗಳಲ್ಲಿ ಕನ್ನಡ ಭಾಷೆಯ ಮೇಲಾಗಿರುವ ಆಧುನಿಕತೆಯ ಫಲವಾಗಿ ಅನ್ಯ ಭಾಷಾಬಳಕೆ ಕುರಿತು ವಿವರಿಸುವುದು ಅಗತ್ಯವಾಗಿದೆ. ಅದರಲ್ಲೂ ವಿಶೇಷವಾಗಿ ಇಂಗ್ಲಿಷ್ ಭಾಷೆಯನ್ನು ಕುರಿತು ವಿಶ್ಲೇಷಿಸುವುದು ಅವಶ್ಯವೆನಿಸುತ್ತದೆ. ಧಾರಾವಾಹಿಗಳಲ್ಲಿ ಬಳಕೆಗೊಳ್ಳುವ ಪುರುಷರ ಭಾಷೆಗಿಂತ ಸ್ತ್ರೀಯರ ಭಾಷೆ ಭಿನ್ನವಾಗಿರುತ್ತದೆ ಎಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ. ಇದು ನಿಜವೇ? ಒಂದು ವೇಳೆ ನಿಜವಾಗಿದ್ದರೆ ಅಂತಹ ಭಾಷಿಕ ಅಂಶಗಳನ್ನು ಕುರಿತು ವಿಶ್ಲೇಷಿಸುವುದು ಅಧ್ಯಯನದ ಪ್ರಮುಖ ಗುರಿಯಾಗಿದೆ.

ಸಮೂಹ ಮಾಧ್ಯಮಗಳ ಪ್ರಭಾವದಿಂದ ಕನ್ನಡ ಭಾಷೆಗೆ ಧಕ್ಕೆಯಾಗಿದೆ ಅಂದರೆ ಕನ್ನಡ ಭಾಷಾ ಬಳಕೆ ಗೌಣವಾಗುತ್ತದೆ ಎನ್ನುವ ಅಭಿಪ್ರಾಯಗಳಿವೆ. ಹಾಗೆಯೇ ದೂರದರ್ಶನಗಳ ಮುಖಾಂತರವೇ ಕನ್ನಡ ಉಳಿಯುತ್ತಿದೆ ಎನ್ನುವ ಅಭಿಪ್ರಾಯವೂ ಇದೆ. ಈ ಎರಡು ಅಭಿಪ್ರಾಯಗಳಲ್ಲಿ ಯಾವುದು ಸರಿ, ಯಾವುದು ತಪ್ಪು ಈ ಎರಡು ಅಭಿಪ್ರಾಯಗಳು ಸರಿಯೇ ಎಂಬುದನ್ನು ಶೋಧಿಸುವುದಾಗಿದೆ. ಈ ಎಲ್ಲಾ ಪ್ರಶ್ನೆಗಳನ್ನು ಹಾಕಿಕೊಂಡು ಪ್ರಸ್ತುತ ಅಧ್ಯಯನವನ್ನು ವಿಶ್ಲೇಷಣಾತ್ಮಕ ನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ.

ಅಧ್ಯಾಯ ಎರಡು

ಧಾರಾವಾಹಿಗಳ: ಚಾರಿತ್ರಿಕ ಹಿನ್ನೆಲೆ

೨.೧. ಧಾರಾವಾಹಿ ಪದದ ಅರ್ಥ ಮತ್ತು ವಿವರಣೆ

೨.೨. ಧಾರಾವಾಹಿಗಳ ಹುಟ್ಟು, ಬೆಳವಣಿಗೆ ಮತ್ತು ಇತಿಹಾಸ

೨.೩. ದೂರದರ್ಶನ ಮೊಟ್ಟಮೊದಲು ಪ್ರಸಾರಗೊಂಡ ಹಿನ್ನೆಲೆ

೨.೪. ಇದುವರೆಗೆ ನಡೆದ ಅಧ್ಯಯನ ಸಮೀಕ್ಷೆ

ಅಧ್ಯಾಯ ಎರಡು

ಧಾರಾವಾಹಿಗಳು: ಚಾರಿತ್ರಿಕ ಹಿನ್ನೆಲೆ

ಧಾರಾವಾಹಿಗಳಿಗೆ ಅದರದೇ ಆದ ಚಾರಿತ್ರಿಕ ಹಿನ್ನೆಲೆ ಇದೆ. ಧಾರಾವಾಹಿಗಳ ಹುಟ್ಟು, ಬೆಳವಣಿಗೆಯ ಇತಿಹಾಸ, ಪ್ರಾರಂಭದ ದಿನಗಳಲ್ಲಿ ದೂರದರ್ಶನ ನಡೆದು ಬಂದ ದಾರಿ ಮತ್ತು ಧಾರಾವಾಹಿಗಳು ಪ್ರಸಾರವಾದ ಸಂದರ್ಭವನ್ನು ವಿವರಿಸುವುದು ಈ ಅಧ್ಯಾಯನದ ಪ್ರಮುಖ ಉದ್ದೇಶವಾಗಿದೆ. ಧಾರಾವಾಹಿಗಳಿಂದಾಗುವ ಪರಿಣಾಮಗಳ ಬಗೆಗೆ ಚರ್ಚಿಸುವುದು ಮತ್ತು ಪ್ರಸ್ತುತ ಘಟನೆಯೊಂದನ್ನು ಸಾಮಾಜಿಕವಾಗಿ, ರಾಜಕೀಯವಾಗಿ, ಕೌಟುಂಬಿಕವಾಗಿ ಭಿನ್ನ ಭಿನ್ನ ಮಾದರಿಯಲ್ಲಿ ರೂಪಿಸಿ, ದೂರದರ್ಶನಕ್ಕೆ ಅಳವಡಿಸಲ್ಪಟ್ಟಾಗ ಆಗುವ ಬದಲಾವಣೆಯನ್ನು ವಿಶ್ಲೇಷಿಸಲಾಗಿದೆ.

೨.೧. ಧಾರಾವಾಹಿ ಪದದ ಅರ್ಥ ಮತ್ತು ವಿವರಣೆ

(ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು ನಾಲ್ಕನೇ ಸಂಪುಟದಲ್ಲಿ)

ಧಾರಾವಾಹಿ(ಗು) ೧. ಎಡೆಬಿಡದ; ಅವಿಚ್ಛಿನ್ನವಾದ; ಸಂತತವಾದ(ನಾ)

೨. ಸತತವಾದುದು; ಎಡೆಬಿಡದುದು.

೩. ಅನುಕ್ರಮವಾಗಿ, ಭಾಗಶಃ ಅನೇಕ ಸಂಚಿಕೆಗಳಲ್ಲಿ ಪ್ರಕಟವಾಗುವ ಕಥೆ, ಕಾದಂಬರಿ ಮೊದಲಾದುದು.(ಸಂ) ಧಾರಾವಾಹಿನ್.

ಧಾರಾವಾಹಿ ಎಂಬ ಪದವನ್ನು ಬಿಡಿಸಿ ಬರೆದಾಗ ಆಗುವ ಅರ್ಥ ಇಂತಿದೆ.

ಧಾರಾ+ವಾಹಿ=ಧಾರಾವಾಹಿ

ಧಾರಾ(ನಾ)= ೧. ಧಾರಾಕಾರವಾಗಿ ಮಳೆ ಸುರಿಯುವಿಕೆ; ಜೋರಾಗಿ ಮಳೆ ಬರುವಿಕೆ

೨. ಇದ್ದಕ್ಕಿದಂತೆ ಬೀಳುವ ಸುರಿಮಳೆ.

೩. ಆಳವಾದ ಜಾಗ; ಕುಳಿ; ಗರ್ತ

೪. ಮಂಜು; ಹಿಮ; ತುಷಾರ

೫. ಅಲೆ; ತರಂಗ

೬. ರೋಗ; ವ್ಯಾಧಿ

೭. ಭಯದ ನುಡಿ

ವಾಹಿ ಪದದ ಅರ್ಥ

ವಾಹಿ(ಗು) = ೧. ಹೊರುವ; ಒಯ್ಯುವ (ನಾ)

೨. ತೇರು; ರಥ

ಸಂಸ್ಕೃತದ ವಾಹಿನ್ ಎಂಬ ಪದದಿಂದ ಕನ್ನಡ ವಾಹಿ ಎಂಬ ಪದ ಈ ಮೇಲಿನ ಅರ್ಥವನ್ನು ತಿಳಿಸುತ್ತದೆ.

ಧಾರಾವಾಹಿ ಎಂಬುದು ಸಂಸ್ಕೃತದ ಧಾರಾವಾಹಿನ್ ಶಬ್ದದ ತದ್ಭವ. ಇದಕ್ಕೆ ಎಡೆಬಿಡದೆ ಮುಂದುವರಿಯುವುದು ಎಂದರ್ಥ. 'ಧಾರಾಕಾರವಾಗಿ ಮಳೆ ಸುರಿಯುತ್ತಿದೆ' ಎಂಬ ವಾಕ್ಯವನ್ನು ನೋಡಿ. ಧಾರಾವರ್ಷ ಅಂದರೆ ಎಡೆಬಿಡದೆ ನೀರು ಸುರಿಯುವುದು ಎಂದರ್ಥ. ಧಾರಾವಾಹಿ ಎನ್ನುವುದು ಈ ಎರಡು ಅರ್ಥಗಳನ್ನು ಒಳಗೊಂಡಿದೆ. ಇದನ್ನು ಅನುಸರಿಸಿ ಯಾವ ಭಾನುವಾರವನ್ನೂ ಬಿಡದೆ ವಾರಪತ್ರಿಕೆಗಳಲ್ಲಿ ಧಾರಾವಾಹಿ ಕಾದಂಬರಿಗಳು ಪ್ರಕಟವಾಗುತ್ತಿವೆ. ದಿನಪತ್ರಿಕೆಯಲ್ಲಿ ಬರುವ ಧಾರಾವಾಹಿಗಳು ಉಂಟು. ಎರಡನ್ನೂ ಬಿಡದೆ ಓದುವ ಜನ ಒಂದು ಕಥೆಯ ನಾಯಕನನ್ನು ಇನ್ನೊಂದು ಕಥೆಯೊಡನೆ ಬೆಸೆದು ಬೇಸ್ತು ಬೀಳುವುದೂ ಉಂಟು. ಈ ಹಿನ್ನೆಲೆಯಲ್ಲಿ ದೂರದರ್ಶನದಲ್ಲಿ ಧಾರಾವಾಹಿ ಎಂಬ ಪದ ಸೂಕ್ತವಾಗಬಹುದು ಎಂದು ಈ ಪದವನ್ನೇ ಬಳಸಿಕೊಳ್ಳಲಾಗಿದೆ.

೨.೨. ಧಾರಾವಾಹಿಗಳ ಹುಟ್ಟು, ಬೆಳವಣಿಗೆ ಮತ್ತು ಇತಿಹಾಸ

ವಿಜಯ next ಏಪ್ರಿಲ್ ೪, ೨೦೧೩ರ ಪಾಕ್ಷಿಕ ಪತ್ರಿಕೆಯ ೧೫ನೇ ಪುಟದ ಟೀವಿ ಎಂಬ ಭಾಗದಲ್ಲಿ ಈ ವಿಷಯ ಸಂಗ್ರಹಣೆಯನ್ನು ಪ್ರಕಟಿಸಿದ್ದಾರೆ.

ಕನ್ನಡದ ಮೊದಲ ಧಾರಾವಾಹಿ : ಸಿಹಿ-ಕಹಿ

ಭಾರತದ ಮೊದಲ ಧಾರಾವಾಹಿ: ಹಮ್ ಲೋಗ್

ಮನರಂಜನೆ ಅಂದಾಕ್ಷಣ ತಕ್ಷಣವೇ ನಮ್ಮ ಆಲೋಚನೆ ತಿರುಗುವುದು ಹಿರಿತೆರೆಯತ್ತ. ಸಿನಿಮಾಗೆ ಕೊಟ್ಟಷ್ಟು ಪ್ರಾಮುಖ್ಯತೆ ಕಿರುತೆರೆಗೆ ನೀಡಿಲ್ಲ. ಇಲ್ಲಿನ ಕಲಾವಿದ, ತಂತ್ರಜ್ಞರನ್ನು

ಗುರುತಿಸಿದಷ್ಟು ಕಿರುತೆರೆಯವರೆಗೆ ಪ್ರಾಶಸ್ತ್ಯ ಕೊಟ್ಟಿಲ್ಲ. ಆದರೂ, ಕಿರುತೆರೆಯ ಮಂದಿ ಯಾವತ್ತೂ ಈ ವಿಷಯದಲ್ಲಿ ತಲೆ ಕೆಡಿಸಿಕೊಂಡಿಲ್ಲ. ಮನೆಯ ಯಜಮಾನ ಅನಿಸಿಕೊಂಡವನು, ಮೆರವಣಿಗೆಯಲ್ಲಿ ಪಾಲ್ಗೊಳ್ಳುವುದಿಲ್ಲ.

ಹಿರಿತೆರೆ ಮತ್ತು ಕಿರುತೆರೆಗೆ ಹೋಲಿಕೆ ಮಾಡಿದರೆ, ಅತಿ ದೊಡ್ಡ ಇಂಡಸ್ಟ್ರಿ ಅನಿಸಿಕೊಳ್ಳುವುದು ಕಿರುತೆರೆಯೇ. ಚಿತ್ರೋದ್ಯಮಕ್ಕೆ ಹೇರಳವಾಗಿ ಹಣ ಹರಿದು ಬರುತ್ತಿರುವುದು ಇಲ್ಲಿಯಿಂದಲೆ. ಅದರಲ್ಲೂ ಕನ್ನಡ ಚಿತರೋದ್ಯಮದ ಅನೇಕ ನಿರ್ಮಾಪಕರು ಉಸಿರಾಡುತ್ತಿರುವುದು ಕಿರುತೆರೆ ನೀಡುತ್ತಿರುವ ಜೀವದಾನದಿಂದ.

ಹೆಸರಿಗೆ ಮಾತ್ರ ಹಿರಿತೆರೆ ಅನಿಸಿಕೊಂಡಿರುವ ಚಿತ್ರೋದ್ಯಮ, ಯಾವ ವಿಷಯದಲ್ಲೂ ಅದು ಕಿರುತೆರೆಗಿಂತ ಮುಂದೆ ಇಲ್ಲ. ಕಟೌಟ್ ಮತ್ತು ಪೋಸ್ಟರ್‌ಗಳನ್ನು ಅಂಟಿಸಿಕೊಂಡರೂ, ಜನಪ್ರಿಯತೆಯ ವಿಷಯದಲ್ಲಿ ಕಿರುತೆರೆಯ ಕಲಾವಿದರನ್ನು ಸ್ಟಾರ್ ನಟರೂ ಮೀರಿಸಲು ಆಗಿಲ್ಲ. ಹಳ್ಳಿಗಳಿಗೆ ಈ ಸ್ಟಾರ್ ನಟರು ಇವತ್ತಿಗೂ ತಲುಪಿಲ್ಲ. ವ್ಯವಹಾರಿಕ ದೃಷ್ಟಿಯಿಂದ ಹಿರಿತೆರೆ ಯಾವತ್ತಿಗೂ ಮುಂದಿರಲು ಸಾಧ್ಯವೇ ಇಲ್ಲ. ಕನ್ನಡ ಚಿತ್ರೋದ್ಯಮದ ವಾರ್ಷಿಕ ವಹಿವಾಟು ಮುನ್ನೂರು ಕೋಟಿ ಮೀರಲ್ಲ. ಕಿರುತೆರೆಯಲ್ಲಿ ಕೇವಲ ನ್ಯೂಸ್ ಚಾನೆಲ್‌ಗಳ ವಹಿವಾಟಿಯೇ ಮುನ್ನೂರು ಕೋಟಿ. ಕನ್ನಡದ ಕಿರುತೆರೆಯ ವಾರ್ಷಿಕ ವೈವಾಟು ನಾಲ್ಕು ಸಾವಿರ ಕೋಟಿಗಿಂತಲೂ ಹೆಚ್ಚು ಎಂದು ಅಂದಾಜಿಸಲಾಗಿದೆ. ಥಿಯೇಟ್‌ನಲ್ಲಿ ಕೆಲಸ ಮಾಡುವವರನ್ನೂ ಹಿಡಿದು, ಲಕ್ಷಕ್ಕಿಂತ ಹೆಚ್ಚು ದುಡಿಯುವವರು ಸಿಗುವುದಿಲ್ಲ. ಕೇಬಲ್‌ನಲ್ಲಿ ಕೆಲಸ ಮಾಡುವವರನ್ನೂ ಲೆಕ್ಕಕ್ಕೆ ತೆಗೆದುಕೊಂಡರೆ, ಕಿರುತೆರೆಯಲ್ಲಿ ಹದಿನೈದು ಲಕ್ಷಕ್ಕೂ ಹೆಚ್ಚು ಜನರಿಗೆ ಉದ್ಯೋಗ ಕಲ್ಪಿಸಲಾಗಿದೆ. ಇದು ಕರ್ನಾಟಕದ ಸ್ಥಿತಿ ಮಾತ್ರವಲ್ಲ. ಜಗತ್ತಿನ ಬಹುತೇಕ ಕಿರುತೆರೆಯ ಜಗತ್ತು ಹೀಗೆಯೇ ಇದೆ. ಹಾಗಾದರೆ, ಮಹಾತೆರೆ ಯಾವುದು ಎಂಬುದನ್ನು ನೀವೇ ತೀರ್ಮಾನಿಸಿ.

ಅಮೆರಿಕಾದಂತಹ ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳೂ ಕೂಡ ಜನಭಿಪ್ರಾಯ ಸಂಗ್ರಹಿಸಲು ಕಿರುತೆರೆಯನ್ನೇ ನಂಬಿಕೊಂಡಿವೆ. ಕಿರುತೆರೆಯ ಪ್ರೇಕ್ಷಕರನ್ನು ಸೂಕ್ಷ್ಮಮತಿಗಳು ಎಂದು ಕರೆಯಲ್ಪಡುತ್ತವೆ. ಪ್ರೇಕ್ಷಕ ಮತ್ತು ವಾಹಿನಿಗಳ ಮಧ್ಯೆ ಬಾಂಧ್ಯವದ ಬಳ್ಳಿಗಳನ್ನು ಹಬ್ಬಿಸಿವೆ. ಹೀಗಾಗಿಯೇ ಕಿರುತೆರೆ ಶಕ್ತಿಯುತ ಮಾಧ್ಯಮ ಎನ್ನಲಾಗುತ್ತಿದೆ.

ನಿಮಗೆಲ್ಲ ಗೊತ್ತಿರುವಂತೆ ಕಿರುತೆರೆ ಭಾರತಕ್ಕೆ ಬಂದಿದ್ದು ಅರವತ್ತರ ದಶಕದಲ್ಲಿ. ಕನ್ನಡಕ್ಕೆ ಕಾಲಿಟಿದ್ದು ಎಂಬತ್ತರ ದಶಕದಲ್ಲಿ ಕನ್ನಡದ ಕಿರುತೆರೆಗೆ ಈಗ ಮೂವತ್ತರ ಹರೆಯ. ಅಲ್ಲಿಂದ ಇಲ್ಲಿಯವರೆಗೂ ಬೆಳೆದು ಬಂದ ರೀತಿ ಎಂಥವರಿಗೂ ಅಚ್ಚರಿ ಮೂಡಿಸುವಂಥದ್ದು.

ಕನ್ನಡದಲ್ಲಿ ಸುದ್ದಿ ವಾಹಿನಿಗಳು ಸೇರಿದಂತೆ ಹನ್ನೆರಡು ಚಾನೆಲ್ಸ್ ಇದೆ. ೨೪ ಗಂಟೆಯೂ ಭರಪೂರ್ ಸುದ್ದಿಯ ಜತೆಗೆ, ಮನರಂಜನೆಯನ್ನೂ ನೀಡುತ್ತಿವೆ. ಕಳೆದ ವರ್ಷಕ್ಕೆ ಹೋಲಿಸಿದರೆ, ಈ ವರ್ಷ ಸುದ್ದಿವಾಹಿನಿಗಳಲ್ಲಿ ಕ್ರೈಂ ಮತ್ತು ರಾಜಕೀಯ ಕಾರ್ಯಕ್ರಮ ಗಣನೀಯವಾಗಿ ಏರಿಕೆ ಕಂಡರೂ ಮನರಂಜನೆಯ ವಾಹಿನಿಗಳು ಮಾತ್ರ ತಮ್ಮ ಹೆಚ್ಚಿನ ಸಮಯವನ್ನು ಧಾರಾವಾಹಿಗಳಿಗೆ ಮೀಸಲಿಟ್ಟಿವೆ. ರಿಯಾಲಿಟಿ ಷೋಗಳು ಕಡಿಮೆ ಇದ್ದರೂ, ಅವುಗಳ ಫಲಿತಾಂಶ ಮಾತ್ರ ಅಗಾಧವಾಗಿದೆ. ಖುಷಿ ವಿಷಯವೆಂದರೆ ಕಾಲ ಬದಲಾದಂತೆ, ಕಿರುತೆರೆಯೂ ಬದಲಾಗುತ್ತಾ ಬಂದಿರುವುದು.

ಬೇರೆ ಕ್ಷೇತ್ರಕ್ಕೆ ಹೋಲಿಸಿಕೊಂಡರೆ, ಕೆಲಸದ ಅಭದ್ರತೆಯ ಸಮಸ್ಯೆ ಅಷ್ಟೇನೂ ಕಾಡುವುದಿಲ್ಲ. ಕಾರ್ಯಕ್ರಮವೊಂದು ಶುರುವಾದರೆ ವರ್ಷಪೂರ್ತಿ ಕೆಲಸವಿರುತ್ತದೆ. ಒಳ್ಳೆಯ ಕಂಪನಿಗಳ ನಿರ್ಮಾಣದ ಕಾರ್ಯದಲ್ಲಿ ತೊಡಗಿಸಿಕೊಂಡರೆ, ನೆಮ್ಮದಿಯ ಜೀವನ ಸಾಗಿಸಬಹುದಾಗಿದೆ. ಆರ್‌ಕೆ ಪ್ರೊಡಕ್ಷನ್ ನಿರ್ಮಾಣದಲ್ಲಿ ಶುರುವಾದ ಬದುಕು ಧಾರವಾಹಿ ಹತ್ತು ವರ್ಷಗಳಿಂದಲೂ ಪ್ರಸಾರ ಕಾಣುತ್ತಿದೆ. ಅಲ್ಲಿ ಕೆಲಸ ಮಾಡುವವರು ಇನ್ನೂ ಹತ್ತು ವರ್ಷಕ್ಕೆ ಆಗುವಷ್ಟು ಸಂಪಾದನೆ ಮಾಡಿರುತ್ತಾರೆ. ಇಪ್ಪತ್ತು ವರ್ಷಗಳ ಕೆಲಸದ ಭದ್ರತೆ ಬೇರೆ ಕ್ಷೇತ್ರಗಳಲ್ಲಿ ಸಿಗುವುದು ಸಾಧ್ಯವೆ?

ಅಲ್ಲದೇ ಬಿ.ಸುರೇಶ, ಸಿಹಿ ಕಹಿ ಚಂದ್ರು, ರವಿ ಕಿರಣ್, ಟಿ.ಎನ್.ಸೀತಾರಾಮ್, ಮಿಲನ ಪ್ರಕಾಶ್ ಹೀಗೆ ಸಾಕಷ್ಟು ನಿರ್ಮಾಣ ಸಂಸ್ಥೆಗಳು ನಿರಂತರವಾಗಿ ಕಾರ್ಯಕ್ರಮಗಳನ್ನು ತಯಾರು ಮಾಡುತ್ತಿವೆ. ಕಾಯಂ ಕೆಲಸಗಾರರೇ ಅಲ್ಲಿದ್ದಾರೆ. ಅಲ್ಲದೇ ಇನ್ನೂ ಸಾಕಷ್ಟು ನಿರ್ಮಾಪಕರು ಬದಲಾಗುತ್ತಾ, ಕಿರುತೆರೆಯನ್ನು ಶ್ರೀಮಂತಗೊಳಿಸುತ್ತಿದ್ದಾರೆ. ಹೀಗಾಗಿಯೇ ಕಿರುತೆರೆ ದಾಪುಗಾಲು ಇಡುತ್ತಿದೆ.

ಇತ್ತೀಚೆಗೆ ಕನ್ನಡ ವಾಹಿನಿಗಳಲ್ಲಿ ಅಗಾಧ ಪಲ್ಲಟಗಳಾಗಿವೆ. ಬೇರೆ ಭಾಷೆಯ ವಾಹಿನಿಗಳಿಂದ ಕಾರ್‍ಯಕ್ರಮಗಳು ಕೊಡುಕೊಳ್ಳುವಿಕೆ ನಡೆಯುತ್ತಿದೆ. ಕನ್ನಡದ ಕಾರ್‍ಯಕ್ರಮಗಳು ಶ್ರೀಮಂತವಾಗಿ ಮೂಡಿ ಬರುತ್ತಿವೆ. ಮತ್ತೆ ಕನ್ನಡದ ಕಿರುತೆರೆಯಲ್ಲಿ ಸುವರ್ಣಯುಗ ಶುರುವಾಗಿದೆ.

ಸದ್ಯ ಕನ್ನಡವಾಹಿನಿಯಲ್ಲಿ ಐವತ್ತಕ್ಕೂ ಹೆಚ್ಚು ಧಾರಾವಾಹಿಗಳು ನಿತ್ಯ ಪ್ರಸಾರವಾಗುತ್ತಿವೆ. ಶೈಲಜಾ ನಾಗ್ ಮತ್ತು ಎಸ್.ವಿ.ಶಿವಕುಮಾರ್ ನಿರ್ಮಾಣದ 'ಪ್ರೀತಿ ಪ್ರೇಮ' ಟೆಲಿಫಿಲ್ಮ್ ಒಂದು ಗಂಟೆಯ ಸಿನಿಮಾ ಅನುಭ ನೀಡುತ್ತಿದೆ. ಇದು ವಾರಕ್ಕೆರೆಡು ಹೊಸ ಕತೆಗಳನ್ನು ಹೊತ್ತು ತರುತ್ತಿದೆ. ಪ್ರತಿ ಕಂತಿನ ಮೂಲಕ ಹೊಸ ನಿರ್ದೇಶಕರು, ಹೊಸ ಬರಹಗಾರರು ಮತ್ತು ಹೊಸ ಕಲಾವಿದರು ಕಿರುತೆರೆಯ ಪ್ರಪಂಚಕ್ಕೆ ಪರಿಚಯವಾಗುತ್ತಿದ್ದಾರೆ.

ಎರಡು ಖಾಸಗಿ ವಾಹಿನಿಗಳಲ್ಲಿ ದೊಡ್ಡ ಮಟ್ಟದ ರಿಯಾಲಿಟಿ ಷೋಗಳು ನಡೆಯುತ್ತಿವೆ. ದಕ್ಷಿಣ ಭಾರತವೇ ಈ ಕಡೆ ನೋಡುವಂತಾಗಿದೆ. ಇಲ್ಲಿಯವರೆಗೂ ಕನ್ನಡದಲ್ಲಿ ರಾಮಾಯಣ-ಮಹಾಭಾರತದಂತಹ ಪೌರಾಣಿಕ ಧಾರಾವಾಹಿಗಳನ್ನು ನಿರ್ಮಿಸುವ ಸಾಹಸಕ್ಕೆ ಯಾರೂ ಕೈ ಹಾಕಿರಲಿಲ್ಲ. ಈ ವರ್ಷ ಅದು ಆಗಿದೆ. 'ಸೀತೆ' ಪ್ರಸಾರ ಕಾಣುತ್ತಿದೆ. ಅಲ್ಲದೇ ಕಿಶನ್ ಸೇಥಿ ನಿರ್ದೇಶನದಲ್ಲಿ 'ಮಹಾಭಾರತ' ಧಾರಾವಾಹಿಯೂ ಕೂಡ ಶುರುವಾಗಿದೆ. ನಾಗಾಭರಣ ನಿರ್ದೇಶನದಲ್ಲಿ 'ಕೆಳದಿ ಚೆನ್ನಮ್ಮ' ಹೊಸ ಅನುಭವ ನೀಡಿತು. ಭಕ್ತಿ ಪ್ರಧಾನ ಧಾರಾವಾಹಿಗಳು ಸ್ಥಾನ ನೀಡಿರುವ ಕಿರುತೆರೆ 'ಗುರು ರಾಘವೇಂದ್ರ ವೈಭವ' ಮುಗಿಸಿ, ಈಗ 'ಶ್ರೀ ಶಿರಡಿ ಸಾಯಿಬಾಬಾ' ಧಾರಾವಾಹಿಯು ಶುರುವಾಗಿದೆ. ರಮೇಶ ಇಂದಿರಾ ಅವರ 'ದೇವಿ' ಕೂಡ ಸಾಕಷ್ಟು ಪ್ರೇಕ್ಷಕರ ಮೆಚ್ಚುಗೆ ಗಳಿಸಿದೆ. ಈ ಧಾರಾವಾಹಿ ತಮಿಳು ಮತ್ತು ತೆಲುಗು ಭಾಷೆಗೆ ಡಬ್ ಆಗುತ್ತಿರುವುದು ವಿಶೇಷ.

ಅಳಿಗುಳಿ ಮನೆ, ಮದರಂಗಿ, ಕೃಷ್ಣರುಕ್ಮಿಣಿ, ಪಂಚರಂಗಿ ಪೊಂ ಪೊಂ, ಅಮೃತವರ್ಷಿಣಿ, ಚಿಕ್ಕಮ್ಮ, ಗಾಳಿಪಟ, ಬದುಕು, ಆರುಂಧತಿ, ನಿನ್ನೊಲುಮೆಯಿಂದಲೇ, ಚಿ.ಸೌ.ಸಾವಿತ್ರಿ, ಮಡದಿ, ಪಾಂಡುರಂಗ ವಿಠಲ, ಪಾರ್ವತಿ ಪರಮೇಶ್ವರ, ಆಕಾಶ ದೀಪ, ಚೆಲುವಿ ಮುಂತಾದ ಜನಪ್ರಿಯ ಧಾರಾವಾಹಿಗಳು ತಮ್ಮಲ್ಲಿಯೇ ಪೈಪೋಟಿ ಒಡ್ಡಿಕೊಳ್ಳುತ್ತಿವೆ.

೨.೩. ದೂರದರ್ಶನ ಮೊಟ್ಟಮೊದಲು ಪ್ರಸಾರಗೊಂಡ ಹಿನ್ನೆಲೆ

ಸಮೂಹ ಮಾಧ್ಯಮಗಳು ಆಧುನಿಕ ತಂತ್ರಜ್ಞಾನದ ಕೊಡುಗೆ. ಇಪ್ಪತ್ತೊಂದನೆಯ ಶತಮಾನದ ಒಂದು ದೊಡ್ಡ ಪವಾಡವೆಂದರೂ ತಪ್ಪಲ್ಲ. ಸಮೂಹ ಮಾಧ್ಯಮಗಳೆಂದರೆ ಪತ್ರಿಕೆ, ರೇಡಿಯೋ ಮತ್ತು ಟೆಲಿವಿಷನ್ ಮುಂತಾದವು. ಸಮಾಜದಲ್ಲಿ ಇಂದು ಇವುಗಳ ಪಾತ್ರ ಮಹತ್ವವಾದುದು. ಇಂದಿನ ಮಾಹಿತಿಯುಗದಲ್ಲಿ ಅವುಗಳದ್ದೇ ಪೈಪೋಟಿ. ಇಂದು ಈ ಮಾಹಿತಿ ಸರಬರಾಜು ಒಂದು ಮಾಧ್ಯಮವಾಗಿದೆ. ಮಾಹಿತಿ ತಂತ್ರಜ್ಞಾನದಿಂದ ವಿಶ್ವಮಟ್ಟದ ವ್ಯಾಪಾರ ವಹಿವಾಟು ಕ್ಷಣ ಮಾತ್ರದಲ್ಲಿ ನಡೆಯುತ್ತಿದೆ. ಅದಕ್ಕಾಗಿ ಕಾಲ್ ಸೆಂಟರ್‌ಗಳು ಸ್ಥಾಪಿತವಾಗಿವೆ. ಹಾಗೆಯೇ ಅಗಾಧವಾಗಿ ಬೆಳದಿದೆ. ಬೆಳೆಯುತ್ತಲಿದೆ. ಹೊಸ ಹೊಸ ಸಂವಹನ ಉಪಕರಣಗಳು ಆವಿಷ್ಕಾರವಾದ ಹಾಗೆ ಮಾನವರು ಸಮಯ ಮತ್ತು ದೂರಗಳನ್ನು ಗೆಲ್ಲುವಲ್ಲಿ ಯಶಸ್ಸು ಗಳಿಸುತ್ತಿದ್ದಾರೆ. ಖ್ಯಾತ ಸಂವಹನತಜ್ಞ ಮಾರ್ಷಲ್ ಮ್ಯಾಕ್ ಲೂಹನ್ ಹೇಳುವಂತೆ ಇಡೀ ಭೂಮಂಡಲವೇ ಒಂದು "ವಿಶ್ವಗ್ರಾಮ"ವಾಗಿ ಪರಿವರ್ತನಗೊಂಡಿದೆ. ಸಮೂಹ ಮಾಧ್ಯಮಗಳ ಆವಿಷ್ಕಾರಕ್ಕೆ ಮಾನವನ ಸಂವಹನದ ಭಾವನಾತ್ಮಕ ಒತ್ತಡವೇ ಕಾರಣ. ಸಂವಹನ ಪ್ರಕ್ರಿಯೆ ಪೂರ್ಣಗೊಳ್ಳಲು ಮಿಲಿಯಗಟ್ಟಲೇ ವರ್ಷಗಳು ಬೇಕಾದವು. ಭಾಷೆಗಳು ಬೆಳೆಯಬೇಕಿತ್ತು. ಆಗ ನಾಗರಿಕತೆಗಳು ವಿಕಾಸಗೊಂಡಂತೆ ಭಾಷೆಗಳು ಬದಲಾದಂತೆ ಸಂವಹನ ಜನಜೀವನದಲ್ಲಿ

ಪ್ರಮುಖ ಪಾತ್ರ ವಹಿಸತೊಡಗಿತು. ಕೃಷಿ ಆಧಾರಿತ ಪಾರಂಪರಿಕ ಸಮಾಜದಲ್ಲಿ ಮೌಖಿಕ ಸಂವಹನವೇ ಮುಖ್ಯವಾಗಿತ್ತು. ಕೈಗಾರಿಕಾ ಕ್ರಾಂತಿಯೊಂದಿಗೆ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಹೊಸ ಅರ್ಥ ಬಂದಿತು. ರಾಜಕೀಯ ಸಿದ್ಧಾಂತಗಳೂ ಬೆಳೆದವು. ಸಮೂಹ ಮಾಧ್ಯಮಗಳು ಯಂತ್ರಯುಗದ ಹರಿಕಾರ ಎನಿಸಿದವು.

ಸಾಮಾಜಿಕ ಸಂವಹನ ಇಂದು ಮಾಧ್ಯಮಗಳ ಮುಖೇನ ಜರುಗುತ್ತಿದೆ. ಇವೆಲ್ಲಕ್ಕೂ ಭಾಷೆ ಮಾಧ್ಯಮವಾಗಿದೆ. ಇಂಥ ಮಾಧ್ಯಮಗಳ ಹುಟ್ಟು ಮತ್ತು ಬೆಳವಣಿಗೆಯನ್ನು ಕುರಿತು ಇಲ್ಲಿ ಪರಿಶೀಲಿಸುವುದು ಔಚಿತ್ಯಪೂರ್ಣವಾಗಿದೆ. ಮಾನವನ ಉಗಮದೊಂದಿಗೆ ಸಂವಹನ ನಡೆದುಬಂದ ಬಗೆ ವಿಸ್ಮಯವಾದುದು. ಜೀವ ವಿಕಾಸದಲ್ಲಿ ಮಾನವರ ಭಾಷೆ ಮತ್ತು ಸಂವಹನ ವಿಸ್ಮಯ. ಅದು ವಿಕಾಸಗೊಂಡು ಸಮೂಹ ಸಂವಹನ ಮಾಧ್ಯಮಗಳು ಹುಟ್ಟಿಕೊಂಡವು. ಅವುಗಳಲ್ಲಿ ಪತ್ರಿಕೆ, ರೇಡಿಯೋ(ಬಾನುಲಿ), ದೂರದರ್ಶನ, ಮೊಬೈಲ್ ಹಾಗೂ ಕಂಪ್ಯೂಟರ್‌ಗಳು ಸಮೂಹ ಸಂವಹನ ಮಾಧ್ಯಮಗಳಾಗಿವೆ. ಇವುಗಳಲ್ಲಿ ದೂರದರ್ಶನ ನಡೆದುಬಂದ ಹಿನ್ನೆಲೆಯನ್ನು ತಿಳಿಯುವುದು ಈ ಅಧ್ಯಯನದ ಮಟ್ಟಿಗೆ ಉಚಿತವೆನಿಸುತ್ತದೆ. ಈಗಾಗಲೇ ಮಾಧ್ಯಮಗಳಿಗೆ ಸಂಬಂಧಿಸಿದಂತೆ ಹಲವಾರು ಗ್ರಂಥಗಳಲ್ಲಿ ಮತ್ತು ಸಂಶೋಧನಾ ಪ್ರಬಂಧಗಳಲ್ಲಿ ಸಮೂಹ ಸಂವಹನ ಮಾಧ್ಯಮಗಳ ಬಗ್ಗೆ ಅಧ್ಯಯನ ನಡೆಸಿರುವ ಮಾಹಿತಿಯನ್ನು ಕಲೆ ಹಾಕಿರುವ ಮತ್ತು ವಿವರಣೆ, ವಿಮರ್ಶೆಗಳನ್ನು ಕುರಿತು ತಿಳಿಸಿವೆ. ಈ ಅಧ್ಯಯನಕ್ಕೆ ಸಂಬಂಧಿಸಿದಂತೆ ದೂರದರ್ಶನದ ಹಿನ್ನೆಲೆಯನ್ನು ತಿಳಿಯುವುದು ಅವಶ್ಯವಾಗಿದೆ.

ದೂರದರ್ಶನ: T.V(Telivision)

'ಟೆಲಿವಿಷನ್ ಮಾಧ್ಯಮದ ಆವಿಷ್ಕಾರ ೧೯೨೦ರಲ್ಲಿ ಅಮೆರಿಕಾ ಸಂಯುಕ್ತ ಸಂಸ್ಥಾನದಲ್ಲಿ ನಡೆಯಿತು. ಮಹಾಯುದ್ಧಗಳ ತರುವಾಯ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಟೆಲಿವಿಷನ್ ಪ್ರಮುಖ ಸಮೂಹ ಮಾಧ್ಯಮವಾಗಿ ರೂಪುಗೊಂಡಿತು. ಉಪಗ್ರಹ ಸಂವಹನ ಯುಗಕ್ಕೆ ೧೯೬೨ರಲ್ಲಿ ಜಗತ್ತು ಕಾಲಿಟ್ಟಾಗಿನಿಂದ ಉಪಗ್ರಹ ಟೆಲಿವಿಷನ್ ಚಾನೆಲ್‌ಗಳ ಸಂಖ್ಯೆ ಗಣನೀಯವಾಗಿ ಏರಿದೆ. ಪ್ರತಿಯೊಂದು ಚಾನೆಲ್ ಮಿಲಿಯಗಟ್ಟಲೆ ವೀಕ್ಷಕರನ್ನು ತಲುಪುವ ಗುರಿಯನ್ನು ಹೊಂದಿದೆ. ಭಾರತದಲ್ಲಿ ಉಪಗ್ರಹ ಟೆಲಿವಿಷನ್ ಜಾಲದ ವಿಸ್ತರಣೆಗೆ ಇನ್ಸಾಟ್ ಉಪಗ್ರಹ ಸಂಪರ್ಕ ವ್ಯವಸ್ಥೆಯೇ ಆಧಾರ. ದೇಶದಲ್ಲಿ ಪ್ರಾಯೋಗಿಕ ಟೆಲಿವಿಷನ್ ಕೇಂದ್ರ ನವದೆಹಲಿಯಲ್ಲಿ ೧೯೫೯ರಲ್ಲಿ ಸೆಪ್ಟೆಂಬರ್ ೧೫ರಂದು ಅಸ್ತಿತ್ವಕ್ಕೆ ಬಂದಿತು. ಸಮುದಾಯ ಅಭಿವೃದ್ಧಿ ಮತ್ತು ಔಪಚಾರಿಕ ಶಿಕ್ಷಣ ಪ್ರಗತಿಗೆ ಅನುಕೂಲವಾಗುವ ಕಾರ್ಯಕ್ರಮಗಳನ್ನು ರೂಪಿಸಲಾಯಿತು. ಇದಕ್ಕೆ ಯುನೆಸ್ಕೋ ಸಂಸ್ಥೆಯ ಆರ್ಥಿಕ ನೆರವಿತ್ತು. ಸುಮಾರು ೧೮೦ ಟೆಲಿಕ್ಲಬ್‌ಗಳು, ನಲವತ್ತು ಕಿ.ಮೀ. ಪರಿಧಿಯಲ್ಲಿ ಕಾರ್ಯಕ್ರಮ ವೀಕ್ಷಣೆಗೆಂದು ಸ್ಥಾಪನೆಗೊಂಡವು.'[೧]

'ಬ್ರಿಟಿಷ್ ವಿಜ್ಞಾನಿ ಜಾನ್ ಬೋಯಿರ್ಡ್ ಕ್ರಿ.ಶ.೧೯೧೯ರಲ್ಲಿ ಟೆಲಿವಿಷನ್ ಪ್ರಸಾರ ಸಾಧ್ಯ ಮಾಡುವ ತಂತ್ರಜ್ಞಾನವನ್ನು ಪ್ರದರ್ಶಿಸಿದ. ಬ್ರಿಟಿಷ್ ಮತ್ತು ಅಮೆರಿಕಾದಲ್ಲಿ ಹೆಚ್ಚು ಕಡಿಮೆ ಒಂದೇ ಸಮಯದಲ್ಲಿ ಕ್ರಿ.ಶ.೧೯೩೬ರಲ್ಲಿಯೇ ಸಾರ್ವಜನಿಕ T.V(ಟಿ.ವಿ) ಪ್ರಸಾರ ಪ್ರಾರಂಭವಾಯಿತು. ಆದರೆ ಎರಡನೇ ಮಹಾಯುದ್ಧದಿಂದಾಗಿ ಪ್ರಸಾರ ಮುಂದುವರಿಯಲಿಲ್ಲ. ಯುದ್ಧದ ನಂತರ ಕ್ರಿ.ಶ.೧೯೪೬ರಲ್ಲಿ ಟಿ.ವಿ. ಪ್ರಸಾರ ಪುನರಾರಂಭವಾಯಿತು. ಕ್ರಿ.ಶ.೧೯೭೦ರಲ್ಲಿ ಉಪಗ್ರಹ ಟೆಲಿವಿಷನ್ ಯುಗ ಪ್ರಾರಂಭವಾಯಿತು. ಟೆಲಿವಿಷನ್ ಮಾಧ್ಯಮವು ಭಾರತಕ್ಕೆ ಕಾಲಿಟ್ಟಿದ್ದು ತಡವಾಗಿ. ಪಾಶ್ಚಿಮಾತ್ಯ ರಾಷ್ಟ್ರಗಳಿಗಿಂತ ಎರಡು ದಶಕ ಮತ್ತು ಅಭಿವೃದ್ಧಿ ಪರ ದೇಶಗಳಿಗಿಂತ ಒಂದು ದಶಕ ತಡವಾಗಿ ಬಂದಿತು. ದೆಹಲಿ ದೂರದರ್ಶನ ಕೇಂದ್ರದ ಉದ್ಘಾಟನೆ ಕ್ರಿ.ಶ.೧೯೫೯ರಲ್ಲಿ ಆಯಿತು. ದೈನಂದಿನ ಟಿ.ವಿ. ಪ್ರಾರಂಭವಾದದ್ದು ಕ್ರಿ.ಶ.೧೯೬೫ರಲ್ಲಿ. ಕ್ರಿ.ಶ.೧೯೭೨-೧೯೭೫ರ ಅವಧಿಯಲ್ಲಿ ದೂರದರ್ಶನ ದೇಶದ ಇನ್ನು ಆರು ನಗರಗಳಿಗೆ ವ್ಯಾಪಿಸಿತು. ಕ್ರಿ.ಶ.೧೯೮೨ರಿಂದ ಪ್ರಾರಂಭವಾದ ಮೂರನೆಯ ಘಟ್ಟದಲ್ಲಿ ದೆಹಲಿಯಿಂದ ಬರುವ ಕಾರ್ಯಕ್ರಮಗಳನ್ನು ಮರುಪ್ರಸಾರ ಮಾಡುವ ಕೇಂದ್ರಗಳು ತ್ವರಿತವಾಗಿ ಬೆಳೆದವು. ೧೯೯೧ರಲ್ಲಿ ಪ್ರಾರಂಭವಾದ ವಿದೇಶಿ ಉಪಗ್ರಹ ಚಾನೆಲ್‌ಗಳ ಪ್ರವೇಶ ಭಾರತದ ಟೆಲಿವಿಷನ್ ಚಿತ್ರವನ್ನು ಮೂಲಭೂತವಾಗಿ ಬದಲಿಸಿತು.'[೨]

'ಮುಂಬಯಿಯಲ್ಲಿ ಕ್ರಿ.ಶ.೧೯೭೨, ಕಲ್ಕತ್ತ, ಮದರಾಸು ಮತ್ತು ಲಕ್ನೋ ನಗರಗಳಲ್ಲಿ ಕ್ರಿ.ಶ.೧೯೭೫ ರಲ್ಲಿ ಟೆಲಿವಿಷನ್ ಕೇಂದ್ರಗಳು ಸ್ಥಾಪನೆಯಾದವು. ಅಮೆರಿಕೆಯ ನಾಸಾ ಸಂಸ್ಥೆಯು ಉಪಗ್ರಹ ಬಳಸಿ ೧೯೭೫ರಲ್ಲಿ SIET ಕಾರ್ಯಕ್ರಮವೊಂದನ್ನು ಆರು ರಾಜ್ಯಗಳ ಹಳ್ಳಿಗಳಿಗೆಂದು ರೂಪಿಸಲಾಯಿತು. ಟೆಲಿವಿಷನ್ ಮಾಧ್ಯಮ ಇಂದು ದೇಶದಾದ್ಯಂತ ಹರಡಿದೆ. ಕರ್ನಾಟಕದಲ್ಲಿ ದೂರದರ್ಶನ ರಾಜ್ಯದ ಉತ್ತರದ ಜಿಲ್ಲೆಗಳಲ್ಲಿ ೧೯೭೫-೭೬ರಲ್ಲಿ ನಡೆದಂಥ SITE(Satallite Instruction Telivision Experiment) ಪ್ರಯೋಗದಿಂದ ಕರ್ನಾಟಕದಲ್ಲಿ ದೂರದರ್ಶನ ಪಾದಾರ್ಪಣೆಯಾಯಿತು. ನವೆಂಬರ್ ೧, ೧೯೮೧ರಂದು ಬೆಂಗಳೂರು ಕೇಂದ್ರ ಆರಂಭವಾದರೂ ಅದು ದೆಹಲಿ, ಮದ್ರಾಸ್ ಮತ್ತು ಮುಂಬಯಿ ಕೇಂದ್ರಗಳ ಕಾರ್ಯಕ್ರಮವನ್ನು ಮರುಪ್ರಸಾರ ಮಾಡುವ ಕೇಂದ್ರ ಮಾತ್ರ ಆಗಿತ್ತು. ನವೆಂಬರ್ ೯, ೧೯೯೩ರಲ್ಲಿ ಸ್ವತಂತ್ರ ಕಾರ್ಯಕ್ರಮ ನಿರ್ಮಾಣ ಕೇಂದ್ರದ ರೂಪವನ್ನು ಪಡೆಯಿತು. ಈಗ ಬೆಂಗಳೂರಲ್ಲದೆ, ಗುಲಬರ್ಗಾದಲ್ಲಿಯೂ ಒಂದು ನಿರ್ಮಾಣ ಕೇಂದ್ರ ಸ್ಥಾಪನೆಯಾಗಿದೆ.'[೩]

'ಕನ್ನಡ, ಉರ್ದು, ಸಂಸ್ಕೃತ, ತುಳು ಹಾಗೂ ಕೊಂಕಣಿ ಭಾಷೆಗಳಲ್ಲಿ ಟಿವಿ ಕಾರ್ಯಕ್ರಮಗಳು ತಯಾರಾಗುತ್ತವೆ. ಧಾರಾವಾಡ, ಗುಲಬರ್ಗಾ ಹಾಗೂ ಶಿವಮೊಗ್ಗಗಳಲ್ಲಿಯೂ ಅಧಿಕ ಸಾಮರ್ಥ್ಯದ ಟ್ರಾನ್ಸ್‌ಮೀಟರ್‌ಗಳಲ್ಲದೇ ಇತರೆಡೆ ಒಟ್ಟು ೩೫ಕ್ಕೂ ಹೆಚ್ಚು ಸಾಮರ್ಥ್ಯದ L.P.T. ಗಳಿವೆ. ಮೊದಲ L.P.T. ಗಳಲ್ಲಿ ದೆಹಲಿ ಕಾರ್ಯಕ್ರಮ ಮಾತ್ರ ಮರುಪ್ರಸಾರವಾಗುತ್ತಿತ್ತು. ೧೯೯೦

ರಿಂದ ಬೆಂಗಳೂರು ಕೇಂದ್ರ ರಾಜ್ಯದ ಇತರ ಕೇಂದ್ರಗಳೊಂದಿಗೆ ಸಂಪರ್ಕ ಪಡೆಯಿತು. ಆಗಿನಿಂದ ಕರ್ನಾಟಕ ಪ್ರಸಾರ ಅಖಿಲ ಕರ್ನಾಟಕ ಮಟ್ಟದಲ್ಲಿ ನಡೆಯುತ್ತಿದೆ. ೧೯೯೪ರಲ್ಲಿ ಡಿ.ಡಿ.೯ ಚಾನೆಲ್ ಆರಂಭವಾದಗಿನಿಂದ ಕನ್ನಡ ಕಾರ್ಯಕ್ರಮ ರಾಷ್ಟ್ರೀಯ ಮಟ್ಟದಲ್ಲೂ ಲಭ್ಯವಾಗುವಂತಾಗಿದೆ. ಈಗ ಬೆಂಗಳೂರು ದೂರದರ್ಶನ ರಾಜ್ಯ ಜನಸಂಖ್ಯೆಯ ಶೇ.೭೦ರಷ್ಟು ಜನರಿಗೆ ತಲುಪುತ್ತಲಿದೆ. ಅದರಲ್ಲಿ ಸುಮಾರು ೨೨ ದಶಲಕ್ಷ ಜನ ದೂರದರ್ಶನ ವೀಕ್ಷಕರಾಗಿದ್ದಾರೆ. ಕನ್ನಡದ ಮೊದಲ ಖಾಸಗಿ ಚಾನೆಲ್ ಉದಯ ಟಿ.ವಿ ಪ್ರಸಾರ ಪ್ರಾರಂಭವಾದದ್ದು ೧೯೯೪ರಲ್ಲಿ. ೨೦೦೦-೨೦೦೧ರಲ್ಲಿ ಚಾನೆಲ್‌ಗಳ ಮಹಾಪೂರ. ನಂತರ ಕನ್ನಡದಲ್ಲಿ ಈಗ ದಿನದ ೨೪ ಗಂಟೆಯೂ ಕೆಲಸ ಮಾಡುವ ೮-೧೦ ಚಾನಲ್‌ಗಳಿವೆ. ಉದಯ, ಈ ಟಿ.ವಿ, ಝೀ ಟಿವಿ, ಡಿ.ಡಿ.೯ ಚಂದನ, ಟಿ.ವಿ.೯, ಸುವರ್ಣ, ಕಸ್ತೂರಿ, ಪಬ್ಲಿಕ್ ಟಿವಿ, ಸಮಯ ನ್ಯೂಸ್ ಹೀಗೆ ೧೦-೧೨ ಚಾನೆಲ್‌ಗಳು ಕನ್ನಡದಲ್ಲಿ ಪ್ರಸಾರ ಕಾರ್ಯ ಮಾಡುತ್ತಿವೆ.'[೪]

ಕನ್ನಡದ ಮೊದಲ ಧಾರಾವಾಹಿ "ಸಿಹಿ-ಕಹಿ" ಮೂಲಕ ಧಾರಾವಾಹಿಗಳ ಚರಿತ್ರೆ ಆರಂಭವಾಯಿತು. ಭಾರತದಲ್ಲಿಯೇ ಮೊದಲು ಪ್ರಸಾರಗೊಂಡದ್ದು "ಹಮ್ ಲೋಗ್" ಎನ್ನುವ ಹಿಂದಿ ಧಾರಾವಾಹಿ. ನಂತರ ದೇಶದ ವಿವಿಧ ರಾಜ್ಯಗಳಲ್ಲಿ ಧಾರಾವಾಹಿಗಳನ್ನು ಮನೋರಂಜನಾ ಕಾರ್ಯಕ್ರಮವನ್ನಾಗಿ ದಿನದ ೩೦ ನಿಮಿಷಗಳ ಕಾಲ ಪ್ರಸಾರ ಮಾಡಲು ಆರಂಭಿಸಿರು.

'ಟೆಲಿವಿಷನ್ ಪ್ರಸ್ತುತ ವಿಶ್ವದ ಅತ್ಯಂತ ಪ್ರಭಾವಶಾಲಿ ಸಂವಹನ ಮಾಧ್ಯಮಗಳಲ್ಲೊಂದು. ಭಾರತದಲ್ಲಿ ೧೯೫೦ರ ದಶಕದಲ್ಲಿ ಕಾಣಿಸಿಕೊಂಡ ಟೆಲಿವಿಷನ್ ಕರ್ನಾಟಕಕ್ಕೆ ಕಾಲಿಟ್ಟಿದ್ದು ೧೯೭೭ರ ಆಸುಪಾಸಿನಲ್ಲಿ. ೧೯೭೫-೭೭ರಲ್ಲಿ ಆರಂಭಗೊಂಡ ಸೈಟ್(ಸ್ಯಾಟಲೈಟ್ ಇನ್‌ಸ್ಟ್ರಕ್ಷನ್ ಟೆಲಿವಿಷನ್ ಎಕ್ಸ್‌ಪರಿ ಮೆಂಟ್) ಕಾರ್ಯಕ್ರಮದ ಅಂಗವಾಗಿ ಟೆಲಿವಿಷನ್ ಸೆಟ್‌ಗಳು ಗುಲ್ಬರ್ಗ ಜಿಲ್ಲೆಯ ಕೆಲವು ಸಮುದಾಯ ಕೇಂದ್ರಗಳಲ್ಲಿ ಸ್ಥಾಪಿಸಲ್ಪಟ್ಟವು. ಜನಸಮೂಹದ ಮಾಹಿತಿಗಾಗಿ ಮೊದಲಿಗೆ ಹಳ್ಳಿಗಾಡಿನಲ್ಲಿ ಗ್ರಾಮ ನೈರ್ಮಲ್ಯ, ಶಿಕ್ಷಣ, ಆರೋಗ್ಯ, ಪೌಷ್ಟಿಕ ಆಹಾರ ಮೊದಲಾದವುಗಳ ಬಗ್ಗೆ ವಿವರ ನೀಡುತ್ತಿದ್ದ ಈ ಕಾರ್ಯಕ್ರಮ(ಸೈಟ್) ಮುಕ್ತಾಯವಾದಾಗ ಗುಲ್ಬರ್ಗಾದಲ್ಲಿ ಟ್ರಾನ್ಸ್‌ಮೀಟರ್ ಆರಂಭಿಸಲಾಯಿತು(೩ನೇ ನವೆಂಬರ್, ೧೯೭೭). ಹೈದರಾಬಾದ್‌ನಲ್ಲಿ ಸಿದ್ಧಪಡಿಸಲಾದ ಕನ್ನಡ ಕಾರ್ಯಕ್ರಮಗಳೂ ಸೇರಿದಂತೆ ದೂರದರ್ಶನದ ಇನ್ನಿತರೆ ಕಾರ್ಯಕ್ರಮಗಳು ಆಗ ಗುಲ್ಬರ್ಗಾ ಜಿಲ್ಲೆಯ ಗ್ರಾಮೀಣ ಭಾಗದಲ್ಲಿ ಬಿತ್ತರಗೊಳ್ಳುತ್ತಿದ್ದವು.'[೫]

'ಅನೇಕ ನಗರಗಳು ಹಾಗೂ ರಾಜ್ಯಗಳಿಗೆ ದೂರದರ್ಶನ ಕೇಂದ್ರಗಳು ಮಂಜೂರಾದಾಗ ಕರ್ನಾಟಕಕ್ಕೂ ಪ್ರತ್ಯೇಕ ದೂರದರ್ಶನ ಕೇಂದ್ರ ಬೇಕೆಂಬ ಆಗ್ರಹ ಜೋರಾಯಿತು. ಕರ್ನಾಟಕದ ಒತ್ತಡಕ್ಕೆ ಮಣಿದ ಕೇಂದ್ರ ಸರ್ಕಾರ ೧೯೮೧ರ ನವೆಂಬರ್‌ನಲ್ಲಿ ದೂರದರ್ಶನ ಕೇಂದ್ರವನ್ನು ಸ್ಥಾಪಿಸಿತು. ಆದರೆ ಅದರಲ್ಲಿ ಕಾರ್ಯಕ್ರಮಗಳ ತಯಾರಿಕೆಗೆ ಅಗತ್ಯ ಮೂಲಭೂತ

ಸೌಕರ್ಯಗಳಿರಲಿಲ್ಲ. ದೆಹಲಿ, ಮದ್ರಾಸ್, ಮುಂಬೈ ಕೇಂದ್ರಗಳು ಸಿದ್ಧಪಡಿಸಿದ ಕಾರ್ಯಕ್ರಮಗಳು ಕೇವಲ ಒಂದು ಕಿಲೋವ್ಯಾಟ್ ಸಾಮರ್ಥ್ಯದ ಟ್ರಾನ್ಸ್‌ಮೀಟರ್ ಮೂಲಕ ಪ್ರಸಾರಗೊಳ್ಳುತ್ತಿದ್ದವು. ಇಂತಹ ತಾರತಮ್ಯದ ವಿರುದ್ಧ ಚಳುವಳಿ ಶುರುವಾದ ಮೇಲೆ ೧೯೮೩ರ ನವೆಂಬರ್‌ನಲ್ಲಿ ಕರ್ನಾಟಕದಲ್ಲಿ ಪ್ರತ್ಯೇಕ ಕಾರ್ಯಕ್ರಮ ತಯಾರಿಕಾ ಘಟಕ ಅಸ್ತಿತ್ವಕ್ಕೆ ಬಂತು. ಕೇವಲ ಹದಿನೈದು ನಿಮಿಷಗಳ ಕಾಲಾವಧಿಯ ಕನ್ನಡ ಕಾರ್ಯಕ್ರಮಗಳು ಟೆಲಿವಿಷನ್‌ನಲ್ಲಿ ಪ್ರಸಾರವಾಗಲು ಆರಂಭಿಸಿದವು. ಈಗ ಬಹುತೇಕ ಎಲ್ಲಾ ಟೆಲಿವಿಷನ್‌ಗಳು ದಿನದ ೨೪ ಗಂಟೆಯೂ ಪ್ರಸಾರಗೊಳ್ಳುತ್ತಿವೆ. ಸರ್ಕಾರಿ ಸ್ವಾಮ್ಯದ ದೂರದರ್ಶನ ಏಕಸ್ವಾಮ್ಯತೆ ಹೋಗಿ ಆಗಲೇ ಒಂದು ದಶಕಕ್ಕೂ ಹೆಚ್ಚು ಕಾಲವಾಯಿತು. ದೂರದರ್ಶನದ ಉಪಗ್ರಹ ವಾಹಿನಿ ಈಗ ಚಂದನವೆಂದು ನಾಮಕರಣಗೊಂಡು ಪ್ರಸಾರವಾಗುತ್ತಿದೆ. ಪ್ರಸ್ತುತ ಕನ್ನಡದಲ್ಲಿ ಪ್ರಸಾರವಾಗುವ ೧೮ಕ್ಕೂ ಹೆಚ್ಚು ವಾಹಿನಿಗಳಿವೆ. ಮೊದಮೊದಲು ಮನರಂಜನೆಗೆ ಹೆಚ್ಚು ಪ್ರಾಧಾನ್ಯತೆ ನೀಡಿ ಸುದ್ದಿ ಸಂಕ್ಷೇಪಗಳನ್ನು ಪ್ರಸಾರ ಮಾಡುತ್ತಿದ್ದ ಚಾನಲ್‌ಗಳಿದ್ದವು. ಈಗ ಸುದ್ದಿಗೆ ಪ್ರತ್ಯೇಕ ವಾಹಿನಿಗಳು ಆರಂಭವಾಗಿವೆ. ಮನರಂಜನೆಗಾಗಿ ಅನೇಕ ವಿಭಾಗಗಳು ಪ್ರತ್ಯೇಕ ವಾಹಿನಿಗಳಾಗಿ ಮನೆ–ಮನ ತಲುಪುತ್ತಿವೆ.'[೬]

'ದೂರದರ್ಶನ ಬಹಳ ಕಾಲ ದಿನಕ್ಕೊಮ್ಮೆ ಮಾತ್ರ ಸುದ್ದಿ ಪ್ರಸಾರ ಮಾಡುತ್ತಿತ್ತು. ಉದಯ ಟಿವಿ ದಿನಕ್ಕೊಂದು ಬಾರಿ ಸುದ್ದಿ ಪ್ರಸಾರ ಪ್ರಾರಂಭಿಸಿದರೂ ಅದನ್ನು ೩–೪ಕ್ಕೆ ಏರಿಸಿತು. ಅನೇಕ ಸಂದರ್ಭಗಳಲ್ಲಿ ಸುದ್ದಿ ಪ್ರಸಾರದ ಸಂಖ್ಯೆ ಇನ್ನೂ ಹೆಚ್ಚುತ್ತಿತ್ತು. ಈಗ ಸುದ್ದಿ ಸಮಾಚಾರಗಳಿಗಾಗಿಯೇ ಉದಯ ನ್ಯೂಸ್ ಪ್ರಸಾರವಾಗುತ್ತಿದೆ. ದೂರದರ್ಶನ ನಂತರ ಕನ್ನಡ ವಾಹಿನಿ ಆರಂಭಿಸಿದ್ದು ಉದಯವಾಹಿನಿ. ಅನಂತರ ಕಾವೇರಿ, ಸುಪ್ರಭಾತ, ಈ ಟಿವಿ, ಕಸ್ತೂರಿ, ಟಿವಿ ೯, ಸಮಯ, ಜೀ ಕನ್ನಡ, ಸುವರ್ಣ ಇನ್ನೂ ಮೊದಲಾದ ವಾಹಿನಿಗಳು ದಾಂಗುಡಿಯಿಟ್ಟವು. ಬಹುಬೇಗ ಕಾವೇರಿ ಹಾಗೂ ಸುಪ್ರಭಾತ ವಾಹಿನಿಗಳು ನಿಂತುಹೋದವು. ಆದರೆ ಕಾವೇರಿ ಬದಲಿಗೆ ಸುವರ್ಣ ಈಗ ಕಾರ್ಯ ನಿರ್ವಹಿಸುತ್ತಿದೆ. ಪೈಪೋಟಿ ಹೆಚ್ಚಿದಂತೆಲ್ಲಾ ಕನ್ನಡದಲ್ಲಿ ಅನೇಕ ಚಾನೆಲ್‌ಗಳು ಪ್ರಾರಂಭಗೊಂಡವು. ಕೆಲವು ವಾಹಿನಿಗಳು ಸುದ್ದಿಸಮಾಚಾರ ಗಳಿಗಾಗಿ ಪ್ರತ್ಯೇಕ ವಾಹಿನಿಗಳನ್ನು ಶುರುಮಾಡಿದವು. ಇನ್ನೂ ಕೆಲವು ಸುದ್ದಿಗಾಗಿಯೇ ಚಾನೆಲ್‌ಗಳನ್ನು ಪ್ರಸಾರ ಮಾಡತೊಡಗಿದವು. ಈಗ ಉದಯ, ಕಸ್ತೂರಿ, ಸುವರ್ಣ ವಾಹಿನಿಗಳು ಪ್ರತ್ಯೇಕವಾದ ನ್ಯೂಸ್ ಚಾನೆಲ್‌ಗಳನ್ನು ಹೊಂದಿವೆ. ಟಿ.ವಿ.೯, ಜನಶ್ರೀ, ಸಮಯ ಹಾಗೂ ಪಬ್ಲಿಕ್ ಟಿವಿ ವಾಹಿನಿಗಳು ಕೇವಲ ಸುದ್ದಿ ಪ್ರಸಾರ ಮಾಡುತ್ತಿವೆ. ಉದಯ ವಾಹಿನಿ ಚಲನಚಿತ್ರ, ಹಾಸ್ಯ, ಸಂಗೀತಕ್ಕಾಗಿಯೇ ಬೇರೆ ಬೇರೆ ಚಾನೆಲ್‌ಗಳನ್ನು ಇಟ್ಟುಕೊಂಡಿದೆ. ಧಾರ್ಮಿಕ ಕಾರ್ಯಕ್ರಮಗಳನ್ನು ಪ್ರಸಾರ ಮಾಡಲು ಶ್ರೀಶಂಕರ ಚಾನೆಲ್ ಇದ್ದರೆ ಚಿತ್ರಸಂಗೀತಕ್ಕಾಗಿ ರಾಜ್‌ಮ್ಯೂಸಿಕ್ ಪ್ರಸಾರವಾಗುತ್ತಿದೆ.'[೭]

'ಎಲ್ಲಾ ವಾಹಿನಿಗಳು ಟಿ.ಆರ್.ಪಿ. ರೇಟಿಂಗ್ ಅನುಸರಿಸಿ ಕಾರ್ಯಕ್ರಮಗಳನ್ನು ರೂಪಿಸುತ್ತವೆ. ಮನೋರಂಜನೆ, ಮನೋಲ್ಲಾಸ ಹಾಗೂ ಮಾಹಿತಿಯನ್ನು ನೋಡುಗರಿಗೆ ಒದಗಿಸುತ್ತಿರುವ ದೊಡ್ಡ ಉದ್ಯಮವಾಗಿ ಬೆಳೆದಿರುವ ಟೆಲಿವಿಷನ್ ಜಗತ್ತು ಜನಸಮುದಾಯವನ್ನು ಆವರಿಸಿಕೊಂಡಿದೆ. ಓ.ಬಿ.ವ್ಯಾನ್‌ಗಳು ವಿರಳವಾಗಿ ಕಂಡುಬರುತ್ತಿದ್ದ ಆ ದಿನಗಳು ಈಗಿಲ್ಲ. ಈಗ ವಿಸ್ಯಾಟ್ ಮೂಲಕ ನೇರ ಪ್ರಸಾರ ಕಾರ್ಯಕ್ರಮಗಳು ಎಲ್ಲಾ ವಾಹಿನಿಯ ಪ್ರಮುಖ ಅಂಗವಾಗಿವೆ. ಯಾವುದೇ ಸ್ಥಳದಲ್ಲಿ ನಡೆಯುವ ಘಟನೆಗಳನ್ನು ಮನೆಗೆ ತರುವ ಟೆಲಿವಿಷನ್ ಎಲ್ಲರ ಬದುಕಿನ ಅವಿಭಾಜ್ಯ ಅಂಗವಾಗಿದೆ ಎಂದರೂ ತಪ್ಪಿಲ್ಲ.'[೮]

ಸಂಪಾದಕ: ಜೆ.ಪಿ.ಕೋಲಾರ

೨.೪. ಇದುವರೆಗೆ ನಡೆದ ಅಧ್ಯಯನದ ಸಮೀಕ್ಷೆ

"ದೂರದರ್ಶನ ಧಾರಾವಾಹಿಗಳಲ್ಲಿ ಕನ್ನಡ" ಎಂಬ ವಿಷಯಕ್ಕೆ ಸಂಬಂಧಿಸಿದಂತೆ ಈವರೆಗೂ ಬಂದಿರುವ ಅಧ್ಯಯನಗಳು, ಸಂಶೋಧನಾ ಲೇಖನಗಳು, ಪತ್ರಿಕಾ ಲೇಖನಗಳ ಸಾಹಿತ್ಯ ಸಮೀಕ್ಷೆಯನ್ನು ಈ ಕೆಳಗಿನಂತೆ ಅಧ್ಯಯನ ಮಾಡಲಾಗಿದೆ.

"ಸಂವಹನ ಮಾಧ್ಯಮಗಳು" ಎಂಬ ಪುಸ್ತಕದಲ್ಲಿ ಬಿ.ಎಸ್.ಚಂದ್ರಶೇಖರ್(೨೦೦೩) ಅವರು ಸಂವಹನ ಮಾಧ್ಯಮಗಳನ್ನು ಹತ್ತು ಅಧ್ಯಾಯಗಳಲ್ಲಿ ವಿವರಿಸುತ್ತಾರೆ. ಸಮೂಹ ಸಂವಹನ ಮಾಧ್ಯಮ, ಹುಟ್ಟು, ಬೆಳವಣಿಗೆ, ವಿಕಾಸಗಳನ್ನು ಪ್ರಾರಂಭದ ಕಾಲಘಟ್ಟದಿಂದ ಹಿಡಿದು ಇಲ್ಲಿಯವರೆಗೂ ಆದಂತಹ ಅಭಿವೃದ್ಧಿ, ಬದಲಾವಣೆಯ ಒಟ್ಟು ರೂಪರೇಷೆಗಳನ್ನು ಈ ಪುಸ್ತಕದಲ್ಲಿ ವಿವರವಾಗಿ ವಿಶ್ಲೇಷಿಸಿದ್ದಾರೆ. ಇಲ್ಲಿ ಮುಖ್ಯವಾಗಿ ಟೆಲಿವಿಷನ್ ಮತ್ತು ಉಪಗ್ರಹ ಟೆಲಿವಿಷನ್ ಎಂಬ ಅಧ್ಯಾಯಗಳಲ್ಲಿ ಟೆಲಿವಿಷನ್ ಕುರಿತು ವಿಸ್ತಾರವಾದ ಮಾಹಿತಿಯನ್ನು ಒದಗಿಸಿದ್ದಾರೆ. ಟೆಲಿವಿಷನ್ ಎಂದರೆ ೧೯೯೧ರವರೆಗೂ ದೂರದರ್ಶನವೇ ಆಗಿದ್ದು, ಪರಿಸ್ಥಿತಿ ಬದಲಾಗಿ ದೂರದರ್ಶನ ಆರರಲ್ಲಿ ಅಥವಾ ನೂರರಲ್ಲಿ ಒಂದು ಚಾನೆಲ್ ಆಗಿದೆ ಎಂದು ಗುರುತಿಸುತ್ತಾರೆ. ಒಟ್ಟು ಮಾಧ್ಯಮ ಮತ್ತು ಆ ಮಾಧ್ಯಮದ ಒಂದು ಭಾಗವನ್ನು ಪ್ರತ್ಯೇಕಿಸಲು ಬೇರೆ ಬೇರೆ ಪದಗಳು ಅಗತ್ಯವಾಗಿವೆ. ರೇಡಿಯೋ ಪದವನ್ನು ಕನ್ನಡ ಎರವಲು ತೆಗೆದು ಕೊಂಡಿರುವಂತೆ ಟೆಲಿವಿಷನ್ ಪದವನ್ನು ತೆಗೆದುಕೊಳ್ಳುವುದು ಅನಿವಾರ್ಯವಾಗಿದೆ. ಟೆಲಿವಿಷನ್ ಪದದಷ್ಟೆ ಅದರ ಸಂಕ್ಷೇಪ ರೂಪ ಟಿ.ವಿ. ಅಥವಾ ಟಿ.ವಿ. ಬಳಕೆ ಸಾಮಾನ್ಯವಾಗಿದೆ. ಟಿ.ವಿ. ಉಚ್ಚಾರಣೆಗೆ ಹತ್ತಿರವಿರುವ ಟಿ.ವಿ. ಪದವನ್ನು ಇಲ್ಲಿ ಬಳಸಲಾಗಿದೆ. ಇದೇ ರೀತಿ ಈಗಾಗಲೇ ಶಬ್ದಭಂಡಾರಕ್ಕೆ ಚಾನೆಲ್ ಪದವನ್ನು ಅದೇ ರೂಪದಲ್ಲಿ ಉಳಿಸಿಕೊಂಡಿದೆ" ಎಂದು ವಿವರಿಸಿದ್ದಾರೆ.

ಮುಂದಿನ ಚರ್ಚೆಗಳಲ್ಲಿ ಟೆಲಿವಿಷನ್ ತಂತ್ರಜ್ಞಾನ, ಉಗಮ, ಬೆಳವಣಿಗೆ, ಕೇಬಲ್, ಉಪಗ್ರಹ, ಟೆಲಿವಿಷನ್ ಕುರಿತು ಮಾಹಿತಿ ನೀಡುತ್ತಾರೆ. ಪಾಶ್ಚಾತ್ಯ ದೇಶಗಳಲ್ಲಿ ಅಸ್ತಿತ್ವ ಪಡೆದುಕೊಂಡ

ನಂತರದ ದಿನಗಳಲ್ಲಿ ಭಾರತಕ್ಕೆ ಬಂದ ಮೊದಲ ಘಟ್ಟವನ್ನು ವಿವರಿಸಿದ್ದಾರೆ. ಬೆಳವಣಿಗೆಯ ವಿವಿಧ ಮಜಲುಗಳು, ದೂರದರ್ಶನದ ಜನನ, ದೂರದರ್ಶನ ಪ್ರಾರಂಭವಾದ ಮೊದಲ ಹಂತದಲ್ಲಿ ತಯಾರಿಸಲಾದ ಕಾರ್ಯಕ್ರಮಗಳ ಕುರಿತು ಮಾಹಿತಿ ಇದೆ. ದೂರದರ್ಶನ ಅಥವಾ ಟೆಲಿವಿಷನ್ ಎಂಬ ವಿಶಾಲವಾದ ವ್ಯಾಪ್ತಿಯೊಳಗೆ ಪ್ರವೇಶ ಮಾಡುವಾಗ ಎದುರಾಗುವ ಪ್ರತಿಯೊಂದು ವಿಷಯದ ಕುರಿತು ವಿಶ್ಲೇಷಣೆಯನ್ನು ಈ ಅಧ್ಯಯನದಲ್ಲಿ ಮಾಡಲಾಗಿದೆ.

ದೂರದರ್ಶನ ಪಾಶ್ಚಿಮಾತ್ಯರಿಂದ ಆಮದಾಗಿರುವ ಸರಕು ಎಂಬುದು ಗೊತ್ತಿರುವ ವಿಷಯ. ಹಾಗೆ ಬಂದ ದೂರದರ್ಶನಕ್ಕೆ ಕಾರ್ಯಕ್ರಮಗಳ ರೂಪರೇಷೆಗಳನ್ನು ಪಶ್ಚಿಮ ದೇಶದಿಂದಲೇ ಅಮದು ಮಾಡಿಕೊಳ್ಳುವುದು ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ಅನಿವಾರ್ಯವಾಗಿತ್ತು. ಆದರೆ ಭಾರತ ದೇಶ ಮಾತ್ರ ವಿದೇಶದಿಂದ ಕಾರ್ಯಕ್ರಮಗಳನ್ನು ಪಡೆಯದೆ, ನಮ್ಮ ದೇಶದಲ್ಲಿ ನಮ್ಮ ಭಾಷೆಗಳಲ್ಲೇ ಕಾರ್ಯಕ್ರಮಗಳನ್ನು ಸಿದ್ಧಮಾಡಲು ನಿರ್ಧರಿಸಿತು. ಇದು ಒಂದು ದಿಟ್ಟ ಹೆಜ್ಜೆಯೇ ಸರಿ ಎನ್ನುತ್ತಾರೆ.

ದೂರದರ್ಶನ ವಿಶಿಷ್ಟ ರೀತಿಯಲ್ಲಿ ಎಲ್ಲಾ ವಯೋಮಾನದವರಿಗೂ(ಮಹಿಳೆ, ಮಕ್ಕಳು, ಪುರುಷರು, ಕಾರ್ಮಿಕರು, ರೈತರು) ತಲುಪುವಂತಹ ಕಾರ್ಯಕ್ರಮಗಳ ಪ್ರಸಾರವನ್ನು ಮಾಡಲಾಗುತ್ತಿತ್ತು. ಇದರೊಂದಿಗೆ ಸುದ್ದಿ, ಸಂದರ್ಶನ, ನಾಟಕ, ರೂಪಕ, ಕ್ರೀಡೆ, ನೃತ್ಯ, ಸಂಗೀತಗಳಿಗೂ ಆದ್ಯತೆ ನೀಡಿ ಪ್ರಸಾರ ಮಾಡಲಾಗುತ್ತಿತ್ತು. ಇದರೊಂದಿಗೆ ಸಾಮಾಜಿಕ ಕಳಕಳಿಯನ್ನು ತೋರುವ ಉದ್ದೇಶದಿಂದ ಜನಸಂಖ್ಯೆಯನ್ನು ನಿಯಂತ್ರಿಸುವ ಕುಟುಂಬ ಯೋಜನೆಯ ಕಾರ್ಯಕ್ರಮಗಳಾದ ನಿರೋಧ್, ದೂಲಾಡಿ, ಕಾಪರ್‌ಟಿ, ಮೊದಲಾದ ಯೋಜನೆಗಳ ಕುರಿತು ಜಾಹೀರಾತು ಪ್ರಸಾರ ಮಾಡಲಾಗುತ್ತಿತ್ತು. ವಿಜ್ಞಾನ, ಪರಿಸರ ಕಾರ್ಯಕ್ರಮಗಳು, ವಿಜ್ಞಾನಕ್ಕೆ ಸಂಬಂಧಿಸಿದ ಭಾಷಣ, ಸಂದರ್ಶನ, ಚರ್ಚೆಗಳ ರೂಪದಲ್ಲಿ ಕೇಳಿ–ತಿಳಿ ಎನ್ನುವ ಶಿಕ್ಷಣತತ್ವವನ್ನು ಅನುಸರಿಸಲಾಗುತ್ತಿತ್ತು. ಮನರಂಜನೆಯ ಕಾರ್ಯಕ್ರಮಗಳು ಕೂಡ ಪ್ರಸಾರವಾಗತೊಡಗಿದವು. ಮನೋರಂಜನೆಯ ಕಾರ್ಯಕ್ರಮಗಳಲ್ಲಿ ಮೊಟ್ಟಮೊದಲು ಕೌಟುಂಬಿಕ ಟಿ.ವಿ. ಧಾರಾವಾಹಿಗಳು ಮಹಿಳಾ ವೀಕ್ಷಕರನ್ನು ಹಿಡಿದಿಡುವ ಪ್ರಯತ್ನದಲ್ಲಿ ಯಶಸ್ವಿಯಾಗಿ ಅತಿ ಹೆಚ್ಚು ಮಹಿಳಾ ವೀಕ್ಷಕರನ್ನು ಹೊಂದಿರುವಂತಹ ಮಾಧ್ಯಮವಾಯಿತು. ಪಶ್ಚಿಮ ದೇಶಗಳಿಂದ ಅಮದಾಗಿರುವಂತಹ ಕಾರ್ಯಕ್ರಮಗಳಾಗಿದ್ದು ೧೯೫೦ರಿಂದ ಇಲ್ಲಿಯವರೆಗೂ ಜನಪ್ರಿಯತೆಯನ್ನು ಉಳಿಸಿಕೊಂಡು ಬಂದಿದೆ ಎಂದು ವಿವರಿಸುತ್ತಾರೆ.

ಧಾರಾವಾಹಿಯ ಪ್ರಸಾರದ ಅವಧಿಯನ್ನು, ಅದು ಭಾರತದಲ್ಲಾದ ಬದಲಾವಣೆಯನ್ನು ಇಲ್ಲಿ ಪ್ರಸ್ತಾಪಿಸುತ್ತಾರೆ. ಸಿನಿಮಾದಲ್ಲಿ ಒಂದು ಮುಖ್ಯವಾದ ಕಥೆ ಇರುತ್ತದೆ. ಅದು ಮುಂದೆ ಜಟಿಲವಾಗುತ್ತಾ ಪರಾಕಾಷ್ಠೆಯನ್ನು ತಲುಪಿದ ಮೇಲೆ ಕತೆ ಎತ್ತಿದ ಒಂದು ಸಮಸ್ಯೆಗೆ ಪರಿಹಾರದ

ಸೂಚನೆ ಇರುತ್ತದೆ. ಆದರೆ ಧಾರಾವಾಹಿಗಳು ಹಾಗಲ್ಲ, ಧಾರಾವಾಹಿಗೆ ಒಂದು ಕಥೆ ಇರುವುದಿಲ್ಲ. ಇಲ್ಲಿ ಹಲವು ಕಥೆಗಳು ಏಕಕಾಲದಲ್ಲಿ ಘಟಿಸುತ್ತದೆ. ಒಂದು ಕತೆ ಇನ್ನೊಂದು ಕಥೆಯ ಕಡೆ ಎಳೆದುಕೊಂಡು ಹೋಗುತ್ತದೆ. ಹೊಸ ಪಾತ್ರಗಳು ಬರುತ್ತಲೇ ಇರುತ್ತವೆ, ಹಾಗೆಯೇ ಮುಂಚೆ ವ್ಯಾಖ್ಯಾನಿಸಿದ ಪಾತ್ರಗಳು ಇದ್ದಕ್ಕಿದ್ದ ಹಾಗೆ ಕಣ್ಮರೆಯಾಗಬಹುದು. ಧಾರಾವಾಹಿಯನ್ನು ಬೇಕಾದಲ್ಲಿಂದ ನೋಡಬಹುದು. ಕಥೆ ಎಲ್ಲಿ ಪ್ರಾರಂಭವಾಯಿತು ಎಂದು ಯೋಚಿಸಬೇಕಾಗಿಲ್ಲ. ಹಾಗೆಯೇ ನೋಡುವುದನ್ನು ಯಾವಾಗ ಬೇಕಾದರೂ ನಿಲ್ಲಿಸಬಹುದು; ಕಥೆ ಹೇಗೆ ಮುಗಿಯುತ್ತದೆ ಎನ್ನುವುದು ಮುಖ್ಯವಾಗುವುದಿಲ್ಲ ಎಂದು ವಿವರಿಸುತ್ತಾರೆ.

ಮುಂದುವರಿಯುತ್ತ ಲೇಖಕರು ಧಾರಾವಾಹಿಗಳು ಪ್ರಾರಂಭದ ಕಾಲಘಟ್ಟದಲ್ಲಿ ದೇಶದ ಅಭಿವೃದ್ಧಿಪರ ಕೌಟುಂಬಿಕ ಟಿವಿ ಧಾರಾವಾಹಿಗಳನ್ನು ನಿರ್ಮಿಸಲಾಗುತ್ತಿತ್ತು. ಈ ಧಾರಾವಾಹಿಗಳು ವಯಸ್ಕರ ಶಿಕ್ಷಣ, ಕುಟುಂಬ ಯೋಜನೆಗಳ ಬಗ್ಗೆ ದೂರದರ್ಶನದ ಮೂಲಕ ಜನರಿಗೆ ತಲುಪಿಸುವಲ್ಲಿ ಯಶಸ್ವಿಯಾಗಿದ್ದವು ಎಂದು ವಿವರಿಸುತ್ತಾರೆ.

ಹೀಗೆ ಪ್ರಾರಂಭವಾದ ಧಾರಾವಾಹಿಗಳು, ಯಶಸ್ಸು ಮತ್ತು ಜನಪ್ರಿಯತೆಯನ್ನು ಪಡೆದು ಕೊಳ್ಳುವುದನ್ನು ಅರಿತುಕೊಂಡು ಇನ್ನಷ್ಟು ಹೊಸ ಧಾರಾವಾಹಿಗಳನ್ನು ಪ್ರಸಾರ ಮಾಡಲು ದೂರದರ್ಶನ ಮುಂದಾಯಿತು. ಮೊದಲ ಪ್ರಯತ್ನವಾಗಿ "ಹಮ್‌ಲೋಗ್"ದಂತಹ ಸಾಮಾಜಿಕ ಕಳಕಳಿಯನ್ನು ಹೊಂದಿರುವಂತಹ, ಕುಟುಂಬ ಯೋಜನೆಯ ಮಹತ್ವವನ್ನು ಹೇಳುವ ಧಾರಾವಾಹಿಯನ್ನು ಪ್ರಸಾರ ಮಾಡಲಾಯಿತು. ಇದು ಧಾರಾವಾಹಿಯ ಇತಿಹಾಸದಲ್ಲಿ ಒಂದು ಮೈಲಿಗಲ್ಲು ಎಂದು ಬಣ್ಣಿಸಿದ್ದಾರೆ. ಒಂದೂವರೆ ವರ್ಷ, ವಾರಕ್ಕೆ ಎರಡು ದಿನ ಪ್ರಸಾರವಾಗುವ ಧಾರಾವಾಹಿ ಇದಾಯಿತು. "ಹಮ್‌ಲೋಗ್" ಯಶಸ್ವಿಯಾದ ನಂತರ ಚಿತ್ರ ನಿರ್ಮಾಪಕರಾದ ರಮೇಶ್ ಸಿಪ್ಪಿ ತಯಾರಿಸಿದ "ಬುನಿಯಾದ್" ಹಮ್‌ಲೋಗ್ ನಂತರ ಪ್ರಸಾರವಾಗಿ ಜನಪ್ರಿಯತೆಯನ್ನು ಕಂಡುಕೊಂಡಿತು. ಮುಂದೆ ಅನೇಕ ಸಾಮಾಜಿಕ ಕಳಕಳಿಯ ಧಾರಾವಾಹಿಗಳನ್ನು ದೂರದರ್ಶನ ಪ್ರಸಾರ ಮಾಡಿತು.

ಸಾಮಾಜಿಕ ವಿಷಯಗಳನ್ನು ಹೊರತುಪಡಿಸಿ ಭಿನ್ನ ರೀತಿಯ ಪ್ರಯತ್ನವಾಗಿ ಭಕ್ತಿ ಪ್ರಧಾನ ಧಾರಾವಾಹಿಗಳ ನಿರ್ಮಾಣಕ್ಕೆ ಕೈ ಹಾಕಿದರು. ಮೊದಲ ಪ್ರಯತ್ನವಾಗಿ ೧೯೮೭ರಲ್ಲಿ ರಾಮಾಯಣ ಮತ್ತು ೧೯೮೮ರಲ್ಲಿ ಮಹಾಭಾರತ ಧಾರಾವಾಹಿಗಳು ಪ್ರಸಾರವಾದವು. ಈ ಭಕ್ತಿಪ್ರಧಾನ ಧಾರಾವಾಹಿಗಳನ್ನು ಎಲ್ಲಾ ಜಾತಿಗಳ, ಎಲ್ಲಾ ಧರ್ಮಗಳ, ಎಲ್ಲಾ ವಯೋಮಾನದವರು ಮುಕ್ತಮನಸ್ಸಿನಿಂದ ಸ್ವೀಕರಿಸಿದರು. ರಾಮಾಯಣ ಮತ್ತು ಮಹಾಭಾರತವು ಗಳಿಸಿದ ಜನಪ್ರಿಯತೆಯೂ ದೂರದರ್ಶನದಲ್ಲಿ ಪ್ರಸಾರವಾದ ಟಿವಿ ಕಾರ್ಯಕ್ರಮಗಳಲ್ಲಿ ಅತ್ಯಂತ ಜನಪ್ರಿಯತೆಯನ್ನು ಪಡೆದ ಕಾರ್ಯಕ್ರಮಗಳೆಂಬ ಹೆಗ್ಗಳಿಗೆ ಪಾತ್ರವಾಗಿದ್ದವು.

ಒಟ್ಟಾರೆಯಾಗಿ ಧಾರಾವಾಹಿಯ ವ್ಯಾಪ್ತಿಗೆ ಪ್ರವೇಶ ಪಡೆಯುವುದಕ್ಕೂ ಮೊದಲು ಅದರ ಇತಿಹಾಸ, ಉಗಮ, ಬೆಳವಣಿಗೆ, ಕಾರ್ಯಕ್ರಮಗಳ ರೂಪರೇಷೆ ಹೀಗೆ ಎಲ್ಲದರ ಕುರಿತಾದ ಸವಿಸ್ತಾರವಾದ ಮಾಹಿತಿಯನ್ನು ಈ ಭಾಗದಲ್ಲಿ ವಿವರಿಸಲಾಗಿದೆ.

ಬರಗೂರು ರಾಮಚಂದ್ರಪ್ಪ ಅವರ ಸಂಸ್ಕೃತಿ: ಶ್ರಮ ಮತ್ತು ಶೃಜನಶೀಲತೆ(೨೦೦೧) ಕೃತಿಯ ಲೇಖನಗಳನ್ನು ಒಟ್ಟು ಐದು ಭಾಗಗಳಾಗಿ ವಿಂಗಡಿಸಲಾಗಿದ್ದು, ಮೊದಲನೆಯ ಭಾಗದಲ್ಲಿ ಒಟ್ಟು ಇಪ್ಪತ್ತು ಉಪಶೀರ್ಷಿಕೆಗಳಲ್ಲಿ ತಾತ್ವಿಕ ಚರ್ಚೆಯನ್ನು ಮಾಡಲಾಗಿದೆ. ಎರಡನೆಯ ಭಾಗವು ಸಾಹಿತಿಗಳು ಮತ್ತು ಅವರ ಕೃತಿಗಳ ವಿಶ್ಲೇಷಣೆಯನ್ನು ಮಾಡುವ ಇಪ್ಪತ್ತು ಉಪಶೀರ್ಷಿಕೆಗಳಿವೆ. ಮೂರನೆಯ ಭಾಗವು ಸಮೂಹ ಮಾಧ್ಯಮಗಳ ಒಟ್ಟಾರೆಯ ನೋಟವನ್ನು ಎಂಟು ಉಪಶೀರ್ಷಿಕೆಗಳಲ್ಲಿ ವಿವರಿಸಿದ್ದಾರೆ. ಭಾಗ ನಾಲ್ಕು ರಾಜಕೀಯದ ವಿಷಯಗಳಿಗೆ ಮೀಸಲಾಗಿದ್ದರೆ, ಭಾಗ ಐದರಲ್ಲಿ ಪ್ರಚಲಿತ ವಿದ್ಯಮಾನಗಳ ಕುರಿತು ಇತರ ಪತ್ರಿಕೆಗಳಲ್ಲಿ ಬರೆದಂತಹ ಲೇಖನಗಳ ವಿವರಣೆಯಾಗಿದೆ. 'ಇದು ಸಂಸ್ಕೃತಿ: ಶ್ರಮ ಮತ್ತು ಸೃಜನಶೀಲತೆ' ಪುಸ್ತಕದ ಒಂದು ಪಕ್ಷಿನೋಟ. ಈ ಪುಸ್ತಕದಲ್ಲಿ ನನ್ನ ಅಧ್ಯಯನದ ವಿಷಯಕ್ಕೆ ಸಂಬಂಧಿಸಿದಂತೆ ಭಾಗ ಮೂರರಲ್ಲಿ ಚರ್ಚಿಸಲಾಗಿರುವ ವಿಷಯಗಳು ಅಧ್ಯಯನಕ್ಕೆ ಪೂರಕವಾಗಿವೆ. ಇದರ ಒಟ್ಟು ಸಾರಾಂಶವನ್ನು ಹೀಗೆ ವಿಶ್ಲೇಷಿಸಲಾಗಿದೆ.

"ದೂರದರ್ಶನ ಧಾರಾವಾಹಿಗಳಲ್ಲಿ ಮಹಿಳಾ ಪ್ರತಿನಿಧೀಕರಣ"(೨೦೦೨) ಕಾವೇರಿ ಪಿ. ಸಾಗರ ಅವರು ಕನ್ನಡ ವಿ.ವಿ. ಹಂಪಿಯ ಮಹಿಳಾ ಅಧ್ಯಯನ ವಿಭಾಗಕ್ಕೆ ಪಿಎಚ್.ಡಿ. ಪದವಿಗಾಗಿ ಈ ಪ್ರಬಂಧವನ್ನು ಸಲ್ಲಿಸಿದ್ದಾರೆ. ಈ ಪ್ರಬಂಧವು ಈ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತದೆ.

ದೂರದರ್ಶನ ನೋಡುತ್ತಾ ಕುಳಿತರೆ ಮನೆಗೆ ಬಂದ ಅತಿಥಿಗಳತ್ತ ಲಕ್ಷ್ಯವಿಲ್ಲ. ಏನು ಬಂದಿರಿ, ಆರಾಮ ಇದ್ದೀರಾ ಎನ್ನಲು ಬಾಯಿಲ್ಲ, ಕಣ್ತುಂಬ ನೋಡಿ, ಮನತುಂಬಿ ಮಾತನಾಡುವಷ್ಟು ಸಮಯವಿಲ್ಲ. ನಮಗೆ ಧರ್ಮದರ್ಶನಕ್ಕಿಂತ ದೂರದರ್ಶನವೇ ಮುಖ್ಯವಾಯಿ ತೆಂದು 'ಚೆನ್ನಬಸವ' ಹೀಗೊಂದು ಸಾಲನ್ನು ಟಿವಿ ಕುರಿತು ನಡೆದ ಉದಯ ಟಿವಿಯ ಹರಟೆ ಕಾರ್ಯಕ್ರಮದಲ್ಲಿ ಶ್ರೀಮತಿ ಇಂದುಮತಿ ಸಾಲಿಮಠ ಅವರು ದೂರದರ್ಶನದ ಮಾತುಕತೆ ಕುರಿತು ಮಾತನಾಡುತ್ತಾ ಈ ಮಾತುಗಳನ್ನು ಹೇಳಿದ್ದಾರೆ.

ದೂರದರ್ಶನದಲ್ಲಿ ಕ್ರೈಂ ನ್ಯೂಸ್: ಭಾಷಿಕ ಅಧ್ಯಯನ ೨೦೦೨(ಕನ್ನಡ ವಾಹಿನಿಗಳನ್ನು ಅನುಲಕ್ಷಿಸಿ) ೨೦೦೨ರಲ್ಲಿ ಹೊಲೆಪ್ಪ ಸಂಡೂರು ಇವರು ಕನ್ನಡ ವಿ.ವಿ. ಹಂಪಿಯ ಕನ್ನಡ ಭಾಷಾಧ್ಯಯನ ವಿಭಾಗಕ್ಕೆ ಎಂ.ಫಿಲ್. ಪದವಿಗೆ ಈ ಪ್ರಬಂಧವನ್ನು ಸಿದ್ಧಪಡಿಸಿ ಸಲ್ಲಿಸಿದ್ದಾರೆ.

ದೂರದರ್ಶನದ ಕನ್ನಡ ವಾಹಿನಿಗಳಲ್ಲಿ ಪ್ರಸಾರವಾಗುವ ಕ್ರೈಂ ನ್ಯೂಸ್‌ಗಳನ್ನಷ್ಟೇ ಗಮನಿಸಲಾಗಿದೆ. ಭಾಷಾಧ್ಯಯನಕ್ಕೆ ಆಯ್ಕೆ ಮಾದರಿಯಲ್ಲಿ ಕೆಲವೊಂದು ಕ್ರೈಂ ನ್ಯೂಸ್‌ಗಳನ್ನು

ಇಟ್ಟುಕೊಂಡು ವಿಶ್ಲೇಷಿಸಲಾಗಿದೆ. ಕನ್ನಡ-ಇಂಗ್ಲಿಷ್ ದ್ವಿಭಾಷಿಕ ಸಂದರ್ಭದಲ್ಲಿ ಮಾಧ್ಯಮದ ಭಾಷೆ, "ಭಾಷಾಮಿಶ್ರಣ"ವಾಗುವುದನ್ನು ನೋಡುತ್ತೇವೆ. ಅದರಲ್ಲೂ ಟಿ.ವಿ.ಯಲ್ಲಿ ನಿರೂಪಕರು ಮತ್ತು ಸುದ್ದಿವಾಚಕರು, ವರದಿಗಾರರು ಬಳಸುವ ಭಾಷೆ ವಿಶಿಷ್ಟವಾದುದು. ಸಮಾಜದ ಸಂವಹನಕ್ಕೋಸ್ಕರ ಹೊಸ ಬಗೆಯ ಭಾಷೆಯಸ್ನು ಬಳಸುತ್ತಿದ್ದಾರೆ. ಈ ನಿಟ್ಟಿನಲ್ಲಿ ಪ್ರಸ್ತುತ ಅಧ್ಯಯನವನ್ನು ಪ್ರಮುಖವಾಗಿ ಐದು ಅಧ್ಯಾಯಗಳಲ್ಲಿ ವಿವರಿಸಿಕೊಳ್ಳಲಾಗಿದೆ. ಆರನೆಯ ಅಧ್ಯಾಯದಲ್ಲಿ ಸಮಾರೋಪ ಮಾಡಲಾಗಿದೆ.

ಒಟ್ಟಿನಲ್ಲಿ ಕ್ರೈಂ ನ್ಯೂಸ್ ಭಾಷೆ, ಟಿ.ವಿ. ಮಾಧ್ಯಮದಲ್ಲಿ ವಿಶಿಷ್ಟವಾಗಿದೆ. ಇದಕ್ಕೆ ಕಾರಣಗಳು ಹಲವು. ಅಲ್ಲಿ ವಿಶಿಷ್ಟವಾದ ಧ್ವನಿಗಳು ರಚನೆಯಾಗುತ್ತವೆ. ಆ ಧ್ವನಿಗಳು ಕೇಳುಗರನ್ನು ಆಕರ್ಷಿಸಲು ಕಾರಣವಾಗಿವೆ ಹಾಗೂ ಅನ್ಯಭಾಷಾ ಪದಗಳು ಮತ್ತು ವಾಕ್ಯಗಳು ಬೆರಕೆಯಾಗಿರುವುದರಿಂದ ಭಾಷೆ ವಿಭಿನ್ನವಾಗಿ ವಿಶಿಷ್ಟವಾಗಿ ಬಳಕೆಯಾಗುತ್ತದೆ. ಅದು ಸಂವಹನಗೊಳಿಸುವಲ್ಲಿ ಪ್ರೇರಕವಾಗಿದೆ. ಧ್ವನಿ ನಿಯಮ, ಪದರಚನಾ ನಿಯಮ ಹಾಗೂ ವಾಕ್ಯರಚನಾ ನಿಯಮ ಹೊಸ ಬಗೆಯಾಗಿ ಕಂಡುಬರುತ್ತದೆ. ಈ ಅಂಶಗಳೇ ಭಾಷಾ ಬದಲಾವಣೆಯನ್ನು ಸೂಚಿಸುತ್ತವೆ. ಇದು ಭಾಷಾ ಬೆಳವಣಿಗೆಯಾಗಿರುತ್ತದೆ. ಈ ಹಿನ್ನೆಲೆಯಲ್ಲಿ ನೋಡಿದಾಗ ಟಿ.ವಿ.ಯಲ್ಲಿ ಪ್ರಸಾರವಾಗುವ ಕ್ರೈಂ ನ್ಯೂಸ್‌ನ ಭಾಷೆ ಒಂದು ಪ್ರಭೇದವಾಗಿದೆ ಎಂಬುದು ಪ್ರಸ್ತುತ ಅಧ್ಯಯನದ ಮೂಲಕ ತಿಳಿಯುತ್ತದೆ. ಈ ಪ್ರಬಂಧದ ನಾಲ್ಕನೇ ಮತ್ತು ಐದನೇ ಅಧ್ಯಾಯವು ನುಡಿಬೆರಕೆ, ನುಡಿಜಿಗಿತಗಳ ಭಾಷಾ ವಿಶ್ಲೇಷಣೆಗಳು ಅಧ್ಯಯನಕ್ಕೆ ಮಾದರಿಯಾಗಿದೆ.

ಡಾ.ಡಿ.ಬಿ.ನಾಯಕರು ರಚಿಸಿದ "ಸಮೂಹ ಮಾಧ್ಯಮಗಳು ಮತ್ತು ಸಮಾಜ" ಎಂಬ ಕೃತಿಯಲ್ಲಿ ಮಾಧ್ಯಮಗಳೆಂದರೇನು? ಮಾಧ್ಯಮಗಳ ಹುಟ್ಟು ಮತ್ತು ಬೆಳವಣಿಗೆ ಹಾಗೂ ಮಾಧ್ಯಮಗಳ ಸ್ವರೂಪ ಕುರಿತು ಚರ್ಚಿಸಿದ್ದಾರೆ. ಇದು ಪ್ರಾಥಮಿಕ ತಿಳುವಳಿಕೆಗೆ, ಶೈಕ್ಷಣಿಕ ಕಲಿಕೆಗೆ ಅರ್ಹವಾಗಿರುವಂತಹ ಕೃತಿಯಾಗಿದೆ. ಇದರಲ್ಲಿ ಲೇಖಕರು ಸಮಾಜದಲ್ಲಿ ಮಾಧ್ಯಮಗಳ ಪಾತ್ರವನ್ನು ಪರಿಚಯಿಸಿದ್ದಾರೆ. ಸಮೂಹ ಮಾಧ್ಯಮಗಳ ಸ್ವರೂಪ, ಲಕ್ಷಣ ಹಾಗೂ ಕಾರ್ಯಚಟುವಟಿಕೆಗಳನ್ನು ವಿವರಿಸಿದ್ದಾರೆ. ಮಾಧ್ಯಮಗಳ ಪರಂಪರೆ ಮತ್ತು ಪ್ರಯೋಜನಗಳನ್ನು ಕುರಿತು ಪೂರ್ಣ ಮಾಹಿತಿಯನ್ನು ಒದಗಿಸುತ್ತದೆ. ಮಾಧ್ಯಮಗಳ ಕುರಿತಾಗಿ ಅಧ್ಯಯನ ಮಾಡುವವರಿಗೆ ಇದು ಗಮನಾರ್ಹವಾದ ಕೃತಿಯಾಗಿದೆ. ಇದು ಸಾಮಾಜಿಕವಾಗಿ, ಶೈಕ್ಷಣಿಕವಾಗಿ ವಿವೇಚಿಸಿರುವಂತಹ ಕೃತಿಯಾಗಿದೆ.

ಡಾ.ಟಿ.ಸಿ.ಪೂರ್ಣಿಮಾ ಅವರ ಕೃತಿ "ಆಧುನಿಕ ಸಂವಹನ ಮಾಧ್ಯಮಗಳು ಮತ್ತು ಕನ್ನಡದ ಅಭಿವೃದ್ಧಿ"(೨೦೦೩). ಇದು ಅಪಾರ ಅನುಭವ ಮತ್ತು ಆಳವಾದ ಅಧ್ಯಯನದ

ಫಲವಾಗಿ ಈ ಕೃತಿ ರಚನೆಯಾಗಿದೆ. ಮಾಧ್ಯಮಗಳು ಮತ್ತು ಸಮಾಜದ ನಡುವಿನ ಚಾರಿತ್ರಿಕ ಹಿನ್ನೆಲೆ ಹಾಗೂ ಏರಿಳಿತಗಳ ಕುರಿತಾಗಿ ತಲಸ್ಪರ್ಶಿ ಅಧ್ಯಯನ ಇದಾಗಿದೆ. ಮಾಹಿತಿ ತಂತ್ರಜ್ಞಾನದ ಔನ್ನತ್ವದಲ್ಲಿ ಮಾಧ್ಯಮಗಳ ಪ್ರಸ್ತುತತೆ ಮತ್ತು ಸಾಮಾಜಿಕ, ಸಹಕಾರದೊಂದಿಗೆ ಕನ್ನಡ ಅಭಿವೃದ್ಧಿ ಕುರಿತು ಅಧ್ಯಯನ ಮಾಡಿದ್ದಾರೆ. ಸಂಶೋಧಕರಿಗೆ ಈ ಕೃತಿ ಮಾದರಿಯಾಗಿದೆ.

ಶ್ರೀ ಕೆ.ವಿ.ನಾಗರಾಜ್ ಅವರು ರಚಿಸಿರುವ ಕೃತಿ "ಸಮೂಹ ಮಾಧ್ಯಮಗಳು ಮತ್ತು ಸಮಾಜ" ಇದು ಮಾಧ್ಯಮಗಳ ಪರಿಚಯ, ಹುಟ್ಟು ಮತ್ತು ಬೆಳವಣಿಗೆ ಹಾಗೂ ಸಮಾಜ ಸೇವೆಯನ್ನು ವಿವರಿಸುವಂತಯ ಕೃತಿಯಾಗಿದೆ. ಶ್ರೀ ಎಸ್.ಎಂ.ಹಿರೇಮಠ ಮತ್ತು ಡಿ.ಬಿ.ನಾಯಕರು ಸೇರಿ ರಚಿಸಿರುವ ಕೃತಿ "ಸಂವಹನ ಮಾಧ್ಯಮಗಳು" ಇದು ಸ್ನಾತಕೋತ್ತರ ಪದವಿ ಓದುವ ವಿದ್ಯಾರ್ಥಿಗಳಿಗೆ ಸಮೂಹ ಸಂವಹನ ಮಾಧ್ಯಮಗಳ ಕುರಿತು ಸುಲಭವಾಗಿ ಅರ್ಥವಾಗುವಂತಹ ಕೃತಿಯಾಗಿದೆ. ಇದರಲ್ಲಿ ಮಾಧ್ಯಮಗಳ ಚಾರಿತ್ರಿಕ ಹಿನ್ನೆಲೆ, ಮಾಧ್ಯಮಗಳ ಸ್ವರೂಪ, ಕಾರ್ಯಚಟುವಟಿಕೆ ಹಾಗೂ ಮಾಧ್ಯಮಗಳ ಪ್ರಯೋಜನ ಕುರಿತು ವಿವರಿಸುತ್ತದೆ.

ಶ್ರೀ ವಿ.ನಾಗರಾಜರಾವ್, ಕೆ.ಎಸ್.ನಾಗಭೂಷಣಂ ಮತ್ತು ಎಸ್.ಅರ್ಜುನದೇವ ಅವರು ಸೇರಿ ಕರ್ನಾಟಕ ಮಾಧ್ಯಮ ಅಕಾಡೆಮಿಯಿಂದ "ಮಾಧ್ಯಮ ಪಾರಿಭಾಷಿಕ" ಎಂಬ ಕೃತಿಯನ್ನು ಹೊರತಂದಿದ್ದಾರೆ. ಇದು ಪತ್ರಿಕೋದ್ಯಮದ ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತ ವಾಗಿದೆ. ಇದು ಮಾಧ್ಯಮ ಅಧ್ಯಯನಕಾರರಿಗೆ ಸಹ ಉಪಯುಕ್ತವಾದ ಗ್ರಂಥವಾಗಿದೆ. ಇದರಲ್ಲಿ ಇಂದು ಮಾಧ್ಯಮ ವಲಯದಲ್ಲಿ ಬಳಕೆಯಲ್ಲಿರುವ ಪಾರಿಭಾಷಿಕ ಪದಕೋಶವನ್ನು ಸಂಗ್ರಹಿಸಿದ್ದಾರೆ.

ಶ್ರೀ ಪದ್ಮರಾಜ ದಂಡಾವತಿಯವರು ರಚಿಸಿದ "ಪತ್ರಿಕಾ ಭಾಷೆ" ಮತ್ತು "ರಿಪೋರ್ಟಿಂಗ್" ಎಂಬ ಕೃತಿಗಳು ಪತ್ರಿಕಾ ಮಾಧ್ಯಮದ ವರದಿಗಾರಿಕೆ ಹಾಗೂ ಭಾಷೆಯನ್ನು ಕುರಿತು ವಿವರಿಸುತ್ತವೆ. ಪತ್ರಿಕಾ ವಲಯದಲ್ಲಿ ವರದಿಗಾರರು ಹೇಗೆ ಕಾರ್ಯ ನಿರ್ವಹಿಸಬೇಕು ಮತ್ತು ಬಳಸುವ ಭಾಷೆ ಹೇಗಿರಬೇಕು ಎಂಬುದರ ಕುರಿತು ಈ ಕೃತಿಯಲ್ಲಿ ಸವಿವರವಾಗಿ ಚರ್ಚಿಸಿದ್ದಾರೆ. ಪತ್ರಿಕೋದ್ಯಮದ ವಿದ್ಯಾರ್ಥಿಗಳಿಗೆ ಈ ಕೃತಿಗಳು ಕೈಪಿಡಿಯಂತಿವೆ. ಅಧ್ಯಯನಕಾರರಿಗೆ ಉತ್ತಮ ಮಾಹಿತಿಯನ್ನು ಒದಗಿಸುವ ಕೃತಿಗಳಾಗಿವೆ.

ಡಾ.ಡಿ.ವಿ.ಗುಂಡಪ್ಪನವರು ರಚಿಸಿರುವ "ವೃತ್ತಪತ್ರಿಕೆ" ಪತ್ರಿಕಾ ಮಾಧ್ಯಮದ ಅಧ್ಯಯನಗಳಲ್ಲಿ ಒಂದು ಉತ್ಕೃಷ್ಟ ಕೃತಿ. ಇದು ಪತ್ರಿಕಾ ಪ್ರಪಂಚದ ಪ್ರಮುಖ ಮಾಹಿತಿಗಳನ್ನೊಳಗೊಂಡ ಕೃತಿ. ಪತ್ರಿಕೆಯ ಬಗೆಗೆ ಅಧ್ಯಯನ ಕೈಗೊಳ್ಳುವವರೆಗೆ ಉಪಯುಕ್ತವಾದ ಗ್ರಂಥವಾಗಿದೆ. ಇದರಲ್ಲಿ ಪತ್ರಿಕಾರಂಗದ ನೀತಿನಿಯಮಗಳನ್ನು, ಕರ್ತವ್ಯಗಳನ್ನು ಕುರಿತು ವಿವರಿಸಿದ್ದಾರೆ.

ಶ್ವೇತಾ ಆರ್. ಅವರು "ಸಮೂಹ ಮಾಧ್ಯಮಗಳು ಮತ್ತು ಭಾಷೆ"(೨೦೦೯) ಎಂಬ ಪ್ರಬಂಧವನ್ನು ಕನ್ನಡ ವಿ.ವಿ.ಯ ಎಂಫಿಲ್ ಪದವಿಗಾಗಿ ಸಿದ್ಧಪಡಿಸಿ ಸಲ್ಲಿಸಿದ್ದಾರೆ.

ಈ ಸಂಪ್ರಬಂಧದಲ್ಲಿ "ಸಮೂಹ ಮಾಧ್ಯಮಗಳು ಮತ್ತು ಭಾಷೆ" ವಿಷಯವನ್ನು ಕುರಿತು ಅಧ್ಯಯನ ನಡೆಸಲಾಗಿದೆ. ವಿಸ್ತಾರವಾಗಿ ಬೆಳೆದಿರುವ ಸಮೂಹ ಮಾಧ್ಯಮಗಳು ಸಮಾಜದಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತವೆ. ಸಮೂಹ ಮಾಧ್ಯಮಗಳು ತಮ್ಮ ಗುರಿ ಉದ್ದೇಶಗಳ ಈಡೇರಿಕೆಗಾಗಿ ಕನ್ನಡ ಭಾಷೆಯನ್ನು ಸಂಪೂರ್ಣವಾಗಿ ಅವಲಂಬಿಸಿವೆ. ಸಮೂಹ ಮಾಧ್ಯಮಗಳು ಮತ್ತು ಕನ್ನಡ ಭಾಷೆಯೂ ಎರಡು ಬೇರೆ ಬೇರೆ ವಲಯಗಳಾಗಿದ್ದರೂ ಪರಸ್ಪರ ಸಂಬಂಧ ಹೊಂದಿವೆ. ಹಾಗಾಗಿ ಸಮೂಹ ಮಾಧ್ಯಮಗಳು ಮತ್ತು ಭಾಷೆಯ ಅರ್ಥ ಸ್ವರೂಪ ವ್ಯಾಪ್ತಿಯನ್ನು ಕುರಿತು ಸ್ಥೂಲವಾಗಿ ವಿಶ್ಲೇಷಿಸಲಾಗಿದೆ. ಜೊತೆಗೆ ಸಮೂಹ ಮಾಧ್ಯಮಗಳ ಮತ್ತು ಭಾಷೆಯ ನಡುವಿನ ಸಂಬಂಧವನ್ನು ವಿವರಿಸಲು ಪ್ರಯತ್ನಿಸಲಾಗಿದೆ.

ಸೂಗಣ್ಣ ಅವರು "ಕನ್ನಡ ದಿನಪತ್ರಿಕೆಗಳಲ್ಲಿನ ಕ್ರೀಡಾಪುಟದ ಭಾಷೆ"(೨೦೦೭) ಎಂಬ ನಿಬಂಧವನ್ನು ಕನ್ನಡ ವಿ.ವಿ. ಹಂಪಿಯ ಕನ್ನಡ ಭಾಷಾಧ್ಯಯನ ವಿಭಾಗಕ್ಕೆ ಎಂಫಿಲ್ ಪದವಿಗಾಗಿ ಸಿದ್ಧಪಡಿಸಿ ಸಲ್ಲಿಸಿದ್ದಾರೆ.

ಭಾಷಾಬಳಕೆಯುಳ್ಳ ವಿವಿಧ ವಲಯಗಳಲ್ಲಿ ಪತ್ರಿಕಾರಂಗಕ್ಕೆ ಪ್ರಮುಖ ಸ್ಥಾನ. ಏಕೆಂದರೆ ಹೇಳಬೇಕಾದುದನ್ನು ಭಾಷೆಯ ಮೂಲಕ ಮಾತ್ರ ಇಲ್ಲಿ ಹೇಳಲು ಸಾಧ್ಯ. ದಿನಪತ್ರಿಕೆಗಳ ಭಾಷೆ ಶಿಷ್ಟಕನ್ನಡಕ್ಕೆ ಸಮೀಪವಾದರೂ ಅನೇಕ ವೈಶಿಷ್ಟ್ಯಗಳಿಂದ ಕೂಡಿದೆ. ಇಲ್ಲಿನ ಭಾಷಾಬಳಕೆ ವಿವಿಧ ವಸ್ತು ವಿಷಯಗಳನ್ನು ಅವಲಂಬಿಸಿರುತ್ತದೆ. ಆಧುನಿಕ ವಿಷಯಗಳನ್ನು ಪರಿಚಯಿಸುವಾಗ ಭಾಷೆ ಆಧುನಿಕವಾಗಿ ಬಳಕೆಯಾಗುತ್ತದೆ. ಸಾಮಾನ್ಯ ವಿಷಯಗಳನ್ನು ಹೇಳುವಾಗ ಯಾರನ್ನು ಗಮನದಲ್ಲಿಟ್ಟುಕೊಂಡು ಬಳಕೆಯಾಗುತ್ತದೋ ಆ ಮಟ್ಟದ ಭಾಷೆ ಬಳಕೆಯಾಗುತ್ತದೆ. ಹಾಗಾಗಿ ಪತ್ರಿಕೆಯ ಭಾಷಾಬಳಕೆಯಲ್ಲಿ ವೈವಿಧ್ಯವಿದೆ.

ದಿನಪತ್ರಿಕೆಯ ಭಾಷೆ ಸರಳವಾಗಿದ್ದು, ಚಿಕ್ಕ ವಾಕ್ಯಗಳ ರಚನೆಯನ್ನು ಹೊಂದಿರುವುದು ಕಂಡುಬರುವ ಸಂಗತಿ. ಏಕೆಂದರೆ ದಿನಪತ್ರಿಕೆಯ ವಿಷಯ ಸಾಮಾನ್ಯನಿಗೂ ಅರ್ಥವಾಗಬೇಕು ಎಂಬ ಉದ್ದೇಶವಿದೆ. ಈ ಅಧ್ಯಯನದ ಮುಖ್ಯ ಉದ್ದೇಶ ಕ್ರೀಡಾವರದಿಯಲ್ಲಿ ಬಳಕೆ ಯಾಗುವಂತಹ ಕನ್ನಡ ಭಾಷೆಯ ವೈಶಿಷ್ಟ್ಯವನ್ನು ಇಲ್ಲಿ ಗುರುತಿಸುವುದಾಗಿದ್ದು, ವಿಶೇಷ ಭಾಷಿಕ ಲಕ್ಷಣಗಳು ಗೋಚರಿಸುತ್ತವೆ. ಈ ಅಧ್ಯಯನದ ವ್ಯಾಪ್ತಿಯು ಕ್ರೀಡಾಪುರವಣಿಯಲ್ಲಿ ಬಳಕೆಯಾಗುವಂತಹ ಭಾಷೆಯನ್ನು ಗುರುತಿಸಿದೆ.

ಪ್ರೇಮಪಲ್ಲವಿ ಸಿ.ವಿ. "ಕನ್ನಡ ಚಲನಚಿತ್ರಗಳಲ್ಲಿ ಕನ್ನಡ ಭಾಷೆಯ ಬಳಕೆ" ೨೦೦೮, ಕನ್ನಡ ವಿ.ವಿ. ಹಂಪಿಯ ಕನ್ನಡ ಭಾಷಾಧ್ಯಯನ ವಿಭಾಗಕ್ಕೆ ಪಿಎಚ್.ಡಿ. ಪದವಿಗಾಗಿ ಸಿದ್ಧಪಡಿಸಿ ಸಲ್ಲಿಸಿದ ಪ್ರಬಂಧವಾಗಿದೆ.

ಚಲನಚಿತ್ರಗಳು ಆವಿಷ್ಕಾರವಾಗಿ ಸರಿ ಸುಮಾರು ಒಂದುನೂರು ವರ್ಷಗಳು ಕಳೆದಿವೆ. ಈ ನೂರು ವರ್ಷಗಳಲ್ಲಿ ವಿಭಿನ್ನ ಬಗೆಯಲ್ಲಿ ವಿಕಾಸವಾಗುತ್ತಾ ತಾಂತ್ರಿಕವಾಗಿ ಬೆಳೆಯುತ್ತಾ ಬಂದಿರುವ ಚಲನಚಿತ್ರಗಳು ಇಪ್ಪತ್ತನೇ ಶತಮಾನದ ಅತ್ಯಂತ ಜನಪ್ರಿಯ ಮನರಂಜನಾ ಮಾಧ್ಯಮವಾಗಿ, ಬೃಹತ್ ಉದ್ದಿಮೆಯಾಗಿ ಬೆಳೆದುನಿಂತಿವೆ. ಚಲನಚಿತ್ರಗಳಲ್ಲಿ ಭಾಷೆ ಬಹಳ ಮುಖ್ಯವಾದ ವಸ್ತು. ಭಾಷೆಯನ್ನು ವಿಶಿಷ್ಟವಾಗಿ ಬಳಸುವ ಸೃಜಿಸುವ, ಪ್ರಸರಿಸುವ ಬಹುಮುಖ್ಯವಾದ ಮಾಧ್ಯಮಗಳಲ್ಲಿ ಚಲನಚಿತ್ರವು ಪ್ರಮುಖವಾದುದು. ಒಂದು ಶತಮಾನದ ಭಾಷಿಕ ಬೆಳವಣಿಗೆಯ ಬದಲಾವಣೆಗಳು ಚಲನಚಿತ್ರಗಳ ಭಾಷಿಕ ಅಕೃತಿಗಳಲ್ಲಿ ದಾಖಲಾಗಿವೆ. ಇದು ಒಟ್ಟು ಕನ್ನಡ ಭಾಷೆಯ ಬೆಳವಣಿಗೆ, ಬದಲಾವಣೆ, ಬಳಕೆಯ ಪ್ರಕ್ರಿಯೆಯ ಮೇಲೂ ಪ್ರಭಾವಿಸಿದೆ. ಕನ್ನಡ ಭಾಷೆಯಲ್ಲಿನ ಒಂದು ಶತಮಾನದ ಬೆಳವಣಿಗೆ ಪ್ರಕ್ರಿಯೆಗಳನ್ನು ಕಂಡುಕೊಳ್ಳುವುದನ್ನು, ಭಾಷೆಯನ್ನು ರಚಿಸುವ ಅನಿವಾರ್ಯತೆಯುಳ್ಳ ಇಂತಹ ವಲಯಗಳಲ್ಲಿ ವ್ಯಕ್ತವಾಗಿರುವ ಸಾಮಾಜಿಕ ದೃಷ್ಟಿಕೋನವನ್ನು ಭಾಷಾಕೃತಿಗಳ ಮೂಲಕ ಕಂಡುಕೊಳ್ಳುವುದನ್ನು ಈ ಅಧ್ಯಯನ ತಿಳಿಸುತ್ತದೆ.

ಸಮೂಹ ಮಾಧ್ಯಮಗಳಲ್ಲಿ ಅತ್ಯಂತ ಮುಂಚೂಣಿಯಲ್ಲಿರುವ ಮಾಧ್ಯಮ ಚಲನಚಿತ್ರ. ಚಲನಚಿತ್ರ ಮಾಧ್ಯಮವು ತನ್ನದೇ ಆದ ರೀತಿಯಲ್ಲಿ ಭಾಷೆಯನ್ನು ಬಳಸುತ್ತದೆ. ಒಂದು ಸಮುದಾಯದ ಭಾಷಿಕ, ಸಾಮಾಜಿಕ, ರಾಜಕೀಯ, ಆರ್ಥಿಕ ಅಧ್ಯಯನಕ್ಕೆ ಆಕರವಾಗಿ ಬಳಸಬಹುದಾದ ಪ್ರಬಲಮಾಧ್ಯಮ ದೃಶ್ಯಮಾಧ್ಯಮ. ಏಕೆಂದರೆ ಇದು ಸಹಜವಾಗಿ ಸಂಭವಿಸುವ ಭಾಷಿಕ ಬೆಳವಣಿಗೆಯ ಪಲ್ಲಟಗಳನ್ನು, ಸಾಮಾಜಿಕ ಪಲ್ಲಟಗಳನ್ನು ಕಾಲಕಾಲಕ್ಕೆ ದಾಖಲಿಸುತ್ತದೆ. ಇನ್ನೊಂದರ್ಥದಲ್ಲಿ ಸಮಾಜವನ್ನು ಆಂಶಿಕವಾಗಿ ಪ್ರತಿಫಲಿಸುತ್ತದೆ.

ಈ ಪ್ರಬಂಧವು ಸಾಮಾಜಿಕ ವಿನ್ಯಾಸವನ್ನು ಕುರಿತು ಅಧ್ಯಯನ ಮಾಡಲು ಮಾದರಿ ಅಧ್ಯಯನವಾಗಿದೆ. ಆದ್ದರಿಂದ ಈ ಗ್ರಂಥವು ಭಾಷಾಬಳಕೆಯ ವಿವಿಧ ಆಯಾಮಗಳನ್ನು ರೂಪಿಸಿಕೊಳ್ಳಲು ಉಪಯುಕ್ತವಾಗಿದೆ. ಚಲನಚಿತ್ರಗಳಲ್ಲಿ ಭಾಷಾಬಳಕೆಯನ್ನು ಕುರಿತ ಸಂಶೋಧನೆಗಳು ವಿರಳವಾಗಿರುವ ಈ ಸಂದರ್ಭದಲ್ಲಿ ಚಲನಚಿತ್ರಗಳಲ್ಲಿ ಕನ್ನಡ ಭಾಷಾ ಬಳಕೆಯ ಸ್ವರೂಪವನ್ನು ಕಂಡುಕೊಳ್ಳುವಲ್ಲಿ ಸಹಾಯಕವಾಗಿದೆ. ಇದು ಪ್ರಥಮ ಪ್ರಯತ್ನವೆಂದರೂ ತಪ್ಪಾಗಲಾರದು. ವಿವಿಧ ವಲಯಗಳಲ್ಲಿ ಭಾಷಾಬಳಕೆಯನ್ನು ಕುರಿತು ಅಧ್ಯಯನ ಮಾಡಲು ಅನುಕೂಲವಾದ ಆಕರವಾಗಿದೆ.

ಶಂಕ್ರಪ್ಪ ಅವರು "ಕನ್ನಡ ದಿನಪತ್ರಿಕೆಗಳಲ್ಲಿ ಅನ್ಯಭಾಷೆ ಬಳಕೆ"(೨೦೦೮) ಕನ್ನಡ ವಿ.ವಿ. ಹಂಪಿಯ ಕನ್ನಡ ಭಾಷಾಧ್ಯಯನ ವಿಭಾಗಕ್ಕೆ ಎಂ.ಫಿಲ್. ಪದವಿಗಾಗಿ ಸಾದರಪಡಿಸಿದ ಸಂಪ್ರಬಂಧ. ಕನ್ನಡ ಭಾಷೆಯ ಬೆಳವಣಿಗೆಯನ್ನು ಚಾರಿತ್ರಿಕವಾಗಿ ಗಮನಿಸಿದಾಗ ಒಂದಲ್ಲ ಒಂದು ಕಾಲಘಟ್ಟದಲ್ಲಿ ಬೇರೆ ಭಾಷೆಯ ಪ್ರಭಾವ ಕನ್ನಡ ಭಾಷೆಯ ಮೇಲೆ ಆಗಿರುವುದು

ಕಂಡುಬರುತ್ತದೆ. ಇಂತಹ ಪ್ರಭಾವ ಒಂದೇ ಪ್ರಮಾಣದಲ್ಲಿ ಆಗಿದೆಯೇ ಎಂದು ಹೇಳಲು ಸಾಧ್ಯವಿಲ್ಲ. ಕನ್ನಡ ಭಾಷೆಯ ರಚನೆ ಮತ್ತು ಬಳಕೆಯನ್ನು ಗಮನಿಸುವುದಾದರೆ ಸಂಸ್ಕೃತ ಭಾಷೆ ರಚನೆಯ ಹಿನ್ನೆಲೆಯಲ್ಲಿ ಪ್ರಭಾವ ಬೀರಿದೆ; ಇಂಗ್ಲಿಷ್, ಉರ್ದು, ಪರ್ಶಿಯನ್, ಅರೇಬಿಕ್, ಮರಾಠಿ ಹಾಗೂ ಪೋರ್ಚುಗೀಸ್ ಭಾಷೆಗಳ ಬಳಕೆ ಹಿನ್ನೆಲೆಯಲ್ಲಿ ಪ್ರಭಾವ ಬೀರಿರುವುದು ಎದ್ದು ಕಾಣುತ್ತದೆ. ಈ ನಿಟ್ಟಿನಲ್ಲಿ ಕನ್ನಡ ದಿನಪತ್ರಿಕೆಗಳಲ್ಲಿ ಅನ್ಯಭಾಷೆಯ ಬಳಕೆ ಯಾವ ಪ್ರಮಾಣದಲ್ಲಾಗಿದೆ, ಆ ಪದಗಳು ಯಾವ ಭಾಷೆಯ ಮೂಲದಿಂದ ಬಂದಿವೆ, ಆ ಪದಗಳು ಯಾವ ಯಾವ ಅರ್ಥಗಳನ್ನು ಹೊಂದಿವೆ, ಬೇರೆ ಬೇರೆ ಭಾಷೆಯಲ್ಲಿ ಹೇಗೆ ಬಳಕೆಯಲ್ಲಿವೆ ಎಂಬುದರ ಜೊತೆಗೆ ಪತ್ರಿಕೆಯಲ್ಲಿ ಆ ಪದಗಳು ಯಾವ ಅರ್ಥದಲ್ಲಿ ಪ್ರಯೋಗವಾಗಿವೆ ಎಂಬುದನ್ನು ತಿಳಿದುಕೊಳ್ಳುವುದರ ಮೂಲಕ ಬರಹದ ಕನ್ನಡದ ಸ್ವರೂಪ ಹೇಗಿದೆ ಎಂಬುದನ್ನು ಈ ಅಧ್ಯಯನವು ತಿಳಿಯಪಡಿಸುತ್ತದೆ.

"ಕನ್ನಡ ಕಾದಂಬರಿಗಳಲ್ಲಿ ಭಾಷಾ ಪ್ರಭೇದಗಳು"(೨೦೦೯) ಎಂಬುದು ಕನ್ನಡ ವಿ.ವಿ. ಹಂಪಿಯ ಕನ್ನಡ ಭಾಷಾಧ್ಯಯನ ವಿಭಾಗಕ್ಕೆ ಪಿಎಚ್.ಡಿ. ಪದವಿಗಾಗಿ ಅನ್ನಪೂರ್ಣ ಗುಡದೂರು ಸಲ್ಲಿಸಿದ ಮಹಾಪ್ರಬಂಧವಾಗಿದೆ.

ಒಬ್ಬ ಸೃಜನಶೀಲ ಲೇಖಕ ಕಾದಂಬರಿಯಲ್ಲಿ ಪ್ರಾದೇಶಿಕ ಹಾಗೂ ಸಾಮಾಜಿಕ ವರ್ಗಕ್ಕೆ ಅನುಸಾರವಾಗಿ ಬಳಸಿರುವ ವಿಶಿಷ್ಟ ಭಾಷಾಬಳಕೆಯನ್ನು ಈ ಅಧ್ಯಯನ ಗುರುತಿಸಿ ವಿವರಿಸಿದೆ. ಶೈಲಿ ಹಾಗೂ ಭಾಷಾಬಳಕೆಯ ಬಗ್ಗೆ ಕೆಲವು ವಿಶಿಷ್ಟ ಅಂಶಗಳಿಂದ ಕೂಡಿದ ಸಂಗತಿಗಳನ್ನು ವಿಶ್ಲೇಷಿಸಿರುವುದು ಈ ಅಧ್ಯಯನದ ಒಳನೋಟಗಳಿಂದ ಗ್ರಹಿಸಬಹುದಾಗಿದೆ.

ಸೃಜನಶೀಲ ಲೇಖಕರು ಕಾದಂಬರಿಗಳ ಅಭಿವ್ಯಕ್ತಿಗಾಗಿ ಬಳಸಿಕೊಂಡಿರುವ ವಸ್ತು, ಭಾಷೆ ಮತ್ತು ತಂತ್ರಗಳ ಸ್ವರೂಪವನ್ನು ಕುರಿತು ಚರ್ಚಿಸಲಾಗಿದೆ. ಗ್ರಾಮೀಣ ಪ್ರದೇಶವನ್ನೇ ಮೂಲ ಕೇಂದ್ರವಾಗಿಸಿಕೊಂಡು ವರ್ಗ, ಜಾತಿ, ಧರ್ಮ, ಅಧಿಕಾರ, ಲಿಂಗವ್ಯವಸ್ಥೆಗೆ ಸಂಬಂಧಿಸಿದಂತೆ ಒಂದನ್ನು ಮುಖ್ಯ ಘಟನೆ ಅಥವಾ ಸಮಸ್ಯೆಯನ್ನಾಗಿಸಿಕೊಂಡು ಅದಕ್ಕೆ ಪೂರಕವಾಗಿ ಹಸಿವು, ಬಡತನ, ಧಾರ್ಮಿಕ ಸಮಸ್ಯೆ, ಜಾತಿ ಸಮಸ್ಯೆ, ಆರ್ಥಿಕ ಸಮಸ್ಯೆ, ಉಳ್ಳವರ ದೌರ್ಜನ್ಯ, ಇಲ್ಲದವರ ಅಸಹಾಯಕತೆಯಂತಹ ಹಲವು ಸಮಸ್ಯೆಗಳನ್ನು ಮತ್ತು ಆ ಸಮಸ್ಯೆಗಳ ಪರಿಹಾರಕ್ಕಾಗಿ ಕೆಳವರ್ಗಗಳ ಬದುಕನ್ನು ಸಚಿತ್ರವಾಗಿ ಚಿತ್ರಿಸುವಲ್ಲಿ ಯಶಸ್ವಿಯಾಗಿದ್ದಾರೆ ಎಂಬುದನ್ನು ಕಂಡುಕೊಳ್ಳಲಾಗಿದೆ. ಲೇಖಕರು ತೀರಾ ಸ್ಥಳೀಯ ಹಾಗೂ ಜಾತೀಯವಾದ ಕನ್ನಡ ಪ್ರಭೇದಗಳನ್ನು ಉಪಯೋಗಿಸಿಕೊಂಡು, ಭಾಷೆಯನ್ನು ಸಹ ಪ್ರತಿರೋಧದ ಪ್ರತೀಕವಾಗಿ ಬಳಸಿಕೊಂಡು, ಗ್ರಾಮೀಣ ಜನರ ಜೀವನವನ್ನು ನೈಜವಾಗಿ ಎಳೆ ಎಳೆಯಾಗಿ ದಟ್ಟ ವಿವರಣೆಗಳೊಂದಿಗೆ ರೂಪಿಸುವಲ್ಲಿ ಯಶಸ್ವಿಯಾಗಿದ್ದಾರೆ. ಇಂತಹ ಒಂದು ಭಾಷಾಪ್ರಭೇದವು ಒಂದು ಬಗೆಯ ಮೌಲ್ಯ ವ್ಯವಸ್ಥೆಯನ್ನು ಸಂಕೇತಿಸುತ್ತದೆ. ಅಧಿಕೃತ ಭಾಷೆ ಸಂಕೇತಿಸುವ

ಯಾಜಮಾನ್ಯ ವರ್ಗದ ಮೌಲ್ಯಗಳನ್ನು ಹಾಗೂ ಸಾಮಾಜಿಕ ನೈತಿಕ ನಿಲುವನ್ನು ತಿರಸ್ಕರಿಸುತ್ತದೆ ಎಂಬುದನ್ನು ಕಾದಂಬರಿಗಳಿಂದಾಯ್ದ ನಿದರ್ಶನಗಳಿಂದ ಸ್ಪಷ್ಟಪಡಿಸಲಾಗಿದೆ. ಅಲ್ಲದೆ ಇಂತಹ ಭಾಷಾಪ್ರಭೇದವನ್ನು ಶಕ್ತಿಯುತವಾಗಿ ತರಲು ಸಶಕ್ತವಾದ ತಂತ್ರಗಾರಿಕೆಯನ್ನು ಬಳಸುವ ಮೂಲಕ ಯಾಜಮಾನ್ಯ ವರ್ಗದ ಮೌಲ್ಯಗಳನ್ನು ತಿರಸ್ಕರಿಸಿ, ದಲಿತಲೋಕದ ಮೌಲ್ಯಗಳನ್ನು ಪುರಸ್ಕರಿಸಲು ಹಿಂದೆಂದಿಗಿಂತಲೂ ಭಿನ್ನವಾದ ಹೊಸದೊಂದು ಮಾರ್ಗವನ್ನು ಕಂಡುಕೊಂಡಿರುವುದು ಗಮನಾರ್ಹ ವಿಚಾರವಾಗಿದೆ. ಲೇಖಕರು ವಸ್ತು, ಭಾಷೆ ಮತ್ತು ತಂತ್ರಗಳ ನಿರೂಪಣೆಯಲ್ಲಿ ಅನುಸರಿಸಿಕೊಂಡಿರುವ ಸಾದೃಶ್ಯತೆ ಮತ್ತು ವೈದೃಶ್ಯತೆಯ ಅಂಶಗಳನ್ನು ಊಳಿಗಮಾನ್ಯ, ಜೀತಪದ್ಧತಿ ಮತ್ತು ಜಮೀನ್ದಾರಿ ವ್ಯವಸ್ಥೆಯ ಕ್ರೌರ್ಯ, ಜಾನಪದೀಯ ಅಂಶಗಳು, ಅನೈತಿಕ ಸಂಬಂದಗಳು, ಗ್ರಾಮೀಣ ನ್ಯಾಯವ್ಯವಸ್ಥೆ ಎಂಬ ಉಪಶೀರ್ಷಿಕೆಯಡಿಯಲ್ಲಿ ದೀರ್ಘವಾಗಿ ಚರ್ಚಿಸಲಾಗಿದ್ದು, ಲೇಖಕರು ಸಮಾಜದ ಕಟ್ಟುಪಾಡುಗಳಿಗೆ ಅನುಗುಣವಾಗಿ ನಡೆಯುವ ಪಾತ್ರಗಳನ್ನು ಸಾದೃಶ್ಯಾಂಶಗಳಲ್ಲಿಯೂ ಅವುಗಳನ್ನು ವಿರೋಧಿಸಿ ನಡೆಯುವ ಪಾತ್ರಗಳನ್ನು ವೈದೃಶ್ಯಾಂಶಗಳಲ್ಲಿಯೂ ತರುವಲ್ಲಿ ಯಶಸ್ವಿಯಾಗಿದ್ದಾರೆ ಎಂಬುದನ್ನು ಈ ಪ್ರಬಂಧವು ಸ್ಪಷ್ಟಪಡಿಸುತ್ತದೆ.

ಒಂದು ಸಮಾಜದಲ್ಲಿ ಒಂದೇ ಭಾಷೆಯನ್ನಾಡುವ ಜನರಿದ್ದರೂ ಎಲ್ಲಾ ವ್ಯಕ್ತಿಗಳು ಆ ಭಾಷೆಯನ್ನು ಒಂದೇ ರೀತಿಯಲ್ಲಿ ಬಳಸುವುದಿಲ್ಲ. ಅಂದರೆ, ಸಮಾಜದಲ್ಲಿ ಸಮುದಾಯಗಳು ಭಿನ್ನವಾದಂತೆಲ್ಲ ಅವು ಬಳಸುವ ಭಾಷೆಯು ಭಿನ್ನವಾಗುತ್ತ ಹೋಗುತ್ತದೆ. ಕ್ರಮೇಣ ಈ ಭಿನ್ನತೆಯೇ ಆಯಾ ಸಮಾಜದ ಭಾಷಿಕ ಚಹರೆಯಾಗಿ ರೂಪಗೊಳ್ಳುತ್ತದೆ ಎಂಬುದನ್ನು ಜಾತಿ, ಲಿಂಗ, ಶಿಕ್ಷಣ, ಅಧಿಕಾರ, ಸಂಬೋಧನಾವಾಚಿ, ಗಾದೆಗಳು, ಬೈಗುಳಗಳು, ವ್ಯಕ್ತಿನಾಮಗಳಂತಹ ಸಾಮಾಜಿಕ ಭಿನ್ನಾಂಶಗಳಲ್ಲಿ ಸ್ಪಷ್ಟವಾಗಿ ವಿಶ್ಲೇಷಿಸಲಾಗಿದೆ.

ವ್ಯಕ್ತಿಯು ಬಳಸುವ ಭಾಷೆಯಿಂದ ಜಾತಿ ಅಥವಾ ಕುಲವನ್ನು ಗುರುತಿಸುವಂತೆ, ಗಂಡು-ಹೆಣ್ಣು ಅಭಿವ್ಯಕ್ತಿಗೊಳಿಸುವ ಭಾಷೆಯನ್ನಾಧರಿಸಿ ನಿರ್ದಿಷ್ಟ ಲಿಂಗವನ್ನು ಗುರುತಿಸಬಹುದು. ಹಾಗೆಯೇ ವ್ಯಕ್ತಿ ಶಿಕ್ಷಿತರೋ, ಅಶಿಕ್ಷಿತರೋ ಎಂಬುದನ್ನು ಅವರ ಅಧಿಕಾರ ಸ್ಥಾನಮಾನಗಳಿಂದ ಕಂಡುಕೊಳ್ಳಬಹುದು. ಅಲ್ಲದೆ ಸಾಮಾಜಿಕ ನಡವಳಿಗಳನ್ನು ಕಾಲವಾಹಿನಿಗಳಂತೆ ತಲ ತಲಾಂತರದಿಂದ ಮುಂದುವರಿಸಿಕೊಂಡು ಬಂದಿರುವ ಗಾದೆಗಳು ವ್ಯಕ್ತಿಯ ನಡಾವಳಿಗಳನ್ನು ನಿಯಂತ್ರಿಸುವವು. ಬೈಗುಳಗಳಲ್ಲಿ ಹಾಗೂ ವ್ಯಕ್ತಿನಾಮಗಳಲ್ಲಿ ಬಳಕೆಯಾಗುವ ಭಾಷೆ ಸಾಮಾಜಿಕ ಚಹರೆಯಾಗಿ ಕಾರ್ಯ ನಿರ್ವಹಿಸುತ್ತದೆ ಎಂಬುದನ್ನು ಕಂಡುಕೊಳ್ಳಲಾಗಿದೆ.

ರಂಗಸ್ವಾಮಿ ಎಚ್.ಡಿ. ಅವರು "ದೂರದರ್ಶನದಲ್ಲಿ ಸುದ್ದಿ ಭಾಷಾ ಬದಲಾವಣೆ: ಒಂದು ಅಧ್ಯಯನ"(೨೦೧೧-೧೨) (ಕನ್ನಡ ಖಾಸಗಿ ಸುದ್ದಿವಾಹಿನಿಗಳನ್ನು ಅನುಲಕ್ಷಿಸಿ) ಈ ಸಂಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್. ಪದವಿಗಾಗಿ ಸಾದರಪಡಿಸಿ ಸಲ್ಲಿಸಿದ್ದಾರೆ.

ಭಾಷಾವಲಯದಲ್ಲಿ ಹಲವಾರು ಅಧ್ಯಯನಗಳು ವಿಭಿನ್ನ ವಿಶಿಷ್ಟ ರೀತಿಯಲ್ಲಿ ನಡೆದಿವೆ. ಅಂತಹ ಮಹತ್ವದ ಅಧ್ಯಯನಗಳಲ್ಲಿ ಮಾಧ್ಯಮಗಳ ಭಾಷೆಯ ಅಧ್ಯಯನವೂ ಒಂದು. ಪತ್ರಿಕೆಗಳಲ್ಲಿ ಬಳಕೆಯಾಗುವ ಭಾಷೆ, ರೇಡಿಯೋ ಭಾಷೆ ಮತ್ತು ಟೆಲಿವಿಷನ್ ಭಾಷೆ. ಇವುಗಳ ಕುರಿತಾಗಿ ಅಧ್ಯಯನ ಮಾಡುವುದು ಭಾಷಾವಿಜ್ಞಾನಿಗಳ, ಭಾಷಾ ಅಧ್ಯಯನಕಾರರ ಬಹಳ ಮುಖ್ಯವಾದ ಕರ್ತವ್ಯವಾಗಿದೆ. ಈ ಮಾರ್ಗದಲ್ಲಿ ಅನೇಕ ಅಧ್ಯಯನಗಳು ನಡೆದಿವೆ. ನಡೆಯುತ್ತಲೂ ಇವೆ. ಕಾಲದಿಂದ ಕಾಲಕ್ಕೆ ಅಧ್ಯಯನಗಳು ನಡೆಯುತ್ತಲೇ ಇವೆ. ಆದರೂ ಸಹ ಭಾಷಾ ಕ್ಷೇತ್ರ ನಿಂತ ನೀರಾಗಿರದೆ, ಚಲನಶೀಲವಾದುದರಿಂದ ಅಧ್ಯಯನ ನಡೆಯುವುದು ಮುಖ್ಯವಾಗ ಬೇಕಾಗುತ್ತದೆ. ಪ್ರಸ್ತುತ ಅಧ್ಯಯನದಲ್ಲಿ ಸಮೂಹ ಮಾಧ್ಯಮಗಳಲ್ಲಿ ಒಂದಾದ ದೂರದರ್ಶನದಲ್ಲಿ ಭಾಷೆಯ ಕುರಿತಾಗಿ ಅದರಲ್ಲೂ ವಿಶೇಷವಾಗಿ ಸುದ್ದಿವಾಹಿನಿಗಳ ಭಾಷೆ ಕುರಿತಾಗಿ ಚರ್ಚೆ ಮಾಡಲಾಗಿದೆ.

ಶಶಿಧರ ನರೇಂದ್ರ ಅವರು "ಕನ್ನಡ ನಾಟಕಗಳ ಭಾಷೆ" ೨೦೧೧(ಪ್ರಾತಿನಿಧಿಕ ನಾಟಕಗಳನ್ನು ಅನುಲಕ್ಷಿಸಿ) ಎಂಬ ಪಿಎಚ್.ಡಿ. ಪ್ರಬಂಧವನ್ನು ಕ.ವಿ.ವಿ. ಹಂಪಿಗೆ ಸಲ್ಲಿಸಿದ್ದಾರೆ.

ಭಾಷೆಯು ನಾಟಕದ ಅತ್ಯಂತ ಪ್ರಮುಖವಾದ ಅಂಗ. ನಾಟಕದಲ್ಲಿ ಬದುಕನ್ನು ಭಾಷೆಯ ಮೂಲಕ ಕಟ್ಟಿಕೊಡಲಾಗುತ್ತದೆ. ನಾಟಕದಲ್ಲಿ ಒಂದು ಪಾತ್ರ ಆಡುವ ಮಾತು, ಆ ಮಾತನ್ನಾಡುವ ಪಾತ್ರದ ಮೇಲೆ ಮಾತನ್ನು ಕೇಳಿಸಿಕೊಳ್ಳುವ ನಾಟಕದ ಸುತ್ತಲಿನ ಪಾತ್ರಗಳ ಮೇಲೆ ಹಾಗೂ ಅದನ್ನು ನೋಡುವವರ, ಕೇಳುವವರ ಮೇಲೆ ಪರಿಣಾಮ ಬೀರುತ್ತದೆ. ಅಲ್ಲದೇ ಭಾಷೆಯು ನಾಟಕದ ಬಂಧ, ವಸ್ತು, ಪಾತ್ರಗಳ ಹಿನ್ನೆಲೆಗಿರುವ ವಾತಾವರಣವನ್ನು ಸೂಚಿಸುತ್ತದೆ. ಇಂಥ ಮಾತು ಸಂಭಾಷಣೆಗೆ ಸಂಬಂಧಿಸಿದ ಕನ್ನಡ ನಾಟಕಗಳ ಭಾಷೆ ಕುರಿತಾದ ಈ ಅಧ್ಯಯನದಲ್ಲಿ ಕನ್ನಡ ನಾಟಕಗಳ ಭಾಷೆಯ ಬಗ್ಗೆ, ಅದರ ಸ್ವರೂಪದ ಬಗ್ಗೆ ತಿಳಿಯುವ ಪ್ರಯತ್ನ ಇದಾಗಿದೆ. ಭಾರತದ ಅಭಿಜಾತ ರಂಗಭೂಮಿಗೆ ಸುಮಾರು ಮೂರು ಸಾವಿರ ವರ್ಷಗಳ ಇತಿಹಾಸವಿದ್ದರೂ ಕನ್ನಡ ರಂಗಭೂಮಿ ತೀರಾ ಈಚಿನದು. ಹದಿನೇಳನೇ ಶತಮಾನದ ಕೊನೆಗೆ ರಚನೆಯಾದ 'ಮಿತ್ರವಿಂದಾ ಗೋವಿಂದ' ಕನ್ನಡದ ಮೊದಲ ನಾಟಕವಾದರೂ ಅದು ಅನುವಾದಿತ ನಾಟಕವಾಗಿದೆ. ಮತ್ತೆ ಸುಮಾರು ನೂರುವರ್ಷದ ನಂತರ ಕನ್ನಡ ನಾಟಕಗಳ ಬೆಳೆ ಶುರುವಾಯಿತು. ಇಗ್ಗಪ್ಪ ಹೆಗ್ಗಡೆ ವಿವಾಹ ಪ್ರಹಸನ, ಉಷಾಹರಣ ಮುಂತಾದ ನಾಟಕಗಳಿಂದ ಹಿಡಿದು ೨೦೧೧ರ ಇಲ್ಲಿಯ ತನಕ ಸಾವಿರಾರು ನಾಟಕಗಳು ಪ್ರಕಟವಾಗಿವೆ. ಅವೆಲ್ಲವುಗಳ ಭಾಷಾಸ್ವರೂಪವನ್ನು ಅಭ್ಯಸಿಸುವುದು ಸಾದ್ಯವಿಲ್ಲವಾದರೂ ಭಾಷಾಬಳಕೆಯ ಸ್ವರೂಪವನ್ನು ಗಮನಿಸಿ ವಿವಿಧ ಪ್ರಕಾರಗಳ ಅಡಿಯಲ್ಲಿ ಬರುವ ಪ್ರಾತಿನಿಧಿಕ ನಾಟಕಗಳನ್ನು ಇಲ್ಲಿನ ಅಧ್ಯಯನ ಒಳಗೊಂಡಿದೆ.

ಈ ಭಾಷೆಗೆ ಸಂಬಂಧಿಸಿದಂತೆ ನಮ್ಮ ಮೊದಲ ನಾಟಕ "ಇಗ್ಗಪ್ಪ ಹೆಗಡೆ ವಿವಾಹ ಪ್ರಹಸನ", ಹಳಗನ್ನಡದ 'ಅಶ್ವತ್ಥಾಮನ್', 'ಬೆರಳ್‌ಗೆ ಕೊರಳ್'ದಂತಹ ಭಾಷಾ ವೈಶಿಷ್ಟ್ಯದ ನಾಟಕಗಳ ಭಾಷೆ ಕುರಿತು ಚರ್ಚಿಸಲಾಗಿದೆ. ಇನ್ನು ಪ್ರಾದೇಶಿಕ ಹಿನ್ನೆಲೆಯಲ್ಲಿ ನಮ್ಮ ನಾಟಕಗಳ ಭಾಷೆಯಿಂದಲೇ ಗಮನ ಸೆಳೆದಿರುವ ಪ್ರಮುಖ ನಾಟಕಕಾರರ ನಾಟಕಗಳು, ಅವುಗಳ ಭಾಷಾ ವಿಶೇಷತೆಯನ್ನು ಕುರಿತು ವಿವರಿಸಲಾಗಿದೆ.

ಒಟ್ಟಾರೆ ಇಲ್ಲಿ ಕನ್ನಡ ನಾಟಕಗಳ ಭಾಷೆಯ ಸ್ವರೂಪವನ್ನು ವಿವಿಧ ಅಧ್ಯಾಯಗಳ ಮೂಲಕ ಪರಿಚಯಿಸಲಾಗಿದೆ. ಕನ್ನಡ ನಾಟಕ ಭಾಷೆಗೆ ಸಂಬಂಧಿಸಿದಂತೆ ಪ್ರತಿಯೊಂದು ವಿಭಾಗವು, ಪ್ರಕಾರವು ಆಳವಾದ ವಿಶ್ಲೇಷಣೆ, ಸಂಶೋಧನೆ ಕೈಗೊಳ್ಳಬಹುದಾದ ಅಗಾಧತೆಯನ್ನು, ಪ್ರೌಢಿಮೆಯನ್ನು ಹೊಂದಿದೆ. ಅದರ ಮೂಲಕ ನಾಟಕಕ್ಷೇತ್ರದ ಭಾಷಾಬಳಕೆಯ ಸ್ವರೂಪದ ಮೇಲೆ ಬೆಳಕು ಚೆಲ್ಲುವ ಕೆಲಸ ಇದಾಗಿದೆ. ಈ ಮಹಾಪ್ರಬಂಧವು ಧಾರಾವಾಹಿಗಳಲ್ಲಿ ವಿವಿಧ ಪಾತ್ರಗಳ ಮತ್ತು ನಟ-ನಟಿಯರ ಭಾಷೆಯನ್ನು ಹಾಗೂ ಪ್ರಾದೇಶಿಕ, ಚಾರಿತ್ರಿಕ, ಹಾಸ್ಯ, ಕೌಟುಂಬಿಕ ಧಾರಾವಾಹಿಗಳಲ್ಲಿ ಬಳಕೆಯಾಗುವ ಭಾಷೆ ಭಿನ್ನತೆಯನ್ನು ಪಾತ್ರಗಳ ಮುಖೇನ ಅಧ್ಯಯನ ಮಾಡಲು ಉಪಯುಕ್ತವಾದ ಮಾಹಿತಿಯನ್ನು ನೀಡುತ್ತದೆ. ಒಳನುಡಿಗಳ ಬಳಕೆ ಹಾಗೂ ಪ್ರಭೇದಗಳ ಆಡುನುಡಿಯ ಬಗ್ಗೆ ಹಾಗೂ ಚಾರಿತ್ರಿಕ ಸಂಘರ್ಷಣೆಗಳ ಬಗ್ಗೆ ಹೆಚ್ಚು-ಹೆಚ್ಚು ಅಧ್ಯಯನ ಮಾಡಲು ಈ ಮಹಾಪ್ರಬಂಧವು ಆಕಾರವಾಗಿ ನಿಲ್ಲುತ್ತದೆ.

ಡಾ.ಡಿ.ಪಾಂಡುರಂಗಬಾಬು ಅವರ 'ನುಡಿನೋಟ'(೨೦೦೫) ಸಂಶೋಧನಾ ಲೇಖನಗಳ ಕಿರು ಹೊತ್ತಿಗೆ. ಈ ಪುಸ್ತಕದಲ್ಲಿರುವ ಪ್ರತಿಯೊಂದು ಲೇಖನ ಪಿಎಚ್.ಡಿ. ಅಧ್ಯಯನ ಮಾಡುವಷ್ಟು ಯೋಗ್ಯವಾಗಿವೆ. ಇದು ಒಂದು ಸಂಶೋಧನಾ ಕೃತಿ. ಪಿಎಚ್.ಡಿ. ಮಾಡಲು ಆಯ್ಕೆಯಾಗಿರುವ ಯುವ ಸಂಶೋಧನಾರ್ಥಿಗಳಿಗೆ ಕೈಪಿಡಿಯಂತಿದೆ. ಭಾಷಾತಂತ್ರಜ್ಞಾನ ಮತ್ತು ಸಮಾಜ, ಅಲೆಮಾರಿಗಳು ಮತ್ತು ಭಾಷೆ: ಒಂದು ಟಿಪ್ಪಣಿ, ಣೇ, ಮೀ, ತಿ, ಅಂದರೆ..., ಮಂತ್ರವಿದ್ಯೆ ಮತ್ತು ಭಾಷೆ, ಕನ್ನಡದೊಳಗಣ ಇಂಗ್ಲೀಷ್, ಭಾಷಾಬೋಧನೆ ಮತ್ತು ಕಲಿಕೆ ಸಮಸ್ಯೆಯ ಸ್ವರೂಪ, ಕನ್ನಡ ಪದಕೋಶ ಬೆಳವಣಿಗೆಯ ಸ್ವರೂಪ: ಒಂದು ಇಣುಕು, ಭಾಷೆಯ ಸಾಮಾಜಿಕ ಚಹರೆಗಳು, ಜೋಡು ನುಡಿಗಳಿಗೆ ಹೀಗೊಂದು ವಿವರಣೆ, ಬದಲಾಗುತ್ತಿರುವ ಕನ್ನಡದ ಒಂದು ಮಾದರಿ, ಬಯ್ಗುಳ: ಸಾಮಾಜಿಕ ಸಾಂಸ್ಕೃತಿಕ ವಿನ್ಯಾಸ, ಒಂದನೇ ತರಗತಿಯಿಂದಲೇ ಇಂಗ್ಲೀಷ್ ಯಾಕೆಂದರೆ-ಕನ್ನಡದಿಂದ ಕನ್ನಡವೇ ದೂರ ಎಂಬಂತಹ ಒಟ್ಟು ಹದಿಮೂರು ಲೇಖನಗಳ ಪಠ್ಯವಾಗಿದೆ. ಈ ಕೃತಿಯು ಸರಳವಾಗಿ ಭಾಷೆಯನ್ನು ವಿಶ್ಲೇಷಣೆ ಮಾಡುವುದು ಹೇಗೆ ಎಂಬುದನ್ನು ತಿಳಿಸಿಕೊಡುವ ಅಪರೂಪದ ಕೃತಿಯಾಗಿದೆ. ಆದ್ದರಿಂದ ಈ ಕೃತಿಯು ಭಾಷೆಯ ಸಾಮಾಜಿಕ ವಿನ್ಯಾಸ ಎಂಬ ಅಧ್ಯಯನಕ್ಕೆ ಮಾದರಿಯಾದ ಕೃತಿಯಾಗಿದೆ.

ಡಾ.ಪಿ.ಮಹಾದೇವಯ್ಯ ಅವರ 'ಕನ್ನಡ ಬಳಕೆ: ಸಾಮಾಜಿಕ ವಿನ್ಯಾಸ'(೨೦೦೬) ಒಟ್ಟು ಹದಿನಾಲ್ಕು ಸಂಶೋಧನಾ ಲೇಖನಗಳುಳ್ಳ ಸಂಶೋಧನಾ ಕೃತಿ. ಈ ಕೃತಿಯಲ್ಲಿ ಪ್ರಮುಖವಾಗಿ ೧. ವ್ಯಕ್ತಿನಾಮಗಳು, ೨. ಕನ್ನಡದಲ್ಲಿ ಉಪಭಾಷಾಧ್ಯಯನ, ೩. ಹೆಣ್ಣು ಮತ್ತು ಗಂಡಿನ ಭಾಷೆ, ೪. ಕನ್ನಡದಲ್ಲಿ ಜೋಡುನುಡಿಗಳು: ಒಂದು ಟಿಪ್ಪಣಿ, ೫. ದಲಿತರು ಮತ್ತು ಭಾಷೆ ಎನ್ನುವ ಈ ಲೇಖನಗಳು ಅಧ್ಯಯನಕ್ಕೆ ಪೂರಕವಾದ ಮಾಹಿತಿಯನ್ನು ಒದಗಿಸುತ್ತವೆ.

ಕನ್ನಡ ಭಾಷೆಯನ್ನು ಕುರಿತ ಅಧ್ಯಯನಗಳು ಬೇರೆ ಬೇರೆ ನೆಲೆಗಳಲ್ಲಿ ನಡೆಯಬೇಕಾದ ಅಗತ್ಯ ಈಗ ಎಂದಿಗಿಂತ ಹೆಚ್ಚಾಗಿದೆ. ಕನ್ನಡ ರಚನೆಯನ್ನು ವಿವರಿಸುವ ಯತ್ನಗಳು ಬಹು ಹಿಂದಿನಿಂದಲೂ ನಡೆದಿವೆ. ಆದರೂ ಹೊಸ ಸಾಧ್ಯತೆಗಳನ್ನು ಅನುಸರಿಸಿ ಈ ಅಧ್ಯಯನಗಳು ಸಾಗಿರುವುದು ಇಲ್ಲವೆನ್ನುವಷ್ಟು ಕಡಿಮೆ. ಇನ್ನು ಕನ್ನಡದ ಬಳಕೆಯನ್ನು ಆಧರಿಸಿದ ಅಧ್ಯಯನಗಳಲ್ಲಿ ಬೀಸು ಹೇಳಿಕೆಗಳಿರುತ್ತವೆ; ಇಲ್ಲವೇ ಉದ್ವೇಗದ ಮಾತುಗಳಿರುತ್ತವೆ. ಕನ್ನಡದ ಶುದ್ಧತೆಯ ಬಗೆಗೆ ಕೇಳಿ ಬರುವ ಮಾತುಗಳನ್ನೇ ಇದಕ್ಕೆ ನಿದರ್ಶನವಾಗಿ ನೋಡಬಹುದು. ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಸಾಮಾಜಿಕವಾಗಿ ಕನ್ನಡ ಭಾಷಾಬಳಕೆಯನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿರುವ ಪ್ರತಿಯೊಂದು ಲೇಖನಗಳು ಪ್ರತ್ಯೇಕವಾಗಿ ಪಿಎಚ್.ಡಿ. ಮಾಡಲು ಮಾದರಿ ಎನಿಸುತ್ತವೆ. ಕಾರಣ ಒಂದೊಂದು ಲೇಖನಗಳು ಸಹ ಸಂಶೋಧನೆಗೆ ಪೂರಕವಾದ ಮಾಹಿತಿಯನ್ನು ನೀಡುತ್ತವೆ. ಈ ಹಿನ್ನೆಲೆಯಲ್ಲಿ ಈ ಕೃತಿಯು ಉತ್ತಮ ಸಂಶೋಧನೆ ಮಾಡುವ ಅವಕಾಶಗಳನ್ನು ಹುಟ್ಟು ಹಾಕುತ್ತದೆ.

ಡಾ.ಕೆ.ವಿ.ನಾರಾಯಣ ಅವರು ಸಂಪಾದಿಸಿದ 'ಭಾಷೆ' ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ-೧ (೨೦೦೯) ಕನ್ನಡ ಭಾಷೆಯ ಬಗೆಗೆ ಅಧ್ಯಯನ ಮಾಡುವ ಅಥವಾ ಭಾಷೆಯ ಸಾಮಾನ್ಯ ಜ್ಞಾನವನ್ನು ತಿಳಿದುಕೊಳ್ಳಲು ಉಪಯುಕ್ತ ಗ್ರಂಥವಾಗಿದೆ. ಕನ್ನಡ ಬೌದ್ಧಿಕ ಜಗತ್ತು 'ಭಾಷೆ'ಯನ್ನು ಸಾಹಿತ್ಯ ಸಂಸ್ಕೃತಿಯ ಒಂದು ಘಟಕವಾಗಿಯೇ ಇದುವರೆಗೂ ಗ್ರಹಿಸುತ್ತಾ ಬಂದಿದೆ. ಜಾಗತಿಕವಾಗಿ ಭಾಷೆಯ ಬಗೆಗಿನ ಸಂಶೋಧನೆ, ತಿಳುವಳಿಕೆಗಳು ಕಳೆದ ಎರಡು ಶತಮಾನಗಳಲ್ಲಿ ವಿಭಿನ್ನ ಶಾಖೆಗಳಲ್ಲಿ ವಿಸ್ತೃತವಾಗಿ ಬೆಳೆದುನಿಂತಿದೆ. ಆಧುನಿಕ ಭಾಷಾಶಾಸ್ತ್ರ, ಆನ್ವಯಿಕ ಭಾಷಾಶಾಸ್ತ್ರದ ಅನೇಕ ಶಾಖೆಗಳು ಪ್ರತ್ಯೇಕ ಜ್ಞಾನಶಿಸ್ತುಗಳಾಗಿ ಅಧ್ಯಯನ ಶಿಸ್ತುಗಳಾಗಿ ಜಗತ್ತಿನ ಬಹುತೇಕ ವಿಶ್ವವಿದ್ಯಾಲಯಗಳಲ್ಲಿ ಪಡೆದಿವೆ. ಭಾರತದಲ್ಲಿ ಅದರಲ್ಲಿಯೂ ಕರ್ನಾಟಕದಲ್ಲಿ ಮೈಸೂರು ಮತ್ತು ಕರ್ನಾಟಕ ವಿಶ್ವವಿದ್ಯಾಲಯಗಳಲ್ಲಿ ಮಾತ್ರ ಪ್ರತ್ಯೇಕ ವಿಭಾಗಗಳಿದ್ದರೂ "ಕನ್ನಡ ಭಾಷಾಶಾಸ್ತ್ರದ" ರೂಪರೇಷೆಗಳು ಇನ್ನು ನಿಖರಗೊಳ್ಳಬೇಕಿದೆ. ಕನ್ನಡ ಭಾಷೆಯ ಚಾರಿತ್ರಿಕ, ಸಾಮಾಜಿಕ, ಸಾಂಸ್ಕೃತಿಕ ನೆಲೆಗಳಲ್ಲದೆ ಸಮಕಾಲೀನವಾಗಿ ಭಾಷೆಯ ಅರಿವನ್ನು ಪ್ರಸ್ತುತಪಡಿಸುವ ಒತ್ತಾಯಗಳು ಈ ಹೊತ್ತಿನಲ್ಲಿ ಹೆಚ್ಚಿವೆ. ಇದಕ್ಕಾಗಿ ಜಾಗತಿಕವಾಗಿ ಭಾಷಿಕ ತಿಳುವಳಿಕೆಗಳು ಕನ್ನಡದಲ್ಲಿ ಸರಳವಾಗಿ ಲಭ್ಯವಾಗಬೇಕಿದೆ. ಆ ಮೂಲಕ ಕನ್ನಡ ಭಾಷೆಯ ಚರಿತ್ರೆ, ವರ್ತಮಾನ,

ಭವಿಷ್ಯಗಳನ್ನು ಪುನಾರೂಪಿಸಲು ಮಹತ್ವದ ಕೆಲಸಕ್ಕೆ ಆಕರಗಳನ್ನು ರೂಪಿಸುವ, ಸಿದ್ಧಗೊಳಿಸುವ ಕೆಲಸ ಆಗಬೇಕಿದೆ. ಮೇಲಿನ ಆಶಯಗಳಿಗೆ ಪೂರಕವಾಗಿ ಕನ್ನಡ ವಿಶ್ವವಿದ್ಯಾಲಯದ ಕನ್ನಡ ಭಾಷಾಧ್ಯಯನ ವಿಭಾಗವು ಈ ಕೃತಿಯನ್ನು ಹೊರತಂದಿದೆ. ಸರಳ ಹಾಗೂ ಸಂಕ್ಷಿಪ್ತ ಮಾಹಿತಿಯನ್ನು ನೀಡುವ ಅತ್ಯುತ್ತಮ ಕೃತಿ ಇದಾಗಿದೆ.

ಎಸ್.ಎನ್.ಶ್ರೀದರ್ ಅವರ 'ಇಂದಿನ ಕನ್ನಡ: ರಚನೆ ಮತ್ತು ಬಳಕೆ'(೨೦೧೧) ಕನ್ನಡ ಭಾಷೆಯನ್ನು ಜಾಗತಿಕ ಮಟ್ಟದಲ್ಲಿ ಸಜ್ಜುಗೊಳಿಸುತ್ತಾ ಮತ್ತೊಂದೆಡೆ ಕನ್ನಡ ಭಾಷೆಯನ್ನು ಜಾಗತಿಕ ಚಿಂತನೆಗಳ ನೆಲೆಯಲ್ಲಿ ಪರಿಶೀಲಿಸುವ ಕೆಲಸವನ್ನು ಶ್ರೀಧರ್ ತಮ್ಮ ಪ್ರಬಂಧಗಳಲ್ಲಿ ಮಾಡಿದ್ದಾರೆ. ದಿನನಿತ್ಯ ನಾವು ಬಳಸುವ ಭಾಷೆಯ ಸಾಮಾನ್ಯ ವ್ಯಾಪಾರಗಳಾದ ಭಾಷಾಮಿಶ್ರಣ ದಂತಹ ಸಂಗತಿಗಳು ಕೂಡ ಭಾಷಾತತ್ವ, ಭಾಷಾವಿಜ್ಞಾನ, ಹೀಗೆ ಯಾವ ಯಾವ ನೆಲೆಗಳಲ್ಲಿ ಕೆಲಸ ಮಾಡಬಲ್ಲವು ಎನ್ನುವುದನ್ನು ವಿಸ್ತಾರವಾಗಿ ಚರ್ಚಿಸಿದ್ದಾರೆ. ಕನ್ನಡ ಈ ಹೊತ್ತು ಕೇವಲ "ಭಾಷೆ"ಯಾಗಿ ಮಾತ್ರ ಉಳಿದಿಲ್ಲ. ವ್ಯವಹಾರ, ಸಂಸ್ಕೃತಿ, ಚಿಂತನೆ, ಸಂಪ್ರದಾಯ ಮುಂತಾಗಿ ವ್ಯಾಪಿಸಿಕೊಂಡಿದೆ. ಹೀಗಾಗಿ ಭಾಷೆಯನ್ನು ಸಮಾಜಶಾಸ್ತ್ರ, ಮಾನವಶಾಸ್ತ್ರ, ರಾಜ್ಯಶಾಸ್ತ್ರ, ಮನೋವಿಜ್ಞಾನ –ಹೀಗೆ ಎಲ್ಲ ವಿಷಯಗಳ ಹಿನ್ನೆಲೆಯಲ್ಲಿ ಭಾಷೆಯನ್ನು ಕುರಿತು ಚರ್ಚಿಸಿದ್ದಾರೆ. ಈ ಕೃತಿ ಅಂತಹ ಹಲವು ನಿಟ್ಟುಗಳಲ್ಲಿ ನಡೆದಿರುವ/ನಡೆಯುತ್ತಿರುವ ಕೆಲಸಗಳನ್ನು ಕುರಿತು ಕಣ್ಣೋಟವನ್ನು ನಮ್ಮ ಮುಂದಿಡುತ್ತದೆ. ಅನ್ಯ ಭಾಷಾಬಳಕೆ ಹಾಗೂ ನುಡಿಬೆರಕೆ–ನುಡಿ ಜಿಗಿತ ಎಂಬ ಅಧ್ಯಾಯಗಳು ತಾತ್ವಿಕ ರೂಪವನ್ನು ಕಟ್ಟಿಕೊಳ್ಳಲು ಆಕರ ಗ್ರಂಥವಾಗಿದೆ. ಈ ಹಿನ್ನೆಲೆಯಲ್ಲಿ ವ್ಯಕ್ತಿಯ ಆಧುನೀಕರಣ, ಸಮಾಜ ಭಾಷಿಕ ಆಯಾಮಗಳು ಹೀಗೆ ಒಂದೊಂದು ಅಧ್ಯಾಯಗಳು ತಾತ್ವಿಕತೆಯನ್ನು ರೂಪಿಸಲು ಸಹಕಾರಿಯಾಗಿವೆ.

ಡಾ.ಸೋಮಶೇಖರ ಗೌಡ ಅವರ 'ಭಾಷೆ ರಚನೆ ಬಳಕೆ'(೨೦೧೦) ಭಾಷಾವಿಜ್ಞಾನ, ಕಾಲಮಾನಕ್ಕೆ ತಕ್ಕಂತೆ ಅತಿವೇಗದಿಂದ ಮುಂದುವರಿಯುತ್ತಿರುವ ಈ ಕಾಲದಲ್ಲಿ ಅದರ ಬೆಳವಣಿಗೆಯ ಪ್ರಮುಖ ಐತಿಹಾಸಿಕ ತಿರುವುಗಳ ಪರಿಚಯ ನಮಗೆಲ್ಲರಿಗೂ ಅತ್ಯಾವಶ್ಯಕ. ಭಾಷಾವಿಜ್ಞಾನದ ಸೈದ್ಧಾಂತಿಕ ಹಾಗೂ ಅನ್ವಯಿಕ ಶಾಖೆಗಳ ಒಂದು ಹಕ್ಕಿನೋಟ ಇಲ್ಲಿ ನಮ್ಮೆದುರಿಗೆ ಇದೆ. ಗಣತೀಯ ಭಾಷಾವಿಜ್ಞಾನ, ಗಣಕ ಭಾಷಾವಿಜ್ಞಾನ, ಸಾಮಾಜಿಕ ಭಾಷಾವಿಜ್ಞಾನ, ಮನೋಭಾಷಾ ವಿಜ್ಞಾನ, ನರವ್ಯೂಹ ಭಾಷಾವಿಜ್ಞಾನ ಮೊದಲಾದ ನೂತನ ಶಾಖೆಗಳನ್ನು ಇಲ್ಲಿ ಪರಿಚಯಿಸಲಾಗಿದೆ.

ಆಧುನಿಕ ತಾಂತ್ರಿಕ ಯುಗದಲ್ಲಿ ಲಿಪಿಯ ಸೌಂದರ್ಯಕ್ಕಿಂತ ಅದರ ಆಧುನೀಕರಣಕ್ಕೆ ಹೆಚ್ಚಿನ ಮಹತ್ವವಿದೆ. ಈ ದೃಷ್ಟಿಯಿಂದ ಕನ್ನಡ ಲಿಪಿ ಸಂಸ್ಕರಣ ಅತ್ಯಾವಶ್ಯಕ. ಆದರೆ ಲಿಪಿ ಸಂಸ್ಕರಣದ ಪರಿಜ್ಞಾನ ಇಲ್ಲದಿರುವುದೇ ಇಂದು ತೊಡಕಾಗಿದೆ. ಕಾರಣ, ಈ ವಿಷಯವನ್ನು ಕುರಿತು ಈ ಅಧ್ಯಾಯ ಅತ್ಯಂತ ಉಪಯುಕ್ತವಾಗಿದೆ. ಇನ್ನು ಈ ಕೃತಿಯಲ್ಲಿ

೧. ಸಾಮಾಜಿಕ ಭಾಷಾವಿಜ್ಞಾನ

೨. ಸಾಮಾಜಿಕ ಭಾಷಾವಿಜ್ಞಾನದ ಆಯಾಮಗಳು

೩. ಶಿಷ್ಟಭಾಷೆ

೪. ಕನ್ನಡದ ಉಪಭಾಷೆಗಳು

೫. ವಿವಿಧ ವಲಯಗಳಲ್ಲಿ ಕನ್ನಡ ಬಳಕೆ. ಎಂಬ ಈ ವಿಷಯಗಳು ಆಧುನಿಕ ಭಾಷಾಶಾಸ್ತ್ರವು ಮುಂದುವರಿಯಬೇಕಾದ ಅಧ್ಯಯನದ ಸಾಧ್ಯತೆಗಳನ್ನು ಕುರಿತು ವಿವರಿಸಿದ್ದಾರೆ. ಈ ಅಧ್ಯಯನವು ಸಮೂಹ ಮಾಧ್ಯಮಗಳ ಮಿತಿಯಲ್ಲಿರುವುದರಿಂದ ಈ ಅಂಶಗಳು ಅಧ್ಯಯನಕ್ಕೆ ಪೂರಕ ಅಂಶಗಳನ್ನು ಒದಗಿಸುತ್ತವೆ. ಈ ಹಿನ್ನೆಲೆಯಲ್ಲಿ ಈ ಕೃತಿಯು ಮಹತ್ವದ ವಿಷಯಗಳನ್ನು ಚರ್ಚಿಸಲು ದ್ವಿಭಾಷಿಕತೆ ಮತ್ತು ಭಾಷಾಮಿಶ್ರಣ ಎಂಬ ವಿಷಯವು ಭಾಷಾಸ್ವೀಕರಣ ಮತ್ತು ಭಾಷಾಮಿಶ್ರಣದ ಬಗ್ಗೆ ಉಪಯುಕ್ತ ತಾತ್ವಿಕ ಚೌಕಟ್ಟನ್ನು ಹೊಂದಿದೆ. ಈ ಅಧ್ಯಯನವು ತಾತ್ವಿಕ ಚೌಕಟ್ಟನ್ನು ರೂಪಿಸಲು ಪೂರಕವಾದ ಆಕರವಾಗಿದೆ. ಈ ಕೃತಿಯಲ್ಲಿ ಸಾಮಾಜಿಕ ಸಂದರ್ಭಗಳನ್ನು ಕುರಿತು ವಿಶ್ಲೇಷಣೆ ನಡೆಸಿದ್ದಾರೆ. ಈ ಕೃತಿಯು ಸಾಮಾಜಿಕ ವಿನ್ಯಾಸ ಹಾಗೂ ನುಡಿಬೆರಕೆ ಹಾಗೂ ನುಡಿಜಿಗಿತಕ್ಕೆ ಕಾರಣವಾಗುವ ಅಂಶಗಳನ್ನು ಸಾಮಾಜಿಕ ಸಂದರ್ಭವನ್ನು ಕುರಿತು ವಿಶ್ಲೇಷಿಸಿದ್ದಾರೆ. ಆದ್ದರಿಂದ ಈ ಕೃತಿಯು ಅತ್ಯುಪಯುಕ್ತ ಮಾಹಿತಿಯನ್ನು ನೀಡುತ್ತದೆ.

ಡಾ.ಪಿ.ಮಹಾದೇವಯ್ಯ ಅವರ 'ಕನ್ನಡ ಮತ್ತು ಜನತೆ'(೨೦೦೪) ಕೃತಿಯು ಕನ್ನಡ ಸಂಸ್ಕೃತಿ ಕುರಿತ ಲೇಖನಗಳನ್ನು ಒಳಗೊಂಡಿದೆ.

೧. ಭಾಷೆ ಎಂಬ ಭಾಗದಲ್ಲಿ ೭ ಸಂಶೋಧನಾ ಲೇಖನಗಳು ಹಾಗೂ ಜನತೆ ಎಂಬ ಭಾಗದಲ್ಲಿ ೬ ಲೇಖನಗಳಿವೆ. ಇವುಗಳಲ್ಲಿ

೧. ಕನ್ನಡ ಭಾಷೆ ಮತ್ತು ಪ್ರಭೇದ ಭಾಷೆಗಳ ಕುರಿತ ಲೇಖನಗಳು.

೨. ಕನ್ನಡ ಸಂಸ್ಕೃತಿ ಕುರಿತ ಲೇಖನಗಳು.

೩. ಕನ್ನಡ ಸಾಹಿತ್ಯದ ಭಾಷೆ ಕುರಿತ ಲೇಖನಗಳು.

ಈ ಅಂಶಗಳ ಹಿನ್ನೆಲೆಯಲ್ಲಿ ಲೇಖನಗಳ ಸಂಕಲನವನ್ನು ಮಾಡಿದ್ದಾರೆ.

೧. ಕನ್ನಡ ಪ್ರಭೇದಗಳು: ಬದಲಾವಣೆಯ ಪ್ರಕ್ರಿಯೆ

೨. ಕನ್ನಡದಲ್ಲಿ ಉಪಭಾಷಾಧ್ಯಯನ

೩. ಕನ್ನಡ ಚಲನಚಿತ್ರಗಳ ಭಾಷಾಬಳಕೆ

ಎಂಬ ಈ ಮೂರು ಲೇಖನಗಳು ನನ್ನ ಅಧ್ಯಯನಕ್ಕೆ ಪೂರಕ ಮಾಹಿತಿಯನ್ನು ಒದಗಿಸುತ್ತವೆ. ಕಾರಣ ಚಲನಚಿತ್ರಗಳಲ್ಲಿ ಭಾಷಾಬಳಕೆ ಎನ್ನುವ ಲೇಖನವು ಅನ್ಯಭಾಷಾ ಬಳಕೆ

ಹಾಗು ನುಡಿಬೆರಕೆ–ನುಡಿಜಿಗಿತ ಎಂಬ ಅಧ್ಯಾಯಗಳಿಗೆ ಪೂರಕ ಅಂಶಗಳನ್ನು ಒದಗಿಸುತ್ತದೆ. ಆದ್ದರಿಂದ ಈ ಕೃತಿಯು ಮಹತ್ವವೆನಿಸುತ್ತದೆ.

ಡಾ.ಬಿ.ಬಿ.ರಾಜಪುರೋಹಿತ ಅವರ 'ಭಾಷಾ ವಿಜ್ಞಾನ' ತತ್ವ, ಇತಿಹಾಸ ಮತ್ತು ಅನುಷ್ಠಾನ, (೨೦೧೨) ಎಂಬ ಕೃತಿಯು ಮಾನವನ ಭಾಷೆ, ಭಾಷಾಶಾಸ್ತ್ರೀಯ ಅಧ್ಯಯನ ಭಾಷಾಶಾಸ್ತ್ರ ನಡೆದು ಬಂದ ದಾರಿ ಹಾಗೂ ವರ್ಣನಾತ್ಮಕ ಭಾಷಾವಿಜ್ಞಾನದ ತಂತ್ರ ವಿಶೇಷಗಳು ಮತ್ತು ಪರಿವರ್ತನಾ ಉತ್ಪಾದನಾ ವ್ಯಾಕರಣ, ಟ್ಯಾಗ್ಮಿಕ್ ಸಿದ್ಧಾಂತ, ಸ್ಟ್ರಾಟಿಫಿಕೇಶನಲ್ ವ್ಯಾಕರಣ, ಇತರ ಕೆಲವು ಸಿದ್ಧಾಂತಗಳು, ಐತಿಹಾಸಿಕ ಮತ್ತು ತುಲನಾತ್ಮಕ ಭಾಷಾವಿಜ್ಞಾನ, ಸಾಮಾಜಿಕ ಭಾಷಾವಿಜ್ಞಾನ ಎಂಬ ವಿಷಯಗಳನ್ನು ಕುರಿತು ಸ್ಥೂಲವಾಗಿ ವಿವರಿಸಿದ್ದಾರೆ. ಈ ಅಧ್ಯಯನವು ಕೆಲವು ಸಿದ್ಧಾಂತಗಳನ್ನು ರೂಪಿಸುವಲ್ಲಿ ಹಾಗೂ ಅಧ್ಯಯನಗಳಿಗೆ ಪೂರಕ ಮಾಹಿತಿಯನ್ನು ನೀಡುವಲ್ಲಿ ಸಹಾಯಕ ಗ್ರಂಥವಾಗಿದೆ. ಈ ಕೃತಿಯು ಉಪಭಾಷಾ ಅಧ್ಯಯನಕ್ಕೆ ಪೂರಕವಾಗಿ ಅಂಶಗಳನ್ನು ನೀಡುವುದರಿಂದ ಇದರ ಅಧ್ಯಯನ ಉಪಯುಕ್ತವೆನಿಸುತ್ತದೆ. ಆದ್ದರಿಂದ ಈ ಕೃತಿಯು ಅಧ್ಯಯನ ಮಾಡಲು ಹೊಸ ಹೊಸ ಮಾಹಿತಿಯನ್ನು ಒದಗಿಸುತ್ತದೆ.

ಕೃಷ್ಣಪರಮೇಶ್ವರ ಭಟ್ಟ ಅವರ 'ಭಾಷೆ ಮತ್ತು ಸಾಮಾಜಿಕ ಸಂದರ್ಭ'(೨೦೧೩) ಕೃತಿಯಲ್ಲಿ ೬ ವಿಷಯಗಳನ್ನು ವಿಶ್ಲೇಷಣೆ ಮಾಡಿದ್ದಾರೆ.

೧. ನಮ್ಮ ಮಾತು: ಮಾತೆಂಬುದು ಕನ್ನಡಿ

೨. ಭಾಷೆಯಲ್ಲಿ ವಯಸ್ಸು

೩. ಭಾಷೆ ಹಾಗೂ ಸಾಮಾಜಿಕ ವ್ಯತ್ಯಾಸ

೪. ಭಾಷೆಯ ಆಯ್ಕೆ

೫. ಭಾಷಾ ಭಿನ್ನತೆ ಹಾಗೂ ಭಾಷಾ ವ್ಯತ್ಯಾಸ: ಒಳ ಸುಳಿಗಳ ಹೊರತಾಗಿಯು ಭಾಷಾ ಸ್ವೀಕರಣದ ಬಗ್ಗೆ ಚರ್ಚಿಸಿದ್ದಾರೆ.

ಒಬ್ಬ ಬರಹಗಾರ ತನ್ನ ಕೃತಿಯಲ್ಲಿ ಭಾಷೆಯ ಅನಂತ ಸಾಧ್ಯತೆಯನ್ನು ವಿಸ್ತರಿಸುವುದು ಒಂದು ಕ್ರಮ, ಪ್ರತಿಸತ್ಯದ ಪತ್ರಿಕೆ–ಮಾಧ್ಯಮಗಳ ಬಳಕೆಯಲ್ಲಿನ ಭಾಷೆಯ ಅಭಿವ್ಯಕ್ತಿಯ ಮಾದರಿ ಬೇರೆ, ಸಮುದಾಯಗಳಲ್ಲಿ, ಜನಾಂಗಗಳಲ್ಲಿ ಸಂಸ್ಕೃತಿಯ ಭಾಗವಾಗಿ ಉಳಿದು ಬರುತ್ತಿರುವ ಭಾಷೆಯ ಸ್ವರೂಪವೇ ಬೇರೆ. ಕನ್ನಡ ಸಾಂಪ್ರದಾಯಿಕ ವ್ಯಾಕರಣವನ್ನೇ ಬಳಸಿ ಬರೆದ ಕೃತಿಗಳು ಇವೆ. ಆ ಸಂಪ್ರದಾಯವನ್ನು ಮುರಿದು ಕಟ್ಟಿದ ಕೃತಿಗಳು ಇವೆ. ಆಡುಭಾಷೆಯನ್ನೇ ಬಳಸಿದ ಕೃತಿಗಳು, ಆಡುಭಾಷೆ ಮತ್ತು ಗ್ರಂಥಸ್ಥ ಭಾಷೆಯನ್ನು ಬಳಸಿ ಬರೆದ ಕೃತಿಗಳು ಇವೆ. ಸಾಹಿತ್ಯ ಭಾಷೆಯ ಜೊತೆಗೆ ಸಂಗೀತ ಭಾಷೆಯನ್ನು ಅಳವಡಿಸಿದ ಕೃತಿಗಳೂ ಇವೆ. ಆಧುನಿಕವಾದ ಪರಿಭಾಷೆಯನ್ನೊಳಗೊಂಡ ಕೃತಿಗಳು ಇವೆ. ಈ ಪ್ರಯೋಗಗಳನ್ನೆಲ್ಲ ಅಧ್ಯಯನ ಮಾಡುವ ಅವಶ್ಯಕತೆ ಇದೆ.

'ಕುಸುಮಬಾಲೆ'ಯಲ್ಲಿನ ಭಾಷಾಪ್ರಯೋಗ ಬಹುಪಾಲು ಜನ ತಿಳಿದಿರುವಂತೆ ಉಪಭಾಷೆ/ಪ್ರದೇಶದ ಭಾಷೆಯಲ್ಲದ ಮತ್ತು ದೇವನೂರರು ಪ್ರಜ್ಞಾಪೂರ್ವಕವಾಗಿ ಮಾಡಿದ ಪ್ರಯೋಗವೂ ಅಲ್ಲ. ಗು.ಸು.ಭಟ್ಟ ಚಿತ್ತಗೇರಿ ಅವರು ಹವ್ಯಕ ಕನ್ನಡದಲ್ಲಿಯೇ ಬರೆದ ಕವನದ ಭಾಷೆಯ ಉದ್ದೇಶವೇ ಬೇರೆ. ಕುಂ.ವೀರಭದ್ರಪ್ಪನವರು "ದೇವರ ಹೇಣ' ಕಥೆಯ ಭಾಷೆಯ ಬಳಕೆಯ ಉದ್ದೇಶವೇ ಬೇರೆ. ಒಬ್ಬ ಬರಹಗಾರ ಉದ್ದೇಶಪಟ್ಟು ಭಾಷೆಯನ್ನು ಬಳಸುವ ಕ್ರಮಕ್ಕೂ ನಿರುದ್ದೀಪವ್ಯವಾಗಿ ಆ ಕೃತಿಯ ಜೊತೆಗೆ ರೂಪಗೊಳ್ಳುವ ಭಾಷೆಗೂ ವ್ಯತ್ಯಾಸಗಳು ಯಾವ ರೀತಿಯಲ್ಲಿರಬಹುದು? ಸಾಮಾಜಿಕ ಪಲ್ಲಟಗಳ ಕಾರಣದಿಂದ ಭಾಷಾ ಪರಿಸರವೇ ಇಲ್ಲದೆ ಭಾಷೆ ಹೇಗೆ ಉಳಿಯುತ್ತದೆ? ಅನ್ಯಭಾಷೆಯ ಆಕ್ರಮಣ ದೇಶಿ ಭಾಷೆಗಳ ಮೇಲೆ ಬೀರುವ ಪರಿಣಾಮ ಎಂಥದ್ದು? –ಹೀಗೆ ಹಲವು ನಿಟ್ಟಿನಲ್ಲಿ ಅಧ್ಯಯನ, ಸಂಶೋಧನೆಗಳು ನಡೆಯುತ್ತಿವೆ. ನಡೆಯಬೇಕಿದೆ. ಹೀಗೆ ಈ ಕೃತಿಯು ಅನ್ಯಭಾಷಾ ಸ್ವೀಕರಣದ ವಿಶೇಷ ಲೇಖನವು ಅಧ್ಯಯನಕ್ಕೆ ಒಂದು ಶಿಸ್ತನ್ನು ರೂಪಿಸುವಲ್ಲಿ ಮಾದರಿಯಾಗಿ ನಿಲ್ಲುತ್ತದೆ. ಈ ಕಾರಣದಿಂದ ಈ ಕೃತಿಯು ಮಹತ್ವದ್ದಾಗಿದೆ.

ಡಿ.ಪಾಂಡುರಂಗ ಬಾಬು ಅವರ 'ನಮ್ಮಾತು'(೨೦೦೫) ಕೃತಿಯು ಹತ್ತು ಸಂಶೋಧನಾ ಲೇಖನಗಳನ್ನು ಹೊಂದಿದೆ. ಈ ಕೃತಿಯಲ್ಲಿರುವ ಎಲ್ಲಾ ಲೇಖನಗಳು ಬಿಡಿಬಿಡಿಯಾಗಿ ಪಿಎಚ್.ಡಿ. ಮಾಡುವಷ್ಟು ಯೋಗ್ಯವಾಗಿವೆ. ಈ ಎಲ್ಲಾ ಲೇಖನಗಳು ಪಿಎಚ್.ಡಿ. ಮಾಡಲು ಮುನ್ನೋಟ ನೀಡುವ ತಾತ್ವಿಕ ಚೌಕಟ್ಟನ್ನು ಹೊಂದಿವೆ. ಈ ದೃಷ್ಟಿಯಿಂದ ಮಾದರಿಯಾಗಿ ನಿಲ್ಲುವುದಲ್ಲದೆ, ಅಧ್ಯಯನಕ್ಕೆ ಸಂಬಂಧಿಸಿದಂತೆ 'ಕನ್ನಡ ಚಲನಚಿತ್ರಗಳ ಭಾಷೆಯಲ್ಲಿ ಸಾಮಾಜಿಕ ಚಹರೆಗಳು', 'ಭಾಷೆಯಲ್ಲಿ ನಿಷೇಧ ಮತ್ತು ನಿರ್ಬಂಧ' ಎಂಬ ಲೇಖನಗಳು ತಾತ್ವಿಕತೆಯನ್ನು ಕಟ್ಟಿಕೊಳ್ಳುವಲ್ಲಿ ಮಾದರಿಯಾಗಿ ನಿಲ್ಲುತ್ತದೆ. ಈ ಎರಡು ಲೇಖನಗಳಲ್ಲದೆ 'ಭಾಷಾ ಶಿಕ್ಷಣದ ಸಾಮಾಜಿಕ ಆಯಾಮಗಳು', 'ಕನ್ನಡ ಭಾಷೆ: ಬದಲಾವಣೆ ಪ್ರಕ್ರಿಯೆಗಳು', 'ದೇಶ್ಯ ಪದಕೋಶ', 'ನಮ್ಮಾಟ, ನಮ್ಮಾತು', 'ಆಟದೊಳಗೊಂದು ನೋಟ', 'ವ್ಯಕ್ತಿ ನಾಮಗಳು: ಸಾಮಾಜಿಕ ನೆಲೆ', 'ಸ್ಥಳನಾಮಗಳು ಆಂಗ್ಲ ಆಡಳಿತ: ಇಂಗ್ಲೀಷ್ ಪ್ರಭಾವಗಳು', 'ತಾಯ್ನುಡಿ: ಬಂಗಾಳ ಭಾಷಾ ಚಳವಳಿ', 'ಡಾ.ಡಿ.ಎನ್.ಶಂಕರಭಟ್ ಮತ್ತು ಕನ್ನಡ' ಎಂಬ ಲೇಖನಗಳು ಮಹಾಪ್ರಬಂಧ ರೂಪಿಸಲು ಪೂರ್ವ ತಯಾರಿಯಾಗಿ ಅಥವಾ ಪೂರ್ವ ಸಾರಲೇಖನದಂತಿವೆ. ಈ ಕಾರಣಕ್ಕೆ ಸಂಕ್ಷಿಪ್ತ ಮಾಹಿತಿಯಾದರೂ ವಾಸ್ತವಿಕ ನೆಲೆಯಲ್ಲಿ ಹಾಗೂ ಭಾಷಿಕ ವಿವಿಧ ದೃಷ್ಟಿಕೋನಗಳ ಸೂಕ್ಷ್ಮವಾದ ಅಧ್ಯಯನವನ್ನು ಈ ಕೃತಿಯು ನಿರೂಪಿಸುತ್ತದೆ. ಆದ್ದರಿಂದ ಇದೊಂದು ಪಿಎಚ್.ಡಿ. ಅಧ್ಯಯನದ ಕೈಪಿಡಿಯಂತಿದೆ. ಇಂತಹ ಕೃತಿಗಳು ಸರಳ ಬರವಣಿಗೆಗೆ ಹಾಗೂ ಯುವ ಸಂಶೋಧಕರಿಗೆ ಸ್ಫೂರ್ತಿಯನ್ನು ನೀಡುವಲ್ಲಿ ಯಶಸ್ವಿಯಾಗಿದೆ.

ಡಾ.ಕೆ.ಕೆಂಪೇಗೌಡ ಅವರ 'ಐತಿಹಾಸಿಕ ಭಾಷಾವಿಜ್ಞಾನ ಮತ್ತು ತೌಲನಿಕ ಭಾಷಾವಿಜ್ಞಾನ' (೨೦೦೭) ಎಂಬ ಈ ಕೃತಿಯು ಭಾಷೆಯ ಉಗಮ, ಇತಿಹಾಸ ಹಾಗೂ ವರ್ಗೀಕರಣ ಮತ್ತು ಭಾಷಾ ಪರಿವಾರಗಳ ಬಗ್ಗೆ ಬೆಳಕು ಚೆಲ್ಲುತ್ತದೆ. ಭಾಷೆ, ಉಪಭಾಷೆ, ವ್ಯಕ್ತಿಭಾಷೆ ಮತ್ತು ಇವುಗಳ ಪರಸ್ಪರ ಸಂಬಂಧವನ್ನು ಸ್ಥೂಲವಾದ ಅರಿವನ್ನು ಈ ಕೃತಿಯು ತಿಳಿಸುತ್ತದೆ. ಅಲ್ಲದೆ ಉಪಭಾಷಾ ವಿಜ್ಞಾನದ ಇತಿಹಾಸ, ಭಾಷಿಕ ಪರಿವರ್ತನೆ, ಧ್ವನಿ ಪರಿವರ್ತನೆ, ಅರ್ಥ ಪರಿವರ್ತನೆ, ಭಾಷಿಕ ಸ್ವೀಕರಣ, ಸಾದೃಶ್ಯ ಸೃಷ್ಟಿ, ಭಾಷಿಕ ಪುನರ‍್ರಚನೆ, ವ್ಯುತ್ಪತ್ತಿ, ಲಿಪಿಯ ಹುಟ್ಟು, ಬೆಳವಣಿಗೆ- ಹೀಗೆ ಹಲವು ವಿಷಯಗಳನ್ನು ಕುರಿತು ವಿವರಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಭಾಷಿಕ ಸ್ವೀಕರಣ ಹಾಗೂ ಸಾದೃಶ್ಯ ಸೃಷ್ಟಿ ಅರ್ಥ ಪರಿವರ್ತನೆ ಎಂಬ ಈ ವಿಷಯಗಳು ಅನ್ಯಭಾಷಾ ಬಳಕೆಯ ಅಧ್ಯಯನಕ್ಕೆ ಪೂರಕ ಅಂಶಗಳನ್ನು ತಿಳಿದುಕೊಳ್ಳಲು ಉಪಯುಕ್ತವಾದ ಕೃತಿಯಾಗಿದೆ.

ಡಾ.ಕೆ.ಕೆಂಪೇಗೌಡ ಅವರ 'ಕನ್ನಡ ಉಪಭಾಷೆಗಳ ಅಧ್ಯಯನ'(೨೦೦೩) ಎಂಬ ಈ ಕೃತಿಯು ಉಪಭಾಷೆಗಳುಂಟಾಗಲು ಕಾರಣಗಳು ಮತ್ತು ಅವುಗಳನ್ನು ನಿರ್ಧರಿಸುವ ಬಗೆ, ಕನ್ನಡ ಉಪಭಾಷೆಗಳ ವರ್ಗೀಕರಣ, ಕರಾವಳಿ, ಒಳನಾಡು, ಗಡಿನಾಡು ಹಾಗೂ ಹೊರನಾಡು ಕನ್ನಡಗಳ ಸ್ವರೂಪದ ಬಗ್ಗೆ ವಿಸ್ತೃತವಾದ ಅಧ್ಯಯನವನ್ನು ಮಾಡಿದ್ದಾರೆ. ಭಾಷೆ, ಉಪಭಾಷೆ, ವ್ಯಕ್ತಿಭಾಷೆ, ಶಿಷ್ಟ ಭಾಷೆ ಇವುಗಳ ಸಂಬಂಧವನ್ನು ಕುರಿತು ಅನೇಕ ವಿವರಗಳನ್ನು ಸಮಗ್ರವಾಗಿ ತಿಳಿಸಬಯಸುತ್ತದೆ. ಈ ಹಿನ್ನೆಲೆಯಲ್ಲಿ ಒಳನುಡಿಗಳ ಅಧ್ಯಯನಕ್ಕೆ ಆಕರವಾಗಿ ನಿಲ್ಲುತ್ತದೆ.

ಡಾ.ಲಿಂಗದೇವರು ಹಳೆಮನೆ(ಗೌ.ಸಂ.) ಅವರ ಕನ್ನಡ ಭಾಷಾಧ್ಯಯನ 'ಅರುಹು-ಕುರುಹು', ೨೦೧೦ ಎಂಬ ಈ ಕೃತಿಯು ಸಂಶೋಧನಾ ಲೇಖನಗಳ ಸಂಪಾದಿತ ಪುಸ್ತಕವಾಗಿದೆ. ಈ ಕೃತಿಯಲ್ಲಿ ೧೧ ಲೇಖನಗಳನ್ನು ವಿವಿಧ ವಿದ್ವಾಂಸರಿಂದ ಸಂಗ್ರಹಿಸಿ ಪ್ರಕಟಿಸಿದ್ದಾರೆ. ಕನ್ನಡದ ಸಾಮಾಜಿಕ, ಉಪಭಾಷೆಗಳು, ಭಾಷಾಸಂಗೋಪನೆ ಮತ್ತು ಭಾಷಾನಿಷ್ಠೆ ಎಂಬ ಲೇಖನಗಳು ಅನ್ಯಭಾಷಾ ಬಳಕೆ ಅಧ್ಯಯನಕ್ಕೆ ಪೂರಕವಾದ ಅಂಶಗಳನ್ನು ತಿಳಿಸಬಯಸುತ್ತದೆ. ಈ ಗ್ರಂಥದಲ್ಲಿ ಭಾಷಾಧ್ಯಯನದ ಪರಂಪರೆ ಮತ್ತು ಈವರೆಗೆ ನಡೆದ ಮತ್ತು ಮುಂದೆ ನಡೆಯಬೇಕಾದ ಮುನ್ನೋಟವನ್ನು ಕೆ.ವಿ.ನಾರಾಯಣ ಅವರು ತಿಳಿಸಿದ್ದಾರೆ. ಕನ್ನಡದಲ್ಲಿ ಭಾಷಾವಿಜ್ಞಾನದ ತಾತ್ವಿಕ ಬರಹಗಳು ಕನ್ನಡ ನಿಘಂಟುಗಳು ಹಾಗೂ ಇನ್ನಿತರೆ ಲೇಖನಗಳು ವಿದ್ವತ್‌ಪೂರ್ಣವಾದ ವಿಷಯಗಳ ಸಂಗ್ರಹಣೆಯನ್ನು ಈ ಕೃತಿಯು ಹೊಂದಿದೆ.

ರವಿ ಬೆಳಗೆರೆ ಅವರ 'ಓ ಮನಸೆ'(೧೦೧ನೇ ೨೦೧೪ ೧-೧೫ ನವೆಂಬರ್) ತಿಂಗಳ ಪತ್ರಿಕೆಯಲ್ಲಿ 'ಸೀರಿಯಲ್ ಕಹಾನಿ' ಎಂಬ ಲೇಖನವನ್ನು ಅಧ್ಯಯನ ಮಾಡಲಾಗಿದೆ. ಬರಹಗಾರರಿಗೆ ಒಂದು ಮಾನ್ಯತೆಯನ್ನು ತಂದುಕೊಟ್ಟ ಉದ್ಯಮವೆಂದರೆ ಟಿವಿ ಸೀರಿಯಲ್ಲು, ಸಿನಿಮಾಗಳಲ್ಲಿ ಡೈಲಾಗು ಬರೆಯುವವರಿಗೆ ಮರ್ಯಾದೆ ಮತ್ತು ಸಂಭಾವನೆ ಎರಡೂ ಕಡಿಮೆಯಾಗಿದ್ದ ಕಾಲದಲ್ಲಿ ಈ ಶೋಷಿತ ವರ್ಗಕ್ಕೆ ಆಶಾಕಿರಣವಾಗಿ ಕಾಣಿಸಿದ್ದು ಸೀರಿಯಲ್ ಲೋಕ. ಈಗ

ದಿನಕ್ಕೆ ೫೪ ಸೀರಿಯಲ್ಲುಗಳು ಪ್ರಸಾರವಾಗುತ್ತಿವೆ. ನೂರಾರು ಬರಹಗಾರರು ಇವುಗಳನ್ನೇ ನೆಚ್ಚಿಕೊಂಡು ಬದುಕು ನಡೆಸುತ್ತಿದ್ದಾರೆ. ಆದರೆ ಸೃಜನಶೀಲತೆ ಮತ್ತು ಆರೋಗ್ಯದ ಪ್ರಶ್ನೆ ಬಂದಾಗ ಸೀರಿಯಲ್ಲುಗಳು ಒಬ್ಬ ಬರಹಗಾರನನ್ನು ಸಂಕಷ್ಟಕ್ಕೀಡು ಮಾಡುತ್ತಿವೆ ಅನ್ನುವುದೂ ಕೂಡ ಅಷ್ಟೇ ಸತ್ಯ. ಮಾತನ್ನೆ ಹರಿಗೋಲಾಗಿಸಿಕೊಂಡು ಸಂಸಾರ ಶರಧಿಯನ್ನು ದಾಟುತ್ತಿರುವ ರೈಟರುಗಳ ಬಗ್ಗೆ ಇಲ್ಲೊಂದು ಅನುಕಂಪದ ಬರಹವಿದೆ. ಬರಹಗಾರರ ಓದು ನಿಂತಿರುವುದು ಧಾರಾವಾಹಿಗಳ ಟಿ.ಆರ್.ಪಿ. ಮೇಲೆ. ಆದ್ದರಿಂದ ಬರಹಗಾರನಿಗೆ ಹೆಚ್ಚು ಶ್ರಮದಾಯಕವಾದ ಕೆಲಸವಿರುತ್ತದೆ. ಧಾರಾವಾಹಿಗಳು ಹೆಚ್ಚು ಹೆಚ್ಚು ಟಿ.ಆರ್.ಪಿ. ತಂದುಕೊಟ್ಟಷ್ಟು ಬರಹಗಾರನಿಗೆ ಬೆಲೆ ಇದೆ. ಇಲ್ಲದೆ ಇದ್ದರೆ, ಅಷ್ಟೊಂದು ಬೆಲೆ ಇರಲಾರದು ಹಾಗೂ ಗೌರವ ಸಂಭಾವನೆಯೂ ಕೂಡ ಕಡಿಮೆ. ಧಾರಾವಾಹಿಗಳಲ್ಲಿ ಹೆಚ್ಚಾಗಿ ನಗರದಲ್ಲಿರುವ ಮೇಲ್ವರ್ಗ, ಮಧ್ಯಮವರ್ಗದ ಗೃಹಿಣಿಯರನ್ನು ಗುರಿಯಾಗಿಸಿಕೊಂಡು ಕಥೆಯನ್ನು ಬರೆಯುತ್ತಾರೆ. ಆದ್ದರಿಂದ ಇಂದು ಟಿವಿ ಸೀರಿಯಲ್‌ಗಳಿಗೆ ಹೆಚ್ಚು ಮಹತ್ವವಿದೆ ಎಂಬ ಅಭಿಪ್ರಾಯಗಳನ್ನು ವಿವಿಧ ಬರಹಗಾರರನ್ನು ಸಂದರ್ಶನದ ಮೂಲಕ ತಿಳಿದುಕೊಂಡಿದ್ದಾರೆ. ಇಲ್ಲಿ ಬಳಕೆಯಾಗುವ ಸಾಮಾನ್ಯ ಡೈಲಾಗುಗಳನ್ನು ಬರಹಗಾರರು ಹೇಗೆ ಬಳಸಿಕೊಳ್ಳುತ್ತಾರೆ ಎಂಬ ಮಾಹಿತಿಯನ್ನು ನೀಡಲಾಗಿದೆ. ಸೀರಿಯಲ್ ಬೈಗಳುಗಳು ಹೇಗೆ ಪುನಾರಾವರ್ತನೆಯಾಗುತ್ತವೆ ಎಂಬುದರ ಸೂಕ್ಷ್ಮತೆಯನ್ನು ಈ ಲೇಖನವು ತಿಳಿಸುತ್ತದೆ.

ಡಾ.ಕೆ.ಕೆಂಪೇಗೌಡ ಅವರ 'ಸಾಮಾನ್ಯ ಭಾಷಾವಿಜ್ಞಾನ' (೧೯೯೬). ಭಾಷೆ ಮಾನವನ ಜೀವನದಲ್ಲಿ ಒಂದು ಅತ್ಯೋತ್ತಮ ಸಾಧನ. ಭಾಷೆಯ ಮೂಲಕವೇ ಸಮಾಜದ ಎಲ್ಲಾ ವಿಚಾರಗಳನ್ನು ಹೆಚ್ಚು ವೈಜ್ಞಾನಿಕವಾಗಿ ಅರಿಯಲು ಸಾಧ್ಯ. ಈ ಕಾರಣದಿಂದ ವಿದ್ವಾಂಸರು ಭಾಷೆಯನ್ನು ಹೆಚ್ಚು ವೈಜ್ಞಾನಿಕವಾಗಿ ವಿವೇಚಿಸತೊಡಗಿದರು. ಇಂದು ಶಾಲಾ ಕಾಲೇಜುಗಳಲ್ಲಿ ಭಾಷಾವಿಜ್ಞಾನವನ್ನು ಹೆಚ್ಚು ವೈಜ್ಞಾನಿಕವಾಗಿ ಕಲ್ಪಿಸಲಾಗುತ್ತದೆ. ಸಾಹಿತ್ಯ, ಜಾನಪದ, ಮನಶ್ಶಾಸ್ತ್ರ, ಸಮಾಜಶಾಸ್ತ್ರ, ಮಾನವಶಾಸ್ತ್ರ ಮುಂತಾದವುಗಳ ಅಧ್ಯಯನಕ್ಕೆ ಭಾಷಾವಿಜ್ಞಾನದ ನೆರವು ಅತ್ಯಗತ್ಯವಾಗುತ್ತದೆ. ಆಡುಭಾಷೆಗಳ ಅಧ್ಯಯನ ಹೆಚ್ಚು ವಿದ್ವಾಂಸರನ್ನು ಆಕರ್ಷಿಸುತ್ತಿದೆ. ಇದಕ್ಕೆ ಭಾಷೆ ಮತ್ತು ಭಾಷಾವಿಜ್ಞಾನಗಳ ಸಾಮಾನ್ಯ ತಿಳುವಳಿಕೆ ಅವಶ್ಯಕವಾಗುತ್ತಿದೆ. ಈ ದೃಷ್ಟಿಯಿಂದ ಭಾಷೆ ಎಂದರೇನು? ಭಾಷಾವಿಜ್ಞಾನ ಎಂದರೇನು? ಎಂಬ ವಿಚಾರವನ್ನು ಹೆಚ್ಚು ಸ್ಪಷ್ಟವಾಗಿ ತಿಳಿಸುವ ಒಂದು ಕನ್ನಡ ಗ್ರಂಥದ ಅವಶ್ಯಕತೆ ಇದೆ ಎಂಬ ಕಾರಣದಿಂದಲೇ ಕನ್ನಡದಲ್ಲಿ ಅದರಲ್ಲಿಯೂ ಸರಳವಾದ ಶೈಲಿಯಲ್ಲಿ ಭಾಷಾವಿಜ್ಞಾನಕ್ಕೆ ಸಂಬಂಧಿಸಿದ ಗ್ರಂಥವನ್ನು ಹೊರ ತಂದಿದ್ದಾರೆ. ಈ ಕೃತಿಯು ಭಾಷೆ ಎಂದರೇನು? ಭಾಷೆಯ ಸ್ವರೂಪ ಮತ್ತು ಪ್ರಭಾವ ಭಾಷೆಯಿಂದಾಗುವ ಪ್ರಯೋಜನಗಳು, ಭಾಷೆಯ ವಿವಿಧ ರೂಪಗಳು, ಭಾಷೆ ಮತ್ತು ಬರಹ, ಭಾಷೆ, ಸಮಾಜ, ಸಂಸ್ಕೃತಿ–ಹೀಗೆ ವಿದ್ವತ್‌ಪೂರ್ಣವಾದ ಹಲವಾರು ವಿಷಯಗಳನ್ನು

ಅಧ್ಯಾಯಗಳಾಗಿ ರೂಪಿಸಿಕೊಂಡು ಸಮಗ್ರವಾಗಿ ನಿರೂಪಿಸಿದ್ದಾರೆ. ಉಪಭಾಷೆಗಳು ಉಂಟಾಗಲು ಕಾರಣಗಳು, ಉಪಭಾಷೆಗಳನ್ನು ನಿರ್ಧರಿಸುವ ಬಗೆ, ಉಪಭಾಷೆಗಳ ಸ್ವರೂಪ, ಉಪಭಾಷಾಧ್ಯಯನ ದಿಂದಾಗುವ ಪ್ರಯೋಜನಗಳು ಎಂಬ ವಿಷಯಗಳು ನನ್ನ ಒಳನುಡಿಗಳ ಅಧ್ಯಯನಕ್ಕೆ ಪೂರಕವಾದ ಮತ್ತು ಮಾದರಿಯಾಗಿದೆ.

ಡಾ.ಕೆ.ವಿ.ನಾರಾಯಣ ಅವರ 'ತೊಂಡು ಮೇವು'(೨೦೧೦) ಕಂತೆ ಐದು ಕೃತಿಯು ೭೩ ಲೇಖನಗಳನ್ನು ಹೊಂದಿದೆ. ಈ ಎಲ್ಲಾ ಲೇಖನಗಳು ವಿದ್ವತ್‌ಪೂರ್ಣ ವಿಶ್ಲೇಷಣೆಯಿಂದ ಕೂಡಿವೆ. ನನ್ನ ಅಧ್ಯಯನಕ್ಕೆ ಪೂರಕವಾದ ಧಾರಾವಾಹಿಗಳಲ್ಲಿ ಸಾಮಾಜಿಕ ವಿನ್ಯಾಸವನ್ನು ಗುರುತಿಸಿಕೊಳ್ಳಲು ಹಾಗೂ ಅನ್ಯಭಾಷೆ ಬಳಕೆ ಬಗ್ಗೆ ಮತ್ತು ನುಡಿಬೆರಕೆ-ನುಡಿಜಿಗಿತ, ಕಥನದಲ್ಲಿ ಭಾಷೆ, ಭಾಷೆ ಮತ್ತು ದೈಹಿಕ ಚಹರೆಗಳು ಎಂಬ ಲೇಖನಗಳು ಅಧ್ಯಯನಕ್ಕೆ ಸಹಾಯಕವಾಗಿವೆ.

ಕಂತೆ ಆರರಲ್ಲಿ ೪೫ ಲೇಖನಗಳಿವೆ. ಇವುಗಳಲ್ಲಿ ಎಫ್.ಎಂ.ವಾಹಿನಿಗಳ ಕನ್ನಡ, ಸಮೂಹ ಮಾಧ್ಯಮಗಳಲ್ಲಿ ಕನ್ನಡ ಎಂಬ ಲೇಖನಗಳನ್ನು ಸಮೀಕ್ಷೆ ಮಾಡಿದ್ದೇನೆ. ಕಾರಣ ಮಾಧ್ಯಮಗಳಲ್ಲಿ ಬಳಕೆಯಾಗುತ್ತಿರುವ ಕನ್ನಡದ ಬಗ್ಗೆ ಲೇಖನಗಳಲ್ಲಿ ಚರ್ಚಿಸಿದ್ದಾರೆ. ಈ ಚರ್ಚೆಯು ಪ್ರಮಾಣ ಕನ್ನಡ ಮತ್ತು ಭಾಷೆಯ ಇತರ ಪ್ರಭೇಧಗಳು ಮತ್ತು ಉಪಭಾಷೆಗಳ ತೌಲನಿಕ ಚರ್ಚೆಯ ಮುಖೇನ ಸಮೂಹ ಮಾಧ್ಯಮಗಳು ಬಳಸುವ ಭಾಷೆಯನ್ನು ಯಾವ ಸ್ವರೂಪದ್ದು ಎಂಬುದರ ಬಗ್ಗೆ ಈ ಲೇಖನಗಳು ಉಪಯುಕ್ತ ಮಾಹಿತಿಯನ್ನು ನೀಡುತ್ತವೆ.

ಕಂತೆ ಏಳು: ಈ ಕೃತಿಯು ೩೭ ಲೇಖನಗಳನ್ನು ಹೊಂದಿದೆ. ಇಂದಿನ 'ಕನ್ನಡ: ರಚನೆ ಮತ್ತು ಬಳಕೆ' ಕುರಿತು ಬರೆದಿರುವ ಡಾ.ಎಸ್.ಎನ್.ಶ್ರೀಧರ್ ಅವರ ಪ್ರಬಂಧವನ್ನು ಕುರಿತು ವಿಮರ್ಶೆಯನ್ನು ಮಾಡಿದ್ದಾರೆ. ಡಾ.ರಂಗನಾಥ ಕಂಟನಕುಂಟೆಯವರ 'ಜನಭಾಷೆ ಮತ್ತು ಪ್ರಭುತ್ವ ಭಾಷೆಗಳ ಸಂಘರ್ಷ' ಎನ್ನುವ ಈ ಪಿಎಚ್.ಡಿ.ಪ್ರಬಂಧಕ್ಕೆ ಪ್ರಸ್ತುತ ಅಥವಾ ಸಾಹಿತ್ಯ ಸಮೀಕ್ಷೆಯನ್ನು ಮಾಡಿದ್ದಾರೆ. ಸಮೀಕ್ಷೆ ಮಾಡಿದ ಸಂಕ್ಷಿಪ್ತ ವಿವರವನ್ನು ಈ ಲೇಖನವು ತಿಳಿಯಬಯಸುತ್ತದೆ.

ಕಂತೆ ಎಂಟು: ಕೆ.ವಿ.ಎನ್ ಅವರು ಪ್ರಜಾವಣಿ ಪತ್ರಿಕೆಯಲ್ಲಿ ಪದರಚನೆಗಳನ್ನು ಕುರಿತು ವಿವರಣೆ ನೀಡುತ್ತಿದ್ದರು. ಕರ್ನಾಟಕದ ಎಲ್ಲಾ ಜಿಲ್ಲೆಗಳಿಂದಲೂ ಇವರಿಗೆ ಪತ್ರ ಬರೆಯುವ ಮೂಲಕ ವಾರಕ್ಕೆ ಒಂದು ಬಾರಿ ಐಚ್ಛಿಕ ಪತ್ರಿಕೆಯಲ್ಲಿ ಚರ್ಚಿಸುವ ಮೂಲಕ ಪತ್ರ ಬರೆದವರಿಗೆ ಉತ್ತರಿಸುತ್ತಿದ್ದರು. ಒಳನುಡಿಗಳನ್ನು ಬಳಸುವ ಬಗೆಯನ್ನು ಕುರಿತು ವಿವರಿಸಿದ್ದಾರೆ. ಅಲ್ಲದೆ ಧಾರಾವಾಹಿಗಳಲ್ಲಿ ವಿವಿಧ ಪ್ರಾದೇಶಿಕ ಒಳನುಡಿಗಳನ್ನು ಬಳಸಿಕೊಳ್ಳುವಲ್ಲಿ ಹೇಗೆ ಸಮಸ್ಯೆಯನ್ನು ಮಾಡಿಕೊಳ್ಳುತ್ತಾರೆ ಎಂಬುದನ್ನು ಚರ್ಚಿಸಿದ್ದಾರೆ. ಇಂತಹ ಅನೇಕ ವಿಷಯಗಳಿಗೆ ವಿಸ್ತೃತವಾದ ಹಾಗೂ ತಾರ್ಕಿಕವಾದವನ್ನು ಚರ್ಚೆಯ ಮುಖೇನ ವಿಷಯವನ್ನು ಸಂಗ್ರಹಿಸಿದ್ದಾರೆ.

ಡಾ.ರಂಗನಾಥ ಕಂಟನಕುಂಟೆ 'ಜನ ಭಾಷೆ ಮತ್ತು ಪ್ರಭುತ್ವ ಭಾಷೆಗಳ ಸಂಘರ್ಷ' (೨೦೦೯) ಎಂಬ ಪಿಎಚ್.ಡಿ. ಮಹಾಪ್ರಬಂದವು ಪುಸ್ತಕರೂಪದಲ್ಲಿ ಪ್ರಕಟಣೆಯಾಗಿದೆ. ಈ ಪ್ರಬಂಧದಲ್ಲಿ ಏಳು ಅಧ್ಯಾಯಗಳಿವೆ.

ಅಧ್ಯಾಯ ೧ರಲ್ಲಿ ಕನ್ನಡ ಭಾಷಿಕ ವಾಗ್ವಾದಗಳ ಮುಖಾಮುಖಿ.

ಅಧ್ಯಾಯ ೨ರಲ್ಲಿ ಆಧುನಿಕ ಪ್ರಭುತ್ವ: ಭಾಷೆಯ ರಾಜಕಾರಣ, ಹುಟ್ಟು.

ಅಧ್ಯಾಯ ೩ರಲ್ಲಿ ಜನಭಾಷೆ ಪ್ರಭುತ್ವ ಭಾಷೆಗಳ ಸಂಘರ್ಷದ ನೆಲೆಗಳು. ಇದರಲ್ಲಿ ಕನ್ನಡ–ಇಂಗ್ಲೀಷ್–ಹಿಂದಿ–ಸಂಸ್ಕೃತ ಭಾಷೆಗಳ ಮುಖಾಮುಖಿಯನ್ನು ಮತ್ತು ಕನ್ನಡದ ಯಾಜಮಾನ್ಯ: ಕೊರವ–ತುಳುವರ ಆಸ್ಮಿತೆಯ ಪ್ರಶ್ನೆಗಳು ಪ್ರಾಮಾಣೀಕರಣ ಮತ್ತು ಯಜಮಾನಿಕೆಯ ಬಗ್ಗೆ ಚರ್ಚಿಸಿದ್ದಾರೆ.

ಅಧ್ಯಾಯ ೪ರಲ್ಲಿ ವಸಾಹತುಶಾಹಿ ಆಕ್ರಮ ಇಂಗ್ಲೀಷ್ ಹೇರಿಕೆಗೆ ಅಡಿಗಲ್ಲು.

ಅಧ್ಯಾಯ ೫ರಲ್ಲಿ ನವವಸಾಹತುಶಾಹಿ; ಅದೃಶ್ಯ ಶತ್ರು–ಆಶಯ, ವಾಸ್ತವಗಳ ಮುಖಾಮುಖಿ.

ಅಧ್ಯಾಯ ೬ರಲ್ಲಿ ಜಾಗತೀಕರಣ; ಆಶಯಗಳ ಆದೃಶ್ಯ–ಸಾಮ್ರಾಜ್ಯಶಾಹಿಯ ಮಂದಹಾಸ, ಕೊನೆಯದಾಗಿ ಸಮಾರೋಪ ಎಂಬ ಈ ಅಧ್ಯಾಯಗಳನ್ನು ಹೊಂದಿದೆ.

ಈ ಕೃತಿಯು ಸಾಮಾಜಿಕ ಭಾಷಾಶಾಸ್ತ್ರ, ಮನೋವಿಶ್ಲೇಷಣಾತ್ಮಕ ಭಾಷಾಶಾಸ್ತ್ರ, ಭಾಷಾಶಾಸ್ತ್ರದ ವ್ಯಾವಹಾರಿಕ ಪರಿಪ್ರೇಕ್ಷ್ಯ ಇವುಗಳನ್ನು ಪರಿಶೀಲಿಸಿ ಭಾಷೆಯ ಸಂಬಂಧವಾಗಿ ಏರ್ಪಡುವ ಪಾಶ್ಚಾತ್ಯ ಅಹಂಕಾರ ಹಾಗೂ ಪೌರ್ವಾತ್ಯರ ಕೀಳರಿಮೆಯ ಪ್ರಶ್ನೆಗಳನ್ನು ಇಲ್ಲಿ ವಿವೇಚಿಸಿದ್ದಾರೆ. ಭಾಷೆಗೂ ಮಾರುಕಟ್ಟೆಗೂ ಇರುವ ಸಂಬಂಧಗಳು, ಬಹುತ್ವದ ಭಾಷಾಕಲ್ಪನೆಗೂ ಏಕಾಕೃತಿಯ ಒತ್ತಡಕ್ಕೂ ಮಧ್ಯೆ ಹುಟ್ಟಿರುವ ಘರ್ಷಣೆಗಳನ್ನು ಈ ಕೃತಿ ವಿವೇಚಿಸುತ್ತದೆ. ಹೇರಿಕೆಯ ಭಾಷೆಯಾಗಿ ಇಂಗ್ಲೀಷ್, ಬೇಡಿಕೆಯ ಭಾಷೆಯಾಗಿ ಇಂಗ್ಲೀಷ್ ಸರ್ಕಾರಿ ಪ್ರಣೀತವಾದ ಇಂಗ್ಲೀಷ್ ಇಂತಹ ಮುಖ್ಯಪ್ರಶ್ನೆಗಳಲ್ಲಿ ಭಾಷೆ ನಿರ್ವಹಿಸುತ್ತಿರುವ ಅಸಮಾನತೆಯನ್ನು ಈ ಕೃತಿ ವಿಶ್ಲೇಷಿಸುತ್ತದೆ. ಭಾಷೆ, ಸಂಸ್ಕೃತಿ, ರಾಜಕಾರಣ, ಆಕ್ರಮಣಶೀಲತೆ ಮುಂತಾದ ಆಯಾಮಗಳನ್ನು ಸಂಸ್ಕೃತಿಯ ಕೇಂದ್ರ ಪ್ರಶ್ನೆಯಾಗಿಸಿಕೊಂಡಿರುವುದೇ ಇದರ ಮುಖ್ಯ ನೆಲೆ. ಇಂತಹ ಕೃತಿಗಳು ಸಮುದಾಯದ ಸಾಂಸ್ಕೃತಿಕ ಅನನ್ಯತೆಯನ್ನು ಚರ್ಚಿಸುವ ದೃಷ್ಟಿಯಿಂದ ಮಹತ್ವದ ಚರ್ಚೆಗಳನ್ನು ಎಬ್ಬಿಸಬಲ್ಲವು.

ಡಾ.ಎಂ.ಉಷಾ ಅವರ 'ಟಿವಿ ಮತ್ತು ಮಹಿಳೆ' ಎಂಬ ಲೇಖನವು 'ಸಾಹಿತ್ಯ ಮತ್ತು ಸಮಾಜ' ಕೃತಿಯಲ್ಲಿ ಡಾ.ಬಸವರಾಜ ಸಬರದ(ಸಂ) ವಿವರಿಸಿದ್ದಾರೆ. ಇಲ್ಲಿನ ಲೇಖನದಲ್ಲಿ ಪ್ರಸ್ತಾಪಿಸಲಾಗಿರುವ ಅಂಶಗಳು ಅಧ್ಯಯನಕ್ಕೆ ಪೂರಕವಾಗಿದೆ. ಟಿ.ವಿ. ಧಾರಾವಾಹಿಗಳು,

ಮಹಿಳೆಯರು ಒಟ್ಟು ನೋಡುವ ಸಮಯ, ಅದರ ಹಿನ್ನೆಲೆ, ಮಹಿಳೆಯರ ಅಭಿಪ್ರಾಯ ಇವನ್ನೆಲ್ಲ ಕ್ಷೇತ್ರಕಾರ್ಯದ ಮಾಹಿತಿಯಿಂದ ವಿವರಿಸಿದ್ದಾರೆ. ಹಾಗಾಗಿ ಈ ಲೇಖನ ಮಹತ್ವದ ಅಂಶಗಳನ್ನು ಹೇಳುತ್ತದೆ.

ಇದೇ ಕೃತಿಯ ಇನ್ನೊಂದು ಲೇಖನದಲ್ಲಿ ಡಾ.ಅನುಪಮಾ ನಿರಂಜನ ಅವರ ಸಮೂಹ ಮಾಧ್ಯಮಗಳು ಮತ್ತು ಮಹಿಳೆ, ಈ ಲೇಖನವು ಕೂಡ ಸಂಶೋಧನೆಗೆ ಮಾಹಿತಿಯನ್ನು ಒದಗಿಸುತ್ತದೆ.

ಯಶೋಧರ ಕೋಟ್ಯಾನ್ ಅವರ 'ಧಾರಾವಾಹಿ' ಇದು ಮುಗಿಯದ ಕಥೆ ಎಂಬ ಶೀರ್ಷಿಕೆಯಲ್ಲಿ ವಿಜಯ ಕರ್ನಾಟಕ ಪತ್ರಿಕೆಯಲ್ಲಿ ದಿನಾಂಕ ೫, ಆಗಸ್ಟ್ ೨೦೧೨ ಭಾನುವಾರ ಸಾಪ್ತಾಹಿಕ ಲವಲವಿಕೆ, ಸಂಪುಟ ૩, ಸಂಚಿಕೆ ೨೭೪ರಲ್ಲಿ ಧಾರಾವಾಹಿಗಳ ಬಗ್ಗೆ ವಿಷಯ ಸಂಗ್ರಹಿಸಿದ್ದಾರೆ. ಒಂದು ಜಮಾನಾ ಇತ್ತು. ಹದಿಮೂರು ಕಂತುಗಳಲ್ಲೇ ಮುಗಿಯುತ್ತಿದ್ದ ಧಾರಾವಾಹಿಗಳು ಮನೋಜ್ಞವಾಗಿರುತ್ತಿದ್ದವು. ಆದರೆ ಆ ಮೇಲೆ ಸಂವೇದನಾಶೀಲತೆ, ಕಥಾಹಂದರ, ಇನ್ನಿತರ ಸೂಕ್ಷ್ಮತೆಗಳೆಲ್ಲವೂ ಮಂಗಮಾಯವಾದವು. ಕಲೆ ಮತ್ತು ವ್ಯಾಪಾರಿ ಗಿಮಿಕ್ಕುಗಳ ನಡುವಿನ ತಿಕ್ಕಾಟದಲ್ಲಿ ಕೊನೆಗೆ ಆಗುವುದೇ ಹೀಗೆ. ಆಗ ಶುರುವಾಗಿದ್ದೇ ಮೆಗಾ ಸೀರಿಯಲ್ ಟ್ರೆಂಡ್! ಹೆಸರಿಗೆ ತಕ್ಕಂತೆ ಉದ್ದವಾಗಿರುವ ಇದಕ್ಕೆ ಎಂಡಿಂಗ್ ಟ್ರಬಲ್!! ಹೀಗಾಗಿಯೇ ಅದಕ್ಕೆ ಕಾಲದ ಪರಿವೆ ಇಲ್ಲ. ಆದರೆ ಇದು ಹೊಟ್ಟೆಪಾಡಿನ ಪ್ರಶ್ನೆಯೂ ಇರಬಹುದು. ಅನಿವಾರ್ಯತೆಯ ಹೆಸರಲ್ಲಿ ಬರುವ ಅವಸ್ಥೆಗಳೇ ಇಂಥವು. ಸಾಮಾನ್ಯವಾಗಿ ಧಾರಾವಾಹಿಗಳು ಎಲ್ಲಿ ಚಿತ್ರೀಕರಣ ವಾಗುತ್ತಿವೆ ಎಂಬ ಕುತೂಹಲ ಇರುವುದು ಸಹಜ. ಬೆಂಗಳೂರಿನ ಸುತ್ತಮುತ್ತ ೪೫ಕ್ಕೂ ಹೆಚ್ಚು ಶೂಟಿಂಗ್ ಮನೆಗಳಿವೆ. ಅವುಗಳ ಬಗ್ಗೆ ಸಂಕ್ಷಿಪ್ತ ಮಾಹಿತಿಯನ್ನು ನೀಡಿದ್ದಾರೆ. ಅಲ್ಲದೆ ಧಾರಾವಾಹಿಗಳು ೧೦೦೦ಕ್ಕೂ ಹೆಚ್ಚು ಕಂತುಗಳನ್ನು ದಾಟುತ್ತಿರುವ ಅಂಕಿ ಅಂಶ ನೀಡಿದ್ದಾರೆ.

ಶರಣು ಹುಲ್ಲೂರು ಅವರ 'ಸಾವಿರದ ಕಥನ' ಎಂಬ ಶೀರ್ಷಿಕೆ ಅಡಿಯಲ್ಲಿ ಧಾರಾವಾಹಿಗಳು ಪ್ರಸಾರವಾದ ಮಾಹಿತಿಯನ್ನು ತಿಳಿಯಪಡಿಸಿದ್ದಾರೆ. ಹಾಗೂ ವಿವಿಧ ನಟ-ನಟಿಯರ ಅಭಿಪ್ರಾಯಗಳನ್ನು ಸಂಗ್ರಹಿಸಿದ್ದಾರೆ. ಧಾರಾವಾಹಿಗಳ ಬೆಳವಣಿಗೆಯನ್ನು ಸಂಕ್ಷಿಪ್ತವಾಗಿ ವಿವರಿಸಿದ್ದಾರೆ ಮತ್ತು ಕೆಲವು ನಿರ್ದೇಶಕರ ಅಭಿಪ್ರಾಯಗಳನ್ನು ಸಂಗ್ರಹಿಸಿದ್ದಾರೆ. ಕೆಲವು ಧಾರಾವಾಹಿ ನಟರು ನಟಿಯರನ್ನು ಮದುವೆಯಾಗಿರುವ ಜೋಡಿಗಳ ಮಾಹಿತಿಯನ್ನು ವಿವರಿಸಿದ್ದಾರೆ. ಟಿ.ಆರ್.ಪಿ.ಯ ಬಗ್ಗೆ ಚರ್ಚಿಸಿದ್ದಾರೆ. ಮಂದಾಕಿನಿ 'ಧಾರಾವಾಹಿ ಸಿಹಿ-ಕಹಿ' ಪ್ರಜಾವಾಣಿ ದಿನಪತ್ರಿಕೆಯ ಐಚ್ಛಿಕ ಪುಟವಾದ ಭೂಮಿಕಾ ಪತ್ರಿಕೆಯಲ್ಲಿ ದಿನಾಂಕ ೪-೮-೨೦೧೨ರಂದು ಪ್ರಕಟಿಸಿದ್ದಾರೆ. ಈ ಲೇಖನದಲ್ಲಿ ಮಹಿಳಾ ವೀಕ್ಷಕರನ್ನೇ ಗಮನದಲ್ಲಿಟ್ಟುಕೊಂಡು ಇಂದಿನ ನಮ್ಮ ಬಹುತೇಕ ಟಿ.ವಿ.ಧಾರಾವಾಹಿಗಳು ಪ್ರಸಾರವಾಗುತ್ತಿವೆ. ಈ ಧಾರಾವಾಹಿಗಳಲ್ಲಿ

ಮಹಿಳೆಯರಿಗೆ ಆದ್ಯತೆ. ಆದರೆ ಅವು ಚಿತ್ರಿಸುತ್ತಿರುವ ಪಾತ್ರಗಳಾದರೂ ಎಂಥವು? ಮದುವೆ, ಕುಟುಂಬ, ತಾಯ್ತನದಂತಹ ಸಹಜ ಕ್ರಿಯೆಗಳನ್ನು ಹೊರತುಪಡಿಸಿ, ಹೆಣ್ಣಿನ ಬದುಕಿನ ವಿಭಿನ್ನ ಮಗ್ಗುಲುಗಳ ಬಗ್ಗೆ ಒಂದಷ್ಟು ಸಂಕ್ಷಿಪ್ತ ಮಾಹಿತಿಯನ್ನು ಸಂಗ್ರಹಿಸಿದ್ದಾರೆ. ಈ ಲೇಖನದಲ್ಲಿ ನಾಲ್ಕು ಜನ ಧಾರಾವಾಹಿ ನಿರ್ದೇಶಕರ ಅಭಿಪ್ರಾಯಗಳನ್ನು ಸಂಗ್ರಹಿಸಿದ್ದಾರೆ. ಟಿ.ಆರ್.ಪಿ. ಅಷ್ಟೇ ಮುಖ್ಯವಲ್ಲ ಸಾಮಾಜಿಕ ಸ್ವಸ್ಥ ಬದುಕಿಗೆ ಪೂರಕವಾಗಿ ನಿರ್ದೇಶನ ಮಾಡುತ್ತಿದ್ದೇವೆ ಎಂಬ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ.

ಶಶಿ ಅವರ 'ನಿರ್ದೇಶಕನೆ ಹೀರೋ' ಎಂಬ ಈ ಲೇಖನವು ವಿಜಯ next ಎಂಬ ಪಾಕ್ಷಿಕ ಪತ್ರಿಕೆಯಲ್ಲಿ ಜನವರಿ ೩, ೨೦೧೩ರಂದು ಪ್ರಕಟವಾಗಿದೆ. ಧಾರಾವಾಹಿಯಲ್ಲಿ ನಿರ್ದೇಶಕರಾಗಿ ಮತ್ತು ಹಾಸ್ಯನಟರಾಗಿ ಕಾರ್ಯ ನಿರ್ವಹಿಸುತ್ತಿರುವ 'ಪಂಚರಂಗಿ ಪೊಂ ಪೊಂ ಎಂಬ ಹಾಸ್ಯ ಧಾರಾವಾಹಿಯ ರಾಘವೇಂದ್ರ ರೈ ಇವರ ಸಂದರ್ಶನವನ್ನು ಈ ಲೇಖನದಿಂದ ತಿಳಿಯಬಹುದು. ಕಾರಣ ಈ ಧಾರಾವಾಹಿಯು ನಾಲ್ಕು ಪ್ರಾದೇಶಿಕ ಪ್ರಭೇದಗಳನ್ನು ಹಾಸ್ಯಕ್ಕಾಗಿಯೇ ಬಳಸಿಕೊಂಡಿರುವ ಮಾಹಿತಿಯನ್ನು ನಿರ್ದೇಶಕರು ವ್ಯಕ್ತಪಡಿಸಿದ್ದಾರೆ.

'ಸೆಂಟಿಮೆಂಟ್ ಬದಲಾಗದು' ಎಂಬ ಈ ಲೇಖನವು ವಿಜಯ next ಆಗಸ್ಟ್ ೧೬. ೨೦೧೨ರಂದು ಪ್ರಕಟವಾಗಿದೆ. ಈ ಲೇಖನದಲ್ಲಿ ಧಾರಾವಾಹಿ ನಿರ್ದೇಶಕರಾದ ರವಿ ಆರ್.ಗರಣಿಯವರ ಸಂದರ್ಶನವನ್ನು ಪ್ರಕಟಿಸಿದೆ. ರವಿ ಆರ್.ಗರಣಿಯವರು 'ಕೃಷ್ಣ ರುಕ್ಮಿಣಿ' ಧಾರಾವಾಹಿಯ ಹಿಂದಿನ ಕಥೆಯನ್ನು ಸಂಪೂರ್ಣವಾಗಿ ಕನ್ನಡದ ಪ್ರಾದೇಶಿಕತೆಗೆ ಒಗ್ಗಿಸಿ ಕೊಂಡಿದ್ದೇವೆ. ಇಲ್ಲಿ ಮಂಡ್ಯ ಭಾಷೆಯ ಸೊಗಡು ಹಾಗೂ ಅಲ್ಲಿನ ಮಣ್ಣಿನ ಗುಣದ ಬಗ್ಗೆ ಅಭಿಮಾನವಿಟ್ಟು ನಿರ್ದೇಶಿಸುತ್ತಿರುವುದರ ಬಗ್ಗೆ ತಿಳಿಸಿದ್ದಾರೆ. ಪರಭಾಷೆಯ ಧಾರಾವಾಹಿಗಳನ್ನು ಕನ್ನಡ ಭಾಷೆಯ ಸ್ವರೂಪಕ್ಕೆ ಮತ್ತು ಕನ್ನಡಿಗರ ಸಾಂಸ್ಕೃತಿಕತೆಗೆ ಹೊಂದಿಕೊಳ್ಳುವಂತೆ ಡಬ್ಬಿಂಗ್ ಮಾಡುತ್ತೇವೆ ಎಂಬ ಅಭಿಪ್ರಾಯವನ್ನು ಸಂದರ್ಶನ ಮಾಡಿರುವ ತುಣುಕುಗಳನ್ನು ಸಂಗ್ರಹಿಸಿದ್ದಾರೆ.

ಶರಣು ಹುಲ್ಲೂರು ಅವರ 'ಹಿರಿದಾಗುತ್ತಿದೆ ಕಿರುತೆರೆ' ಎಂಬ ಲೇಖನವು ವಿಜಯ next ಪಾಕ್ಷಿಕ ಪತ್ರಿಕೆಯಲ್ಲಿ ಏಪ್ರಿಲ್ ೪, ೨೦೧೩ರಂದು ಪುಟ ೧೫ರಲ್ಲಿ ಪ್ರಕಟವಾಗಿದೆ. ಈ ಲೇಖನದಲ್ಲಿ ಧಾರವಾಹಿಗಳ ವಾರ್ಷಿಕ ವಹಿವಾಟಿನ ಅಂದಾಜಿನ ಕುರಿತು ವಿವರಿಸಿದ್ದಾರೆ. ಭಕ್ತಿ ಪ್ರಧಾನ ಧಾರಾವಾಹಿಗಳು ಕಿರುತೆರೆ ಕಾಣುತ್ತಿರುವ ಸಂಕ್ಷಿಪ್ತ ಮಾಹಿತಿಯನ್ನು ಈ ಲೇಖನವು ಒದಗಿಸುತ್ತದೆ.

ಬಿ.ಸುರೇಶ್ ಅವರ 'ಕಿರುತೆರೆ ಎಂಬ ಅದ್ಭುತವೂ' ಎಂಬ ಲೇಖನವು ಟಿ.ವಿ. ಧಾರವಾಹಿಗಳು ನಿರ್ದೇಶಕರ ಬದುಕಿನ ಅವಿಭಾಜ್ಯ ಅಂಗ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಧಾರಾವಾಹಿಗಳು ಪ್ರಸಾರವಾಗುವ ಐತಿಹಾಸಿಕತೆಯನ್ನು ವಿವರಿಸಿದ್ದಾರೆ. ಕಾಲಾ

ನಂತರ ಬದಲಾದ ಪಲ್ಲಟಕ್ಕೆ ಕಾರಣಗಳನ್ನು ಬಿ.ಸುರೇಶ್ ಅವರು ಈ ಲೇಖನದ ಮೂಲಕ ತಮ್ಮ ಅಭಿಪ್ರಾಯವನ್ನು ಹಂಚಿಕೊಂಡಿದ್ದಾರೆ.

ಡಾ.ಸಂಗಮೇಶ ಸವದತ್ತಿಮಠ ಅವರ 'ಕನ್ನಡ ನಾಟಕಗಳಲ್ಲಿ ಭಾಷೆ'(೧೯೯೧) ಪುಸ್ತಕದಲ್ಲಿ ನಾಟಕ ಸರ್ವಾಂಗ ಸುಂದರವಾಗಲು ಭಾಷೆಯೇ ಮೂಲ. ನಾಟಕದಲ್ಲಿ ಜೀವಂತ ಭಾಷೆಯ ಬಳಕೆಯಾಗಲೇಬೇಕೆಂದು ಹೇಳುವವರಿದ್ದಾರೆ. ನಾಟಕದ ಭಾಷೆಯ ಬಗೆಗಿನ ಮಹತ್ವದ ಪುಸ್ತಕ ಇದಾಗಿದೆ. ಇಲ್ಲಿ ವಿವಿಧ ಪ್ರಕಾರದ ನಾಟಕಗಳ ಭಾಷೆ ಕುರಿತು ಚರ್ಚಿಸಲಾಗಿದೆ. ಆರಂಭದಲ್ಲಿ ಲಿಂಗದೇವರು ಹಳೆಮನೆಯವರು ಪ್ರಾದೇಶಿಕ ಭಾಷಾ ಪ್ರಯೋಗ ಮತ್ತು ನಾಟಕ ಕುರಿತು ಬರೆಯುತ್ತಾ ಮೂರು ಮುಖ್ಯ ವಿಷಯಗಳನ್ನು ಹೇಳುತ್ತಾರೆ.

೧. ವಾಸ್ತವವಾದಿ ನಾಟಕ ರಚನೆಯಲ್ಲಿ ಬಳಕೆಯಾಗುವ ಭಾಷೆ ತುಂಬಾ ಸೊರಗಿದ್ದರೂ ಇನ್ನೂ ಬಳಕೆಯಾಗುತ್ತಲೇ ಇದೆ.

೨. ಪ್ರತಿಯೊಂದು ನಾಟಕ ಬರೆಯುವಾಗಲೂ ಆಧುನಿಕ ನಾಟಕಕಾರ ಹೊಸ ಭಾಷೆಗೆ ತಡಕಾಡುವುದು.

೩. ತನ್ನ ಪರಿಸರದ ಭಾಷೆಯನ್ನೇ ಹಿಡಿದು ಅದರಲ್ಲೊಂದು ಹೊಸಶಕ್ತಿಯನ್ನು ಹೊರಡಿಸಲು ಯತ್ನಿಸುವುದು–ಎಂದು ಹೇಳಿ ಪ್ರಾದೇಶಿಕ ಭಾಷೆ ಎನ್ನುವುದು ಒಂದು ನಿರ್ದಿಷ್ಟ ಭೌಗೋಳಿಕ ಪ್ರದೇಶದಲ್ಲಿ ಬಳಕೆಯಾಗುವ ಭಾಷೆ–ಮೈಸೂರು, ಮಂಗಳೂರು, ಧಾರವಾಡ, ಗುಲ್ಬರ್ಗ ಈ ನಾಲ್ಕು ಪ್ರದೇಶದ ಉಪಭಾಷೆಗಳನ್ನು ಗುರುತಿಸಿದ್ದಾರೆ. ಇವುಗಳಲ್ಲಿ ಧ್ವನಿವ್ಯವಸ್ಥೆ, ಧ್ವನಿಮಾವ್ಯವಸ್ಥೆ, ಆಕೃತಿಮಾ ವ್ಯವಸ್ಥೆ, ವಾಕ್ಯವ್ಯವಸ್ಥೆ, ಅರ್ಥವ್ಯವಸ್ಥೆಯನ್ನು ವಿಶ್ಲೇಷಿಸಿದ್ದಾರೆ. ಹಾಗೆ ನಾಟಕರಚನೆ ದೃಷ್ಟಿಯಿಂದ ಕರಾವಳಿ ಕನ್ನಡ, ಹಳೆ ಕರ್ನಾಟಕದ ಕನ್ನಡ ಮತ್ತು ಹೊಸ ಕರ್ನಾಟಕದ ಕನ್ನಡ ಎಂದು ವಿಭಾಗಿಸಿದ್ದಾರೆ.

'ಕನ್ನಡ ನುಡಿ ಬಳಕೆಯ ನೆಲೆಗಳು'(೨೦೧೪) ಡಾ.ಪಿ.ಮಹಾದೇವಯ್ಯ ಅವರ ಕೃತಿ. ಈ ಕೃತಿಯಲ್ಲಿ ಮೂರು ಲೇಖನಗಳಿವೆ.

೧. ಭಾಷೆ, ಸಮಾಜ ಮತ್ತು ಸಂಸ್ಕೃತಿ

೨. ರಾಜಕೀಯ ಮತ್ತು ಭಾಷೆ

೩. ಸಮೂಹ ಮಾಧ್ಯಮಗಳು ಮತ್ತು ಭಾಷೆ

ಈ ಲೇಖನಗಳೆಲ್ಲವೂ ಸಮಾಜದಲ್ಲಿನ ಪ್ರಸ್ತುತ ಸಂದರ್ಭವನ್ನು ಲಕ್ಷಿಸಿ ರಚಿತವಾದ ಸಂಶೋಧನಾ ಲೇಖನಗಳಾಗಿವೆ. ವಿವಿಧ ವಲಯಗಳಲ್ಲಿ ಬಳಕೆಯಾಗುತ್ತಿರುವ ಭಾಷಾ ಬಳಕೆಯನ್ನು

ಗುರಿಯಾಗಿಸಿಕೊಂಡು ಲೇಖನಗಳನ್ನು ರಚಿಸಿ ಪುಸ್ತಕ ರೂಪದಲ್ಲಿ ಪ್ರಕಟಿಸಿದ್ದಾರೆ. ಈ ಅಧ್ಯಯನವು ಪ್ರಸ್ತುತ ಅಧ್ಯಯನಕ್ಕೆ ವಿವಿಧ ಮಗ್ಗುಲುಗಳನ್ನು ಗುರುತಿಸುವ ಪ್ರಯತ್ನಕ್ಕೆ ಮಾದರಿಯಂತಿದೆ.

ಅಡಿಟಿಪ್ಪಣಿಗಳು

೧. ಚಂದ್ರಶೇಖರ್ ಬಿ.ಎಸ್., ೨೦೦೫, **ಸಂವಹನ ಮಾಧ್ಯಮಗಳು**, ಪು.೨೫೭.

೨. ಅದೇ, ಪು.೨೫೮.

೩. ಅದೇ, ಪು.೨೫೮.

೪. ಅದೇ, ಪು.೨೫೯.

೫. ಕೋಲಾರ ಜೆ.ಪಿ., ೨೦೧೩, **ವಿಜಯ ನೆಕ್ಸ್ಟ್ ಪಾಕ್ಷಿಕ ಪತ್ರಿಕೆ**, ಏಪ್ರಿಲ್ ೪, ಪು.೧೫.

೬. ಅದೇ, ಪು.೧೫.

೭. ಅದೇ, ಪು.೧೫.

೮. ಅದೇ, ಪು.೧೫.

ಅಧ್ಯಾಯ ಮೂರು

ಧಾರವಾಹಿಗಳು: ಒಳನುಡಿಗಳ ಬಳಕೆ

ಅಧ್ಯಾಯ ಮೂರು

ಧಾರಾವಾಹಿಗಳು: ಒಳನುಡಿಗಳ ಬಳಕೆ

ಈ ಅಧ್ಯಾಯದಲ್ಲಿ ಕರ್ನಾಟಕದ ವಿವಿಧ ಪ್ರಾದೇಶಿಕ ಪ್ರಭೇದಗಳನ್ನು ತೆಗೆದುಕೊಂಡು ಧಾರಾವಾಹಿಗಳ ಮುಖಾಂತರ ಪ್ರಾದೇಶಿಕ ಭಾಷೆಯನ್ನು ಬಳಸಿರುವುದನ್ನು ಗಮನಿಸಲಾಗಿದೆ. ಆದರೆ ಇದಕ್ಕಿಂತಲೂ ಭಿನ್ನವಾದದ್ದು, ಪ್ರಮುಖವಾದುದು ಒಳನುಡಿಗಳ ಬಳಕೆ. ಕಾರಣ ಮೇಲ್ವರ್ಗ, ಮಧ್ಯಮವರ್ಗ, ಕೆಳವರ್ಗ ಎಂದು ವಿಂಗಡಿಸಿಕೊಂಡಾಗ ಇಲ್ಲಿ ಪ್ರಮಾಣೀಕರಣ ಕನ್ನಡವನ್ನು ಮತ್ತು ಒಳನುಡಿಗಳನ್ನು ಬಳಕೆ ಮಾಡುವ ಮತ್ತು ಪ್ರಮಾಣೀಕರಣ ಕನ್ನಡ ಹಾಗೂ ಒಳನುಡಿಗಳೆರಡನ್ನು ಬಳಕೆ ಮಾಡುವ ವ್ಯಕ್ತಿಗಳನ್ನು ಗಮನದಲ್ಲಿರಿಸಿಕೊಂಡು ಎಷ್ಟು ಪ್ರಮಾಣದಲ್ಲಿ ಒಳನುಡಿಗಳು ಬಳಕೆಯಾಗುತ್ತವೆ ಎಂಬುದನ್ನು ಈ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ.

ಹಾಗಾದರೆ ಒಳನುಡಿಗಳೆಂದರೇನು ಎಂಬುದನ್ನು ತಿಳಿಯುವುದು ಈ ಅಧ್ಯಾಯದ ಮಟ್ಟಿಗೆ ಉಚಿತವೆನ್ನಿಸುತ್ತದೆ. ಒಳನುಡಿ ಎಂದರೆ ಪ್ರಾದೇಶಿಕ ಪ್ರಭೇದಗಳನ್ನು ಅಥವಾ ಆಡುನುಡಿಯನ್ನು(ಗ್ರಾಮೀಣ ಪರಿಸರದ ಆಡುನುಡಿಯನ್ನು) ಒಳನುಡಿಗಳು ಎಂದು ಕರೆಯುತ್ತಾರೆ. ಈಗಾಗಲೇ ಸಾಹಿತ್ಯ ಕೃತಿಗಳಲ್ಲಿ ಒಳನುಡಿಗಳನ್ನು ಬಳಸಿಕೊಳ್ಳುವ ಮೂಲಕ ವಿಶಿಷ್ಟವಾದ ಸಾಹಿತ್ಯ ರಚನೆಯನ್ನು ಕಳೆದೆರಡು ದಶಕಗಳಿಂದಲೂ ಮಾಡುತ್ತಾ ಬಂದಿದ್ದಾರೆ. ಕಾರಣ ಜಾಗತೀಕರಣದ ಪ್ರಭಾವದಿಂದಾಗಿ ಇಂದು ಕನ್ನಡ ಭಾಷೆ ತನ್ನ ಸ್ವರೂಪವನ್ನು ಬದಲಾವಣೆ ಮಾಡಿಕೊಳ್ಳುತ್ತಾ ಸಾಗುತ್ತಿದೆ. ಕಾರಣ ಆಧುನಿಕ ಸಂವಹನ ಮಾಧ್ಯಮಗಳು ಕನ್ನಡ ಭಾಷೆಯನ್ನು ಪ್ರಮಾಣೀಕರಣ ಕನ್ನಡ ರೂಪವನ್ನು ಹೆಚ್ಚಾಗಿ ಬಳಸಿಕೊಳ್ಳುತ್ತಿವೆ. ಹಾಗೂ ಈಗಾಗಲೇ ಶತಶತಮಾನಗಳಿಂದಲೂ ರಚನೆಯಾಗಿರುವ ಕೆಲವು ಸಾಹಿತ್ಯ ಕೃತಿ ಹಾಗೂ ಕೃತಿ ರಚನೆಕಾರರು ಈ ದಾರಿಯನ್ನೇ ಅನುಸರಿಸಿದ್ದಾರೆ. ಕಾರಣ ಎಲ್ಲರಿಗೂ ಅರ್ಥವಾಗಲಿ ಎನ್ನುವ ದೃಷ್ಟಿಯಿಂದ ಕನ್ನಡ ಭಾಷೆಯನ್ನು ಶಿಷ್ಟಭಾಷೆಯಾಗಿ ಅಥವಾ ಪ್ರಮಾಣೀಕರಣ ಭಾಷೆಯಾಗಿ ರೂಪಿಸಿಕೊಂಡು ಬರಲಾಗಿದೆ. ಪ್ರಮಾಣೀಕರಣ ಕನ್ನಡ ರಚನೆಯಾಗುವುದರ ಜೊತೆಯಲ್ಲೇ ಪ್ರಾದೇಶಿಕ ಪ್ರಭೇಧಗಳು ಬಳಕೆಗೊಳ್ಳುವುದರಿಂದ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶದ ಜನರಿಗೆ ಒಳನುಡಿಗಳನ್ನು

ಅರ್ಥ ಮಾಡಿಕೊಳ್ಳುವುದು ಕಷ್ಟಸಾಧ್ಯವಾಗುತ್ತಿತ್ತು. ಈ ಹಿನ್ನೆಲೆಯಲ್ಲಿ ಕನ್ನಡ ಭಾಷೆ ಎನ್ನುವುದು ಒಂದೇ ಇರಬೇಕು ಎನ್ನುವ ದೃಷ್ಟಿಯನ್ನಿಟ್ಟುಕೊಂಡು ಪ್ರಮಾಣೀಕರಣ ಕನ್ನಡವನ್ನು ಬಳಸಲಾಯಿತು.

ಕವಿರಾಜಮಾರ್ಗದಿಂದ ಹಿಡಿದು ಇಲ್ಲಿಯವರೆಗೂ ಚರ್ಚೆಯಾಗಿರುವ ವಿಷಯಗಳಲ್ಲಿ ಇದೂ ಒಂದು. ಅಂದರೆ ಹಲವು ಕನ್ನಡಂಗಳ್ ಎನ್ನುವಲ್ಲಿ ಕನ್ನಡ ಎನ್ನುವುದು ಒಂದಿಲ್ಲ. ಪ್ರಾದೇಶಿಕವಾಗಿ ಹಲವು ಕನ್ನಡಗಳಿವೆ. ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶದ ಜನರಿಗೆ ಸುಲಭವಾಗಿ ಅರ್ಥವಾಗಲಿ ಎನ್ನುವ ಕಾರಣಕ್ಕಾಗಿ ಸಾಹಿತ್ಯಕೃತಿಗಳಲ್ಲಿ ಪ್ರಮಾಣೀಕರಣ ಕನ್ನಡವನ್ನು ಬಳಕೆ ಮಾಡತೊಡಗಿದರು. ಕಾರಣ ಇಷ್ಟೇ ಪ್ರಾದೇಶಿಕ ಒಳನುಡಿಗಳೇ ಕನ್ನಡ ಭಾಷೆಯ ಚರಿತ್ರೆಯನ್ನು ತಿಳಿಸುತ್ತವೆ. ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ದೊರೆತುದುದು ಕೂಡ ಹಲವು ಕನ್ನಡಂಗಳ್ ಎನ್ನುವ ಪರಿಕಲ್ಪನೆಯಿರುವುದರಿಂದಲೇ. ಕನ್ನಡ ಭಾಷೆ ತುಂಬಾ ಪ್ರಾಚೀನವಾದ ಕನ್ನಡವಾಗಿತ್ತು ಎನ್ನುವುದರಿಂದಲೇ. ಪ್ರಾದೇಶಿಕ ಒಳಪ್ರಬೇಧಗಳೇ ಕಾರಣ ವಾಗಿದ್ದರಿಂದ ಕವಿರಾಜಮಾರ್ಗಕಾರ ಹಲವು ಕನ್ನಡಂಗಳ್ ಎಂದು ಗುರುತಿಸುತ್ತಾನೆ. ಆಧುನೀಕರಣದ ಪ್ರಭಾವದಿಂದಾಗಿ ಇಂದು ಒಳನುಡಿಗಳ ಬಳಕೆ ಕಡಿಮೆಯಾಗುತ್ತಿದೆ ಎನ್ನುವ ಆತಂಕದಲ್ಲಿ ಡಿ.ಎನ್.ಶಂಕರಭಟ್, ಕೆ.ವಿ.ನಾರಾಯಣ, ಬರಗೂರು ರಾಮಚಂದ್ರಪ್ಪ,, ಎಂ.ಚಿದಾನಂದಮೂರ್ತಿ ಮುಂತಾದ ವಿದ್ವಾಂಸರು ಆತಂಕವನ್ನು ವ್ಯಕ್ತಪಡಿಸುತ್ತಾರೆ. ಜೊತೆಗೆ ಸಮೂಹ ಸಂವಹನ ಮಾಧ್ಯಮಗಳು ಈ ಒಳಪ್ರಭೇದಗಳನ್ನು ಬಳಸಿಕೊಳ್ಳುವ ಮೂಲಕ ಈ ಭಾಷೆಯ ಅನನ್ಯತೆಯನ್ನು ಎತ್ತಿ ಹಿಡಿಯಬಹುದು. ಅಲ್ಲದೆ ಕನ್ನಡಿಗರಿಗೆ ಭಿನ್ನ ಭಿನ್ನ ಪ್ರಭೇದಗಳನ್ನು ಸುಲಭವಾಗಿ ಅರ್ಥ ಮಾಡಿಕೊಳ್ಳಲು ಸಂಪರ್ಕ ಮಾಧ್ಯಮದಿಂದ ಮಾತ್ರ ಸಾಧ್ಯ ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಈಗಾಗಲೇ ಕುಂ.ವೀರಭದ್ರಪ್ಪ, ಕಾ.ತ.ಚಿಕ್ಕಣ್ಣ, ದೇವನೂರ ಮಹದೇವ ಇಂತಹ ಲೇಖಕರು ಪ್ರಾದೇಶಿಕ ಒಳನುಡಿಗಳನ್ನು ಬಳಸಿಕೊಂಡು ಸಾಹಿತ್ಯ ಕೃತಿಗಳನ್ನು ರಚಿಸಿದ್ದಾರೆ.

ಇದು ಕೇವಲ ಸಾಹಿತ್ಯ ಕೃತಿಗೆ ಸೀಮಿತವಾಗಬಾರದು. ಸಾಹಿತ್ಯ ಕೃತಿ ಕೇವಲ ಒಂದು ವರ್ಗಕ್ಕೆ ಮಾತ್ರ ತಲುಪಬಹುದು. ಆದರೆ ಸಂವಹನ ಮಾಧ್ಯಮಗಳು ಎಲ್ಲಾ ವರ್ಗಗಳಿಗೂ ತಲುಪಿಸಲು ಸಾಧ್ಯತೆ ಇರುವುದರಿಂದ ಒಳನುಡಿಗಳ ಬಳಕೆಯನ್ನು ಹೆಚ್ಚು ಮಾಡಬೇಕು ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಈ ಕಾರಣದಿಂದಾಗಿ ದೂರದರ್ಶನ ಕೆಲವೊಂದು ಕಾರ್ಯಕ್ರಮಗಳಲ್ಲಿ ಪ್ರಾದೇಶಿಕ ಪ್ರಭೇದಗಳನ್ನು ಬಳಸಿಕೊಳ್ಳುವ ಪ್ರಯತ್ನವನ್ನು ಮಾಡುತ್ತಿವೆ. ಈಗಾಗಲೇ ಪ್ರಸಾರವಾಗುತ್ತಿರುವ ಕಾರ್ಯಕ್ರಮಗಳಲ್ಲಿ ದೂರದರ್ಶನ ಧಾರಾವಾಹಿಗಳು ಪ್ರಮುಖವಾದವುಗಳಾಗಿವೆ. ಆದ್ದರಿಂದ ಈ ಧಾರಾವಾಹಿಗಳಲ್ಲಿ ನಿರ್ದೇಶಕರು ಪ್ರಾದೇಶಿಕ ಧಾರಾವಾಹಿಗಳನ್ನು ನಿರ್ದೇಶಿಸುವ ಮೂಲಕ ಒಳನುಡಿಗಳ ಬಳಕೆಯನ್ನು ಧಾರಾವಾಹಿಗಳ ಮುಖೇನ ಕನ್ನಡಿಗರಿಗೆ ಹೊಸ ಹೊಸ ತಂತ್ರಗಾರಿಕೆಯನ್ನು ಮಾಡಿ ಪ್ರಾದೇಶಿಕ ಒಳನುಡಿಗಳನ್ನು

ಬಳಸಿಕೊಳ್ಳುವ ಮೂಲಕ ಹಲವು ಕನ್ನಡಗರಿಗೆ ಅರ್ಥ ಮಾಡಿಸುವಂತಹ ಕೆಲಸಕ್ಕೆ ಮುಂದಾಗಿರುವುದು ಈಗಾಗಲೇ ಅಧ್ಯಯನಕ್ಕೆ ಬಳಸಿಕೊಂಡ ಧಾರಾವಾಹಿಗಳಲ್ಲಿ ಕಾಣಬಹುದು. ಧಾರಾವಾಹಿಗಳಲ್ಲಿ ಒಳನುಡಿಗಳನ್ನು ಬಳಸಿಕೊಳ್ಳುವ ವರ್ಗ, ಲಿಂಗ, ವಯಸ್ಸು, ಶಿಕ್ಷಣ, ಅಂತಸ್ತು, ಅಧಿಕಾರದ ಹಿನ್ನೆಲೆಯಲ್ಲಿ ಗುರುತಿಸುವ ಪ್ರಯತ್ನ ಮಾಡಲಾಗಿದೆ. ಒಳನುಡಿಗಳ ಬಳಕೆಗೂ ಒಂದು ಮಿತಿ ಇದೆ. ಈ ಮಿತಿ ಯಾವ ಯಾವ ಸ್ವರೂಪವನ್ನು ಯಾವ ಯಾವ ಧಾರಾವಾಹಿಗಳಲ್ಲಿ ಎಷ್ಟರ ಮಟ್ಟಿಗೆ ಆಗಿದೆ ಎಂಬುದನ್ನು ಈ ಅಧ್ಯಯನ ತಿಳಿಯಬಯಸುತ್ತದೆ.

ಪ್ರಾದೇಶಿಕ ಒಳನುಡಿಗಳು

ಮೈಸೂರು ಕನ್ನಡ

ಬೆಂಗಳೂರು, ಕೋಲಾರ, ತುಮಕೂರು, ಶಿವಮೊಗ್ಗ, ಚಿತ್ರದುರ್ಗ, ಹಾಸನ, ಚಿಕ್ಕಮಗಳೂರು, ಮಂಡ್ಯ, ಮೈಸೂರು, ಜಿಲ್ಲೆಗಳ ಕನ್ನಡವನ್ನು ಮೈಸೂರು ಕನ್ನಡ ಎಂದು ಕರೆಯಲಾಗುತ್ತದೆ. ಇಂದು ಈ ಎಲ್ಲಾ ಜಿಲ್ಲೆಗಳ ಕನ್ನಡ ತಮ್ಮದೇ ವಿಶೇಷತೆಯನ್ನು ಹೊಂದಿ ಭಾಷಿಕ ರೂಪಗಳಾಗಿ ಬೆಳೆದು ಬೇರೆ ಬೇರೆ ಒಳನುಡಿಗಳೆನಿಸಿವೆ. ಆದರೂ ಈ ಭಾಷಾರೂಪಗಳಲ್ಲಿನ ಧ್ವನಿ, ಧ್ವನಿಮಾ, ಆಕೃತಿಮಾ, ವಾಕ್ಯರಚನೆ, ಸ್ವರ ವ್ಯಂಜನಗಳಲ್ಲಿರುವ ಸಾಮ್ಯತೆಯನ್ನಾಧರಿಸಿ ಮೈಸೂರು ಕನ್ನಡ ಎಂಬ ವರ್ಗೀಕರಣ ಮಾಡಿಕೊಳ್ಳಬಹುದಾಗಿದೆ.

ಧಾರವಾಡ ಕನ್ನಡ

ಧಾರವಾಡ ಕನ್ನಡ ಹಾವೇರಿ, ದಾವಣಗೆರೆ, ಗದಗ ಜಿಲ್ಲೆಗಳು ಹಾಗೂ ಶಿವಮೊಗ್ಗ, ಚಿತ್ರದುರ್ಗ ಜಿಲ್ಲೆಯ ಉತ್ತರ ಭಾಗದ ತಾಲೂಕು, ಬೆಳಗಾವಿ ಜಿಲ್ಲೆ, ಬಿಜಾಪುರ ಜಿಲ್ಲೆಯ ದಕ್ಷಿಣ ಭಾಗಗಳಲ್ಲಿ ಬಳಕೆಯಲ್ಲಿರುವ ಕನ್ನಡ ಭಾಷಾ ರೂಪಗಳನ್ನೇ ಧಾರವಾಡ ಕನ್ನಡ ಎಂದು ಕರೆಯಲಾಗುತ್ತದೆ. ಧಾರವಾಡ, ಬೆಳಗಾವಿ, ಬಿಜಾಪುರ ಪ್ರದೇಶಗಳು ಹಿಂದೆ ಮುಂಬೈ ಕರ್ನಾಟಕದ ಆಳ್ವಿಕೆಗೆ ಒಳಪಟ್ಟಿತ್ತು. ಹೀಗಾಗಿ ಧಾರಾವಾಡ ಕನ್ನಡದ ಮೇಲೆ ಮರಾಠಿ, ಕೊಂಕಣಿ, ಉರ್ದು ಭಾಷೆಗಳ ಪ್ರಭಾವವನ್ನು ಕಾಣಬಹುದು. ಆ ಭಾಷೆಗಳ ಪದಗಳನ್ನು ಸ್ವೀಕರಿಸಿರುವುದನ್ನು ಕಾಣಬಹುದು. ಧಾರವಾಡ ಕನ್ನಡದಲ್ಲಿ ಎಕಾರಾಂತ ಪದಗಳಲ್ಲೆವೂ ಇ ಕಾರಂತವಾಗುತ್ತವೆ. ಉದಾಹರಣೆಗೆ: ಮನೆ>ಮನಿ, ಕೆರೆ>ಕೆರಿ, ಕುದುರೆ>ಕುದ್ರಿ, ಬೆಲೆ>ಬೆಲಿ, ಕೊಳೆ>ಕೊಳಿ, ತೆನೆ>ತೆನಿ, ಆನೆ>ಆನಿ. ಕೆಲವು ಶಬ್ದಗಳು ಆ ಕಾರಾಂತವಾದ ನಾಮ ಪ್ರಕೃತಿಗಳಿವೆ. ಗಾಣಿಗ್ಯಾ, ಬಣಜಿಗ್ಯಾ, ಬಡಿಗ್ಯಾ, ಯೋಗ್ಯಾ.

ಬಹುವಚನಗಳಲ್ಲಿ ಗೊಳ, ರ್ ಎಂಬ ಪ್ರತ್ಯಯಗಳು ಬರುತ್ತವೆ. ಆದರೆ ಈ ರೂಪಗಳು ಅಕಾರಾಂತ ಪುಲ್ಲಿಂಗ, ಸ್ತ್ರೀಲಿಂಗಗಳಲ್ಲಿ ಮಾತ್ರ ಕಾಣಿಸಿಕೊಳ್ಳುತ್ತದೆ. ಉದಾ: ಹುಡುಗ>ಹುಡುಗರು, ಜನ>ಜನರು, ಅಣ್ಣತಮ್ಮಗಳು>ಅಣ್ಣತಮ್ಮಗೂಳು, ಅಕ್ಕಂದಿರು>ಅಕ್ಕಾರು, ಬಣಿಜಿಗ್ಯಾರ, ಬಡಿಗ್ಯಾರು,

ಅಸಗೂಳು. ಉಕಾರಂತವಾದ ಸಂಸ್ಕೃತ ಶಬ್ದಗಳಿಗೆ ಧಾರಾವಾಡ ಕನ್ನಡದಲ್ಲಿ ಗುಳ ಪ್ರತ್ಯಯ ಹತ್ತುತ್ತದೆ. ಗುರುಗಳು, ಅಧಿಕಾರಿಗಳು.

ಹೀಗೆ ಇನ್ನು ಮುಂತಾದ ಭಾಷಿಕ ವ್ಯತ್ಯಾಸಗಳನ್ನು ಈ ಧಾರಾವಾಹಿಗಳಲ್ಲಿ ಬಳಕೆಯಾಗುವ ಧಾರವಾಡ ಕನ್ನಡದಲ್ಲಿ ಗುರುತಿಸಲಾಗಿದೆ.

ಐತಿಹಾಸಿಕ ಉಪಭಾಷೆಗಳು

ಆಧುನಿಕ ಕನ್ನಡ ಉಪಭಾಷೆಗಳು, ಸಾಮಾಜಿಕ ಉಪಭಾಷೆಗಳು ಎಂದು ವರ್ಗೀಕರಿಸಿ ಕೊಂಡಿರುವಂತೆಯೇ ಕನ್ನಡ ಭಾಷೆಯಲ್ಲಿ ಕಾಲದಿಂದ ಕಾಲಕ್ಕೆ ಆದ ಅವಸ್ಥೆಗಳನ್ನು ಆಧರಿಸಿ ಐತಿಹಾಸಿಕ ಉಪಭಾಷೆಗಳಾಗಿ ವರ್ಗೀಕರಿಸಿಕೊಳ್ಳಬಹುದು. ಕನ್ನಡ ಭಾಷೆಯ ಅವಸ್ಥಾಭೇದಗಳು ಐತಿಹಾಸಿಕ ಒಳನುಡಿಗಳಾಗಿವೆ. ಕನ್ನಡ ಭಾಷೆಯು ಒಂದು ಕಾಲದಿಂದ ಇನ್ನೊಂದು ಕಾಲಕ್ಕೆ ಪದದ ಸ್ವರೂಪದಲ್ಲಿ ಉಂಟಾಗುವ ವ್ಯತ್ಯಾಸಗಳನ್ನು ಪರಿಶೀಲಿಸುವುದು ಕಾಲಕ್ರಮಿತ ಅಥವಾ ಐತಿಹಾಸಿಕ ಒಳನುಡಿಗಳೆನಿಸುತ್ತವೆ. ಕನ್ನಡ ಭಾಷೆಯು ಪಡೆದ ಅವಸ್ಥೆಗಳ ಶಾಸನ ಮತ್ತು ಕಾವ್ಯಗಳಿಂದ ಗುರುತಿಸಿಕೊಳ್ಳಬಹುದಾಗಿದೆ. ಹಳಗನ್ನಡದಲ್ಲಿ ಜೈನ ಸಾಹಿತ್ಯ ಮುಂಚೂಣಿಯಲ್ಲಿದ್ದರೆ, ಹನ್ನೆರಡನೇ ಶತಮಾನದ ಹೊತ್ತಿಗೆ ವೀರಶೈವ ಸಾಹಿತ್ಯ ಮುಂಚೂಣಿಯಲ್ಲಿತ್ತು. ಈ ಎರಡು ಸಾಹಿತ್ಯಗಳಲ್ಲಿ ಕನ್ನಡ ಭಾಷೆಯ ಬದಲಾವಣೆ ಇದೆ. ಐತಿಹಾಸಿಕ ಉಪಭಾಷೆಗಳ ಅಧ್ಯಯನವು "ಕಾಲದಿಂದ ಕಾಲಕ್ಕೆ ಕನ್ನಡ ಭಾಷೆ ಯಾವ ರೀತಿಯಲ್ಲೆಲ್ಲ ಬದಲಾಗುತ್ತಾ ಬಂದಿದೆ ಎಂಬುದನ್ನು ತಿಳಿಯುವುದರ ಮೂಲಕ ಅದು ಕಳೆದ ಒಂದೂವರೆ ಸಾವಿರ ವರ್ಷಗಳಲ್ಲಿ ಹೇಗೆ ಬೇರೆ ಬೇರೆ ಕವಲುಗಳಾಗಿ ಒಡೆದಿದೆ ಎಂಬುದನ್ನು ನಿರ್ಧರಿಸಲು ಸಾಧ್ಯವಿದೆ." ಐತಿಹಾಸಿಕ ಉಪಭಾಷೆಗಳ ಮೂಲಕ ಕನ್ನಡದ ಚರಿತ್ರೆಯನ್ನು ಕಟ್ಟಲು ಸಾಧ್ಯವಿದೆ. ಪೂರ್ವದ ಹಳಗನ್ನಡ, ನಡುಗನ್ನಡ, ಹೊಸಗನ್ನಡ ಹೀಗೆ ಕನ್ನಡ ಭಾಷೆ ವಿಕಾಸವಾಗಿರುವುದನ್ನು ಕಾಣುತ್ತೇವೆ.

ಹಳೆಗನ್ನಡ ಕಾಲಕ್ಕಾಗಲೇ ಪಕಾರವು ಹಕಾರವಾಗಿ ಬದಲಾಗುತ್ತಿತ್ತು. ಇದರ ಪರಿಣಾಮವಾಗಿ ಹೊಸಗನ್ನಡದಲ್ಲಿ ಪಕಾರ ಅಳಿದು ಹಕಾರವೇ ಉಳಿದುಕೊಂಡಿತು. ಪಾವು>ಹಾವು, ಪಾಲು>ಹಾಲು, ಪೆಣ್ಣು>ಹೆಣ್ಣು, ಹೊಸಗನ್ನಡದಲ್ಲಿ ಹಕಾರವು ಬಿದ್ದು ಹೋಗಿ ಅ ಸ್ವರ ಮಾತ್ರ ಉಳಿದುಕೊಂಡಿದೆ. ಹಾಲು>ಆಲು, ಹಾವು>ಆಪು, ಹಳಗನ್ನಡದಲ್ಲಿದ್ದ ರಳ ಕುಳಗಳು ಸೋಲಿಗ, ಬಡಿಗ ಕೆಲವು ಸಮುದಾಯವನ್ನು ಹೊರತುಪಡಿಸಿದರೆ ಹೊಸಗನ್ನಡದಲ್ಲಿ ಬಹುತೇಕ ನಶಿಸಿ ಹೋಗಿದೆ.

ಐತಿಹಾಸಿಕ ಉಪಭಾಷೆಗಳ ಸ್ವರೂಪವನ್ನು ತಿಳಿಯಲು ಇರುವ ಆಧಾರಗಳೆಂದರೆ ಶಾಸನಗಳು ಮತ್ತು ಸಾಹಿತ್ಯ ಕೃತಿಗಳು. ಹೊಸಗನ್ನಡದಲ್ಲಿ ಪ್ರಾದೇಶಿಕ, ಸಾಮಾಜಿಕ ಉಪಭಾಷೆಗಳ ಪ್ರಾಯೋಗಿಕ ಅಧ್ಯಯನ ಸಾಧ್ಯವಾಗುವಂತೆ ಐತಿಹಾಸಿಕ ಉಪಭಾಷೆಗಳಲ್ಲಿ ಸಾಧ್ಯವಿಲ್ಲ. ಆದರೂ

ಈ ಉಪಭಾಷೆಗಳ ಭಾಷಾ ವ್ಯತ್ಯಾಸವನ್ನು ಅರಿಯುವ ಮೂಲಕ ಕನ್ನಡ ಭಾಷೆಯ ಕಾಲಿಕ ಪರಿವರ್ತನೆಯನ್ನು ತಿಳಿಯಬಹುದು.

ಈ ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಧಾರಾವಾಹಿಗಳಲ್ಲಿ ಯಾವುದು ಪ್ರಾದೇಶಿಕ, ಯಾವುದು ಸಾಮಾಜಿಕ, ಯಾವುದು ಐತಿಹಾಸಿಕ, ಒಳನುಡಿಗಳು ಯಾವ ಯಾವ ಧಾರಾವಾಹಿಗಳಲ್ಲಿ ಬಳಕೆಯಾಗಿರುವ ಪ್ರಮಾಣವನ್ನು ಈ ಅಧ್ಯಯನ ನಿರೂಪಿಸುತ್ತದೆ.

ಇಂದಿನ ಪ್ರಾದೇಶಿಕ ಮತ್ತು ಸಾಮಾಜಿಕ ಪ್ರಭೇದಗಳಿಗೆ ಅವುಗಳದ್ದೇ ಆದ ಚಾರಿತ್ರಿಕ ಹಿನ್ನೆಲೆಯಿದೆ. ನವೆಂಬರ್ ೧, ೧೯೫೬ರಂದು ಮೈಸೂರು ಸರ್ಕಾರ 'ಮೈಸೂರು ರಾಜ್ಯ' ಹೆಸರಿನಲ್ಲಿ ಕೃತಿಯೊಂದನ್ನು ಪ್ರಕಟಿಸಿದೆ. ಈ ಕೃತಿಯಲ್ಲಿ ಪ್ರಾದೇಶಿಕ ಉಪಭಾಷೆಗಳ ಕುರಿತು ಅಧ್ಯಯನ ಆಗಿರುವುದರ ಬಗೆಗೆ ಮಾಹಿತಿ ಇಲ್ಲ. ಆದರೆ ಸಾಮಾಜಿಕ ಉಪಭಾಷೆಗಳ ಬಗೆಗೆ ಮಾಹಿತಿ ಇದೆ. ಈ ಅಂಶದಿಂದ ತಿಳಿದುಬರುವ ಭಾಷಾ ಸಂಗತಿಯೆಂದರೆ, ಇಂದಿನ ಕನ್ನಡದ ಸಾಮಾಜಿಕ ಉಪಭಾಷೆಗಳಿಗೆ ೫೦ ವರ್ಷದ ದೀರ್ಘವಾದ ಚರಿತ್ರೆಯಿದೆ ಎಂದು. ಕನ್ನಡ ಸಾಮಾಜಿಕ ಉಪಭಾಷೆಗಳಾದ ತೋಡರ ಕನ್ನಡ, ಬಡಗರ ಕನ್ನಡ, ಸೋಲಿಗರ ಕನ್ನಡ, ಎರವರ ಕನ್ನಡ, ಕುಡಿಯರ ಕನ್ನಡ, ಹಲಸರ ಕನ್ನಡ, ಮಲೇರು ಕನ್ನಡಗಳ ರಚನೆ ಕುರಿತು ೫೦ ವರ್ಷದ ಹಿಂದೆ ಚಿಂತನೆ ನಡೆದಿರುವುದು ಮೈಸೂರು ರಾಜ್ಯ ಕೃತಿಯಲ್ಲಿ ಈ ರೀತಿ ದಾಖಲಾಗಿದೆ.[೧]

"ಮಿಶ್ರಯುತ ಭಾಷೆ ತೋಡರರದು. ಅದರಲ್ಲಿ ತಮಿಳು, ಮಲಯಾಳಂ, ಕನ್ನಡ ಪದಗಳಿವೆ. ಇದೊಂದು ವಿಜಾತಿಯ ಭಾಷೆ. ಸುಲಭವಾಗಿ ಅರ್ಥವಾಗುವುದಿಲ್ಲ. ತೋಡರು 'ಇತರರೊಡನೆ ಮಾತನಾಡುವಾಗ ಒಂದು ಭಾಷೆಯನ್ನು ಬಳಕೆಯನ್ನಿಟ್ಟುಕೊಂಡಿದ್ದಾರೆ. ತಮ್ಮ ತಮ್ಮಲ್ಲಿಯೇ ಮಾತನಾಡುವಾಗ ಮತ್ತೊಂದು ಭಾಷೆ ಉಪಯೋಗಿಸುತ್ತಾರೆ. ಪ್ರಾರ್ಥನೆಗೆ ಸಂಬಂಧಪಟ್ಟ ಭಾಷೆಯಲ್ಲಿರುವ ಪದಗಳೇ ಬೇರೆಯಾಗಿವೆ. ಅವರ ಹೈನು ಮನೆಗೆ ಸಂಬಂಧಪಟ್ಟ ಹಾಗೆ ಬೇರೆ ಬೇರೆ ಪದಗಳಿವೆ. ಅವರ ಕಥೆಗಳಲ್ಲಿ ಬರುವ ಮಾತುಗಳೂ ಪ್ರತ್ಯೇಕವಾಗಿವೆ. ಬಡಗರೊಡನೆ ಮಾತನಾಡುವಾಗ ಅವರು ಹೆಚ್ಚು ತಮಿಳನ್ನೇ ಉಪಯೋಗಿಸುತ್ತಾರೆ. ಆದರೆ ತಾವು ತಾವೇ ಮಾತನಾಡುತ್ತಿರುವಾಗ ಕೆಲವು ಸಾಂಕೇತಿಕ ಪದಗಳನ್ನು ಉಪಯೋಗಿಸುತ್ತಾರೆ. ಇಂತಹ ಪದಗಳನ್ನು ಅರ್ಥ ಮಾಡಿಕೊಳ್ಳುವುದು ಬಹುಕಷ್ಟ."[೨]

"ಸೋಲಿಗರ ಭಾಷೆ ಕನ್ನಡ. ಕನ್ನಡವಾದರೂ ಸುಲಭವಾಗಿ ಅರ್ಥವಾಗುವುದಿಲ್ಲ. ಅದೊಂದು ಬಗೆಯ ವಿಜಾತಿಯ ಉಚ್ಚಾರ ಅವರದು. ಕೆಲವು ಮಾತುಗಳ ಅರ್ಥ ತಿಳಿಯುವುದೇ ಇಲ್ಲ. ನೀಲಗಿರಿಯ ಬಡಗರು ಮಾತನಾಡುವ ಭಾಷೆ ಕನ್ನಡದಂತೆಯೇ ಇದೆ. ಕೊಡಗಿನ ಎರವರ ಭಾಷೆ ಮಿಶ್ರ ಭಾಷೆ. ಆದರೆ ಅವರ ಮಾತುಗಳಲ್ಲಿ ಕನ್ನಡ ಪದಗಳು ಹೆಚ್ಚಾಗಿವೆ.

ದಕ್ಷಿಣ ಕನ್ನಡ ಕೊಡಗರು ಕುಡಿಯರು, ಕನ್ನಡ ಮತ್ತು ತುಳು ಮಿಶ್ರಿತವಾದ ಮಾತುಗಳನ್ನಾಡುವರು. ಅದು ಅರ್ಥವಾಗುವುದು ಕಷ್ಟ. ಅವರು ಬಳಕೆಯಲ್ಲಿಟ್ಟುಕೊಂಡಿರುವ ಪದಗಳು ಪ್ರತ್ಯೇಕ ರೀತಿಯಾಗಿವೆ. ಪಶ್ಚಿಮ ಮಲೆನಾಡು ಪ್ರದೇಶದ ಹಸಲರು, ಮಲೇರು ಕನ್ನಡ ಮಾತುಗಳನ್ನಾಡುವರು. ಇನ್ನು ಕೆಲವು ಆದಿವಾಸಿಗಳು ತೆಲಗು ಭಾಷೆಯಾಡುವರು." ಏಕೆ ಮೊದಲಿನ ಮಾತುಗಳನ್ನು ದಾಖಲಿಸಿದೆ ಅಂದರೆ ದೀರ್ಘಕಾಲದ ಹೋರಾಟದ ಫಲವಾಗಿ ಏಕೀಕರಣ ಸಾಧಿಸಿದ ಕರ್ನಾಟಕ ರಾಜ್ಯ, ೧೯೫೬ರಿಂದ ೨೦೦೬ರವರೆಗೆ ಸುಮಾರು ೫೦ ವರ್ಷಗಳ ಐತಿಹಾಸಿಕ ಸಂದರ್ಭದಲ್ಲಿ ಕನ್ನಡ ಉಪಭಾಷೆಗಳಲ್ಲಿ ಆಗಿರುವ ಬದಲಾವಣೆ ಕುರಿತು ಜನತೆಯ ಮುಂದೆ ಇಡಬೇಕಾಗಿದೆ. ಅಂದು ಕನ್ನಡ ಭಾಷೆಯ ಉಳಿವಿಗಾಗಿ ಹೋರಾಟಗಳು ಹಲವು ಮಾದರಿಯಲ್ಲಿ ಜರುಗಿವೆ. ಆದರೆ ಇಂದು ಅದೇ ಕನ್ನಡ ಭಾಷೆಯ ಉಳಿವಿಗಾಗಿ ಹೋರಾಟದ ಸ್ವರೂಪ ಬೇರೆಯಾಗಿದೆ. ಚಾರಿತ್ರಿಕವಾಗಿ ಗಮನಿಸಿದರೆ, ಕನ್ನಡ ಭಾಷೆಯ ಮೇಲೆ ಒಂದಲ್ಲ ಒಂದು ರೀತಿಯಲ್ಲಿ ಬೇರೆ ಬೇರೆ ಭಾಷೆಗಳ ಪ್ರಭಾವ ಆಗಿರುವುದು ಸ್ಪಷ್ಟ. ಕನ್ನಡ ಭಾಷೆಯಲ್ಲೇ ಸಾಮಾಜಿಕ ಮತ್ತು ಪ್ರಾದೇಶಿಕ ಪ್ರಭೇದಗಳ ಅಧ್ಯಯನ ಯಾವಾಗ ಆರಂಭವಾಯಿತು, ಅವುಗಳ ಸ್ವರೂಪವೇನು, ಜಾಗತೀಕರಣದ ಸಂದರ್ಭದಲ್ಲಿ ಕನ್ನಡದ ಉಪಭಾಷೆಗಳು ಒಂದು ಕಡೆ ಬದಲಾವಣೆಗೆ ತೆಗೆದುಕೊಂಡರೆ ಮತ್ತೊಂದು ಕಡೆ ತನ್ನ ಅನನ್ಯತೆಯನ್ನು ಉಳಿಸಿಕೊಳ್ಳಬೇಕಾದ ಒತ್ತಡವು ಸೃಷ್ಟಿಯಾಗಿದೆ. ಇವೆರಡರ ಮಧ್ಯದಲ್ಲಿ ಕನ್ನಡದ ಉಪಭಾಷೆಗಳ ಸ್ವರೂಪವನ್ನು ಅಧ್ಯಯನ ಮಾಡುವ ಜರೂರು ಇದೆ."[೩]

"ಸಾಹಿತ್ಯ ಕ್ಷೇತ್ರದಲ್ಲಿ ಬರೆಹದ ಭಾಷೆಯೇ ಶ್ರೇಷ್ಠ ಎಂಬ ಮನೋಭಾವನೆಯಿದ್ದು, ಅಂತಹ ಶಿಷ್ಟ ಮಾದರಿಯ ಸಾಹಿತ್ಯಕ್ಕೆ ಹೆಚ್ಚಿನ ಮನ್ನಣೆಯಿತ್ತು. ಆ ಕಾರಣಕ್ಕಾಗಿ ಪ್ರಾಚೀನ ಸಾಹಿತಿಗಳು ತಮ್ಮ ಕೃತಿಗಳ ಭಾಷೆ ಶಿಷ್ಟವಾಗಿರುವಂತೆ ಎಚ್ಚರ ವಹಿಸಿದರು. ಹೀಗಾಗಿ ಸಾಹಿತ್ಯ ಕೃಷಿಗೆ ಆಡುಮಾತನ್ನು ಯಾರೂ ಬಳಸಲಿಲ್ಲ. ಆಡುಭಾಷೆ ಸಹಜವಾದ ಭಾಷೆಯಾಗಿದ್ದು, ಬರಹದ ಭಾಷೆಗಿಂತಲೂ ಶ್ರೇಷ್ಠ ಎಂಬುದು ಇತ್ತೀಚಿನ ಭಾಷಾಶಾಸ್ತ್ರಜ್ಞರ ಅಭಿಮತ. ಹಾಗಾಗಿ ವಿವರಣಾತ್ಮಕ ಭಾಷಾಶಾಸ್ತ್ರಜ್ಞರು ಆಡುಮಾತಿಗೆ ಹೆಚ್ಚು ಪ್ರಾಶಸ್ತ್ಯ ನೀಡಿದರು. ಪರಿಣಾಮವಾಗಿ ೧೯ನೆಯ ಶತಮಾನದ ಮಧ್ಯಭಾಗದಲ್ಲಿ ಈ ಕುರಿತ ಅಧ್ಯಯನಗಳು ಮೊದಲುಗೊಂಡವು. ಇಂದು ಭಾಷಾಶಾಸ್ತ್ರ ಕ್ಷೇತ್ರದಲ್ಲಿ ಇದೊಂದು ಹೆಮ್ಮರವಾಗಿ ಬೆಳೆದಿದೆ."[೪]

"ಕನ್ನಡ ಭಾಷೆ, ವ್ಯಕ್ತಿ ಭಾಷೆ ಮತ್ತು ಪ್ರಭೇದ ಭಾಷೆಗಳ ಮೊತ್ತವಾಗಿದೆ. ಹಾಗಾಗಿ ಒಬ್ಬ ವ್ಯಕ್ತಿ ಒಂದು ನಿರ್ದಿಷ್ಟ ಕಾಲ, ನಿರ್ದಿಷ್ಟ ಪರಿಸರದಲ್ಲಿ ಬಳಕೆ ಮಾಡುವ ಮಾತು ವ್ಯಕ್ತಿ ಭಾಷೆ ಎನಿಸಿದರೆ, ಇಂತಹ ಅನೇಕ ವ್ಯಕ್ತಿಗಳು ಒಂದು ನಿರ್ದಿಷ್ಟ ಕಾಲದಲ್ಲಿ, ನಿರ್ದಿಷ್ಟ ಪರಿಸರದಲ್ಲಿ, ನಿರ್ದಿಷ್ಟ ಉದ್ದೇಶಕ್ಕಾಗಿ ತಮ್ಮದೇ ಭಾಷಾಬಳಕೆಯ ವೈಶಿಷ್ಟ್ಯಗಳೊಂದಿಗೆ ಬಳಸುವ ಭಾಷೆಯನ್ನು "ಪ್ರಭೇದ ಭಾಷೆ" ಎಂದು ಕರೆಯುತ್ತಾರೆ. ಇಂತಹ ಪ್ರಭೇದಗಳ ಒಟ್ಟು ಮೊತ್ತವೇ ಉಪಭಾಷೆ

ಎನಿಸಿಕೊಳ್ಳುತ್ತದೆ. ವಾಸ್ತವವಾಗಿ ಪ್ರಭೇದ, ಉಪಭಾಷಾ ಪ್ರದೇಶ, ಭಾಷಾ ಪ್ರದೇಶಕ್ಕಿಂತ ಕಿರಿದಾಗಿರುತ್ತದೆ. ಇಂತಹ ಅನೇಕ ಉಪಭಾಷಾ ಪ್ರದೇಶಗಳು ಸೇರಿ ಒಂದು ಭಾಷಾ ಪ್ರದೇಶ ಅಥವಾ ಭಾಷೆಯಾಗಿ ಬಳಕೆಯಲ್ಲಿರುವುದು ಗಮನಾರ್ಹ ಸಂಗತಿಯಾಗಿದೆ. ಹಾಗಾದರೆ ಭಾಷೆ ಎಂದರೇನು? ಎಂಬ ಪ್ರಶ್ನೆ ಹುಟ್ಟುವುದು ಸಹಜ. ಪ್ಲೇಟೋ ಮಹಾಶಯನು ಭಾಷೆಯನ್ನು ಕುರಿತು "ಧ್ವನಿ ಸಂಕೇತಗಳ ಮೂಲಕ ಮನುಷ್ಯ ತನ್ನ ವಿಚಾರಗಳನ್ನು ಅಭಿವ್ಯಕ್ತಗೊಳಿಸುವ ಮಹತ್ ಸಾಧನವೇ ಭಾಷೆ" ಎಂದಿದ್ದಾನೆ. ಆಧುನಿಕ ಭಾಷಾಶಾಸ್ತ್ರಜ್ಞರು ಕೂಡ ಭಾಷೆಯನ್ನು ಕುರಿತು ವಿವಿಧ ರೀತಿಯಲ್ಲಿ ವ್ಯಾಖ್ಯಾನಿಸಿದ್ದಾರೆ. 'ಹೆನ್ರಿಸ್ವೀಟ್' ಅವರು "ಪದಗಳ ಮೂಲಕ ವಿಚಾರಗಳನ್ನು ಅಭಿವ್ಯಕ್ತಗೊಳಿಸುವುದು ಭಾಷೆ ಎನಿಸಿಕೊಳ್ಳುತ್ತದೆ" ಎಂದು ಅಭಿಪ್ರಾಯಪಟ್ಟಿದ್ದಾರೆ. ಒಟ್ಟಾರೆ ಭಾಷೆ ಎಂದರೆ ಒಂದು ಸಮಾಜದ ವ್ಯಕ್ತಿಗಳು ಪರಸ್ಪರ ವ್ಯವಹಾರಕ್ಕಾಗಿ ಬಳಸುವ ಸ್ವತಂತ್ರವಾದ ಧ್ವನಿಸಂಕೇತಗಳ ಒಂದು ವ್ಯವಸ್ಥೆ."[೫]

ಕೇವಲ ಸಾಹಿತ್ಯ ಕ್ಷೇತ್ರವಷ್ಟೇ ಒಳನುಡಿಗಳನ್ನು ಬಳಸಿಕೊಳ್ಳುತ್ತಿದೆ. ಮಾಧ್ಯಮ ಕ್ಷೇತ್ರದಲ್ಲಿ ಹೆಚ್ಚಾಗಿ ಪ್ರಮಾಣ ರೂಪವನ್ನೇ ಬಳಸುತ್ತಿರುವುದರ ಬಗ್ಗೆ ಅನೇಕ ವಿದ್ವಾಂಸರು ಚರ್ಚಿಸಿದ್ದಾರೆ. ವಿದ್ವಾಂಸರೆಲ್ಲರ ಅಭಿಪ್ರಾಯವು ಮಾಧ್ಯಮಗಳು ಹೆಚ್ಚು ಹೆಚ್ಚು ಒಳನುಡಿಗಳನ್ನು ಬಳಸಬೇಕು. ಆಗ ಮಾತ್ರ ಕನ್ನಡ ಭಾಷೆ ಉಳಿಯಲು ಸಾಧ್ಯ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಈಗಾಗಲೇ ಮಾಧ್ಯಮಗಳು ಒಂದು ಮಿತಿಯಲ್ಲಿ ಒಳನುಡಿಗಳನ್ನು ಬಳಕೆ ಮಾಡಿರುವುದನ್ನು ಗಮನಿಸಲಾಗಿದೆ. ಪ್ರಾದೇಶಿಕ ಪತ್ರಿಕೆಗಳು ಕೆಲವು ಚಲನಚಿತ್ರಗಳು ಹಾಗೂ ಧಾರಾವಾಹಿಗಳಲ್ಲಿ ಒಳನುಡಿಗಳನ್ನು ಬಳಸುತ್ತಿರುವುದನ್ನು ಈಗಾಗಲೇ ಕಂಡುಕೊಂಡಿದ್ದೇವೆ. ದೂರದರ್ಶನ ಧಾರಾವಾಹಿಗಳಲ್ಲಿ ನಾಲ್ಕು ಭಾಗಗಳಾಗಿ ವಿಂಗಡಿಸಿಕೊಳ್ಳಲಾಗಿದೆ. ಉದಾಹರಣೆಗೆ ಕೌಟುಂಬಿಕ ಧಾರಾವಾಹಿಗಳು, ಪ್ರಾದೇಶಿಕ ಧಾರಾವಾಹಿಗಳು, ಹಾಸ್ಯ ಧಾರಾವಾಹಿಗಳು ಮತ್ತು ಚಾರಿತ್ರಿಕ ಧಾರಾವಾಹಿಗಳು. ಈ ವಿಭಾಗ ಕ್ರಮದಲ್ಲಿ ಹೆಚ್ಚಾಗಿ ಪ್ರಾದೇಶಿಕ ಧಾರಾವಾಹಿಗಳಲ್ಲಿ ಒಳನುಡಿಯನ್ನು ಬಳಸಿಕೊಳ್ಳಲಾಗಿದೆ. ಇನ್ನುಳಿದ ಕೌಟುಂಬಿಕ, ಹಾಸ್ಯ, ಚಾರಿತ್ರಿಕ ಧಾರಾವಾಹಿಗಳಲ್ಲಿ ಅಲ್ಲಲ್ಲಿ ಕೆಲವು ಕೆಳವರ್ಗದ ಪಾತ್ರಗಳಿಗೆ ಸೀಮಿತಗೊಂಡಿರುವುದನ್ನು ಗುರುತಿಸಿಕೊಳ್ಳಲಾಗಿದೆ. ಅಲ್ಲದೇ ಈ ಧಾರಾವಾಹಿಗಳಲ್ಲಿ ಕೆಲವೇ ಕೆಲವು ಮೇಲ್ವರ್ಗ ಪಾತ್ರಗಳನ್ನು ಗ್ರಾಮೀಣ ಪ್ರದೇಶಕ್ಕೆ ಸೇರಿದ ಕೌಟುಂಬಿಕ, ಹಾಸ್ಯ ಧಾರಾವಾಹಿಗಳಲ್ಲಿ ಬಳಸಿಕೊಳ್ಳಲಾಗಿದೆ. ಹೆಚ್ಚಾಗಿ ಮಧ್ಯಮವರ್ಗ ಹಾಗೂ ಕೆಳವರ್ಗಗಳಿಗೆ ಸೀಮಿತವಾಗಿರುವುದನ್ನು ಈ ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ.

"ಕನ್ನಡ ಐವತ್ತು ವರ್ಷವನ್ನು ಆಚರಿಸಿ ಸುವರ್ಣ ಕನ್ನಡವಾಗಿರುವ ಈ ಹೊತ್ತಿನಲ್ಲಿ ಕನ್ನಡದ ಪ್ರಾದೇಶಿಕತೆ ಮತ್ತು ಸಾಮಾಜಿಕ ಪ್ರಭೇದಗಳ ಸ್ಥಿತಿಗತಿಯತ್ತ ತಿಳಿಯಬೇಕಾಗಿದೆ. ಅವುಗಳ ಅನನ್ಯತೆಯನ್ನು ಉಳಿಸಿಕೊಳ್ಳಬೇಕಾಗಿದೆ. ಅದಕ್ಕೆ ದಾರಿಗಳನ್ನು ಹುಡುಕಬೇಕಾಗಿದೆ. ಬದಲಾವಣೆಯನ್ನು ಬಯಸುತ್ತಾ, ಅವುಗಳ ಅನನ್ಯತೆಯನ್ನು ಉಳಿಸಿಕೊಳ್ಳುವ ದಿಕ್ಕಿನತ್ತ

ಚಿಂತಿಸಬೇಕಾಗಿದೆ. ಕನ್ನಡದ ಪ್ರಭೇದಗಳು ಹಾಳಾಗುತ್ತಿವೆ ಎಂದು ಉದ್ವೇಗದಿಂದ, ಭಾವಾನಾತ್ಮಕವಾಗಿ ಕೂಗುವುದರಿಂದ ಪ್ರಯೋಜನಾ ಕಡಿಮೆ. ಕೆಲವು ವಲಯಗಳಲ್ಲಿ ಕನ್ನಡ ಪ್ರಭೇದಗಳನ್ನು ಕಡ್ಡಾಯಗೊಳಿಸಬೇಕಾಗಿದೆ."[೬] ಈ ಹಿನ್ನೆಲೆಯಲ್ಲಿ ಟಿ.ವಿ.ಧಾರವಾಹಿಗಳಲ್ಲಿ ಒಳನುಡಿಗಳನ್ನು ಬಳಸುವ ಮೂಲಕ ಹೊಸ ಪ್ರಯೋಗಗಳನ್ನು ಮಾಡುತ್ತಿದ್ದಾರೆ. ಉದಾಹರಣೆಗೆ

'ದಿನಾಂಕ ೨೩-೮-೧೩ರಂದು ರಾತ್ರಿ ೮ ಗಂಟೆಗೆ ಸುವರ್ಣವಾಹಿನಿಯ 'ಅರಗಿಣಿ' ಎಂಬ ಧಾರಾವಾಹಿಯಲ್ಲಿ ಬಳಕೆಯಾದ ಒಳನುಡಿ.

ಖುಷಿ: ಅಬ್ಬಾ ಚಹಾ ಅಂಗಡಿ ಐತಿ ಒಂದು ಖಡಕ್ ಚಹಾ ಕುಡಿದು ಆಮೇಲೆ ಮುಂದೆ ಯೋಚನೆ ಮಾಡೋಣ. ಯಂಗು ನೌಕ್ರಿಯಂತು ಪಕ್ಕ ಆಯ್ತು. ಆ ಸಂತೋಷನಾ ಚಾ ಕುಡಿತ ದುಪ್ಪಟ್ಟು ಮಾಡಿಕೊಳ್ತೀನಿ. ನಮಸ್ಕಾರಿ ಅಣ್ಣಾರಾ ನೋಡಾಕಾ ನಮ್ಮೂರೋರು ಕಂಡಾಗ ಕಾಣಿಸ್ತೀರ ಬೆಂಗ್ಳೂರ್ನಾಗ ನಿಂತು ಬೀಜಪೂರ ನೆನಪಾಗಂಗೆ ಒಂದು ಖಡಕ್ ಚಾ ಕೊಡ್ರಿ ಮತ್ತ'(ಕೌಟುಂಬಿಕ ಧಾರಾವಾಹಿ). ಕೌಟುಂಬಿಕ ಧಾರಾವಾಹಿಗಳಲ್ಲಿ ಕೆಳವರ್ಗದ ಪಾತ್ರಗಳಿಗೆ ಮಾತ್ರ ಒಳನುಡಿಗಳು ಬಳಕೆಯಾಗುತ್ತಿವೆ. ಈ ಮುಖೇನಾ ಕನ್ನಡದ ಒಳನುಡಿಗಳು ವಿಸ್ತರಿಸಿಕೊಳ್ಳುವ ಪ್ರಯತ್ನ ನಡೆಯುತ್ತಲೇ ಇದೆ. ಮೇಲ್ವರ್ಗದ ಪಾತ್ರಗಳಲ್ಲಿ ಪ್ರಮಾಣೀಕರಣ ಕನ್ನಡ ಹಾಗೂ ಅನ್ಯ ಭಾಷಾಬಳಕೆ ಹೆಚ್ಚಾಗುವುದನ್ನು ಗುರುತಿಸಿಕೊಳ್ಳಲಾಗಿದೆ. ಧಾರಾವಾಹಿಗಳಲ್ಲಿ ಒಳನುಡಿಗಳನ್ನಾಗಿ ಬೇರೆ ಬೇರೆ ಪ್ರಾದೇಶಿಕ ಪ್ರಭೇದಗಳನ್ನು ಬಳಸಿಕೊಳ್ಳುವುದನ್ನು ಗುರುತಿಸಿಕೊಳ್ಳಲಾಗಿದೆ. ಈ ಮೂಲಕ ಧಾರಾವಾಹಿ ವೀಕ್ಷಕರಿಗೆ ಬೇರೆ ಬೇರೆ ಒಳನುಡಿಗಳ ಪರಿಚಯ ಆಗುತ್ತಿರುವುದು ಭಾಷೆ ಸಂವಹನಗೊಳ್ಳಲು ಸುಲಭವಾಗುತ್ತಿದೆ. ಆರಂಭದ ಕಾಲಘಟ್ಟದಲ್ಲಿ ಕೇವಲ ಪ್ರಮಾಣೀಕರಣ ಕನ್ನಡವನ್ನೇ ಹೆಚ್ಚಾಗಿ ಬಳಸಿಕೊಳ್ಳಲಾಗುತ್ತಿತ್ತು. ಕಾಲಾನಂತರ ಪ್ರಾದೇಶಿಕ ಪ್ರಭೇದಗಳನ್ನೆ ಬಳಸಿಕೊಂಡು ಯಶಸ್ವಿಯಾಗಿರುವುದನ್ನು ಕಂಡುಕೊಂಡಿದ್ದೇವೆ. ಉದಾ: "ಮೂಡಲ ಮನೆ" ಧಾರಾವಾಹಿ ಉತ್ತರ ಕರ್ನಾಟಕ ಪ್ರಾದೇಶಿಕ ಪ್ರಭೇದವನ್ನು ಬಳಸಿಕೊಂಡಿದ್ದರಿಂದ ಹೆಚ್ಚು ಮನ್ನಣೆ ಗಳಿಸಿಕೊಂಡಿತು. ಉತ್ತರ ಕರ್ನಾಟಕದ ಕೆಲವು ಒಳನುಡಿಗಳನ್ನು ಕೌಟುಂಬಿಕ ಧಾರಾವಾಹಿಗಳಲ್ಲಿ ಕೆಳವರ್ಗದ ಪಾತ್ರಗಳಿಗೆ ಸೀಮಿತಗೊಳಿಸಿರುವುದನ್ನು ಗುರುತಿಸಿಕೊಳ್ಳಲಾಗಿದೆ. ಈಗಾಗಲೇ ಡಿ.ಡಿ.೧ರಲ್ಲಿ ೯೦ರ ದಶಕದಲ್ಲಿ "ಮಲೆಗಳಲ್ಲಿ ಮದುಮಗಳು, ಗೃಹಭಂಗ, ಗುಡ್ಡದ ಭೂತ" ಧಾರಾವಾಹಿಗಳು ಪ್ರಸಾರವಾಗಿವೆ. ಈ ಧಾರಾವಾಹಿಗಳು ತಂತಮ್ಮ ಪ್ರಾದೇಶಿಕ ಒಳನುಡಿಗಳನ್ನು ನಿರೂಪಿಸುತ್ತವೆ. ಇತ್ತೀಚಿನ ದಿನಗಳಲ್ಲಿ ಹಾಸ್ಯಕ್ಕೆಂದೇ ಹೆಚ್ಚಾಗಿ ಒಳನುಡಿಗಳನ್ನು ಬಳಸಿಕೊಳ್ಳುತ್ತಿರುವುದು ವಿಪರ್ಯಾಸದ ಸಂಗತಿಯಾಗಿದೆ. ಅಂದರೆ ಗೇಲಿ ಮಾಡುವಂತಿರುತ್ತದೆ. ಕಾರಣ ಹಾಸ್ಯ ಧಾರಾವಾಹಿಗಳಲ್ಲಿ ಮಂಗಳೂರು ಕನ್ನಡ, ಉತ್ತರ ಕರ್ನಾಟಕದ ಕನ್ನಡ, ಬೆಂಗಳೂರು ಮತ್ತು ಮೈಸೂರು ಕನ್ನಡವನ್ನು ಬಳಸಿಕೊಳ್ಳಲಾಗಿದೆ. ಪಂಚರಂಗಿ ಪೊಂ ಪೊಂ

ಎನ್ನುವ ಧಾರಾವಾಹಿಗಳಲ್ಲಿ ಒಳನುಡಿಗಳನ್ನು ಗೇಲಿ ಮಾಡಲಿಕ್ಕಾಗಿಯೇ ಬಳಸಿ ಕೊಳ್ಳುತ್ತಿರುವುದನ್ನು ಗುರುತಿಸಿಕೊಳ್ಳಲಾಗಿದೆ.

ಭಕ್ತಿಪ್ರಧಾನ ಮತ್ತು ಚಾರಿತ್ರಿಕ ಧಾರಾವಾಹಿಗಳಲ್ಲಿ ಒಳನುಡಿಗಳ ಬಳಕೆ ವಿರಳವಾಗಿದೆ. ಈ ಎಲ್ಲಾ ಮಾದರಿಗಳನ್ನು ಧಾರಾವಾಹಿಗಳನ್ನು ವೀಕ್ಷಿಸುವ ಮೂಲಕ ಕಂಡುಕೊಳ್ಳಲಾಗಿದೆ. ಅಲ್ಲದೆ ಈ ಮೇಲಿನ ಉದಾಹರಣೆಯನ್ನು ಹೋಲುವಂತವುಗಳನ್ನು ಸಂಗ್ರಹಿಸಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಖುಷಿ: ದುರ್ಗಾದೇವಿ ನೀ ಇಲ್ಲದೆ ಇರೋ ಜಾಗ ಇಲ್ಲ ಅನ್ನೋದಕ್ಕೆ ಇದೆ ಸಾಕು. ಅರೆ ದೀಪಾ ಐತಿ, ಎಣ್ಣೆನೂ ಐತಿ, ಬತ್ತಿನೂ ಐತಿ, ಆದ್ರೆ ಹಚ್ಚಿಲ್ಲ. ಇಲ್ಲಿರೋ ಜನಕ್ಕಾ ದೀಪನು ಹಚ್ಚೋದಕ್ಕ ಪುರಸೊತ್ತು ಇಲ್ಲ ಅನ್ನಾಂಗ ಕಾಣಿಸ್ತದ. ನಿನ್ನ ಶೋಕೇಸ್ ಗೊಂಬೆ ಅಂತ ಅಂದುಕೊಂಡು ಬಿಟ್ಟಿದ್ದಾರೆ. ಅದಕ್ಕಾ ಯಾರ ಮಾರಿನಾಗು ಸಂತೋಷ ಅನ್ನೋದೆ ಕಾಣುವಲ್ದು.

(ದಿನಾಂಕ ೨೩-೮-೧೩ರಂದು ಸುವರ್ಣವಾಹಿನಿಯಲ್ಲಿ ರಾತ್ರಿ ೮ ಗಂಟೆಗೆ ಅರಗಿಣಿ ಧಾರಾವಾಹಿಯಲ್ಲಿ ಬಳಕೆಯಾದ ಒಳನುಡಿ) ಈ ಒಳನುಡಿಯು ಖುಷಿ ಎನ್ನುವ ಪಾತ್ರಕ್ಕೆ ಮತ್ತು ಖುಷಿಯ ಕುಟುಂಬಕ್ಕೆ ಮಾತ್ರ ಸೀಮಿತವಾಗಿದೆ. ಸಾಮಾಜಿಕ ಸ್ತರದಲ್ಲಿ ಕೆಳವರ್ಗಕ್ಕೆ ಸೇರಿದವರಾಗಿರುವುದರಿಂದ ಒಳನುಡಿಗಳ ಬಳಕೆಯನ್ನು ಈ ಪಾತ್ರಕ್ಕೆ ಸೀಮಿತಗೊಳಿಸಲಾಗಿದೆ. ಅಲ್ಲದೇ ಇವರ ಮಾತಿಗೂ ಅಥವಾ ಈ ಪಾತ್ರಗಳು ತಂತಮ್ಮ ಪರಿಸರದ ಒಳನುಡಿಗಳ ಬಳಕೆಯ ಜೊತೆ ಉಡುಪುಗಳ ವಿನ್ಯಾಸವು ಕೂಡ ಕಳಚಿಕೊಳ್ಳದೇ ಇತ್ತೀಚಿನ ಫ್ಯಾಷನ್ ಡ್ರೆಸ್‌ಗಳನ್ನು ಹಾಕದೆ ಇರುವುದನ್ನು ಈ ಪಾತ್ರಗಳು ನಿರೂಪಿಸುತ್ತದೆ. ಇಂತಿಂತಹ ಪಾತ್ರಗಳಿಗೆ ಇಂತಿಂತಹ ವರ್ಗಗಳಿಗೆ ಇಂತದ್ದೇ ಒಳನುಡಿ ಇರಬೇಕು ಎಂಬ ಪ್ರಶ್ನೆಯನ್ನು ಹಾಕಿಕೊಂಡು ಧಾರಾವಾಹಿ ನಿರ್ದೇಶಕರು ನಿರ್ದೇಶನ ಮಾಡುತ್ತಾರೆ. ಈ ಹಿನ್ನೆಲೆಯಲ್ಲಿ ಭಾಷಾ ಬದಲಾವಣೆ ಮತ್ತು ಉಡುಪುಗಳ ಬದಲಾವಣೆ ನಡೆದುಕೊಳ್ಳುವ ರೀತಿ ನೀತಿಗೂ ವ್ಯತ್ಯಾಸ ಇರುವುದನ್ನು ಕಂಡುಕೊಳ್ಳಲಾಗಿದೆ. ಕೌಟುಂಬಿಕ ಧಾರಾವಾಹಿಗಳಲ್ಲಿ ಹೆಚ್ಚಾಗಿ ಅಡಿಗೆ ಕೆಲಸದ ಪಾತ್ರಗಳು ಹಾಗೂ ಉತ್ತರ ಕರ್ನಾಟಕದ ಪಾತ್ರಗಳಿಗೆ ಸೀಮಿತವಾಗಿದೆ.

ದಿನಾಂಕ ೯-೭-೧೩ರಂದು ರಾತ್ರಿ ೭.೩೦ಕ್ಕೆ ಸುವರ್ಣವಾಹಿನಿಯ ಅಮೃತವರ್ಷಿಣಿ ಧಾರಾವಾಹಿಯಲ್ಲಿ ಯಶೋಧಳ ಒಳನುಡಿ ಈ ರೀತಿ ಇದೆ.

ಯಶೋಧ: "ಇಲ್ಲ ಪೋಲಿಸಪ್ಪ ಇವ್ರೆಲ್ಲ ಸುಳ್ಳು ಹೇಳಿ ತಪ್ಪಿಸಿಕೊಳ್ಳೋಕೆ ಪ್ರಯತ್ನ ಮಾಡ್ತಿದ್ದಾರೆ. ನಿವ್ ಇವ್ರ ಮಾತ ಕೇಳಿ ಇಲ್ದೆ ಇದ್ರೆ ನಿಮ್ಗು ಮಂಕುಬೂದಿ ಎರ್ಚಿ ಬಿಡ್ತಾರೆ. ಮೊದ್ಲೊ ಇವ್ರಿಗೆ ಸ್ಟೇಷನ್‌ಗೆ ಕರೆದುಕೊಂಡು ಹೋಗಿ."

ಸಂದರ್ಭ: ದೇಸಾಯಿ ಮನೆತನಕ್ಕೆ ವರ್ಷಿಣಿಯನ್ನು ಕೊಟ್ಟು ಮದುವೆ ಮಾಡಿರುತ್ತಾಳೆ. ಕಾರಣಾಂತರದಿಂದ ಗಂಡನ ಮನೆ ಬಿಟ್ಟು ತವರಿಗೆ ಬಂದಿರುತ್ತಾಳೆ. ಪುನಃ ಗಂಡನ ಮನೆ

ಸೇರಿಸುವ ಪ್ರಯತ್ನ ಮಾಡುತ್ತಾಳೆ. ಗಂಡನ ಮನೆಯವರು ನಿರಾಕರಿಸಿದಾಗ ಅವರ ಮೇಲೆ ಸುಳ್ಳು ಕಂಪ್ಲೆಂಟ್ ಕೊಡುತ್ತಾಳೆ. ಆಗ ಈ ಒಳನುಡಿ ಬಳಕೆಯಾಯಿತು.

ದಿನಾಂಕ ೧೬-೭-೧೩ರಂದು ಉದಯ ವಾಹಿನಿಯಲ್ಲಿ ರಾತ್ರಿ ೯ ಗಂಟೆಗೆ ಬಂಗಾರ ಧಾರಾವಾಹಿಯಲ್ಲಿ ಬಳಕೆಯಾದ ಸಂದರ್ಭ.

'ಮೃತ್ಯುಂಜಯನು ಕುಲಶೇಖರನ ಮನೆಗೆ ಬಂದು ಸೌಪಾನಿಕಳ ವಿಷಯವನ್ನು ಮಾತನಾಡುತ್ತಾ ಇವರಿಬ್ಬರ ಚರ್ಚೆ ಕುತಂತ್ರದಲ್ಲಿ ಮುಕ್ತಾಯವಾಗುತ್ತದೆ. ಈ ಚರ್ಚೆಯ ನಂತರ ಕುಲಶೇಖರ ಮತ್ತು ಅವನ ಮಗಳು ಸೇರಿ ಈ ಮಾತುಗಳನ್ನಾಡುತ್ತಾರೆ. "ಅಪ್ಪಯ್ಯ, ಅಪ್ಪಯ್ಯ, ಅಪ್ಪಯ್ಯ, ಏನ್ ಅಪ್ಪಯ್ಯ ನಿನ್ನ ತಲೇ ಎಂಥೆಂತ ಉಪಾಯಗಳು ಒಳೆಯುತ್ತೆ ಅಪ್ಪಯ್ಯ. ಈಗ ಮಾಡಿರೋ ಉಪಾಯ ಒಳ್ಳೆ ತಳಪಾಯ ಇದ್ದಾಗೆ. ಇನ್ನು ಅದು ಮಹಡಿ ಹೇರಿದ್ರೆ ಅದು ಯೋಚನೆ ಮಾಡೋಕೆ ಆಗ್ತಿಲ್ಲ ಅಪ್ಪಯ್ಯ".

ಕುಲಶೇಖರ: ಕೂಸೆ ನನ್ನ ಉಪಾಯಗಳು ತಳಪಾಯ ಮಹಡಿ ಅಂತಸ್ತು ಅಂತ ಬೆಳಿತಾ ಹೋಗೋದಲ್ಲ. ಅಂತಸ್ತು ಅಂತಸ್ತುಗಳನ್ನು ನೆಲಸಮ ಮಾಡೋದಕ್ಕೆ ನಾನು ಕೈ ಹಾಕಿರೋದು.

ಕಟ್ಟಡ ಕಟ್ಟೋದಕ್ಕಲ್ಲಮ್ಮ ತಳಪಾಯಕ್ಕೆ ಸೌಪಾನಿಕಳನ್ನು ಹಿಡಿದುಕೊಂಡು, ಕಾಂಚನನ ತಾಯಿ ಬೇರನ್ನ ಹಿಡಿದು ಎಳೆಯೋದಕ್ಕೆ, ನಾವು ಎಳೆಯೋ ಹೊಡ್ತಕ್ಕೆ ಎಂಥ ಹೆಮ್ಮರವಾದ್ರು ಉರುಳ್ಳೇಬೇಕು.

ಮೇಲ್ವರ್ಗದ ಪಾತ್ರಗಳಾದರೂ ತಮ್ಮ ಒಳನುಡಿಗಳನ್ನು ಕಳಚಿಕೊಳ್ಳದೆ ಇರುವುದಕ್ಕೆ ಕಾರಣ ಒಳನುಡಿಗಳ ಸ್ವರೂಪವು ಬದಲಾಗಿರುವುದು. ಕುತಂತ್ರ ಮಾಡುವಂತಹ ಮೇಲ್ವರ್ಗದ ಪಾತ್ರಗಳಿಗೆ ಒಳನುಡಿಗಳು ಬಳಕೆಯಾಗುತ್ತಿವೆ. ಈ ಬೆಳವಣಿಗೆಯು ಕೌಟುಂಬಿಕ ಎಲ್ಲಾ ಧಾರಾವಾಹಿಗಳಿಗೆ ಸೀಮಿತವಾಗಿವೆ.

ದಿನಾಂಕ ೪-೩-೨೦೧೩ರಂದು ಈಟಿವಿ ಕನ್ನಡ ವಾಹಿನಿಯ 'ಲಕ್ಷ್ಮೀ ಬಾರಮ್ಮ' ಧಾರಾವಾಹಿಯಲ್ಲಿ ರಾತ್ರಿ ೭.೩೦ಕ್ಕೆ ಪ್ರಸಾರವಾಗಿದೆ. ಈ ಸಂಚಿಕೆಯಲ್ಲಿ ಒಳನುಡಿಗಳ ಬಳಕೆ. ಮದುವೆಯ ಸಂದರ್ಭ.

ಪೂಜಾರಪ್ಪ: ಮುಹೂರ್ತ ಮೀರ್ತಾ ಇದೆ. ಮಾಂಗಲ್ಯಧಾರಣೆ ಮಾಡಿಸಬಹುದಾ?

ಮನೆಯವರು: ಸ್ವಲ್ಪ ತಡೀರಿ ಬುದ್ದಿ ನಮಗೆ ಬೇಕಾದವರೊಬ್ಬರು ಬರ್ಬೇಕು.

ಪೂಜಾರಪ್ಪ: ಮುಹೂರ್ತ ಯಾರನ್ನು ಕಾಯೋದಿಲ್ಲಮ್ಮ, ಅಷ್ಟು ಬೇಕಾದವರಾದ್ರೆ ಇಷ್ಟೊತ್ತಾದ್ರು ಬೇಗ ಯಾಕ್ ಬಂದಿಲ್ಲ.

ಕಾವೇರಮ್ಮ: ಈಚೆಗೆ ನಮ್ಮೂರ್ನಾಗೆ ಈ ಹುಡುಗಿ ಮಾಂಗಲ್ಯ ಮುಟ್ಟಿಲ್ಲ ಅಂದ್ರೆ ಮದುವೇನೆ ಆಗೋಕಿಲ್ಲ.

ಮದುವೆಗೆ ಬಂದವರು: 'ಪೂಜಾರ್ರೆ ನಮ್ಮೂರ್ನಾಗೆ ಬಿತ್ನೆ ಕಾಳನ್ನ ಆ ಹುಡುಗಿ ಕೈಲೆ ಮುಟ್ಸಿ ಬಿತ್ನೆ ಮಾಡೋದು.

ನಾಗಮ್ಮ: ಖಳನಾಯಕಿ

ಮೊಮ್ಮಗ: ಅಜ್ಜೀ ಅಜ್ಜೀ

ತಾತಮ್ಮ: ಏನ್ಲಾ

ಮೊಮ್ಮಗ: ಹೊತ್ತಾರೆ ಎದ್ದು ಮಿಟಾಯಿ ಕೊಡ್ತೀನಿ ಅಂದೆಲ್ಲ ಕೊಡು ಈಗ.

ತಾತಮ್ಮ: ಹೊತ್ತಾರೆ ಎದ್ದು ಏನ್ಲಾ ಹಟ ಮಾಡ್ತಾ ಇದೀಯಾ. ಹೊಗ್ಲಾ ಕೈಕಾಲು ಮುಖ ತೊಳೆದುಕೊಂಡು ಬಾ.

ನಾಗಮ್ಮ: ನನ್ನ ತಮ್ಮಯ್ಯ ಹೊತ್ತಾರೆ ಎದ್ದು ಅವಳ ಮುಖ ನೋಡ್ದೆ ಹೋದ್ರೆ ಆಕಾಶಾನೂ ಭೂಮಿನೂ ಒಂದ್ ಮಾಡಿಬಿಡ್ತಾನೆ. ಎಲ್ಲೋದ್ಲೊ ಈ ದರಿದ್ರೋಳು. ಹತ್ತೆ, ಹತ್ತೆ ಎಲ್ಲಿ ಕಳ್ಸಿದಿರಿ ನಿಮ್ಮ್ ಮೊಮ್ಮಗಳ್ನ.

ತಾತಮ್ಮ: ಅಯ್ಯೊ ನಿಂದೊಳ್ಳೆ ಕಥೆಯಾಯ್ತಲ್ಲೆ ನಾಗಿ. ನಾನು ಎಲ್ಲಿಗೂ ಕಳ್ಸಿಲ್ಲ ಅವ್ಳ.

ನಾಗಮ್ಮ: ಮತ್ತೆಲ್ಲಿಗೆ ಹೋದ್ಲು!. ತಮ್ಮ ಕೇಳಿದ್ರೆ ಏನ್ ಹೇಳೋದು? ಹೊತ್ತಾರೆ ಎದ್ದು ಯಾವುದೊ ದೊಡ್ಡ ಕೆಲ್ಸಕ್ಕೆ ಹೋಗ್ಬೇಕು ಅಂತ ಹೇಳಿದ್ದ. ಹೊತ್ತಾರೆ ಎದ್ದು ಲಚ್ಚಿ ಕೈಗೆ ಟೀ ಕಳ್ಸು ಅಂತ ಹೇಳಿದ್ದ.

ಪೂಜಾರಿ: ತಗೋಳಿಪ್ಪಾ ಮಾಂಗಲ್ಯ ಧಾರಣೆ ಮಾಡಿ.

ಕಾವೇರಮ್ಮ: ಲಚ್ಚಿ ಎಲ್ಲವ್ವ?(ಎಲ್ಲಿ ಎನ್ನುವುದಕ್ಕೆ)

ವಧುವಿನ ತಾಯಿ: ಲಚ್ಚಿ ಹೊರ್ಬೊದ್ದಳಕ್ಕ.

ಮದುವೆಗೆ ಬಂದವರು: ಕಾವೇರಕ್ಕ ನಿನ್ನ ಮಗಳು ಲಚ್ಚಿ ಒಂದೇ ವಾರ್ಗೆಯವರಲ್ಲ?

ಕಾವೇರಮ್ಮ: ಹೂಕಣವ್ವ ಸಂಕ್ರಾಂತಿಗೆ ಎರಡು ದಿನ ಮುಂಚೆ ಹುಟ್ಟಿದ್ಲು, ನನ್ನ ಮಗಳು ಶಿವರಾತ್ರಿಗೆ ಮೂರು ದಿನ ಮುಂಚೆ ಹುಟ್ಟಿದ್ಲು. ಅಂಗ್ ನೋಡಿದ್ರೆ ಲಚ್ಚಿ ನನ್ ಮಗಳಿಗಿಂತ ಒಂದು ತಿಂಗ್ಳು ದೊಡ್ಡೋಳು ಕಣವ್ವ, ಲಚ್ಚಿ ಅಪ್ಪ ಮಾದೇಗೌಡ ಜೀಮಾತ್ರ ಬದುಕಿದ್ದುದ್ರೆ ಈ ಟೋತ್ತಿಗೆ ಗಂಡು ಹುಡ್ಕಿ ಮದುವೆ ಮಾಡ್ತಿದ್ರು, ಆದ್ರೆ ಮನೆ ಬಾಳ್ತಾನ ನೋಡಿಕೊಳ್ತಿರೋನು ಸ್ವಾದ್ರಮಾವ ಬೋರೆಗೌಡ ಅವ್ನು ಮನಸ್ಸು ಮಾಡ್‌ಬೇಕು.

ಮದುವೆಗೆ ಬಂದವರು: ಪಾಪದ ಹುಡುಗಿ ಲಚ್ಚಿ ಆ ಹುಡುಗಿ ಮಾಂಗಲ್ಯ ಮುಟ್ಟಿದ್ರೆ ಅದೃಷ್ಟ ಅಂತಾರೆ. ಅಂತ ಹುಡುಗಿ ಮದುವೆ ಆಗ್ಬೇಕಾದ್ರೆ ಆ ಹುಡುಗಿ ಎಷ್ಟು ಪುಣ್ಯ ಮಾಡಿರ್ಬೇಕು.

ಕಾವೇರಮ್ಮ: ಅಂತ ಹುಡ್ಗಿ ಹಣೆಯಲ್ಲಿ ವಿದಿಯಮ್ಮ ಒಳ್ಳೆ ಹುಡ್ಗನ್ನೆ ಬರ್ದಿರ್ತಾಳೆ.

ನಾಗಮ್ಮ: ಸುಜಾತ ಯಾರಿಗೆ ಟೀ ತಗೊಂಡು ಹೋಯ್ತ ಇದೀಯಾ?

ಸುಜಾತ: ಚಿಕ್ಕಪ್ಪನಿಗೆ ಟೀ ತಗೊಂಡು ಹೋಯ್ತಾ ಇದೀನಿ ಅತ್ತೆಮ್ಮ.

ನಾಗಮ್ಮ: ತಲೆ ಕೆಟ್ಟಿದೆ ಏನೇ ನಿನ್ಗೆ? ಈ ಮನೆಯ ರೀತಿ ರಿವಾಜು ಮರ್ತೋಯ್ತಾ ಹೊತ್ತಾರೆ ಎದ್ದು ಅವ್ಳ ಮುಖಾನೇ ನೋಡುದು ಅಂತ ನಿನಗೆ ಗೊತ್ತಿಲ್ವಾ? ಹೊತ್ತಾರೆದ್ದು ಅವ್ಳ ಮುಖ ನೋಡಿದ್ರೆ ಅದೃಷ್ಟ ಬರುತ್ತೆ ಅಂತ ಯಾವ್ ನನ್ನ ಮಗ ಹೇಳಿದ್ನೊ, ಲಚ್ಚಿ ಮಕ್ಕಕ್ಕೇ ಮಣ್ಣಾಕಾ. ಇಷ್ಟು ದಿನ ಏನು ಅಂತ ಗೊತ್ತಿದ್ರು, ನೀನೆ ತಗೊಂಡು ಹೋಗಿ ಕೊಡ್ತೀಯಲ್ಲೆ, ಎಲ್ಲೋದ್ಲು ಆ ದರಿದ್ರದೋಳು.

ಸುಜಾತ: ಹೊತ್ತಾರೆ ಎದ್ದು ಎಲ್ಲಿ ಹೋಯ್ತಾ ಇದೀಯಾ ಅಂತ ಕೇಳಿದ್ರೆ, ಹಾಗೆ ಹೊಂಟೋದ್ಲು. ಉತ್ರ ಕೊಡ್ದೆ ಹೊಂಟೋದ್ಲು.

ನಾಗಮ್ಮ: ಇವತ್ತು ಅವ್ಳ್ ಬರ್ಲಿ. ಅವ್ಳಗಿದೆ ಮಾರಿ ಹಬ್ಬ. ಆ ಹಾದ್ರಗುಟ್ಟಿದೋಳ್ ಮಕದಲ್ಲಿ ಅದೇನು ಅಂತ ಅದೃಷ್ಟ ಬರದ್ನೊ, ಅವ್ನಗೆ ಗೊತ್ತಾಗ್ಬೇಕು.

ಬೋರೆಗೌಡ: ಹೇ ನಿನ್ನ ಮಂಜಳಾಗ ಇನ್ನೂ ಇಲ್ಲೇ ನಿಂತ್ಕೊಂಡಿದೀಯ ಗರುಡಗಂಭದ ತರ. ಹೋಗು ಅಂತ ಆಗ್ಲೆ ಹೇಳ್ಲಿಲ್ವಾ, ಹಟ್ಟಿನಾಗೆ ಏನು ಮಾಡೋಕೆ ಜ್ಞಾನ ಇಲ್ವಾ, ಮಕ ತೋರಿಸಿದ್ದು ಆಯ್ತು, ಟೀ ಕೊಟ್ಟಿದ್ದು ಆಯ್ತು ಹೊಯ್ತಾ ಇರು, ಹೊಯ್ತಾ ಇರು.

ಬಸ್ವ: ಮಾವಯ್ಯ ಆ ರುದ್ರಗೌಡ ಜಿಲ್ಲಾ ಪಂಚಾಯ್ತಿ ಎಲೆಕ್ಷನ್ ಒಳಗೆ ನಿನ್ನ ಎದುರು ನಿಂತು ಬಿಟ್ಟವ್ನೆ, ಎಷ್ಟು ಹೇಳಿದ್ರೂ ಕೇಳ್ತಾ ಇಲ್ಲ. ಎಷ್ಟು ಎದ್ರುಸಿದ್ರು ಜಗ್‌ತಾ ಇಲ್ಲಾ, ಬಡ್ಡಿಹೈದಾ ಕಾಸು ಕೇಳ್ತಾ ಇಲ್ಲ.

ಬೋರೆಗೌಡ: ಬಸ್ವ ಅವ್ನು ಜಾತಿ ನಂಬಿಕೊಂಡು ರಾಜಕೀಯ ಮಾಡ್ತಾವ್ನೆ. ನಾನು ಶ್ರೀಲಕ್ಷ್ಮಿ ನಂಬಿಕೊಂಡು ಹಣ ಕೂಡ ರಾಜಕೀಯ ಮಾಡ್ತಿವ್ನಿ. ಗಾದೆ ಮಾತು ಕೇಳ್ಲಿಲ್ವೇನ್ಲಾ, "ಹಣ; ಹಣ ಎಂದರೆ ಹೆಣ ಕೂಡಾನೂ ಬಾಯಿ ಬಿಡ್ತಾದೆ. ಈಗಿನ ಕಾಲ್ದಗೆ ಎದ್ರುಸಿ ಬೆದ್ರಿಸಿ ರಾಜಕೀಯ ಮಾಡೋಕಾಗಲ್ಲ. ರಾಜಕೀಯ ಮಾಡ್ಬೇಕು ಅಂದ್ರೆ ಕೋಟಿ, ಕೋಟಿ ಹಣ ಬೇಕು."

ಉದಯವಾಹಿನಿಯಲ್ಲಿ ರಾತ್ರಿ ೯.೩೦ಕ್ಕೆ ಮದರಂಗಿ ಧಾರಾವಾಹಿ ೧೧೦ನೇ ಎಪಿಸೋಡ್ನಲ್ಲಿ ಬಳಕೆಯಾದ ಒಳನುಡಿಗಳು. ಈ ಧಾರಾವಾಹಿಯಲ್ಲಿ ಮೂರು ಪ್ರಾದೇಶಿಕ ಒಳನುಡಿಗಳನ್ನು

ಬಳಸಿಕೊಳ್ಳಲಾಗಿದೆ. ಈ ಮೂಲಕ ವಿಶೇಷತೆಯನ್ನು ಮೆರೆದಿದ್ದಾರೆ. ಈವರೆಗೂ ಒಂದು ಪ್ರಾದೇಶಿಕ ಪ್ರಭೇದವನ್ನು ಬಳಸಿಕೊಳ್ಳುತ್ತಿದ್ದು ಸಾಮಾನ್ಯ. ಆದರೆ ಇತ್ತೀಚಿನ ದಿನಗಳಲ್ಲಿ ಒಂದೇ ಧಾರಾವಾಹಿಯಲ್ಲಿ ಮೂರರಿಂದ ನಾಲ್ಕು ಪ್ರಾದೇಶಿಕ ಒಳನುಡಿಗಳನ್ನು ಒಂದೊಂದು ಕುಟುಂಬಕ್ಕೆ ಸೀಮಿತಗೊಳಿಸಲಾಗಿದೆ. ವಿವಿಧ ಭಾಷಾಪ್ರಭೇದದ ಸೊಗಡನ್ನು ಈ ಮೂಲಕ ವೀಕ್ಷಕರ ಅರಿವಿಗೆ ತರುವ ಪ್ರಯತ್ನ ಇದಾಗಿದೆ.

ಮಂಗಳೂರಿನ ಒಳನುಡಿ ರಾಘಣ್ಣನ(ನೃತ್ಯಗಾರ) ಕುಟುಂಬಕ್ಕೆ ಸೀಮಿತವಾಗಿದೆ.

ನಾಣಿ: ಶಶಿಗೆ ಕಾಲಿನ ಪೆಟ್ಟು ಮಾತ್ರ ಅಲ್ಲ, ಎದೆ ಹತ್ತಿರವೂ ಒಳಗೆ ಪೆಟ್ಟಾಗಿದೆಯಂತೆ, ಅದು ಸ್ವಲ್ಪ ಡೇಂಜರ್.

ರಾಘಣ್ಣ: ಹೌದ ಹಾಗಾದ್ರೆ ಶಶಿಗೆ ಮೊದಲಿನ ಹಾಗೆ ವೇಷಾ ಹಾಕಲಿಕ್ಕಾಗದಾ.

ನಾಣಿ: ಇಲ್ಲ ಯಜಮಾನ್ರೆ ಅಂವ ಪೂರ್ತಿ ಗುಣವಾಗುವವರೆಗೆ ಇನ್ನು ಯಾವ ವೇಷವು ಇಲ್ಲ. ಕುಣಿತವು ಇಲ್ಲ. ಇನ್ನು ಬೇರೆ ದಾರಿ ಇಲ್ಲ ಯಜಮಾನ್ರೆ, ತೋಟದಲ್ಲಿ ಬೆಳೆ ತೆಗೆಯೋ ಕೆಲ್ಸನೆ ಮಾಡ್ಬೇಕಾಗ್ತಾ ಉಂಟೋ ಏನೊ?

ರಾಘಣ್ಣ: ಯಂತ ಹೇಳ್ತಿಯ ನಾಣಿ. ನಮ್ಮಂತ ಕಲಾವಿದರೂ ಕಲಾಕ್ಷೇತ್ರದಲ್ಲಿ ಬೆಳೆ ತೆಗೀಬೇಕು. ಅದು ಬಿಟ್ಟು ತೋಟದಲ್ಲಿ ಕೆಲಸ ಮಾಡುವುದಾ?

ನಾಣಿ: ಮತ್ತೆ ಯಂತ ಮಾಡುವುದು ಯಜಮಾನ್ರೆ? ಅವನ ಈ ಪರಿಸ್ಥಿತಿಯಲ್ಲಿ ಆಟದಲ್ಲಿ ವೇಷಾ ಕಟ್ಟೂದು ದೂರದ ಮಾತೆ! ಕೆಲಸದವರತ್ರ ನಿಂತು ತೋಟದ ಕೆಲ್ಸ ಮಾಡಿಸ್ಲಿ ಬಿಡಿ. ನನಗೂ ಗೊತ್ತು ಒಮ್ಮೆ ಮುಖಕ್ಕೆ ಬಣ್ಣ ಹಚ್ಚಿದ್ರೆ ಅದ್ರ ಸೆಳೆತ ಕೊನೆಯವರೆಗೂ ಬಿಡೋಲ್ಲಂತ. ಛಂಡೆ(ಚಂಡೆ) ಸದ್ದು ಕೇಳಿದ ಕೂಡ್ಲೆ ಯಂತವನಿಗೂ ಕಾಲು ದಿಗಣ ಹತ್ತಲಿಕ್ಕೆ ತಯಾರಾಗಿ ಬಿಡ್ತಾದೆ.

ರಮಾ ರಾಘಣ್ಣನ ಹೆಂಡತಿ: ನಿಮ್ಮ ಚಂಡೆ ಶಬ್ದ ಕೇಳಿ ನನ್ನ ಮೆದುಳಿಗೆ ದಿಗಣ ಹತ್ತ ಉಂಟು. ಎಲ್ಲಿ ಶಶಿ ಎದ್ದು ಕುಣೀಲಿಕ್ಕೆ ಶುರು ಮಾಡಿಬಿಡ್ತಾನೋ ಅಂತ.

ನಾಣಿ: ಹಾಗೆಲ್ಲ ಮಾತಾಡಬೇಡಿ. ಏನು ಆಗೋದಿಲ್ಲ. ಎಲ್ಲಾ ಸರಿಯಾಗ್ತದೆ. ನೀವೇನೂ ಯೋಚನೆ ಮಾಡ್ಬೇಡಿ ಯಜಮಾನ್ರೆ, ನೀವ್ ಈಗ ಯೋಚನೆ ಮಾಡ್ತಾ ಕೊರಗಬೇಡಿ. ನನಗೆ ಕೆಲಸವುಂಟು, ನಾನು ಹೊರಡ್ತೇನಿ. ಅಕ್ಕ ನೀವು ಅಷ್ಟೇ ಏನೂ ಯೋಚನೆ ಮಾಡ್ಬೇಡಿ. ಎಲ್ಲಾ ಸರಿಹೊಗ್ತದೆ. ಮಂಡೆ ಬಿಸಿ ಮಾಡಿಕೋಬೇಡಿ. ನಾ ಇನ್ನ ಬರ್ತಾನೆ.

ವತ್ಸಲಾ: ಒಳಗಡೆ ಏನು ಮಾತಾಡ್ತಾ ಇದ್ದದ್ದು ನಾಣಿ. ಓಡಿ ಹೋಗ್ತಾರಾಂತ.

ನಾಣಿ: ಓಡಿಯೂ ಹೋಗೋದಿಲ್ಲ, ನಡೆದುಕೊಂಡು ಹೋಗೋದಿಲ್ಲ. ಅಲ್ಲ! ಅವ್ರು ಮನೆ ಬಿಟ್ಟು ಹೋಗೋದನ್ನೇ ನೀವು ಕಾಯ್ಕಂಡಿದಿರೋ ಹ್ಯಾಗೆ.

ವತ್ಸಲಾ: ಹಾಗಲ್ಲ ನಾಣಿ. ಶಶಿಯ ಈಗಿನ ಪರಿಸ್ಥಿತಿ ನೋಡಿದ್ರೆ ಅಕ್ಕನ ಜಾಗದಲ್ಲಿ ಯಾರು ಇದ್ದಿದ್ರೂ ಇಷ್ಟೊಟ್ಟಿಗೆ ಕೆರೆಗೋ ಬಾವಿಗೋ ಹಾರಿ ಪ್ರಾಣಾನೇ ಕಳ್ಕೊಂಡು ಬಿಟ್ಟಿರೋರು ಅಲ್ವಾ?

ನಾಣಿ: ಹಾಗಾದ್ರೆ ಅಕ್ಕ ಜೀವ ತೆಕ್ಕಳ್ಳದೇ ಇದ್ದಿದ್ದಕ್ಕೆ ನಿಮಗೆ ಬೇಜಾರಾಗ್ತಾ ಉಂಟಾ?

ವತ್ಸಲಾ: ಅದರ ಬಗ್ಗೆ ಬೇಜಾರು ಮಾಡಿಕೊಳ್ಳುವುದಕ್ಕೆ ನಾನು ಯಾರು ನಾಣಿ. ನನ್ನ ಯೋಚನೆ ಏನು ಅಂದ್ರೆ ಸೋಮಯಾಜಿಗಳ ಲೆಖ್ಖಚಾರನು ತಪ್ಪಾಗೋಯ್ತಾ ಅಂತಾ?

ನಾಣಿ: ಯಂತದು ಸೋಮಯಾಜಿಗಳ ಲೆಖ್ಖ.

ವತ್ಸಲಾ: ಇದೇನು ನಾಣಿ ಮರ್ರೋಯ್ತಾ ನಿನಗೆ ಸೋಮಯಾಜಿ ಹೇಳಿದ ಭವಿಷ್ಯ.

ನಾಣಿ: ಭವಿಷ್ಯನಾ, ಯಾರ ಭವಿಷ್ಯ?

ವತ್ಸಲಾ: ಇನ್ಯಾರ್ದು ನಾಣಿ ನಿಮ್ಮೆಜಮಾನ್ರುದು. ಸೋಮಯಾಜಿಗಳ ಭವಿಷ್ಯ ಕೇಳೋಕೆ ಅಂತ ಹೋದಾಗ ಹೇಳಿದ್ದು.

ನಾಣಿ: ಹಾ.... ನೆನಪುಂಟು, ಅದೇ ಯಜಮಾನ್ರಿಗೆ ಎರಡನೇ ಮದುವೆ ಯೋಗ ಇಲ್ಲ ಅಂತ ಹೇಳಿದ್ದು, ಅದಲ್ವಾ?(ನಗುತ್ತಾನೆ)

ವತ್ಸಲಾ: ಇನ್ನು ಒಂದು ವಿಷಯ ಹೇಳಿದ್ರು ಮರ್ರೋಯ್ತಾ? ನಿನ್ನ ಅಕ್ಕ ಮತ್ತು ಮಗನಿಗೆ ಅಕಾಲ ಮರಣ ಯೋಗ ಇದೆ ಅಂತ ಹೇಳಿರ್ಲಿಲ್ವಾ.

ನಾಣಿ: ಅದು ಸೋಮಯಾಜಿಗಳ ಜ್ಯೋತಿಷ್ಯ. ಅದೆಲ್ಲ ಸತ್ಯ ಆಗೋದಿಲ್ಲ ಬಿಡಿ. ಆ ನಿಮ್ಮ ಸೋಮಯಾಜಿಗಳು ಹೇಳಿದ್ದೆಲ್ಲ ಆಗೋದಾಗಿದ್ದಿದ್ರೆ ಇವತ್ತು ಪ್ರಳಯ ಆಗಿ ನಾವು-ನೀವು ಎಲ್ಲಾ ಗೋತಾ ಹೊಡೀಬೇಕಿತ್ತು ಅಲ್ವಾ?

ವತ್ಸಲಾ: ಹಾಗಾದ್ರೆ ಸೋಮಯಾಜಿಗಳು ನಿಮ್ಮ ಯಜಮಾನ್ರಿಗೆ ಎರಡ್ನೇ ಮದುವೆ ಯೋಗ ಇಲ್ಲ ಅಂತನು ಹೇಳಿದ್ರು ಅಲ್ವಾ ಅದು ಸುಳ್ಳಾಗಬೇಕಲ್ವಾ ನಾಣಿ. ಸತ್ಯ ಆಗುತ್ತೆ ಅಂತಾದ್ರೆ ಎರಡೂ ಸತ್ಯನೇ ಆಗ್ಬೇಕು. ಸುಳ್ಳು ಅಂತಾದ್ರೆ ಎರಡೂ ಸುಳ್ಳಾಗಬೇಕು. ಯಾವುದೇ ಆದ್ರೂ ನನಗೇನು ಬೇಜಾರು ಇಲ್ಲ ನಾಣಿ.

ಧಾರವಾಡ ಪರಿಸರದ ಪ್ರಭೇದ

ಹರಿಶ್ಚಂದ್ರ ಸೋಡಂಕಿ ಕುಟುಂಬಕ್ಕೆ ಸೀಮಿತವಾಗಿರೋದು. ಹರಿಶ್ಚಂದ್ರ ಮತ್ತು ಸತ್ಯಾವತಿ ಇವರಿಬ್ಬರು ಗಂಡ, ಹೆಂಡತಿ. ಇವರಿಗೆ ಸ್ವರ, ಪರೀಕ್ಷಾ ಎಂಬ ಇಬ್ಬರು ಹೆಣ್ಣು ಮಕ್ಕಳು. ಗಂಡ

ಹೆಂಡತಿ ಮಾತ್ರ ಒಳನುಡಿ ಬಳಸುತ್ತಾರೆ. ಅದೇ ಮನೆಯಲ್ಲಿ ತಮ್ಮ ಮಕ್ಕಳೇ ಒಳನುಡಿ ಬಳಸೋದಿಲ್ಲ. ಆಧುನಿಕತೆಯ ಪ್ರಭಾವ ಹಾಗೂ ಭಾಷಾ ಶಿಷ್ಟೀಕರಣದ ಪ್ರಭಾವಕ್ಕೊಳಗಾದ ಪಾತ್ರಗಳು. ವಯೋಮಾನಕ್ಕೆ ಮತ್ತು ನಗರವಾಸಿಗಳ ಲೆಕ್ಕಾಚಾರದಲ್ಲಿಯೂ ಒಳನುಡಿಗಳು ಹೇಗೆ ಕಳಚಿಕೊಳ್ಳುತ್ತವೆ ಎಂಬುದನ್ನು ಈ ಪಾತ್ರಗಳು ನಿರೂಪಿಸುತ್ತವೆ. ಭಾಷಾ ಪ್ರಭೇದದ ಬಳಕೆ ಕೇವಲ ತಂದೆ-ತಾಯಿಗೆ ಸೀಮಿತವಾಗಿ ಮಕ್ಕಳಿಬ್ಬರಿಗೂ ಪ್ರಭಾವವಾಗದೆ ಇರುವುದನ್ನು ಈ ಕೌಟುಂಬಿಕ ವ್ಯವಸ್ಥೆಯಲ್ಲಿ ಗುರುತಿಸಿಕೊಳ್ಳಲಾಗಿದೆ.

ಸತ್ಯವತಿ: ಸ್ವರ ಆ ಶ್ರವಣ ಸಾಯ್ಲಿಲ್ಲೇನು?

ಸ್ವರ: ಅವ್ನೆಲ್ಲಮ್ಮ ಸಾಯ್ತಾನೆ? ನಮ್ಮನ್ನೆ ಸಾಯಿಸ್ತಾನಷ್ಟೆ. ಅವ್ನಿಂಗೆ ಫೇಮಸ್ ಆಗೋ ಹುಚ್ಚು. ಅದಕ್ಕೆ ಮೀಡಿಯಾದವ್ರುನ ಯೂಜ್ ಮಾಡಿಕೊಳ್ಳೋಕೇ ಟ್ರೈ ಮಾಡ್ದಾ ಅಷ್ಟೇ?

ಸತ್ಯವತಿ: ಅಂತು ಇಂತು ಶ್ರವಣನ ಜೀವ ಉಳೀತಲ್ಲಾ. ಅಷ್ಟು ಸಾಕುಬಿಡು. ಪರೀಕ್ಷಾ ಕೈಗೆ ಏನು ಮಾಡ್ಕೊಂಡಿ.

ಪರೀಕ್ಷಾ: ಮಾಡ್ದೋರು ನಿನ್ನತ್ರನೆ ಇದಾರಲ್ಲಾ ಅವ್ರುನ್ನೆ ಕೇಳು.

ಸತ್ಯವತಿ: ಅಂದ್ರಾ ಇದನ್ನ ಸ್ವರ ಮಾಡಿದ್ಲಾ?

ಹರಿಶ್ಚಂದ್ರ ಸೋಡಂಕಿ: ಈಕಿ ಒಬ್ಬಾಕಿನಾ ಅಲ್ಲ. ಈಕಿ ಜೋಡಿ ಇನ್ನು ಎರಡು ಮಂಗ್ಯಗಳು ಸೇರಿಕೊಂಡು ನನ್ನ ಮಗಳ ಕೈನ ಹಿಂಗಾ ಮಾಡಿಬಿಟ್ಟಾರಾ. ಆ ಮಂಗ್ಯಾಗಳನ್ನ ಕರ್ಕೊಂಡು ಮನಿಗೆ ಬರಬೇಡ ಅಂತಾ ಸಾವಿರ ಸರಿ ಹೇಳಿ. ನನ್ನ ಮಾತು ಎಲ್ಲಿ ಕೇಳ್ತೀರಿ ನೀವು.

ಸ್ವರ: ನನ್ನ ಫ್ರೆಂಡ್ಸ್ ಬಂದದ್ದು ನಿಜ. ಪರೀಕ್ಷಾಗೆ ಹೊಡ್ದದ್ದು ನಿಜ. ಆದ್ರೆ ಈತರ ಕೈಗೆ ಏಟಾಗೋತರಾ ಏನು ಆಗಿಲ್ಲ ಅಪ್ಪಾ.

ಪರೀಕ್ಷಾ: ಹಾಗಾದ್ರೆ ನಾನ್ ಸುಮ್ ಸುಮ್ನೇ ಬ್ಯಾಂಡೇಜ್ ಹಾಕ್ಕೊಂಡಿದ್ದೀನಾ, ಬೇಕಾದ್ರೆ ಬಿಚ್ಚಿ ತೋರಿಸ್ಲಾ?

ಹರಿಶ್ಚಂದ್ರ ಸೋಡಂಕಿ: ಬ್ಯಾಂಡೇಜು ಕಟ್ಟು ಮುಂದಾ ನಾನೇ ಇದ್ನಲ್ಲ. ಈಕಿ ಕೈಗಾ ಬಾರಿ ಏಟು ಆಗ್ಯಾದಾ. ನಾಡುದು(ನಾಳೆ ಬಿಟ್ಟು ಇನ್ನೊಂದು ದಿನ) ಈಕಿದು ಡ್ಯಾನ್ಸ್ ಪರೀಕ್ಷೆ. ಈ ಕೈ ಇಟ್ಕೊಂಡು ಹ್ಯಾಂಗ ಡ್ಯಾನ್ಸ್ ಮಾಡ್ತಾಳಾ ಯಂಗ ಪರೀಕ್ಷಾ ಬರಿತಾಳಾ.

ಸತ್ಯವತಿ: ಪರಿ ನಿಂದು ನಾಡ್ದ ಎಕ್ಸಾಮ್ ಅದನಾ

ಪರೀಕ್ಷಾ: ಹೂಂ... ಅದಕ್ಕಾ ಇವ್ಳ್, ಇವ್ಳ್ ಫ್ರೆಂಡ್ಸ್ ಸೇರಿಕೊಂಡು ಕೈಮುರಿದಿದ್ದು.

ಸ್ವರ: ಪರೀಕ್ಷಾ ನೀನು ಬಿದ್ದಾಗಾ ನಿನ್ನ ಕೈಗೆ ಈ ತರ ಆಗಿರೋ ಹಾಗೆ ಇರ್ಲಿಲ್ಲ? ಇಷ್ಟಕ್ಕೂ ಇಷ್ಟು ಜೋರಾಗಿ ಏಟಾಗೋತರಾ ನೀನು ಬೀಳ್ಲಿಲ್ವಲ್ಲ?

ಹರಿಶ್ಚಂದ್ರ ಸೋಡಂಕಿ: ಅಂದ್ರಾ ಈಕೀನಾ ಕೈ ಮುರ್ಕೊಂಡಳಾ ಅಂತಿರೇನು? ಈಕೀಗಾ ನೆಟ್ಟಗಾ ಇರೋ ಆಸೆ ಇಲ್ಲ ಅಂತಿಯೇನು? ಮಾಡೊ ಬಾನಗಡಿ ಮಾಡಿ ಈಗ ಸಮಜಾಯಿಷಿ ಕೊಡ್ಲಾಕತ್ಯಾಳಾ.

ಸತ್ಯವತಿ: ಅಲ್ರಿ ಬರಿ ಡಿಕ್ಕಿ ಹೊಡ್ದಾ್ರ ಇಂಥ ಪರಿ ಗಾಯ ಆಗ್ತಾದಾ? ಅದಕ್ಕ ಇಷ್ಟು ದೊಡ್ಡ ಪಟ್ಟಿ ಕಟ್ಟೋದಾ?

ಪರೀಕ್ಷಾ: ನಿಮಗೆ ಅನುಮಾನ ಇದ್ರೆ ಬ್ಯಾಂಡೇಜ್ ಬಿಚ್ಚಿ ತೋರಿಸ್ತೀನಿ ಅಂತ ಹೇಳಿದ್ನಲ್ಲ.

ಸತ್ಯವತಿ: ಬ್ಯಾಡ ಪರಿ. ಇವತ್ತೊಂದಿನ ಬ್ಯಾಂಡೇಜ್ ಅಂಗ ಇರ್ಲಿ. ನಾಳೆ ನಾ ಉಪ್ಪಿನಾ ಶಾಖ ಕೊಡ್ತೀನಿ. ನಾಡ್ದ ಪರೀಕ್ಷಾ ಆರಾಮಾಗಿ ಬರಿಬಹುದು.

ಹರಿಶ್ಚಂದ್ರ ಸೋಡಂಕಿ: ಬ್ಯಾಡ ಕಾವು ಕೋಡೋ ನೈಪದಾಗ ಮತ್ತ ಏನಾರಾ ಬಾನ್‌ಗಡಿ ಆಗೋದು ಬ್ಯಾಡ. ಪರಿ ನಾಳೆ ಇನ್ನೊಂದ್ಸಲ ಡಾಕ್ಟರ್ ಬಳಿ ಹೋಗಿ ಬಾರವ್ವ ಕತ್ತಿಗಾದಂಗ ವಯಸ್ಸಾತು ಆದ್ರು ಹುಡುಗಾಟಿಕೆ ಬಿಡ್ಲಿಲ್ಲ. ಇಂಗಾ ಆದ್ರಾ ನಾಳೆ ಮದುವೆಗೆ ಗಂಡು ಸಿಗಲಿಕ್ಕಿಲ್ಲ.

ಸತ್ಯವತಿ: ರೀ ಬೆಳೆದ ಮಕ್ಕಳಿಗೆ ಕತ್ತಿ ಕುದುರಿ ಅಂತ ಬೈಯ್ತರೇನು? ನಿಮಗ ಮಾತಾಡ್ಲಿಕಾ ಬರ್ಲಿಲ್ಲಂದ್ರ ಸುಮ್ನಿದ್ದು ಬಿಡ್ರಿ, ಹೀಗೆಲ್ಲಾ ಬೈದ್ರಾ ನಾ ಸುಮ್ನಿರೋದಿಲ್ಲ.

ಹರಿಶ್ಚಂದ್ರ ಸೋಡಂಕಿ: ಹೆಯ್ ಇಂಥವರಿಗೆ ಕತ್ತಿ ಅನ್ನದ ಮತ್ತೇನು ಅಂತರಾ. ಈಕಿ ಪರ ವಹಿಸಿಕೊಂಡು ಮಾತಾಡೋದು ಬಿಟ್ಟು, ಹೆಣ್ಣಾದವಳು ಹ್ಯಾಂಗ ಇರಬೇಕು ಅನ್ನೋದನ್ನ ಈಕಿಗಾ ಕಲಿಸಿಕೊಡು.

ಸತ್ಯವತಿ: ನಿಮ್ಗ ಈಕಿ ಮಹತ್ವ ಈಗ ಗೊತ್ತಾಗೋದಿಲ್ಲ, ನಾಳೆ ಈಕಿ ಫೇಮಸ್ ಸಿಂಗರ್ ಆಗ್ತಾಳಲ್ಲ ಆಗ ಗೊತ್ತಾಗುತೈತಿ.

ಹರಿಶ್ಚಂದ್ರ ಸೋಡಂಕಿ: ಆಗತಾಳಾ! ಆಗತಾಳ... ಫೇಮಸ್ ಆಗ್ತಾಳಾ, ಈಕಿ ಇಂಗಾ ಆಡ್ತಾ ಇದ್ರ ಫೇಮಸ್ ಅಲ್ಲ, ಮಿಸ್ಸಾ ಆಗೋಕ್ಕಾಳಾ.

ಸತ್ಯವತಿ: ನೋಡಿದ್ರಾ ನಿಮ್ಮಿಂದ ನಿಮ್ಮ ಮಗ್ಳು ಎಷ್ಟು ಸಂಕಟಪಟ್ಳು ಅಂತ. ನಿಮ್ಗ ಅರ್ಥ ಆಗೋದಿಲ್ಲ.

ಹರಿಶ್ಚಂದ್ರ ಸೋಡಂಕಿ: ಅದಾ ಪ್ರಶ್ನೀನಾ ನಾನು ನಿಮ್ಗ ಕೇಳ್ಬೇಕು. ಆಕಿ ತನ್ನ ತಂಗಿಯಾದವ್ಳಿಗೆ ಯಾಕ್ ತ್ರಾಸ್ ಕೊಡ್ತಾಳಾ?

೪೦ನೇ ಎಪಿಸೋಡ್(ರಂಗು)

ಹರಿಶ್ಚಂದ್ರ ಸೋಡಂಕಿ: ಸತ್ಯ ಹ್ಯಾಗೈತಿ ನನ್ನ ರುಮಾಲು ನಿನಗಾ ಹುಬ್ಬಳ್ಳಿಯ ಹಾಡು ನೆನಪಾತೋ ಇಲ್ಲ.

ಸತ್ಯವತಿ: ಅದು ನೆನಪು ಆಯ್ತು, ಅದರ ಜೋಡಾ ಇನ್ನ ಒಂದು ನೆನಪು ಆಯ್ತು.

ಹರಿಶ್ಚಂದ್ರ ಸೋಡಂಕಿ: ಇನ್ನೊಂದು ಅಂದ್ರ ಏನದು?

ಸತ್ಯವತಿ: ಅದನ್ನ ಕೇಳಿದ್ರ ನಿಮ್ಗೆ ಬ್ಯಾಡಿಗಿ ಮೆಣಸಿನಕಾಯಿ ಕಡ್ದಂಗಾ ಆಕೈತಿ ಬಿಡ್ರಿ. ಏನಿದು ಮೈಗೆ ಹತ್ತಾರ ಹಾಕ್ಕೊಂಡಿರಿ.

ಹರಿಶ್ಚಂದ್ರ ಸೋಡಂಕಿ: ನನ್ನ ಶಿಷ್ಯ ತಂದು ಕೊಟ್ಟಿದ್ದು ಹತ್ತಾರಾ ಗಮ್ ಅಂತೈತ ಇಲ್ಲ? ಪ್ಯಾರಿಸ್ ಅಂತ ಪ್ಯಾರಿಸ್‌ನಾಗ ತಂದಿರೋದು.

ಸತ್ಯವತಿ: ಹೂಂ ಹತ್ತಾರ ಹಾಕ್ಕೊಂಡೀರಿ ಅಂದ್ರ ಇವತ್ತು ಸಂಜಿಕಾ ಯಾರ್ದಾರಾ ಮನಿಯಾಗ ರುಮಾಲು ಬಿಚ್ಚೇರಿ ಅಂತಾತು.

ಹರಿಶ್ಚಂದ್ರ ಸೋಡಂಕಿ: ಅಂದ್ರ ನನ್ನ ಮ್ಯಾಲಾ ನಿನಗ ಇನ್ನು ಸಂಶಯ ಐತೇನು?

ಸತ್ಯವತಿ: "ಉಣಸಿ ಮರ ಮುಪ್ಪಾದ್ರು ಉಳಿ ಮುಪ್ಪೇನು?"

ಹರಿಶ್ಚಂದ್ರ ಸೋಡಂಕಿ: ಸತ್ಯ, ಎದಿಮಟ ಬೆಳೆದಿರೋ ಮಕ್ಳು ಅದರಾ ನನಗಾ.

ಸತ್ಯವತಿ: ಮಕ್ಳು ಅನ್ನು ಬ್ಯಾಡ್ರಿ, ಮಗಳು ಅನ್ರಿ ನಿಮಗ ನೆನಪು ಆಗೋದು ಪರೀಕ್ಷಾ ಒಬ್ಬಾಕೀನಾ. ಆ ಮಗಳಾದ್ರು ಸುದ್ದ ಅದಳಾಂತಿರೇನು?

ಹರಿಶ್ಚಂದ್ರ ಸೋಡಂಕಿ: ಸತ್ಯ! ಏನು ವದರ್ಲಿಕತ್ತಿದಿ ಅಂತದ್ದು ಏನು ಮಾಡೈತಿ ನನ್ನ ಕೂಸು.

ಸತ್ಯವತಿ: ಮನಿಮರ್ಯಾದಿ ತೆಗೆಯುಂತ ಕೆಲ್ಸ ಮಾಡ್ಯಾಳ. ನೀವು ಯಾರನ್ನ ಬಾಂಡ್‌ನಿಂದ ತೆಗಿ ಅಂತ ಸ್ವರಗಾ ಹೇಳಿದ್ರೊ ಆ ಶ್ರವಣನ್ನ ಪರೀ ಪ್ರೀತಿ ಮಾಡ್ಲಿಕತ್ಯಳಾಂತ.

ಹರಿಶ್ಚಂದ್ರ ಸೋಡಂಕಿ: ನನ್ನ ಮಗಳು ಆ ಉಡಾಳನ್ನ ಪ್ರೀತಿ ಮಾಡ್ತಾಳಾ. ನಿನ್ನ ಮಾತನ್ನ ನಾ ನಂಬಬೇಕಾ.

ಸತ್ಯವತಿ: ನನ್ನ ಕಿವಿ ಏನು ಕೇಳೆವೋ ಅದನ್ನಾ ನಾ ಹೇಳಾಕತ್ತೀನಿ.

ಹರಿಶ್ಚಂದ್ರ ಸೋಡಂಕಿ: ಚಾಷ್ಟಿ ಮಾಡ್ಬೇಡ. ಸ್ವರ ಇಂಗಾ ಮಾಡ್ತಿದ್ಲು ಅಂದ್ರ ನಂಬುತಿದ್ನೊ ಇಲ್ಲ, ಆದ್ರೆ ಪರೀ ಇಂಗಾ ಮಾಡ್ತಾಳ ಅಂತ ಅಂದ್ರಾ ನಾನು ನಂಬವ ಅಲ್ಲ.

ಸತ್ಯವತಿ: ನೀವು ನಂಬಿದ್ರ ನಂಬ್ರಿ, ಬಿಟ್ರ ಬಿಡ್ರಿ, ಆದ್ರ ಯಾವ ಶ್ರವಣ ಕುಮಾರನ್ನ ಪರಿ ಪ್ರೀತಿ ಮಾಡ್ಲಾಕತ್ಯಳೋ ಅವರಪ್ಪನ ನಮ್ಮ ಮನಿಗೆ ಬಂದು ಪೂರ್ತಿ ಕತಿ ಹೇಳಿದ್ಲು.

ಹರಿಶ್ಚಂದ್ರ ಸೋಡಂಕಿ: ನಮ್ಮನಿಗಾ ಯಶೋದಾ ಬಂದಿದ್ಲೇನು?

ಸತ್ಯವತಿ: ಬರೂದು ಅಷ್ಟ ಅಲ್ಲ. ಬಾಯಿಗೆ ಬಂದಂಗ್ ಬೈಯ್ತಿದ್ಲು. 'ಬೀಜದಂಗ ಮರ ಅಪ್ಪನಂಗ ಮಗಳು' ಅಂತ ಹೇಳಿದ್ಲು. ನನಗೆ ಅಪ್ಪ ಮೋಸ ಮಾಡಿದ್ದ. ಅದ ಗಂಡಸಿನ ಮಗಳು ಈಗ ನನ್ನ ಮಗಗ ಮೋಸ ಮಾಡ್ತಾಳಾ ಅಂದ್ರ ಹಳೆ ಕತಿಯಲ್ಲ ಬಿಚ್ಚಿ ಪೇಪರ್‍ನಾಗ ಹಾಕಿಸ್ತೀನಿ ಅಂದ್ಲು. ನೀವ್ ಎಂದೋ ಮಾಡಿದ ಬಾನಗಡಿಗೆ ನಾವು ಮಾತು ಕೇಳಾಂಗ ಆತು. ಈ ತ್ರಾಸು ಯಾರಿಗೇಳ್ಲಿ ನಾನು. ಈಗ ನಿಮ್ಮ ಮುದ್ದಿನ ಮಗಳ ಕತಿ ಇಂಗೈತಿ. ಮುಂದೆ ಏನು ಕಾದೈತೋ ಏನೋ?

ಈಟಿವಿ ಕನ್ನಡ ವಾಹಿನಿಯ ಅಕ್ಕ ಧಾರಾವಾಹಿ, ರಾತ್ರಿ ೭ ಗಂಟೆಗೆ ದಿನಾಂಕ ೧೦-೧೨-೧೩ರಿಂದ ೨೭-೧೨-೧೩ರವರೆಗೆ ವೀಕ್ಷಿಸಲಾಗಿದೆ.

ಮೊಚಿ(ರೌಡಿ): ಗೆಂಡೆ ಚೂರಿ ಹಾಕೋದಕ್ಕಿಂತ ಮುಂಚೆ ಅಣ್ಣನ ಒಂದು ಮಾತು ಕೇಳುವ ಬರ್‍ಲಾ.

ರುದ್ರಣ್ಣ(ಎಂ.ಎಲ್.ಎ): ಅಡ್ಡ ದಿಡ್ಡಿ ಮಾತಾಡಿದ್ರ, ಅಡ್ಡ ದಿಡ್ಡಿ ಸೀಳ್‌ಬಿಟ್ಟು ಅಡಿಕೆ ಮರಕ್ಕೆ ನೇತಾಗ್ಬಿಡ್ತೀನಿ, ನಿಮ್ಮ ಹೆಣವಾ, ಸಿಕ್ಕಿದ್ಲೇನ್ಲಾ?

ಮೋಚಿ: ಸಿಕ್ಕಿದ್ಲಣ್ಣ

ರುದ್ರಣ್ಣ: ಮತ್ತೆನ್ಲಾ.

ಮೋಚಿ: ಅಣ್ಣ ಕಣ್ಣಿಗೆ ಕಾಣಿಸಿದ್ಲು ಹಾಕಿಬಿಡುಕಾ ಅಂತ ಕೇಳೇಕೆ ಪೋನು ಮಾಡ್ದೆ.

ರುದ್ರಣ್ಣ: ಹಾಕಿಬುಡಿ! ಹಾಕಿಬುಡಿ! ಮಹಲ್‌ನಲ್ಲಿ ಹಾಕಿಬಿಡಿ ಅದು ಪಬ್ಲಿಕ್ ಪ್ಲೇಸು. ನಂದೂ ಪಬ್ಲೀಕ್ ಫೇಸು(ರಾಜಕಾರಣಿ). ಸಿ.ಸಿ. ಕ್ಯಾಮರಾದಲ್ಲಿ ಗಬಕ್ ಅಂತ ಹಿಡುಕಂಡ್ ಬಿಡ್ತಾರೆ. ಎಲ್ಲರ್ರೂ ಪೊಲೀಸ್ ಸ್ಟೇಷನ್‌ನಲ್ಲಿ ನಿಲ್ಲಿಸಿಬುಟ್ಟು, ಕೈಗೆ ಸ್ಲೇಟುಕೊಟ್ಟು ಬುಟ್ಟು ಹೇಳ್ತಾರೆ. ಸಾಲಾಗಿ ನಿಂತು ಹಾಡು ಬಿಡು ನಮ್ಮ ಎಂ.ಎಲ್.ಎ. ಸಾಹೇಬ್ರು ಕೊಟ್ಟಿದ್ದು ಸುಪಾರಿಯ ಅಂತ.

ಮೋಚಿ: ಆಯ್ತಣ್ಣ.

ರುದ್ರಣ್ಣ: ಹೆಯ್ ನಾನೇನು ಆಗಿದ್ದೀನಿ, ನಿಮಗೆಲ್ಲ ನನ್ನ ರಾಜಕೀಯ ಭವಿಷ್ಯ ಏನಾಯ್ತದೆ ಎನ್ನೋದು ಸ್ವಲ್ಪ ಸಾಮಾನ್ಯ ಸೆನ್ಸ್ ಕೂಡ ಇಲ್ವಲ್ಲ. ನಿಮ್ಗೆ ಇಂತ ಕೆಲ್ಸಕೆಲ್ಲ ಪಬ್ಲಿಕ್ ಪ್ಲೇಸ್‌ನಲ್ಲಿ ಮಾಡ್ಬಾರ್ದು ಕಣ್ಲ. ಯಾರು ನೋಡ್ದೆ ಇರೋ ಜಾಗಕ್ಕೆ ಕರ್‍ಕೊಂಡು ಹೋಗಿಬಿಟ್ಟು ಎತ್ ಬಿಡ್ರಿಲಾ ಅಂತಂದ್ರೆ ಹೆಯ್ ತೂ... ಇಡ್ಲಾ ಪೋನ್.

ಈ ಮೇಲಿನ ಮಾತುಗಳು ಮೇಲ್ವರ್ಗಕ್ಕೆ ಸೇರಿದ ಎಂ.ಎಲ್.ಎ. ಆಗಿದ್ದರೂ ಕೂಡ ತನ್ನ ಒಳನುಡಿಗಳನ್ನು ಬಳಸುತ್ತಾನೆ. ಮೇಲ್ವರ್ಗದ ಕುಟುಂಬಗಳು ಹೆಚ್ಚಾಗಿ ಪ್ರಾಮಾಣೀಕರಣ ಕನ್ನಡವನ್ನೇ ಹೇಳಿದ್ರೆ, ಈ ಎಂ.ಎಲ್.ಎ. ಅಥವಾ ಭೂಗತ ಪಾತಕಿಗಳಂತಹ ಪಾತ್ರಗಳು ಪ್ರಾದೇಶಿಕ ಒಳನುಡಿಗಳನ್ನು ಬಳಸಿಕೊಂಡು ವ್ಯವಹರಿಸುವುದನ್ನು ಈ ಉದಾಹರಣೆ ನಿರೂಪಿಸುತ್ತದೆ. ಒಳನುಡಿಗಳು ಇಂಥ ಜನರಿಗೆ ಸೀಮಿತವಾಗಿವೆ. ಅಂದರೆ ಕೆಲವು ಕುತಂತ್ರ ಮಾಡುವಂತಹ ಪಾತ್ರಗಳು ಒಳನುಡಿಗಳನ್ನು ಬಳಸಿಕೊಳ್ಳುವುದು ಮತ್ತು ಎಂ.ಎಲ್.ಎ. ಆಗಿದ್ದರೂ ಕೂಡ ತನ್ನ ಪ್ರಾದೇಶಿಕ ಒಳನುಡಿಗಳನ್ನು ಕಳಚಿಕೊಳ್ಳದೇ ಇರುವುದನ್ನು ಈ ಉದಾಹರಣೆಗಳು ನಿರೂಪಿಸುತ್ತವೆ. ಆದರೆ ಇವರ ಮನೆಯಲ್ಲಿ ರುದ್ರಣ್ಣನ ಹೆಂಡತಿ ಮತ್ತು ಮಗ ಆಕಾಶ ಇವರಿಬ್ಬರೂ ಕೂಡ ಪ್ರಮಾಣೀಕರಣ ಕನ್ನಡವನ್ನೇ ಬಳಸುತ್ತಾರೆ. ಯಾವ ವ್ಯಕ್ತಿ ಪ್ರಾದೇಶಿಕ ಪ್ರಭೇದಗಳ ಪರಿಸರದಲ್ಲಿ ಬೆಳೆದು ರಾಜಕೀಯವಾಗಿ ಮೇಲ್ವರ್ಗಕ್ಕೆ ಸೇರುತ್ತಾನೋ ಅಂತವನು ತನ್ನ ಒಳನುಡಿಗಳನ್ನು ಕಳಚಿಕೊಳ್ಳದೇ ಇರುವುದನ್ನು ಈ ಧಾರಾವಾಹಿಯ ಮೂಲಕ ಗುರುತಿಸಿಕೊಳ್ಳಲಾಗಿದೆ.

ದಿನಾಂಕ ೦೨-೦೫-೧೩ರಂದು ಉದಯ ಟಿ.ವಿ.ಯ ಜೋಕಾಲಿ ಧಾರಾವಾಹಿಯಲ್ಲಿ ಕೆಳವರ್ಗಕ್ಕೆ ಸೇರಿದ ಕುಟುಂಬ.

ಅರ್ಚನಾ: ನೀನು ಹೋಗು ಕೈ ಕಾಲು ತೊಳ್ಕೊಂಡು ಬಾ ಊಟಕ್ಕೆ ಬಡಿಸ್ತೀನಿ.

ರಮೇಶ: ನನಗೆ ಊಟ ಬೇಡ

ಅರ್ಚನಾ: ಯಾಕೆ?

ರಮೇಶ: ಅದು ಮತ್ತೆ ನಾನು ಗ್ಯಾರೇಜ್‌ಗೆ ಹೋಗಬೇಕಾಗಿತ್ತು.

ಅರ್ಚನಾ: ಕೆಲ್ಸ ಜಾಸ್ತಿ ಇದೆಯಾ.

ರಮೇಶ: ಹಾಂ... ಅದು ಕಂಪನಿಯಿಂದ ಹತ್ತು ಗಾಡಿ ಕಳಿಸ್ತೀವಿ ಅಂತ ಹೇಳಿದ್ರಲ್ಲಾ, ಅದು ಹತ್ತು ಗಾಡಿನೂ ಒಟ್ಟಿಗೆ ಕಳ್ಸಿಬಿಟ್ಟಿದ್ದಾರೆ. ಒಂದು ವಾರದೊಳಗೆ ಗಾಡಿ ರೆಡಿ ಮಾಡಿಕೊಡಕ್ಕಾಗಲ್ಲ.

ಅರ್ಚನಾ: ಹಾಗಾದ್ರೆ ಮನೆಗೆ ಯಾಕ್ ಬಂದೆ, ನಾನೇ ಗ್ಯಾರೇಜ್‌ಗೆ ಊಟ ತಗಂಡು ಬರ್ತಿದ್ನಲ್ಲ. ಇಲ್ಲ ಅಂದ್ರೆ ಅಲ್ಲೇ ಊಟ ಮಾಡಬೇಕಾಗಿತ್ತು. ಅಲ್ಲೇ ಫೋನು ಮಾಡಿ ಹೇಳಿದ್ರೆ ಆಗ್ತಿತ್ತು.

ರಮೇಶ: ಇಲ್ಲ ಅದು ನಾನು ಮನೆಗೆ ಬಂದದ್ದು, ನಿನ್ನ ಹತ್ತಿರಾ ದುಡ್ಡು ಇಸ್ಕೊಂಡು ಹೋಗೋದಕ್ಕೆ.

ಅರ್ಚನಾ: ಏನು ದುಡ್ಡಾ, ಯಾವ ದುಡ್ಡು.

ರಮೇಶ: ಅದೇ ನಂದಿನಿ ಕೊಡಬೇಕಾಗಿರೋದು ಕೊಟ್ಟಿದ್ನಲ್ಲ ಆ ದುಡ್ಡು.

ಅರ್ಚನಾ: ನಂದಿನಿ ಊರಿಂದ ಬಂದಾಯ್ತಾ. ಇಷ್ಟೊತ್ತಲ್ಲಿ ದುಡ್ಡು ತಗೊಂಡು ಹೋಗಿ ಕೊಡ್ತೀಯಾ.

ರಮೇಶ: ನಂದಿನಿ ಊರಿಂದ ಬಂದಾಯ್ತು. ಸ್ವಲ್ಪ ಹೊತ್ತಿಗೆ ಊರಿಂದ ಪೋನು ಮಾಡಿ ಅರ್ಜೆಂಟಾಗಿ ದುಡ್ಡು ಬೇಕು ಅಂತ ಹೇಳಿದ್ಲು, ಅದ್ಕೆ.

೮-೫-೧೩ರಂದು ಹೂ.ವೆ(ಹೂವಿನಹಡಗಲಿ ವೆಂಕಟಪ್ಪ)

ಹೂ.ವೆ: ಹೆಂಡತಿಗೆ ಪೋನು ಮಾಡುತ್ತಾನೆ. ಅವನ ಹೆಂಡತಿ ಹೆಯ್, ನೀನು ಮಾತಾಡ್ತಿದೀಯಾ ನನ್ನಿಂದ ನಂಬೋಕೆ ಆಗ್ತಿಲ್ಲಾ ಕಣಯ್ಯ ನನಗೆ ಎಷ್ಟು ಸಂತೋಷ ಆಗ್ತಿದೆ ಗೋತ್ತಾ. ನಾ ಬಂದು ವಾಸು ಕಾಣ್ತಿಲ್ಲ ಕಣಯ್ಯ ಅಂದ್ರೆ ನೀನ್ ನನ್ನತ್ರ ಮಾತಾಡ್ಬೇಡ ನನ್ನ ಮಕ ನೋಡಬೇಡ ಅಂತೇಳೋದ್ಯೆಲ್ಲ. ನನಗೆ ಎಷ್ಟು ನೇವಾಯ್ತು ಗೊತ್ತಾ. ಈಗ ನಿನ್ನ ಧ್ವನಿ ಕೇಳಿ, ಸಮಾಧಾನ ಆಯ್ತೆತೆ ಕಣಯ್ಯ ನಾನಿರೋದು, ಮನೇನಲ್ಲಿ ಫೋನು ಇರೋದು ಈಗ ನೆನಪಾಯ್ತೆನೋ ನಿನಗೆ, ಯೇ ವಾಸು ಬಗ್ಗೆ ಏನು ವಿಷ್ಯ ಗೊತ್ತಾಗ್ತಿಲ್ಲ ಕಣಯ್ಯ. ನೀನಾದ್ರು ಎಲ್ಲಾದ್ರು ನೋಡಿರ್ತೀಯಾ ಕಂಡಿರ್ತೀಯಾ, ಅದಕ್ಕೆ ನನಗೆ ಪೋನು ಮಾಡ್ತಾ ಇದೀಯಾ ಎಲ್ಲಿದಾನಯ್ಯ. ಅವ್ನು ಹೆಂಗವ್ನೆ ನೀನು ಎಲ್ಲಿ ಅವ್ನ ನೋಡ್ದೆ?

ಹೂ.ವೆ. ಹಾಗೂ ಆತನ ಹೆಂಡತಿಯೊಂದಿಗಿನ ಸಂಭಾಷಣೆಗೆ ಇಲ್ಲಿ ಒಳನುಡಿಗಳು ಬಳಕೆಯಾಗುತ್ತದೆ. ಅಲ್ಲದೆ, ಇವರಿಬ್ಬರೂ ಕೆಳವರ್ಗಕ್ಕೆ ಸೇರಿದವರಾಗಿದ್ದು, ಪರಸ್ಪರ ಯಾವುದೇ ಗೌರವಸೂಚಕ ಸಂಬೋಧನೆಗಳನ್ನು ಒಳಸದೇ ಒಳನುಡಿಗಳ ಮೂಲಕ ಸಂಭಾಷಣೆ ಮಾಡುವುದನ್ನು ಮತ್ತು ಏಕವಚನದಲ್ಲಿ ಸಂಬೋಧಿಸುವುದನ್ನು ಈ ಉದಾಹರಣೆ ನಿರೂಪಿಸುತ್ತದೆ. ಈ ಹಿನ್ನೆಲೆಯಲ್ಲಿ ಒಳನುಡಿಗಳ ಬಳಕೆಯಲ್ಲಿ ಏಕವಚನ ರೂಪವೇ ಸಂವಹನದ ಮಾದರಿಯಾಗಿರುವುದು ಇಂತಹ ಕೌಟುಂಬಿಕ ಧಾರಾವಾಹಿಗಳಲ್ಲಿ ಕೆಳವರ್ಗದ ಪಾತ್ರಗಳಿಗೆ ಸೀಮಿತವಾಗಿರುವುದನ್ನು ಗುರುತಿಸಿಕೊಳ್ಳಲಾಗಿದೆ.

ಮೇಲಿನ ಎಲ್ಲಾ ಧಾರಾವಾಹಿಗಳು ಕೌಟುಂಬಿಕಕ್ಕೆ ಸಂಬಂಧಿಸಿದ್ದವಾದರೂ ಕೂಡ ಹೆಚ್ಚಾಗಿ ಪ್ರಮಾಣೀಕರಣ ಕನ್ನಡವನ್ನು ಬಳಸಿದರೂ, ಕೆಲವು ಕೆಳವರ್ಗಕ್ಕೆ ಸೇರಿದ್ದರೂ ಕೆಲವು ಮೇಲ್ವರ್ಗಕ್ಕೆ ಸೇರಿದ್ದರೂ ಭೂಗತ ಪಾತ್ರಗಳು ಒಳನುಡಿಗಳನ್ನು ಬಳಸಿಕೊಳ್ಳುವುದನ್ನು ಈ ಎಲ್ಲಾ ಉದಾಹರಣೆಗಳು ನಿರೂಪಿಸುತ್ತವೆ. ಅಲ್ಲದೆ ಒಳನುಡಿಗಳು ಏಕವಚನದಿಂದ ಕೂಡಿರುತ್ತವೆ. ಹೆಚ್ಚು ಶಿಷ್ಟ ಮಾದರಿಯನ್ನು ಹೊಂದಿರದೆ ಪ್ರಭೇದಗಳ ಬಳಕೆಯಿಂದ ಕೂಡಿರುವುದನ್ನು ಗುರುತಿಸಿಕೊಳ್ಳಲಾಗಿದೆ.

ಪ್ರಾದೇಶಿಕ ಧಾರಾವಾಹಿಗಳಲ್ಲಿ ಒಳನುಡಿಗಳ ಬಳಕೆ

ಪ್ರಾದೇಶಿಕ ಹೆಸರು ಸೂಚಿಸುತ್ತಿರುವಾಗಲೇ ಪ್ರಭೇದಗಳು ಹೆಚ್ಚಾಗಿ ಒಳನುಡಿಗಳಿಂದಲೇ ಕೂಡಿರುತ್ತವೆ. ಇಲ್ಲಿ ಕೆಲವು ಪಾತ್ರಗಳು ಮೇಲ್ಮಧ್ಯಮ ವರ್ಗದ ಪಾತ್ರಗಳು ಬಹುವಚನವನ್ನು ಕೆಳಮಧ್ಯಮ ವರ್ಗದ ಪಾತ್ರಗಳು ಏಕವಚನವನ್ನು ಬಳಸುವುದನ್ನು ಈ ಪಾತ್ರಗಳು ನಿರೂಪಿಸುತ್ತವೆ.

ಪ್ರಾದೇಶಿಕ ಧಾರಾವಾಹಿಗಳು ಟಿ.ವಿ. ಮಾಧ್ಯಮದ ಮೂಲಕ ಹೆಚ್ಚು ಜನ ಮನ್ನಣೆಯನ್ನು ಪಡೆಯುತ್ತಿವೆ. ಕಾರಣ ಪ್ರಾದೇಶಿಕ ಒಳನುಡಿಗಳು ಕನ್ನಡ ಭಾಷೆಯ ಸೊಗಡನ್ನು ಎಳೆ ಎಳೆಯಾಗಿ ಬಿಚ್ಚಿಡುತ್ತವೆ. ಈ ಹಿನ್ನೆಲೆಯಲ್ಲಿ ವೀಕ್ಷಕರ ಮನಸ್ಸು ಕೂಡ ಒಂದೊಂದು ಪ್ರಾದೇಶಿಕ ಧಾರಾವಾಹಿಗಳಲ್ಲಿನ ಕಲೆಯನ್ನು ಆಸಕ್ತಿಯಿಂದ ವೀಕ್ಷಿಸಿ ಅವುಗಳನ್ನು ವಿಮರ್ಶಿಸುತ್ತಾರೆ. ಕೌಟುಂಬಿಕ ಧಾರಾವಾಹಿಗಳಿಗಿಂತ ಹೆಚ್ಚಾಗಿ ಪ್ರಾದೇಶಿಕ ಧಾರಾವಾಹಿಗಳು ಜನಮನ್ನಣೆ ಪಡೆದವು. ಆದರೆ ನಿರ್ದೇಶಕರು ಕೆಲವು ಮಿತಿಗಳನ್ನು ಪಟ್ಟಿ ಮಾಡಿಕೊಂಡು ಬದಲಾವಣೆಯನ್ನು ಮಾಡಿಕೊಂಡಿದ್ದಾರೆ. ಅಂದರೆ ಒಂದೇ ಧಾರಾವಾಹಿಯಲ್ಲಿ ಎರಡು ಮೂರು ಪರಿಸರದ ಒಳನುಡಿಗಳನ್ನು ಬಳಸಿಕೊಂಡು ಬೇರೆ-ಬೇರೆ ಸಮಸ್ಯೆಗಳನ್ನಿಟ್ಟುಕೊಂಡು ಒಂದೊಂದು ಕುಟುಂಬಗಳಿಗೆ ಸೀಮಿತವಾಗುವಂತೆ ಮಾಡಿದ್ದಾರೆ. ಈಗಾಗಲೇ ಬಿ.ಸುರೇಶ್ ನಿರ್ದೇಶನದ "ಮದರಂಗಿ" ಧಾರಾವಾಹಿ(ಕೌಟುಂಬಿಕ) ಈ ಹಿನ್ನೆಲೆಯಲ್ಲಿ ಸಾಗಿದೆ. ಈ ಪ್ರಕ್ರಿಯೆಯು ಒಂದು ಪ್ರದೇಶದ ಒಳನುಡಿಗಳನ್ನು ಕರ್ನಾಟಕದ ಇತರೆಲ್ಲ ಪ್ರದೇಶಗಳಲ್ಲಿ ಬಳಸುವ ಒಳನುಡಿಗಳನ್ನು ಪರಸ್ಪರರು ಸುಲಭವಾಗಿ ಅರ್ಥಮಾಡಿಕೊಳ್ಳಲು ಸಹಕಾರಿಯಾಗಿದೆ. ಧಾರಾವಾಹಿಗಳಲ್ಲಿ ಹೊಸ ಪ್ರಯೋಗ ಮಾಡುತ್ತಿರುವುದು ಕನ್ನಡ ಭಾಷೆಯನ್ನು ವಿವಿಧ ವಲಯಗಳಲ್ಲಿ ವಿಸ್ತರಿಸುತ್ತಿರುವುದು ಧನಾತ್ಮಕ ಪ್ರಕ್ರಿಯೆಯಾಗಿದೆ. ಪಂಚರಂಗಿ ಪೊಂ ಪೊಂ ಕೂಡ ಮಂಗಳೂರು ಮತ್ತು ಉತ್ತರ ಕರ್ನಾಟಕ ಪ್ರಾದೇಶಿಕ ಒಳನುಡಿಗಳನ್ನು ಬಳಸಿಕೊಂಡು ಪ್ರೇಕ್ಷಕರ ಮನ ಗೆಲ್ಲುವ ಮೂಲಕ ನಗೆಯನ್ನು ಉಕ್ಕಿಸುವುದು ಒಂದು ಕಡೆಯಾದರೆ, ಕೆಲವು ಒಳನುಡಿಗಳನ್ನು ಗೇಲಿ ಮಾಡಲು ಬಳಸುತ್ತಿರುವುದು ವಿಷಾದಕರ ಸಂಗತಿ ಎಂದು ಗುರುತಿಸಲಾಗಿದೆ. ಕಾರಣ ಕೆಲವು ಒಳನುಡಿಗಳನ್ನು ಪಂಚರಂಗಿ ಪೊಂ ಪೊಂ ಎಂಬ ಧಾರಾವಾಹಿಯ ಉದ್ದಕ್ಕೂ ಒಳನುಡಿಗಳನ್ನು ಬಳಸಿಕೊಳ್ಳುತ್ತಿವೆಯಾದರೂ ಒಂದು ಪ್ರಾದೇಶಿಕ ಒಳನುಡಿಯನ್ನು ಗೇಲಿ ಮಾಡುವಂತಿದೆ. ಇದು ಒಂದು ರೀತಿಯ ಋಣಾತ್ಮಕ ಪ್ರಕ್ರಿಯೆ ಎಂದೇ ತಿಳಿಯಲಾಗಿದೆ. ಭಕ್ತಿಪ್ರಧಾನ ಮತ್ತು ಚಾರಿತ್ರಿಕ ಹಿನ್ನೆಲೆ ಹೊಂದಿದ ಧಾರಾವಾಹಿಗಳಲ್ಲಿ ಒಳನುಡಿಗಳ ಬಳಕೆ ಅಷ್ಟಕಷ್ಟೆ. ಈ ಮೂರು ಭಿನ್ನ ಭಿನ್ನ ಮಾದರಿ ಎನ್ನಿಸುವ ವಿಭಾಗ ಕ್ರಮದಲ್ಲಿ ಒಳನುಡಿಗಳು ಒಂದೊಂದು ಮಿತಿಯಲ್ಲಿ ಬಳಕೆಯಾಗುತ್ತಿರುವುದನ್ನು ಗುರುತಿಸಿ ಕೊಳ್ಳಲಾಗಿದೆ.

ಹಾಸ್ಯ ಧಾರಾವಾಹಿಯಲ್ಲಿ ಒಳನುಡಿಗಳ ಬಳಕೆ

ದಿನಾಂಕ ೬.೧೨.೨೦೧೩ರಂದು ರಾತ್ರಿ ೧೦.೩೦ ಗಂಟೆಗೆ ಸುವರ್ಣ ವಾಹಿನಿಯ ಪಂಚರಂಗಿ ಪೊಂ ಪೊಂ ಧಾರಾವಾಹಿಯಲ್ಲಿ ಮಂಗಳೂರು, ಧಾರವಾಡ, ಬಿಜಾಪೂರ, ಬೆಂಗಳೂರು ಪರಿಸರದ ಪ್ರಭೇದಗಳನ್ನು ಬಳಸಿಕೊಂಡು ಹಾಸ್ಯಧಾರಾವಾಹಿಯನ್ನು ರೂಪಿಸಿದ್ದಾರೆ. ಈ ಧಾರಾವಾಹಿಯಲ್ಲಿ ಮಾತಿನ ಮೂಲಕ ಹೊಡೆತ ಕೊಡುವುದಕ್ಕೆ ಪಂಚ್ ಎಂಬ ಇಂಗ್ಲಿಷ್ ಪದವನ್ನು ಬಳಸಿಕೊಂಡು ಮಾತಿನಲ್ಲಿ ಪಂಚ್ ಕೊಡುವುದು ಹಾಸ್ಯಕ್ಕಾಗಿ ಮಾತ್ರ ಎಂಬುದನ್ನು ಈ ಧಾರಾವಾಹಿ ರೂಪಿಸುತ್ತದೆ.

ಪಾತ್ರಗಳು

೧. ರೇಣುಕಾ, ಮೈಲಾರಿ ಗಂಡ ಹೆಂಡತಿ

೨. ಮೀನಾನಾಥ, ಮೀನಾ ಗಂಡ ಹೆಂಡತಿ

೩. ಮಂದಾಕಿನಿ

೪. ಎಂಪಿ

೫. ಭವಾನಿ: ಡ್ಯಾನ್ಸರ್

೬. ಶೀಲಾ: ಮೀನಾ ನಾಥನ ಡವ್

೭. ಸರ್ವರ್ ಸೋಮಣ್ಣ

ಶೀಲಾ: ತಗೋಳಿ ಇದನ್ನ

ರೇಣುಕಾ: ಇದನ್ನ ಯಾಕ ನನ್ನ ಕೈಗೆ ಕೊಡ್ಲಾಕಾತ್ತೀರಿ. ಇದನ್ನ ಇಟ್ಟುಕೊಂಡು ನಾ ಡ್ಯಾನ್ಸ್ ಮಾಡ್ಲಿs. ಇದು ನನಗೆ ಬ್ಯಾಡ.

ಶೀಲಾ: ಇದು ನಿಮ್ಮದಲ್ಲ ಅಂತ ಗೊತ್ತು. ಆದ್ರು ಇದನ್ನ ಇಟ್ಟುಕೊಳ್ಳಿ. ಇದು ನಿಮ್ಮ ಹತ್ತಿರ ಇದ್ರೆ ಸೇಪ್ ಅಂತ ಕೊಡ್ತಿದ್ದೀನಿ.

ರೇಣುಕಾ: ಅಲ್ಲರಿ ಗುರ್ತು ಪರಿಚಯಾನೇ ಇಲ್ಲ ಇದನ್ನ ನನ್ನ ಕೈಯಾಗ ಯಾಕ ಕೊಡಕತ್ತೀರಿ.

ಶೀಲಾ: ನೀವು ಇಳ್‌ಕಲ್ ಸೀರಿ ವ್ಯಾಪಾರಿ ರೇಣುಕಾ ಅಂತ ನನಗೆ ಗೊತ್ತು. ನೋಡಿ ನಾನು ಭರತನಾಟ್ಯ ಕಲಾವಿದೆ. ಗೆಜ್ಜೆ ಕಟ್ಟಿಕೊಂಡು ಕುಣಿಯೋದು ನಮ್ಮಣ್ಣಂಗೆ ಸ್ವಲ್ಪನೂ ಇಷ್ಟ ಇಲ್ಲ. ಇದನ್ನು ಬಿಸಾಕಾಕ ನೋಡ್ದೆ ಅದಕ್ಕೆ ಎತ್ತಿಕೊಂಡು ಓಡಿ ಬಂದು ಬಿಟ್ಟೆ.

ರೇಣುಕಾ: ಕತೀನು ಬಹಳ ಇಂಟ್ರಸ್ಟ್ ಆಗ್ಯಾದ ಇದನ್ನ ನನ್ನತ್ರ ಕೊಟ್ರ ನಿನಗೇನು ಲಾಭ ಆಗ್ತಾದ?

ಶೀಲಾ: ಹೇಗಾದ್ರು ಮಾಡಿ ನಮ್ಮಣ್ಣನ್ನ ಒಪ್ಪಿಸಿ ತಗೊಂಡು ಹೊಗ್ತೀನಿ. ಇದು ನನ್ನ ಗುರುಗಳು ಕೊಟ್ಟಿದ್ದು. ಇದನ್ನು ಕಳಕೊಳ್ಳುದಕ್ಕೆ ಸ್ವಲ್ಪನೂ ಇಷ್ಟ ಇಲ್ಲ. ಒಂದು ವಾರ ಇದನ್ನ ನಿಮ್ಮತ್ರ ಇಟ್ಕೊಳ್ಳಿ. ಆ ಮೇಲೆ ನಾನೇ ಬಂದು ತೊಗೊಂಡು ಹೋಗ್ತೀನಿ.

ರೇಣುಕಾ: ಇದು ನನ್ನತ್ರ ಇರೊದು ನಿಮ್ಮಣ್ಣಗಾ ಗೊತ್ತಾದ್ರ ಅವ್ರು ಉಗಿಯಂಗಿಲ್ಲ.

ಶೀಲಾ: ಉಗಿದ್ರೆ ಮಕವರಿಸೋಕೆ ನಾನಿದೀನಲ್ಲ. ಆದ್ರೆ ಆ ರೀತಿ ಆಗ್ದೆ ಇರೋ ಹಾಗೆ ನಾನು ನೋಡಿಕೋತೀನಿ. ನಿಮ್ಮತ್ರ ಹರಿಕತೆ ಮಾತಾಡೋದಕ್ಕೆ ಟೈಮ್ ಇಲ್ಲ.

ಶೀಲಾ: ಬಾಸ್ ನೀವೇಳಿದಾ ಹಾಗೆ ಆ ಸೀರಿ ವ್ಯಾಪಾರಿ ಹತ್ರ ಆ ಗೆಜ್ಜೆ ಕೊಟ್ಟಿದ್ದೀನಿ. ಅವ್ರತ್ರ ಆ ಗೆಜ್ಜೆ ಸೇಫಾಗಿರುತ್ತೆ ಅನ್ನೋ ನಂಬಿಕೆ ನನಗಿದೆ. ನಿಮ್ಗೆ ಯಾವಾಗ ಬೇಕಂತೀರೋ ಆಗ ತಂದುಕೊಡ್ತೀನಿ. ಓಕೆ ಬಾಸ್.

ರೇಣುಕಾ: ಸವದತ್ತಿ ಎಲ್ಲವ್ವ ಇವುನ್ನ ನೋಡಿದ್ರೆ ಕಟ್ಟಿಕೋ ಬೇಕು ಅನಿಸ್ಲಕ್ಕತ್ತದಾ.

(ಕಟ್ಟಿಕೊಂಡು ಕುಣೀತಾಳೆ. ಇದನ್ನ ಕಂಡ ಮೈಲಾರಿ ಎದ್ದು ಬರುತ್ತಾ)

ಮೈಲಾರಿ: ಸಿದ್ಧಾರೂಢ ಇದೇನಪ್ಪ ಗೆಜ್ಜಿ ಸಬ್ದ ಕೇಳ್ಲಾಕತ್ತಾದ. ಈಕೀನಾ ಈಕೆ ಎಲ್ಲಿ ವಾದ್ಲು ನಮ್ಮನಿಗ್ಯಾಕೆ ದೆವ್ವನ್ನ ಕಳಿಸಿದ್ಯಪ್ಪ, ಸಿದ್ಧಾರೂಢ ಯಾವ್ದೊ ದೆವ್ವಾ ಬಂದೈತಿ ಅಂದುಕೊಂಡ್ರಾ ನನ್ನ ಹೆಣ್ತಿ ಮೈಯಾಗ ಬಂದದಾ. ಗಂಡು ದೆವ್ವ ಆದ್ರ ಯಂಗರ ಗುದ್ದಾಡಿ ಓಡಿಸ್ಬಹುದು. ಹೆಣ್ಣು ದೆವ್ವ ಬಂದಿದ್ರ, ಈಕೀನಾ(ಡ್ಯಾನ್ಸ್ ಮಾಡುತ್ತಾ ಮೈಲಾರಿಯನ್ನೇ ತುಳಿಯುತ್ತಾಳೆ, ಸಿದ್ಧಾರೂಢ! ಈಕೀನಾ ಎಂದು ಅಳುತ್ತಾನೆ.) ಈಕಿ ಕುಣೀಲಿಕ್ಕಾ ನೋಡಿದ್ರಾ ಯಾವುದೋ ಡ್ಯಾನ್ಸರ್ ದೆವ್ವ ಬಡಿಕೊಂಡಿರ್ಬೇಕು. ಯವ್ವಾ, ಹೇ ಪ್ರಾಣಿ ಏನಾಗ್ಯಾದಾ ನಿನಗಾ ಹೇ ಪ್ರಾಣಿ, ಹೇ ಸಿದ್ಧಾರೂಢ ಪ್ರಾಣಿ, ಈಕಿ ಇಂಗ ಆಡ್ಲಿಕತ್ತಿದ್ದು ನೋಡಿದ್ರಾ ಈ ಗೆಜ್ಜೆ ಪವಾಡನ ಇರ್ಬೇಕು. ಸಿದ್ಧಾರೂಢ...

ಮೈಲಾರಿ: ಯಪ್ಪಾ ತಾತ

ಮೀನಾನಾಥ: ತಾತನಾ ಹಾಗೆ ನಡೆಯುವುದು ನೀನು ನಾನು ನಾಥ ಮುಂಜ ಮುಂಜನೇ ನಮ್ಮನೆ ಕಡೆ ಬಂದೀ?

ಮೀನಾನಾಥ: ತಿಂಡಿ ಸಿಗ್ತಾದ ಅಂತ ಬಂದೆ. ಮಂಗಳಾರ್ತಿ ಆಯ್ತು, ಪ್ರಸಾದ ಸಿಗ್ಲಿಲಿಲ್ಲ.

ಮೈಲಾರಿ: ಹೇ ಪ್ರಾಣಿ ಏನು ಮಾಡ್ಲಿಕತ್ತಿದೀಯಾ.

ರೇಣುಕಾ: ರೀ ಇಲ್ಲಿ ಗೆಜ್ಜೆ ಇಟ್ಟಿದ್ದೀನ್ರಿ ನೀವೇನಾರಾ ನೋಡಿದ್ರೇನು?

ಮೈಲಾರಿ: ನಮ್ಮನ್ಯಾಗ ಯಾವ ಗೆಜ್ಜೇನು ಇರ್ಲಿಲ್ಲಲ್ಲ.

ರೇಣುಕಾ: ಮನ್ಯೆಗ ಇಠ್ಲಿಲ್ಲರಿ, ನಾನಾ ತಂದು ಇಲ್ಲಿ ಇಟ್ಟಿದ್ದೀನ್ರೀ.

ಮೈಲಾರಿ: ಏನಾ ನಿನ್ನ ಸೂಡ್ಲಿ ಗೆಜ್ಜೆನ್ಯಾಕ ಇಲ್ಲಿಗೇ ತರ್ಲಾಕಾ ಹ್ವೋದಿ.

ರೇಣುಕಾ: ನಾನು ತಂದಿಲ್ಲ ರೀ

ಮೈಲಾರಿ: ಮತ್ತಿ ತಂದೀನಿ ಅಂತ ನೀನ ಹೇಳ್ದಲ್ಲ.

ರೇಣುಕಾ: ದಾರ್‍ಯಾಗ ಸೀರಿ ಮಾರ್‍ಕೊಂಡು ಹೋಗುವಾಗ ಒಬ್ಬಾಕಿ ಕೊಟ್ಲೂರಿ ನಿಮ್ಮತ್ರ ಇಟ್ಗಳ್ರಿ ಎಂದಳು.

ಮೀನಾನಾಥ: ಅವರೆಂತ ಟೈಮ್ ಬಾಂಬು ತಂದಿಟ್ಟಿಲ್ವಲ್ಲ. ಅವರು ತಂದಿರುವುದು ಗೆಜ್ಜೆ ಅಲ್ಲ ಅಣ್ಣ. ಅದಲ್ಲದೆ ಫ್ಲವರ್ಸ್‌ಗಳು ಎಷ್ಟೆ ಕೊಟ್ರು ಹಿಂದೆ ಮುಂದೆ ಯೋಚನೆ ಮಾಡ್ದೆ ತಗೊಂಡು ಬಿಡ್ಬೇಕಾ.

ಮೈಲಾರಿ: ಅದೆಲ್ಲ ನಿನ್ನಂತವ್ನ್ಗೆ ಲೇ ನಮಗಲ್ಲ. ನಿಮಗ ಯಾರರ ಏನರಾ ಕೊಟ್ರ ಹಿಂದೆ–ಮುಂದೆ ಅಷ್ಟ ಅಲ್ಲ, ಕೆಳಗೂ ಮ್ಯಾಲು ನೋಡ್ತೀವಿ.

ಮೀನನಾಥ: ಅದಕ್ಕೆ ನೀನು ಕೊರಸಂಡಿಯಾಗಿ ಹೋಡಾಡ್ತಾಯಾ

ರೇಣುಕಾ: ಈಗಾ ಮಾತು ಸಾಕ್ರಿ ಗೆಜ್ಜೆ ಹುಡ್ಕುರಿ.

ಮೈಲಾರಿ: ನೋಡ್ದೆ ಇರೋ ಗೆಜ್ಜೇನ ಎಲ್ಲಿ ಅಂತ ತರೋದು, ಹೋಗಲಿ ಬಿಡು ಬ್ಯಾರೆ ತಂದು ಕೊಡ್ತೀನಿ.

ರೇಣುಕಾ: ನೀವೇನೂ ಬ್ಯಾರೆ ತಂದು ಕೊಟ್ಟಿದ್ದು, ನಾನೇನು ನೋಡಿಲ್ಲ. ಸುಮ್ನ ಗೆಜ್ಜೆ ಹುಡ್ಕುರಿ. ನೀವೇನು ಮಾರಿ ನೋಡ್ಕೊಂತ ನಿಂತ್ರಿ, ಸುಮ್ನೆ ಹುಡ್ಕುರ್‍ರೆ.

ಮೀನಾನಾಥ: ಬೇಕಿತ್ತಾ ಇದು ನನಗೆ. ಉರಿಯುತ್ತಿರುವ ವಲೆಗೆ ಕೈ ಹಾಕುವುದು ಎಂದರೆ ಇದೆ ಅಪ್ಪಾ.

ಮೈಲಾರಿ: ಪ್ರಾಣಿ ಎಲ್ಲಾ ಕಡೆ ಹುಡ್ಕೀನಿ ಎಲ್ಲಿ ಕಾಣ್ಲಿಲಿಲ್ಲ.

ರೇಣುಕಾ: ಅವ್ರು ಯದಕ್ಕ ಹೊರಗೋಗಿದ್ರು ಅಂತ ಗೊತ್ತಾಯ್ತೇನೇ.

ಮೀನಾನಾಥ: ಗೊತ್ತಾಯ್ತು ಬಿಡು ಸೂರ್ಪನಕಿ, ಗಂಡ ಹೆಂಡತಿಯ ನಡುವೆ ಬಂದ್ನೆಲ್ಲ ನಾನು ಆ ಗೆಜ್ಜೆ ತೊಗೊಂಡು ಹೊಡ್ಕೊ ಬೇಕು.

ಮಂದಾಕಿನಿ: ಅರೆ ಯಾರಪ್ಪ ಗೆಜ್ಜೆ ಬಿಸಾಡಿದೋರು.

ಎಂ.ಪಿ: ಇನ್ಯಾರು ಮಂದಾ ಆ ನಮ್ಮ ಮರೆಗುಳಿ, ಮೈಲಾರಪ್ಪ ಬಿಸಾಗ್ಬಿಟ್ಟು ಹೋದ.

ಮಂದಾಕಿನಿ: ಅವ್ರೇಕೆ ಇಷ್ಟು ಚೆನ್ನಾಗಿರೋ ಗೆಜ್ಜನ ಬಿಸಾಡಿದಾರೆ.

ಎಂ.ಪಿ: ನಮ್ಮ ರೋಣುಕವ್ವ ದಾರಿಯಲ್ಲಿ ಬರುವಾಗ ಗೆಜ್ಜೆಗಳು ಸಿಕ್ಕವಂತೆ ಅವ್ಳು ಕಾಲಿಗೆ ಕಟ್ಟಿಕೊಂಡು ತಕ್ಕ ತೈ ತಕ್ಕ ತೈ ಅಂತ ಕುಣಿದುಬಿಟ್ಟಿದ್ದಾಳೆ. ರಾತ್ರಿ ಹಿಡಿ ನಿದ್ದೆ ಇಲ್ಲ ಬೆಳಿಗ್ಗೆ ತಂದು ಬಿಸಾಕ್ಬಿಟ್ಟು ಹೋದಾ.

ಮಂದಾಕಿನಿ: ರಸಿಕತೆ ಇಲ್ದೆ ಇರೋ ಜನಾರಿ ನಾಟ್ಯ ದೇವತೆ ನಟರಾಜನ ಗುರುತಾಗಿರೋ ಈ ಗೆಜ್ಜೇನಾ ಬಿಸಾಡೋಕೆ ಹೇಗ್ ರಿ ಮನಸ್ಸು ಬಂತು.

ಎಂ.ಪಿ: ಚಡ್ಡಿ ಬನ್ನಿಯನ್ನ ಹೊಲಿಯೋನಿಗೆ ಶೂಟ್ ಹೊಲಿಯೋದು ಗೊತ್ತಿರಬೇಕು. ಕಾಸು–ಕಾಸು–ಹುಂಡಿಗೆ ಹಾಕೋದು ಗೊತ್ತಿದೆ ಹೊರ್ತು ಕಲೆ ಬಗ್ಗೆ ಅವ್ರುಗೆಲ್ಲಿ ಗೊತ್ತಾಗಬೇಕು.

ಮಂದಾಕಿನಿ: ತಮಗೇನು ಗೊತ್ತಿರೋತಾರ ಮಾತಾಡ್ತಿದೀರಾ?

ಎಂ.ಪಿ: ಏನ್ ಮಂದಾ ಈತರ ಮಾತಾಡ್ತೀಯಾ, ನನಗೆ ನವರಸ ಕಲೆಗಳು ಗೊತ್ತೂ ಆದ್ರೆ ಅದನ್ನು ಪ್ರದರ್ಶನ ಮಾಡೋಕೆ ಕರೆಕ್ಟಾಗಿ ಸ್ಟೇಜ್ ಸಿಗ್ತಾ ಇಲ್ಲ ಅಷ್ಟೆ.

ಮಂದಾಕಿನಿ: ಏಜ್ ಇರುವಾಗ್ಲೆ ಸ್ಟೇಜ್ ಹತ್ತದೆ ಇರೋರು ಏಜ್ ಆದ ಮೇಲೆ ಯಾಕ್ರಿ ಸ್ಟೇಜ್ ಹತ್ತುತ್ತೀರಾ.

ಎಂ.ಪಿ: ಸ್ಟೇಜ್ ಹತ್ತೋದಕ್ಕೆ ಇಂಥದೆ ವಯೋಮಿತಿ ಅಂಥ ಇಲ್ಲ. ಸ್ಟೇಜ್ ಹತ್ತಿದ್ಮೇಲೆ ಇಳಿಯೋದ್ರ ಬಗ್ಗೆ ಗೊತ್ತಿರ್ಬೇಕು ಅಷ್ಟೆ. ಇಲ್ಲ ಅಂದ್ರೆ ಚಕ್ರವ್ಯೂಹದೊಳಗೆ ನುಗ್ಗಿದವರ ಗತಿಯಾಗಿ ಬಿಡುತ್ತೆ.

ಮಂದಾಕಿನಿ: ನಿಮ್ಮ ಜೊತೆ ಮಾತಾಡ್ತ ನಿಂತ್ರೆ ನನ್ನ ತಲೆಗೆ ಚಕ್ರ ಬರುತ್ತೆ ನಾನ್ನಿನ್ನು ಬರ್ತೇನೆ?

ಎಂ.ಪಿ: ಬಾ ಬೇಡ ಎಂದವರು ಯಾರು? ನೀನು ಬರ್ತೀನಿ ಅಂದ್ರೆ ೨೪/೭ ಓಪನ್ ಇರುತ್ತೆ.

ಮೀನಾನಾಥ: ಒಟ್ಟಾರೆ ಗಾಳೀ ಬಂದಾಗ ನಾವೆ ತೂರಿಕೋ ಬೇಕು. ಇಲ್ಲಂದ್ರ ಕೈಯಲ್ಲಿ ಬೀಸಣಿಕೆ ಇಟ್ಟುಕೊಂಡು ಬೀಸಿಕೋ ಬೇಕು.

(ಶೀಲಾ ಫೋನು ಮಾಡುತ್ತಾಳೆ. ಇವರಿಬ್ಬರ ಸಂಭಾಷಣೆ ಮಾಡುವಾಗ ಹೊರಗಡೆ ಕರೆದುಕೊಂಡು ಹೋಗು ಎನ್ನುತ್ತಾಳೆ. ಈ ಹುಡಿಗಿಯರು ಕರೆದಾಗ ಹೋಗಲೇ ಬೇಕು ಎನ್ನುವುದಕ್ಕೆ ಈ ಗಾದೆ ಮಾತನ್ನ ಬಳಸುತ್ತಾನೆ.)

ಮೀನಾ: ಹೊಯ್ ನಿಂತುಕೊಳ್ರಿ ಮಾರಾಯ್ರೆ ಎಲ್ಲಿಗೆ ಹೋಗ್ತಾ ಇದೀರಾ.

ಮೀನಾನಾಥ: ಇದೊಂದು ಬಂತು ಮಾತಾ ಒಳ್ಳೆ ಕೆಲಸಕ್ಕೆ ಹೋಗುವಾಗ "ಬೆಕ್ಕು ಬಲಗಡೆ ಇಂದ ಎಡಗಡೆ ಹೋದ ಹಾಗೆ"

ತನ್ನ ಹೆಂಡಿತಿ ಬಂದು ಎಲ್ಲಿಗೆ ಹೋಗ್ತೀರಾ ಅಂತ ಕೇಳುವಾಗ ತನ್ನ ಮನಸ್ಸಿನಲ್ಲಿಯೇ ಅಂದುಕೊಳ್ಳುತ್ತಾನೆ. ಈ ಗಾದೆಮಾತು ಬಳಕೆಯಾಗೋದನ್ನು ಗುರುತಿಸಬಹುದು. ಕಾರಣ ಹುಡುಗಿಯನ್ನು ನೋಡಲು ಹೊರಟಾಗ ಮೀನಾನಾಥನು ಎಲ್ಲಿಗೆ ಹೋಗುತ್ತೀ ಎಂದಾಗ ಅವನ ಉತ್ತರ ಕೊಡದೆ ಈ ಮೇಲಿನ ಗಾದೆ ಮಾತನ್ನು ಬಳಸುತ್ತಾನೆ.

"ಕಳ್ಳನಿಗೊಂದು ಪಿಳ್ಳೆ ನೆವಾ" ಶೀಲಾ ಮೀನಾನಾಥನನ್ನು ಕುರಿತು ಲೇಟಾಗಿ ಬಂದದ್ದಾಗಿ ಈ ಗಾದೆ ಮಾತನ್ನು ಬಳಸುತ್ತಾಳೆ.

"ಕೂಸುಟ್ಟುವುದಕ್ಕಿಂತ ಮುಂಚೆ ಕುಲಾಯಿ ಹೋಲ್ಸಬೇಕು ಅಂತಾರಲ್ಲ, ನಾನು ಅಂತ ಯೋಚನಿ ಮಾಡೀನಿ"

ಈ ಮಾತನ್ನ ಮೈಲಾರಪ್ಪ ಮೀನಾಳನ್ನು ಹೋಟೆಲ್‌ಗೆ ಕರೆದುಕೊಂಡು ಹೋಗಿರುತ್ತಾನೆ. ಅಲ್ಲಿರುವ ಬಿಲ್ಲಿನ ಬಗ್ಗೆ ಮಾತನಾಡುತ್ತಾ ಈ ಮೇಲಿನ ಗಾದೆ ಮಾತನ್ನು ಬಳಸುತ್ತಾನೆ.

ಬದಲಾದ ಗಾದೆ ಮಾತು

"ಕಾಲಿ ಸೈಟು ಕಂಡಕೂಡಲೇ ಡಿ ನೋಟಿಪೈ ಮಾಡಿಕೊಂಡು ಬಿಡ್ತಾರೆ."

ಮೀನಾಳಾ ಸ್ನೇಹಿತೆ ಶೀಲಾ ಮೀನಾನಾಥನನ್ನು ಪರಿಚಯಿಸುತ್ತಾಳೆ. ಶೀಲಾ ಇವನೆ ನನ್ನ ಬಾಯ್ ಫ್ರೆಂಡ್ ಎಂದು ಹೇಳುತ್ತಾಳೆ. ಅದಕ್ಕೆ ಮೀನಾ ಇವನೇ ನನ್ನ ಗಂಡ ಎಂದು ಹೇಳುತ್ತಾಳೆ. ಅದಕ್ಕೆ ಶೀಲಾ ನನಗೆ ಮದುವೇನೆ ಆಗಿಲ್ಲ ಬ್ಯಾಚ್ಯುರಲ್ ಅಂತ ಹೇಳಿದ್ರು. ಅದಕ್ಕೆ ಶೀಲಾ ಅವರೊಂತರ ಹೀಗೇನೆ ಅಂಥ ಈ ಮೇಲಿನ ಮಾತನ್ನು ಹೇಳುತ್ತಾಳೆ. ಅಂದರೆ ಹಾಸ್ಯ ಧಾರಾವಾಹಿಗಳಲ್ಲಿ ಹುಡುಗಿಯನ್ನು ಪಟಾಯಿಸುವುದು ಈ ಪಾತ್ರಕ್ಕೆ ಸೀಮಿತವಾಗಿರುವುದರಿಂದ ನಗೆ ಉಕ್ಕಿಸಲಿಕ್ಕೆಂದೇ ಹುಡುಗಿಯನ್ನು ಕಾಲಿ ಸೈಟಿಗೆ ಹೋಲಿಸಿ ಹೊಸ ಗಾದೆ ಮಾತನ್ನು ಬಳಸಿಕೊಂಡಿದೆಯಾದರೂ ಇತ್ತೀಚೆಗೆ ರಾಜಕೀಯ ವಲಯದಲ್ಲಿರುವವರು ಆಕ್ರಮ ಆಸ್ತಿಯನ್ನು ಗಳಿಸುತ್ತಿದ್ದಾರೆ. ಈ ಸಂದರ್ಭದಲ್ಲಿ ಬಳಕೆಯಾಗಿದ್ದ ಈ ನುಡಿ ಧಾರಾವಾಹಿಯಲ್ಲಿ ಹಾಸ್ಯಕ್ಕಾಗಿ ಹುಡಿಗಿಯನ್ನು ಪಟಾಯಿಸುವುದಕ್ಕೆ ಬಳಕೆಯಾಗುತ್ತಿರುವುದು ಒಂದು ವಲಯದಲ್ಲಿದ್ದ ನುಡಿ ಇನ್ನೊಂದು ವಲಯಕ್ಕೆ ವಿಸ್ತರಿಸಿಕೊಳ್ಳುತ್ತಿರುವುದನ್ನು ಈ ಮೂಲಕ ಗುರುತಿಸಿಕೊಳ್ಳಲಾಗಿದೆ. ಈ ಮೂಲಕ ಗುರುತಿಸಿಕೊಳ್ಳಲಾಗಿದೆ.

"ಸೀರಿ ಸೀರಿ ಇಳಕಲ್ ಸೀರಿ ಮೊಳಕಾಲುತನ್ಕ ಬಿಟ್ರಾ ಅಂಗಾಲ್ ತನ್ಕಾ"

ಈ ಮಾತನ್ನ ರೇಣುಕಾ ಸೀರೆ ಮಾರಾಟ ಮಾಡುವಾಗ ಓಣಿಯ ಜನರನ್ನು ಆಕರ್ಷಿಸಲು ಬಳಕೆ ಮಾಡುತ್ತಾರೆ. ಬಟ್ಟೆ ಮಾರುವ ಲಯದಲ್ಲಿ ನಗೆ ಉಕ್ಕಿಸಲೆಂದೇ ಈ ಮಾತುಗಳನ್ನಾಡುವ ಮೂಲಕ ಭಾಷಾ ಭಿನ್ನತೆ ಕಂಡುಕೊಂಡಿರುವುದನ್ನು ಈ ಮೂಲಕ ಗುರುತಿಸಿಕೊಳ್ಳಲಾಗಿದೆ.

ಗಾದೆ ಮಾತು: "ಅಳಿಯ ಅಲ್ಲ ಮಗಳ ಗಂಡ"

ಒಂದು ಕ್ಷಣಕ್ಕೆ ನಿನ್ನ ಬುದ್ವಂತ್ರ ಲಿಷ್ಟ್‌ಗೆ ಆಕ್ಕೊಂಡಿದ್ದೆ ಎಂದು ರೇಣುಕಾಳಿಗೆ ಅವಳ ಜೊತೆಗೆ ಮನೆ ನೋಡಲು ಬಂದವನು ಹೇಳುತ್ತಾನೆ. ಅದಕ್ಕವಳು ನನ್ನನ್ನ ದಡ್ಡಿ ಅಂದೊಕೊಂಡಿದ್ದೇನು ಅಂತ ಅಂದಿದ್ದಕ್ಕೆ ತಿರುವು ಮುರುವಾಗಿ ಮಾತನಾಡುತ್ತಾನೆ. ಅದಕ್ಕವಳು ಈ ಮೇಲಿನ ಗಾದೆ ಮಾತನ್ನು ಬಳಸುತ್ತಾಳೆ.

ದಿನಾಂಕ ೧.೧೧.೨೦೧೩ರಂದು ಸಂಜೆ ೫.೩೦ಕ್ಕೆ ಈಟಿವಿ ಕನ್ನಡವಾಹಿನಿಯ ಸಿಲ್ಲಿಲಲ್ಲಿ ಸಿಲ್ಲಿಲಲ್ಲಿ ಧಾರಾವಾಹಿಯಲ್ಲಿ ಒಳನುಡಿ ಬಳಕೆ

ಡಾ.ವಿಠಲ್: ಸುಮ್ನೆ ನಿತ್ಕೊಳೆ.

ಸಮಾಜ ಸುಧಾರಕಿ ಲಲಿತಮ್ಮ: ರೀ ನಡೀರಿ ಹೋಗೋಣ.

ದಾರಿ ಹೋಕ: (ಅಡ್ರೆಸ್ ಕೇಳುತ್ತಾನೆ) ಸುಮ್ನೆ ಹೋಗ್ರಿ ಎಂದು ರೇಗುತ್ತಾನೆ.

ಸಿಲ್ಲಿ: (ಮನೆಗೆ ಬರುತ್ತಾರೆ)

ಡಾ.ವಿಠಲ್: (ಸಮಾಜ ಸುಧಾರಕಿ ಲಲಿತಮ್ಮ ಅವರೊಂದಿಗೆ ಮಾತನಾಡುತ್ತಿರುವಾಗ) ಅಲ್ಲ ಅತ್ತಿಗೆ ಅಣ್ಣನ್ನ ಅಲ್ಲಿಯೇ ಬಯ್ಯೋದು ಬಿಟ್ಟು ಇಲ್ಲಿ ಬಂದು ಗೊಣಗಾಡಿದ್ರೆ ಏನ್ ಪ್ರಯೋಜನಾ ಹೇಳಿ. ತೆಂಗಿನಕಾಯಿ ಸಿಕ್ಕಿದಾಗಲೇ ಹಿಡುಗಾಯಿ ಹೊಡ್ದು ಬಿಡ್ಬೇಕು.

ಲಲಿತಮ್ಮ: ಹೇಗೆ ಬಯ್ಯೋಕಾಗುತ್ತೆ ಸಿಲ್ಲಿ? ರಸ್ತೆನಲ್ಲಿ ಬಯ್ದರೆ ಜನ ನನ್ನ ಬಗ್ಗೆ ಏನ್ ತಿಳ್ಕೋಳಲ್ಲ ಹೇಳು.

ವಿಶಾಲ: ಮೇಡಂ ಡಾಕ್ಟರ್‌ನ ರಸ್ತೆಯಲ್ಲಿ ಬಯ್ದೆ ಇದ್ದುದೇ ತುಂಬಾ ಒಳ್ಳೆಯದಾಯ್ತು. ನಿಮ್ಗೆ ಬರೋ ಸ್ವಲ್ಪ ಓಟು ತಪ್ಪಿ ಹೋಗಿರೋದು?

ವಿಶಾಲನ ಗಂಡ ರಂಗನಾಥ: ಮೇಡಂ ವಿಶಾಲ ಹೇಳೋದು ಒಳ್ಳೆ ಪಾಯಿಂಟೆ. ದೇವರ ಪೂಜೆ ದೇವಸ್ಥಾನದಲ್ಲಿಯೇ ಆಗಬೇಕು. ಗಂಡನ ಪೂಜೆ ಮನೆಯಲ್ಲಿಯೇ ಆಗ್ಬೇಕು.(ವ್ಯಂಗ್ಯ ನುಡಿಗಟ್ಟು) ಇವಳು ನನಗೆ ಮಾಡ್ತಾಳಲ್ಲ ಹಾಗೆ.

ವಿಶಾಲ: ರೀ ಯಾವತ್ತಾದ್ರು ನಿಮ್ಮನ್ನ ಬಯ್ದಿದ್ದೀನೇನ್ರಿ(ಎನ್ನುತ್ತಾ ಅಲ್ಲಿಯೇ ರೋಫ್ ಹಾಕುತ್ತಾಳೆ).

ರಂಗನಾಥ: ಇಲ್ಲ ಕಣೇ(ಎಂದು ಹೋಗುತ್ತಾ ಹೇಳುತ್ತಾನೆ).

ಗೋವಿಂದ: ಡಾಕ್ಟರ್‌ನ ಅಸಿಸ್ಟೆಂಟ್ (ಲಲಿತಳನ್ನು ಕುರಿತು). ಡಾಕ್ಟರೇ, ಡಾಕ್ಟರೇ ಪೇಸೆಂಟ್ ಕಡೆಯವರು ಕ್ಲಿನಿಕ್‌ಗೆ ಬಂದಿದ್ರು ಬಹಳ ಕೇಳಿದ್ರು ಇದನ್ನ ಡಾಕ್ಟರ್‌ಗೆ ಕೊಟ್ಟು ಬಿಡಿ ಅಂತ

ಕೊಟ್ಟಿದ್ದಾರೆ(ಎನ್ನುತ್ತಾನೆ. ಅದಕ್ಕೆ ಲಲಿತ ನಗೆ ಉಕ್ಕಿಸುವ ಉದ್ದೇಶದಿಂದ ಈ ಇಂಗ್ಲೀಷ್ ನುಡಿ ಬಳಸುತ್ತಳೆ).

ಲಲಿತ: ಲೇಡಿ ಪೆಸೆಂಟೋ, ಜೆಂಟ್ಸ್ ಪೇಸೆಂಟೋ.

ಗೋವಿಂದ: ಲಲಿತಮ್ಮ ಅಡಿಗೆ ಮನೆಯಲ್ಲಿ ಮೆಣಸಿನಕಾಯಿ ಇದೆಯೋ ಕೊತ್ತಂಬರಿ ಸೊಪ್ಪು ಇದೆಯೋ.

ಲಲಿತ: ಮೆಣಸಿನಕಾಯಿ ಮಾತ್ರ ಇರೋದು?

ಗೋವಿಂದ: ಸುಮ್ನೆ ಹೋಗಿ ಮೆಣಸಿನ ಕಾಯಿಯ ಕತ್ತರಿಸಿಕೊಂಡು ಕೂತ್ಕೊ.

ಲಲಿತ: ಗೋವಿಂದಾs.......(ಸಿಟ್ಟಿನಿಂದ ಕೂಗುತ್ತಾಳೆ)

ಗೋವಿಂದ: ಲಲಿತಮ್ಮ ನನ್ನ ವಿಷಯಕ್ಕೆ ಬಂದ್ರೆ ಗೊತ್ತಲ್ಲ(ನಾಗರ ಹಾವಿನ ಟ್ಯೂನ್ ಬರಿಸುತ್ತಾನೆ. ಹಾವು ಹೆಡೆ ಎತ್ತಿದ ಹಾಗೆ ಕೈಯನ್ನ ಹಾವು ಮಾಡುವ ಹಾಗೆ ಮಾಡಿ ಎದುರಿಸುತ್ತಾನೆ).

ಚಂದನ ಟಿವಿಯಲ್ಲಿ ಎರಡು ದಶಕದ ಹಿಂದಿನ ಗುಡ್ಡದ ಭೂತ ಧಾರಾವಾಹಿಯ ಮೊದಲ ಎಪಿಸೋಡ್.

ಪಟ್ಟಣದಿಂದ ಹಳ್ಳಿಗೆ ಹೋಗಲು ಖಾಸಗಿ ವಾಹನಗಳು ಸಾರಿಗೆ ಸಂಪರ್ಕವನ್ನು ಕಲ್ಪಿಸುತ್ತವೆ. ಸರ್ಕಾರಿ ಸ್ವಾಮ್ಯದ ಯಾವುದೇ ಬಸ್ಸುಗಳು ಹಳ್ಳಿಗೆ ಹೋಗುವುದು ವಿರಳವಾಗಿದ್ದರಿಂದ ಖಾಸಗಿ ವಾಹನಗಳಾದ ಕಾರು, ಆಟೋ, ಇತರೆ ವಾಹನಗಳನ್ನೇ ಪ್ರಯಾಣಕ್ಕಾಗಿ ಓಡಿಸುತ್ತಾರೆ. ಇಂಥದೊಂದು ಸನ್ನಿವೇಶ ಗುಡ್ಡದ ಭೂತ ಧಾರಾವಾಹಿಯಲ್ಲಿಯೂ ಬರುತ್ತದೆ. ಮಂಗಳೂರು ಪರಿಸರದ ಪ್ರಾದೇಶಿಕ ಧಾರಾವಾಹಿ. ಈ ಊರಿನ ಹೆಸರು ಕಮರೊಟ್ಟು. ಈ ಊರಿಗೆ ಹೋಗಲು ಸಾರಿಗೆ ಸಂಪರ್ಕಕ್ಕಾಗಿ ಖಾಸಗಿ ವಾಹನಗಳನ್ನೇ ಬಳಸುತ್ತಾರೆ.

ಪ್ರಯಾಣಿಕ: ಪ್ರಯಾಣಕ್ಕಾಗಿ ಪ್ರಯಾಣಿಕನೊಬ್ಬ ಕೈ ಎಂದು ನಿಲ್ಲಿಸುತ್ತಾನೆ. ಕಾರು ನಿಲ್ಲುತ್ತದೆ. ಅದರಲ್ಲಿದ್ದ ಪ್ರಯಾಣಿಕನೊಬ್ಬ ಸಾಕು ತುಂಬಿಸಿದ್ದು, ಇನ್ನೆಲ್ಲಿ ಕೂಡಿಸ್ತೀರಿ ಎಂದು ಖಾಸಗಿ ವಾಹನ ಚಾಲಕನಿಗೆ ಹೇಳುತ್ತಾನೆ.

ಡ್ರೈವರ್: ಹೇಳ್ತೇನೆ ಸ್ವಲ್ಪ ಸರ್ಕೊಳಿ.

ಪ್ರಯಾಣಿಕ: ಛೆ...(ಎನ್ನುತ್ತಾನೆ).

ಡ್ರೈವರ್: ಸರೀರಿ ಸ್ವಲ್ಪ, ಇನ್ನು ಎರಡು ಸೀಟು ಬಾಕಿ ಇದೆ ಗೊತ್ತ!

ಪ್ರಯಾಣಿಕ: ಎರಡು ಇದೆಯಾ ಎಲ್ಲಿ?

ಡ್ರೈವರ್: ಹಿಂದುಗಡೆ ಡಿಕ್ಕಿ ಒಳಗಡೆ(ಎನ್ನುತ್ತಾನೆ). ಪ್ರಯಾಣಿಕರ ಕೋಪಕ್ಕೆ ಗುರಿಯಾಗುತ್ತಾನೆ. ಕಾರಣ ಈಗಾಗಲೇ ಸೀಟುಗಳು ಭರ್ತಿಯಾಗಿದ್ದರಿಂದ ಪ್ರಯಾಣಿಕರು ಹೆಚ್ಚಿನ ಸೀಟುಗಳನ್ನು ಹಾಕಬೇಡ ಎಂದು ಹೇಳುತ್ತಾರೆ. ಡ್ರೈವರ್ ಹಣ ಗಳಿಸಲಿಕ್ಕಾಗಿ ಅಥವಾ ಹೆಚ್ಚಿನ ಲಾಭ ಪಡೆಯಲಿಕ್ಕಾಗಿ ಇಕ್ಕಟ್ಟಿನಲ್ಲಿ ಜನರನ್ನು ತುಂಬಿಸುತ್ತಿರುತ್ತಾನೆ.

ಹೊಸ ಪ್ರಯಾಣಿಕರಾದ ತಂದೆ(ಗಿರಿಯಪ್ಪ) ಮಗಳು(ರತ್ನ) ಕಮರೊಟ್ಟುಗೆ ಮನೆ ಖರೀದಿಸಿ ವಾಸವಾಗಿರಲು ನಿರ್ಧರಿಸಿ ಬಂದವರು.

ರತ್ನ: ಬೊಂಬಾಯಿಂದ ೨೪ ಗಂಟೆ ಬಸ್ಸಲ್ಲಿ ಪ್ರಯಾಣ ಮಾಡಿದ್ರು ಇಷ್ಟು ಆಯಾಸ ಆಗಿರ್ಲಿಲ್ಲ. ಆದ್ರೆ ಈ ೧೫ ಕಿ.ಮೀ. ಪ್ರಯಾಣ ಮಾತ್ರ ಅಬ್ಬಾ.

ಡ್ರೈವರ್: ಹೋ ನೀವು ಬೊಂಬೈ ಇಂದ ಬಂದವರಾ, ಹೊ, ಹೊ, ಈಗೆಲ್ಲಿ ಹೊರಟಿದ್ದೀರಿ?

ಗಿರಿಯಪ್ಪ: ಟ್ರಾನ್ಸ್‌ಪೋರ್ಟ್ ಕಂಪನಿಗೆ, ನಮ್ಮ ಲಗೇಜನ್ನು ಲಾರಿಯಲ್ಲಿ ಕಳಿಸಿದ್ದೆವು, ಅದನ್ನ ಬಿಡಿಸಿಕೊಂಡು ಬರೋಣ ಅಂತ ಹೊರಟಿದ್ದೆ.

ಡ್ರೈವರ್: ನಾನು ಒಂದು ಆರು ತಿಂಗಳು ಬೊಂಬೈಯಲ್ಲಿದ್ದೆ ಮಾರಾಯರೆ, ಅಲ್ಲಿ ಎಷ್ಟೊತ್ತು ಟ್ರೈನೊಂದು ಓಡಿಸ್ತಾರೆ. ಏನು ಸ್ಪೀಡ್ ಅಂತಿರ, ಛೇ ಅದರಲ್ಲಿ ಒಂದು ಜನ ತುಂಬಿಸ್ತಾರೆ ಮಾರಾಯ್ರೆ, ಹೀಗೀಗೆ (ಕೈಯನ್ನು ಆಕ್ಷನ್ ಮಾಡಿ ತೋರಿಸುತ್ತಾನೆ. ಹೆಚ್ಚು ಜನರನ್ನು ತುಂಬುತ್ತಾರೆ ಎನ್ನುವುದನ್ನು ಕೈ ಸನ್ನೆ ಮೂಲಕ ತಿಳಿಸುತ್ತಾ ಹೀಗೀಗೇ ಎಂದು ಹೇಳುತ್ತಾನೆ).

ಗಿರಿಯಪ್ಪ: ಆದ್ರೆ ಅದ್ರಲ್ಲಿ ಈ ತರ ಜನನ ತುಂಬಿಸೋದಿಲ್ಲ.

ರತ್ನ: ಅಲ್ಲದೆ ಅದ್ರಲ್ಲಿ ಡಿಕ್ಕಿ ಸೀಟು ಇರೋದಿಲ್ವಲ್ಲ(ಎಂದು ನಗುತ್ತಾರೆ. ಈ ಮಾತನ್ನು ಕೇಳಿಸಿಕೊಂಡ ಡ್ರೈವರು ಪ್ರತಿಕ್ರಿಯಿಸದೆ ಅವರನ್ನ ಕೋಪದಿಂದ ದಿಟ್ಟಿಸಿ ಕೆಂಗಣ್ಣು ಮಾಡಿಕೊಂಡು ನೋಡುತ್ತಾನೆ).

ಪ್ರಯಾಣಿಕ: (ಡ್ರೈವರ್ ಸ್ಪೀಡ್ ಓಡಿಸುತ್ತಿರುವುದರ ಕುರಿತು ಹೀಗೆನ್ನುತ್ತಾನೆ.) ಸ್ವಾಮಿ ಅಷ್ಟು ಓಡಿಸ್ಬೇಡಿ ನಿಮ್ಮ ದಮ್ಮಯ್ಯ

ಡ್ರೈವರ್: ನೀವ್ ಸ್ವಲ್ಪ ಸುಮ್ಮನಿರಿ ಮಾರಾಯರೆ, ೧೫ ವರ್ಷದಿಂದ ಓಡಿಸ್ತಾ ಇದೇನೆ, ಒಂದೇ ಒಂದು ಯಾಕ್ಸಿಡೆಂಟ್ ಆಗಲಿಲ್ಲ. ರೆಕಾರ್ಡ್ ರೆಕಾರ್ಡು.

ಪ್ರಯಾಣಿಕ: ಅದಕ್ಕೆ ಆ ರೆಕಾರ್ಡು ಬ್ರೇಕ್ ಮಾಡ್ಬೇಡಿ.

ಇನ್ನೊಬ್ಬ ಪ್ರಯಾಣಿಕ: (ತುಳುವಿನಲ್ಲಿ) ಮೆಲ್ಲ ಪೋಯಾ ಮಾರಾಯಾ(ನುಡಿಬೆರಕೆ, ನುಡಿ ಜಿಗಿತ ಮತ್ತು ಅನ್ಯಭಾಷಾ ಬಳಕೆ).

ಪ್ರಯಾಣಿಕ: ಹೇಳಿದ್ರೆ ಕೇಳ್ಲಿಲ್ಲ ಓಡಿಸಿಯೇ ಓಡಿಸಿದ್ರಿ, ಹೊಂಡಕ್ಕೆ ಬಂದು ಹಾಕಲಿಲ್ಲ. ನಾವಂತು ಬಚಾವ್.

ಡ್ರೈವರ್: ಸುಮ್ಮನಿರಿ ಮರಾಯ್ರೆ, ನಿಮ್ಮ ಗೋಣಗಾಟದಿಂದಲೇ ಹೀಗಾದದ್ದು, ನೀವ್ ಕಾರು ಹತ್ತೋದು ಬೇಡ ನಡಕೊಂಡು ಹೋಗಿ........

ಪ್ರಯಾಣಿಕ: ಸಿಟ್ಟಾಗಿ ಯಾರಿಗೆ ಸಿಳ್ಳು ಹಿಡಿದದ್ದು ಎಂದು ಯಾಕೆ ಬಯ್ತೀಯ ಮಾರಾಯ ಎಂದು ದಬಾಯಿಸುತ್ತಾನೆ(ಅದಕ್ಕೆ ಡ್ರೈವರ್ ಭಯಗೊಂಡು ತನ್ನ ಮಾತನ್ನು ಸಮರ್ಥಿಸಿಕೊಳ್ಳುತ್ತಾನೆ).

ಡ್ರೈವರ್: ಹೈ ನಿಮಗಾರು ಬೈದರು ಮಾರಾಯ್ರೆ ನಾನು ಬೈದದ್ದು ಟೈರಿಗೆ, ಎಂದು ತಪ್ಪಿಸಿ ಕೊಳ್ಳುತ್ತಾನೆ.

ಗಿರಿಯಪ್ಪ: ಎಷ್ಟೊತ್ತು ಆಗುತ್ತೆ ಇನ್ನು.

ಡ್ರೈವರ್: ಎರಡು ನಿಮಿಷ, ಎರಡು ನಿಮಿಷದಲ್ಲಿ ರೇಡಿ. ನೀವು ಬೇಕಾದ್ರೆ ಒಂದು ಅರ್ಧಗಂಟೆ ಸುತ್ತಾಡಿಕೊಂಡು ಬನ್ನಿ(ಹಾಸ್ಯ ಮಾಡುತ್ತಾನೆ, ಅದಕ್ಕವರು ನಗುತ್ತಾರೆ). ನೀವು ಬೊಂಬೈಯವರು ಎಲ್ಲಿ ಮನೆ ಮಾಡಿದ್ದೀರಿ?

ಗಿರಿಯಪ್ಪ: ಕಮರೊಟ್ಟು ಹಳೆ ಮನೆ ಹೆಸರು ಕೇಳೀದಿರಾ.

ಡ್ರೈವರ್: ಹೌದು

ಗಿರಿಯಪ್ಪ: ಆ ಮನೇನ ನಾವು ಕೊಂಡುಕೊಂಡಿದ್ದೀವೆ.

ಡ್ರೈವರ್: ಹ ಕಮರೊಟ್ಟು ಹಳೆ ಮನೇನಾ, ಅದನ್ನು ಕೊಂಡುಕೊಂಡಿರಾ, ಹೊ ಹೊ...

ಗಿರಿಯಪ್ಪ: ಯಾಕೆ?

ಡ್ರೈವರ್: (ಮುಖವನ್ನು ತಗ್ಗಿಸಿಕೊಂಡು ಏನು ಹೇಳದ ಸ್ಥಿತಿಗೆ ಬಂದು, ಮನೆಯ ಬಗ್ಗೆ ಏನೋ ಹೇಳಬೇಕು ಎನ್ನುವ ತವಕ, ಇನ್ನೊಂದು ಕಡೆ ನಮಗೆ ಯಾಕೆ ಎನ್ನುವ ಮನಸ್ಥಿತಿ. ಈ ನಡುವೆ ತಲೆಯನ್ನು ತಗ್ಗಿಸುತ್ತಾ) ಆ ಮನೆs

ಗಿರಿಯಪ್ಪ: ಯಾಕೆ ಏನ್ ವಿಷಯ.

ಡ್ರೈವರ್: (ಹೇಳಲಾರದೆ) ಏನಿಲ್ಲ, ಏನಿಲ್ಲ(ಎಂದು ಸುಮ್ಮನಾಗುತ್ತಾನೆ).

ಪ್ರಯಾಣಿಕ: ಅದಕ್ಕೇ ಇರ್ಬೇಕು ಮೊನ್ನೆ ಆ ಮನೆಗೆ ಸುಣ್ಣ ಬಳೀತಾ ಇದ್ರು.

(ತಂದೆ ಮಗಳು ಮನೆಗೆ ಬರುತ್ತಾರೆ.)

ರತ್ನ: ಎಷ್ಟು ಚೆನ್ನಾಗಿದೆ ಅಲ್ವ ಅಪ್ಪ ಮನೆ. ಮೂವತ್ತು ಸಾವಿರಕ್ಕೆ ಸಿಕ್ಕಿದೆ ಅಂದ್ರೆ ನಂಬೋಕೆ ಆಗೋಲ್ಲ.

ಗಿರಿಯಪ್ಪ: ನನಗೂ ಹಾಗನಿಸ್ತು. ಆದ್ರೆ ಮನೆ ಹೆಸರು ಹೇಳುತ್ತಲೇ ಆ ಕಾರಲ್ಲಿ ಇದ್ದವ್ರೆಲ್ಲ ಯಾಕ್ ಹಂಗ ನೋಡಿದ್ರು. ನಾನೇನಾದ್ರು ಮೋಸ ಹೋದ್ನ?

ರತ್ನ: ಅಂದ್ರೆ?

ಇವರಿಬ್ಬರ ಮಾತುಗಳು ಪ್ರಮಾಣೀಕರಣ ಕನ್ನಡವನ್ನೇ ಮಾತನಾಡಿದ್ದನ್ನು ಈ ಮೇಲಿನ ಉದಾಹರಣೆಯಲ್ಲಿ ತಿಳಿಯಬಹುದು. ಅಲ್ಲದೇ ಇಂಗ್ಲಿಷ್ ಭಾಷೆ ಪ್ರಮಾಣೀಕರಣ ಕನ್ನಡದಲ್ಲಿ ಬೆರೆತು ಹೋಗುವುದರಿಂದ ಅನ್ಯಭಾಷಾಬಳಕೆ ಮಾಡುವುದಿಲ್ಲವೇನೋ ಎನಿಸುತ್ತದೆ. ಕಾರಣ ಕನ್ನಡ ಭಾಷೆಯ ಸ್ವರೂಪಕ್ಕೆ ಹೊಂದಿಸಿಕೊಂಡು ಮಾತನಾಡುತ್ತಿರುವುದು ಅನ್ಯ ಭಾಷಾಬಳಕೆ ಆಗಿಲ್ಲವೆನ್ನುವಷ್ಟರ ಮಟ್ಟಿಗೆ ನಡೆದಿದೆ ಎಂದರೆ ತಪ್ಪಾಗಲಾರದು. ಈ ರೀತಿಯ ಬೆಳವಣಿಗೆಯು ಕೂಡ ಭಾಷೆ ಕಾಲದಿಂದ ಕಾಲಕ್ಕೆ ಸ್ವರೂಪವನ್ನು ಬದಲಾಯಿಸಿಕೊಳ್ಳುತ್ತಾ ಹರಿಯುವ ನೀರಿನಂತೆ ಬದಲಾವಣೆಯನ್ನು ಪಡೆದುಕೊಂಡು ಬಂದಿರುವುದನ್ನು ಈ ಮೂಲಕ ಗಮನಿಸಬಹುದು. ಅಲ್ಲದೇ ನುಡಿಬೆರಕೆ, ನುಡಿಜಗಿತ, ಅನ್ಯಭಾಷಾ ಬಳಕೆ(ತುಳು ಭಾಷೆ) ಆಗುತ್ತಿರುವುದು ಈ ಪ್ರಾದೇಶಿಕ ಧಾರಾವಾಹಿಯಲ್ಲಿ ತಿಳಿಯಲಾಗಿದೆ. ಇಂಗ್ಲಿಷ್ ಭಾಷೆ ಅಕ್ಷರಸ್ಥ ಮತ್ತು ನಗರವಾಸಿಯವರಿಗೆ ಸುಲಭವಾಗಿ ನುಡಿಬೆರಕೆ ಮತ್ತು ನುಡಿಜಗಿತ ಕಾರಣವಾಗುವುದನ್ನು ಇಂತಹ ಪ್ರಾದೇಶಿಕ ಭಾಷೆಯಲ್ಲಿಯೂ ಕಾಣಬಹುದು.

ಕುಡುಕನೊಬ್ಬ ಕಮರೊಟ್ಟು ಮನೆಯ ಬಂಡಿ(ಎತ್ತಿನ ಗಾಡಿ) ದಾರಿಯಲ್ಲಿ ಒಬ್ಬೊಬ್ಬನೆ ಮಾತನಾಡಿಕೊಳ್ಳುತ್ತಾ ಬರುತ್ತಿರುತ್ತಾನೆ.

ಅಂಗಾರಣ್ಣ: ಹೇ ಗಡಂಗೆ ಹೋಗದು ಬಿಟ್ಟು ಇಲ್ಲಿ ಏನ್ ಮಾಡ್ತಾ ಇದೀಯಾ.

ಕುಡುಕ: ಹ ಬೊಂಬೈಯವರ

ಅಂಗಾರಣ್ಣನ ಮಗ: ನಾನು ಬೊಂಬೈಯ್ಯವರನ್ನ ನೋಡಿಕೊಂಡು ಬರ್ತೀನಿ(ಎಂದು ಓಡುತ್ತಾನೆ).

ಅಂಗಾರಣ್ಣ: ಹೇಯ್ ಬಾರೋ ಇಲ್ಲಿ, ಬಾರೋ ಇಲ್ಲಿ(ಸಿಟ್ಟಲ್ಲಿ ಹೊಡೆಯುವ ನಾಟಕ ಮಾಡುತ್ತಾ) ಇದನ್ನು ಹಿಡುಕೊಂಡು ಹೋಗಿ ಗುಡ್ಡೆಯಲ್ಲಿ ಕಟ್ಟು ಎಂದು ಹೇಳಿ ಬೊಂಬೈಯವರನ್ನು ಮಾತನಾಡಿಸಲು ಮುಂದಾಗುತ್ತಾನೆ.

ಕುಡುಕ: ನಾನ ಬರೋದಾ.

ಅಂಗಾರಣ್ಣ: ಬೇಡ ಬೇಡ ನೀನು ದಡರಿಗೆ ಹೋಗು(ಎಂದು ಹೇಳುತ್ತಾ) ಬೊಂಬೈಯವರ ಮನೆಗೆ ಹೋಗುತ್ತಾನೆ. ತಾನು ತಲೆ ಮೇಲೆ ಸುತ್ತಿಕೊಂಡಿದ್ದ ಟವಲ್ಲನ್ನು ಬಿಚ್ಚಿಕೊಂಡು ಹೆಗಲ

ಮೇಲೆ ಹಾಕಿಕೊಂಡು ಲುಂಗಿಯನ್ನು ಮೊಣಕಾಲವರೆಗೆ ಕಟ್ಟಿದ್ದನ್ನು ಪಾದದವರೆಗೆ ಬಿಟ್ಟುಕೊಂಡು ಮನೆಯನ್ನು ಪ್ರವೇಶ ಮಾಡುತ್ತಾನೆ. ಮನೆಗೆ ಹೋಗಲು ಯಾರು ಇದ್ದಾರೆ ಯಾರು ಇಲ್ಲ ಎಂದು ಕಳ್ಳನ ಹಾಗೆ ಇಣುಕಿ ನೋಡಿ ಮುಂದೆ ಹೋಗುತ್ತಾನೆ.

ನಿಮಗೆ ತುಳು ಬರೋದಿಲ್ಲವಾ.

ಗಿರಿಯಪ್ಪ: ಸ್ವಲ್ಪ-ಸ್ವಲ್ಪ ಬರುತ್ತೆ?

ಅಂಗಾರಣ್ಣ: ಬೊಂಬೈಯವರು ಬರ್ತಾರಂತ ಕೇಳಿದ್ದೆ? ಅದಕ್ಕೆ ನೋಡಿ ಹೋಗುವ ಅಂತ ಬಂದದ್ದು. ನನ್ನ ಹೆಸರು ಅಂಗರ ಅಂತ. ನಂದು ಅಗೋ... ಅಲ್ಲಿ ಮನೆ.

ಅಂಗಾರಣ್ಣ: ಕೆಟ್ಟು ಪಟ್ನ ಸೇರು ಅಂತ ಮಾತಿದೆ ನಮ್ಮಲ್ಲಿ(ಗಾದೆಮಾತು). ಆದರೆ ನೀವು ನೋಡಿದ್ರೆ ಬೊಂಬೈ ಬಿಟ್ಟು ಇಲ್ಲಿ ಬಂದಿರಾ ಹೋ ಪುಡಿಯಾಕುತ್ತೀರಾ(ಅಂದರೆ ತಂಬಾಕಿನಂತಹ ತಲಬಿನ ಪುಡಿಯನ್ನು ಮಾತಿನ ಮೂಲಕ ಅವರನ್ನು ಹೊಗಳಿ ತೆಗೆದುಕೊಳ್ಳುತ್ತಾನೆ.) ಒಳ್ಳೆಯದಾಯ್ತು. ನಂದು ಪುಡಿ ಖಾಲಿಯಾಗಿದೆ. ಪೇಟೆಗೆ ಹೋಗುವ ಅಂದ್ರೆ ಪುರ್ಸೊತ್ತೆ ಇರೋದಿಲ್ಲ.

ಗಿರಿಯಪ್ಪ: ತಗೋಳಿ... ತಗೋಳಿ(ಎಂದು ಹೇಳುತ್ತಾರೆ)

ಅಂಗಾರಣ್ಣ: ಅಭ್ಯಾಸ ಆಗ್ಬಿಟ್ಟಿದೆ. ರಾತ್ರಿ ಊಟ ಆದ್ಮೇಲೆ ಒಂದು ಸಲನಾದ್ರು ಬೇಕೇ ಬೇಕು. ಅದಕ್ಕೆ ಎಂದು ಹೇಳುತ್ತಾನೆ(ತಲಬು ಹಾಕಿಕೊಳ್ಳಲು ಡಬ್ಬಿಯನ್ನು ತೆಗೆಯುತ್ತಾನೆ).

ಗಿರಿಯಪ್ಪ: ಹಾಕ್ಕೋಳಿ, ಹಾಕ್ಕೋಳಿ (ಎನ್ನುತ್ತಾರೆ.)

ಅಂಗಾರಣ್ಣ: ಈ ಮನೇನ ಎಷ್ಟಕ್ಕೆ ತಗೊಂಡ್ರಿ,

ಗಿರಿಯಪ್ಪ: ಒಂದು ಮೂವತ್ತು ಸಾವಿರ ಆಯ್ತು ನೋಡಿ.

ಅಂಗಾರಣ್ಣ: ಏನು? ಈ ಮನೆಗೆ ಮೂವತ್ತು ಸಾವಿರ? ಏನೋ ಲಾಟ್ರೀಟ್ರಿ ಹೊಡೀತೋ ಹೇಗೆ?

ಗಿರಿಯಪ್ಪ: ಲಾಟ್ರೀಟ್ರಿ ಏನಿಲ್ಲಪ್ಪ. ೨೫ ವರ್ಷ ಒಂದು ಬ್ಯಾಂಕ್‌ನಲ್ಲಿ ಕೆಲ್ಸ ಮಾಡ್ದೆ. ರಿಟೈರ್ಡ್ ಆದ್ಮೇಲೆ ಸ್ವಲ್ಪ ಕೈಗೆ ಹಣ ಬಂತು. ಅಲ್ಲೇ ಇದ್ರೆ ಎಲ್ಲಾ ಖರ್ಚಾಗಿ ಹೋಗುತ್ತೆ ಅಂತ ಭದ್ರಾವತಿಯಲ್ಲಿರುವ ನನ್ನ ತಮ್ಮನ ಮಗನಿಗೆ ಒಂದು ಕಾಗದ ಪತ್ರ ಬರೆದೆ. ಊರ್ನಲ್ಲಿ ಒಂದು ಮನೆ ತೋಟ ಹುಡುಕಿಕೊಡು ಅಂತ.

ಅಂಗಾರಣ್ಣ: ಅವ್ರು ಈ ಮನೆ ಹುಡ್ಕೊಟ್ರಾ, ಒಟ್ಟಿನಲ್ಲಿ ನಿಮ್ಮ ಗ್ರಹಚಾರಾನೇ ಎಳೆದು ಇಲ್ಲಿಗೆ ತಂದಿರೋದು. ಯಾರೇ ಬಂದ್ರು ಒಂದು ತಿಂಗಳಿಗಿಂತ ಹೆಚ್ಚಾಗಿ ಉಳಿಯೋದಿಲ್ಲ. ಅಲ್ಲ ಇವಾಗ ಯಾರಿಗೆ ಭಾರವಾಗಿದೆ ಸ್ವಾಮಿ?

ಗಿರಿಯಪ್ಪ: ಇಲ್ಲಿ ಜೀವಕ್ಕೆ ಬಾದೆ ಇದೆ ಅಂತೀರಾ.

ಅಂಗಾರಣ್ಣ: ನಾನು ಎಂಥ ಹೇಳೋದು? ಇಡೀ ಊರಿಗೆ ಗೊತ್ತುಂಟು. ಪಾಪ ಹೆಣ್ಣು ಹುಡುಗಿಗೆ ಯಾಕೆ? ಬನ್ನಿ ಹೇಳ್ತೇನೆ, ಬನ್ನಿ ಬನ್ನಿ.

ಗಿರಿಯಪ್ಪ: ನೀನು ಇಲ್ಲಿ ಇರಮ್ಮ ನಾನು ಈಗ ಬಂದ್ಬಿಡ್ತೇನೆ.

ಅಂಗಾರಣ್ಣ: ಬನ್ನಿ, ಬನ್ನಿ(ಕಾಡಿನ ಮಧ್ಯೆ ಕರೆದುಕೊಂಡು ಹೋಗುತ್ತಾನೆ). ಹಿಂಬಾಲಿಸಿಕೊಂಡು ಮಗಳು ಬರುತ್ತಾಳೆ. ಜೀವದ್ ಬಾದೆಯಂದ್ರೆ ಒಂದು ಭೂತದ್ದು. ಬನ್ನಿ ಇದೇ ನೋಡಿ ಈ ಭೂತ ಇರುವ ಜಾಗ(ಹೊಸದಾಗಿ ಬರೋರನ್ನೆಲ್ಲ ಹೆದರಿಸೋದು ಮನೆಯಿಂದ ಓಡಿಸುವ ಕೆಲಸ ಮಾಡುತ್ತಾನೆ. ಇಲ್ಲಸಲ್ಲದ ಭೂತ ಪೀಶಾಚಿ ಕಾಟವನ್ನು ಹೇಳಿ ಭಯ ಬೀಳಿಸಿ ಅವರನ್ನ ಮನೆ ಬಿಡಿಸುವ ಹುನ್ನಾರವನ್ನ ಮಾಡುತ್ತಾನೆ).

ಈ ಭೂತ ಅಗೋ ಅಲ್ಲೊಂದು ಕೆರೆ ಕಾಣಿಸ್ತದೇ ಅಲ್ವ ಅಲ್ಲಿಗೆ ಹೋಗ್ತದೆ ಸಾರ್, ಗಾಳಿ ಶಬ್ದ, ಕೆರೆಗೆ ಹಾರಿದ ಶಬ್ದ, ಈಜಾಡಿದ ಶಬ್ದ, ಎಲ್ಲಾ ಮಧ್ಯರಾತ್ರಿ ಹೊತ್ತಿಗೆ ಇಳ್ಕೊಳ್ತಾದೆ. ಬನ್ನಿ ಕೆರೆ ತೋರಿಸ್ತೀನಿ(ಕೆರೆ ಹತ್ತಿರ ಕರೆದುಕೊಂಡು ಹೋಗುತ್ತಾನೆ). ಇದೇ ನೋಡಿ ಆ ಕೆರೆ. ಇಲ್ಲಿ ಸ್ನಾನ ಮಾಡಿ ಆ ಭೂತ ಅಗೋ ಅಲ್ಲಿ ಗುಡ್ಡ ಕಾಣಿಸುತ್ತದೆ ಅಲ್ಲಾ ಅಲ್ಲಿಗೆ ಹೋಗ್ತದೆ. ದಾರಿಯಲ್ಲಿ ನಿಮ್ಮ ಮನೆ ಅಡ್ಡ ಬರುತ್ತದಲ್ಲಾ, ಅದಕ್ಕೆ ಕೋಪ ಆ ಭೂತಕ್ಕೆ.

ರತ್ನ: (ನಗುತ್ತಾ) ಅಲ್ಲ ಅಂಕಲ್ ನಮ್ಮ ಬೊಂಬೈಯಲ್ಲಿ ರಸ್ತೆ ಮಧ್ಯ ದೇವಸ್ಥಾನ ಇದೆ ಅಂತ ಬಸ್ಸುಗಳೇ ಸುತ್ತಾಡಿಕೊಂಡು ಹೋಗ್ತಾವೆ. ಇಲ್ಲಿ ಜನ ವಾಸವಾಗಿರುವುದರಿಂದ ಭೂತಗಳೇ ಯಾಕೆ ರಸ್ತೆ ಬದಲಾಯಿಸಬಾರದು.

ಅಂಗಾರಣ್ಣ: ನೋಡಿ ನೀವು ಹಾಗೆಲ್ಲ ಹೇಳ್ಬೇಡಿ. ನಿಮಗೆ ಪೇಟೆಯವರಿಗೆ ದೇವರು, ದಿಂಡರು, ಭೂತ-ಗೀತ ಯಾವುದೂ ಇಲ್ಲ. ಆದ್ರೆ ನಮ್ಗೆ ಹಾಗಲ್ಲ, ಎಲ್ಲವನ್ನು ನಂಬಬೇಕಾಗ್ತಾದೆ ಗೊತ್ತಾಯ್ತಾ? (ಹೀಗೆ ಹೇಳಿ ಅವರೊಂದಿಗೆ ಸಿಟ್ಟು ಮಾಡಿಕೊಂಡು ಹೋಗುತ್ತಾನೆ.)

ಗಿರಿಯಪ್ಪ: (ಮಗಳನ್ನು ಉದ್ದೇಶಿಸಿ) ನೀ ಯಾಕಮ್ಮ ಬರೋದಕ್ಕೆ ಹೋದೆ. ಬರಬೇಡ ಅಂತ ಹೇಳಿದ್ನಲ್ಲ.

ಅಂಗಾರಣ್ಣ: ನಾನೇನು ಸುಮ್ನೆ ಹೇಳುವುದಿಲ್ಲ. ಅದರ ದಾರಿಗೆ ಎಂಥ ಅಡ್ಡ ತಂದಿಟ್ರು ಅದು ಉಳಿದಿಲ್ಲ. ಒಮ್ಮೆ ಒಂದು ಹತ್ತು ಜನ ದೊಡ್ಡ ಕಲ್ಲನ್ನು ತಂದು ಅದರ ದಾರಿಗೆ ಅಡ್ಡ ಇಟ್ರು, ಮಾರ್ನೆ ದಿನ ನೋಡಿದ್ರೆ ಆ ಕಲ್ಲು ಅಲ್ಲಿಲ್ಲ. ದೇವಿಯಾಚೆ ಕಲ್ಲಿನ ರಾಶಿಯಲ್ಲಿ ಬಿದ್ದಿತ್ತು. ಬೇಕಾದ್ರೆ ನೀವು ಏನಾದ್ರೂ ಅಡ್ಡ ಇಟ್ಟು ನೋಡಿ(ಎಂದು ಹೇಳಿ ಹೋಗುತ್ತಾನೆ) ಆಗ ನಿಮ್ಗೆ ಗೊತ್ತಾಗ್ತದೆ.

ಬೋಜಪ್ಪ: (ಕೆಳವರ್ಗದ ಪಾತ್ರ) ಇವನು ಕೂಡ ಭೂತದ ಬಗ್ಗೆ ಬಂದು ಹೆದರಿಸಿ ಹೋಗುತ್ತಾನೆ.

ಶ್ರೀನಿವಾಸ: ಅಕ್ಷರಸ್ಥ ಯುವಕ(ಪ್ರಕಾಶ ರೈ). (ಸಂಶೋಧಕ, ಬಿ.ಎ. ವಿದ್ಯಾರ್ಥಿ).

ಎರಡನೇ ಎಪಿಸೋಡ್‌ನಲ್ಲಿ.

ರತ್ನ: ಬನ ಇದೆ(ಕಾಡು ಇದೆ ಎನ್ನುವ ಬದಲಿಗೆ ಬನ ಇದೆಯಲ್ಲ).

ಗಿರಿಯಪ್ಪ: ಭೂತದ ಉಪದ್ರ(ಸಂಸ್ಕೃತ ಭಾಷೆಯನ್ನು ಬಳಸುವ ಮೂಲಕ ಕೆಲವು ಭಯ ಬೀಳಿಸುವ ಪದಗಳನ್ನು ಬಳಕೆ ಮಾಡುವುದು ಅಲ್ಲದೇ ಮೂಢನಂಬಿಕೆಯನ್ನು ಗಟ್ಟಿಗೊಳಿಸುವಾಗ ಸಂಸ್ಕೃತ ಭೂಯಿಷ್ಟವಾದ ಕನ್ನಡವನ್ನೇ ಉದ್ದೇಶಪೂರ್ವಕವಾಗಿ ಬಳಸುತ್ತಾರೆ. ಇದು ಆಡು ನುಡಿಯಿಂದ ಹೊರತಾಗಿದೆ.)

ಶ್ರೀನಿವಾಸ: ಅಂಗೈ ತೋರಿಸಿ ಅವಲಕ್ಷಣ ಅನ್ನಿಸಿಕೊಂಡಂಗಾಯ್ತು(ಗಾದೆಮಾತು). ಭೂತ ಇರುವುದು ಮೂಢನಂಬಿಕೆ ಎಂದು ತಿಳಿಸುತ್ತಾ, ಭೂತದ ಕಥೆಯನ್ನು ಕೇಳಿ ಭೂತ ಇಲ್ಲ ಎಲ್ಲ ಸುಳ್ಳು ಎಂದು ವಾದಿಸುತ್ತಾ, ಭೂತ ಏನು ಮಾಡುತ್ತೆ ಅಂತ ಪ್ರಾಯೋಗಿಕವಾಗಿ ವರ್ಕ್‌ಶಾಪ್ ಮಾಡುತ್ತಾನೆ. ಇದೇ ವಿಷಯವನ್ನು ರತ್ನನ ಜೊತೆ ಮಾತಾಡ್ತಾ ಭೂತದ ಬಗ್ಗೆ ನಂಬಿದ ಗಿರಿಯಪ್ಪನವರು ಮಗಳು ರತ್ನಳನ್ನು ಬಯ್ಯುತ್ತಾರೆ. ಇದನ್ನು ಶ್ರೀನಿವಾಸನ ಮುಂದೆ ಹೇಳುತ್ತಾಳೆ. ಅದಕ್ಕವನು ನಾವು ಮಾಡೋದನ್ನ ಯಾರದ್ರೂ ಗಮನಿಸಿದ್ದಾರೆ ಎಂದು ಅನುಮಾನ ವ್ಯಕ್ತಪಡಿಸುತ್ತಾನೆ. ಅಂಗಾರಣ್ಣ ಮತ್ತು ಅವನ ಹೆಂಡತಿ ದಿಟ್ಟಿಸಿ ಅನುಮಾನದಿಂದ ನೋಡ್ತಾ ಇದ್ರು ಅಂತ ರತ್ನ ಹೇಳುತ್ತಾಳೆ. ಆಗ ಶ್ರೀನಿವಾಸ ಈ ಮೇಲಿನ ಗಾದೆ ಮಾತನ್ನು ಬಳಸುತ್ತಾನೆ.

ಶ್ರೀನಿವಾಸ: ಬೋಜ ಮತ್ತು ಅವನ ಹೆಂಡತಿ ನನ್ನನ್ನು ನೋಡಿ ನಕ್ಕ ಹಾಗೆ ಆಯ್ತು.

ರತ್ನ: ಭೂತವನ್ನು ಪ್ಯಾರಟೈಜ್(ಇಂಗ್ಲೀಷ್ ಭಾಷೆ ಬಳಕೆ) ಮಾಡೋಣ ಅಂತ ನೋಡಿದ್ರೆ ಬ್ಯಾಕ್ ಫೈರ್ ಆಯ್ತು. ವಾಟ್ ನೆಕ್ಸ್ಟ್

ಶ್ರೀನಿವಾಸ: ಪೋಲಿಸ್ ಕಂಪ್ಲೆಂಟ್ ಕೊಟ್ರೆ ಹ್ಯಾಗೆ.

ರತ್ನ: ಏನಂತ ಕಂಪ್ಲೆಂಟ್ ಕೊಡ್ತಿರಾ. ಅದು ಅಲ್ಲದೇ ಕಂಪ್ಲೆಂಟ್ ಅಂದ್ರೆ ಯಂಕ್ವೈರಿ ಆಗುತ್ತೆ, ನಮ್ಮಪ್ಪನಿಗೆ ಅದೆಲ್ಲ ಹಿಡಿಸಲಿಕ್ಕೆ ಇಲ್ಲ.(ಪ್ರಮಾಣೀಕರಣ ಕನ್ನಡ)

ಶ್ರೀನಿವಾಸ: ನಾವಿಬ್ರೆ ಬೇರೆ ತರ ಯೋಚನೆ ಮಾಡ್ತಾ ಇರೋದು.

ರತ್ನ: ನಿಜ.

ಶ್ರೀನಿವಾಸ: ಹೀಗಾಗಿ ನಮ್ಮ ಕೆಲ್ಸಕ್ಕೆ ಯಾರ ಸಪೋರ್ಟ್ ಆಗ್ಲಿ, ಸಿಂಪತಿಯಾಗ್ಲಿ ಸಿಗೋದು ಅಸಾಧ್ಯ. ಹಾ ನಾವ್ಯಾಕೆ ಬೇರೆ ಊರ್‍ನಲ್ಲಿ ರ್‍ಯಾಷನಲ್ ಆಗಿ ಸಹಾಯ ಯಾಕೆ ಪಡೆಯಬಾರ್ದು.

ರತ್ನ: ಐಡಿಯಾ ಈಸ್ ಫೈನ್. ಆದ್ರೆ ಅದನ್ನ ಹ್ಯಾಗೆ ಪಡೀತೀರಾ.

ಶ್ರೀನಿವಾಸ: ನಮ್ಮ ತರಾನೆ ಯೋಚನೆ ಮಾಡೊ ಜನ ಸಿಗಬಹುದಲ್ಲ. ವೈ ಶುಡ್ ಬಿ ಟ್ರೈ ದಿಸ್. ನಾನೇ ಫೋಟೋಗಳನ್ನು ತೋರ್‍ತೀನಿ. ಐ ವಿಲ್ ಗೆಟ್ ಮೈ ಕ್ಯಾಮೆರಾ.

ಅಕ್ಷರಸ್ಥ ಯುವಕ, ಯುವತಿಯರಿಗೆ ಮಾತ್ರ ಇಂಗ್ಲೀಷ್ ಭಾಷೆ ಬಳಕೆ ಸೀಮಿತವಾಗಿರುವುದನ್ನು ಗುರುತಿಸಬಹುದು. ಅಲ್ಲದೇ ನುಡಿಜಿಗಿತ ಮತ್ತು ನುಡಿಬೆರಕೆಗೆ ಕಾರಣವಾಗುವುದನ್ನು ಈ ಮೂಲಕ ತಿಳಿದುಕೊಳ್ಳಲಾಗಿದೆ. ಅಲ್ಲದೆ ಪ್ರಾದೇಶಿಕ ಧಾರಾವಾಹಿಗಳಲ್ಲಿ ಪ್ರಾದೇಶಿಕ ಪ್ರಭೇದಗಳನ್ನು ಕೆಳವರ್ಗದ ಪಾತ್ರಗಳಿಗೆ ಮಾತ್ರ ಸೀಮಿತವಾಗಿದೆ. ಆದ್ರೆ ಮೇಲ್ವರ್ಗದ ಪಾತ್ರಗಳು ಶಿಷ್ಟ ಅಥವಾ ಪ್ರಮಾಣೀಕರಣ ಕನ್ನಡಕ್ಕೆ ಸೀಮಿತವಾಗಿದ್ದು, ಇಂಗ್ಲೀಷ್ ಭಾಷೆಯನ್ನು ಮಿಶ್ರಣ ಮಾಡಿಕೊಂಡು ಜೊತೆಗೆ ನುಡಿಜಿಗಿತಕ್ಕೆ ಕಾರಣವಾಗುತ್ತದೆ. ತುಳುನಾಡಿನ ಪ್ರದೇಶದಲ್ಲಿ ತುಳು ಮಿಶ್ರಿತ ಕನ್ನಡವನ್ನು ಬಳಕೆ ಮಾಡುತ್ತಾರೆ. ಇದು ಅಲ್ಲಿನ ಪರಿಸರದ ಪ್ರಾದೇಶಿಕ ಒಳನುಡಿಯಾಗಿದೆ. ಒಳನುಡಿಯಲ್ಲಿಯೂ ಕೂಡ ತುಳು ಅನ್ಯಭಾಷೆ ಮೂಲಕ ನುಡಿಮಿಶ್ರಣ ಹಾಗೂ ನುಡಿಜಿಗಿತಕ್ಕೆ ಕಾರಣವಾಗುತ್ತದೆ. ಇಂಗ್ಲೀಷ್ ಭಾಷೆಯನ್ನು ಗ್ರಾಮೀಣರು ಮತ್ತು ಅನಕ್ಷರಸ್ಥರು ಬಳಸದೆ ಇರುವುದನ್ನು ಈ ಉದಾಹರಣೆಗಳ ಮೂಲಕ ಗುರುತಿಸಿಕೊಳ್ಳಲಾಗಿದೆ.

ಹೋಟೆಲ್‌ನಲ್ಲಿ ಪತ್ರಿಕೆಯನ್ನು ಓದಿ ಅಪಾರ್ಥ ಮಾಡಿಕೊಂಡ ಜನರು ಇಡೀ ಊರಿಗೆ ಅವಮಾನಿಸಿದ್ದಾನೆ. ಇಡೀ ಊರಿನ ಜನರನ್ನೇ ಮೂಡರು ಎಂದು ಕರೆದಿದ್ದಾನೆ. ಅವನನ್ನು ಹಿಡಿದು ಮಗನೆ ಭೂತದ ಬಗ್ಗೆ ಊರವರಿಗೆ ಅವಮಾನಿಸ್ತೀಯಾ ಅಂತ ಕೇಳುವ ಎಂದು ಬಯ್ಯುತ್ತಾನೆ. ಹೋಟೆಲ್‌ನಲ್ಲಿ ಇದ್ಕೊಂಡು ಈ ಬೈಗುಳಗಳನ್ನ ಬಳಸುತ್ತಾನೆ.

ಅಂಗಾರಪ್ಪ: ಅವನಿಗೆ ತಲೆ ಸರಿ ಉಂಟ.

ಊರಿನ ಕೆಲವು ಹಿರಿಯರು ಕಿರಿಯರು ಮೇಷ್ಟ್ರ ಮನೆಗೆ ನ್ಯಾಯ ಕೇಳಲು ಬರುತ್ತಾರೆ. ಊರಿನವರು ಯೋಚಿಸಿ ಮೇಸ್ಟ್ರು ಒಳ್ಳೆಯವರು ಒಂದು ಸಾರಿ ವಿಚಾರ ಮಾಡುವಾ ಅಂತ ಗುಂಪಾಗಿ ಹೋಗುತ್ತಾರೆ. ಮೇಸ್ಟ್ರು ಕೇಳುತ್ತಾರೆ ಪತ್ರಿಕೆಯಲ್ಲಿ ಹೀಗೆ ವಿಷಯ ಬಂದಿದೆ. ಇದಕ್ಕೆ ಕಾರಣ ನಿಮ್ಮ ಭಾವ ಅಂತ ಹೇಳುತ್ತಾರೆ. ಆಗ ಗುಂಪಿನ ಜನರೆಲ್ಲ ನಡುವೆ ಬಾಯಿ ಹಾಕಿ ಮಾತನಾಡುತ್ತಾರೆ. ಈ ಗುಂಪಿನ ಮುಖಂಡ ನೀವು ಯಾರೂ ಮಾತನಾಡಬಾರದು ಎಂದು ಹೇಳುತ್ತಾನೆ. ಕಾರಣ ಸುಸಂಸ್ಕೃತ ಮನೆತನದವರು ಮೇಷ್ಟ್ರು ಎಂದು ಹೇಳಿ ಮಧ್ಯೆ ಮಧ್ಯೆ ಮಾತನಾಡುವ ಪುಂಡರನ್ನು ಸುಮ್ಮನಿರುಸುತ್ತಾನೆ.

ಭಾಷಿಕವಾಗಿ ನ್ಯಾಯ ಕೇಳಲು ಬಂದ ಗುಂಪಿನ ಜನರ ಮುಖಂಡ ಮೇಷ್ಟ್ರನ್ನು ಗೌರವ ಸಂಬೋಧನೆಗಳಿಂದ ಅವರ ಕ್ಷೇಮ ಇತ್ಯಾದಿ ವ್ಯಾವಹಾರಿಕ ಮಾತುಗಳನ್ನು ಬಹುವಚನದ ಮೂಲಕ ವಿಚಾರಿಸುತ್ತಾರೆ. ಅಂದರೆ ಮೇಲ್ವರ್ಗಕ್ಕೆ ಸೇರಿದವರನ್ನು ಏಕವಚನ ಹಾಗೂ ಆಡು

ನುಡಿಯ ಮೂಲಕ ಕೋಪಿಸಿಕೊಂಡು ಮಾತನಾಡುವುದು ಸರಿಯಲ್ಲ ಎಂದು ಅವರು ವಿವರಿಸುತ್ತಾರೆ. ಜನಸಾಮಾನ್ಯರು ಆಡುನುಡಿಯಲ್ಲಿ ತಮಗೆ ಬೇಕಾದ ಹಾಗೆ ಏಕವಚನ ಹಾಗೂ ವಿವಿಧ ಸಂಬೋಧನೆಗಳನ್ನು ಬಳಸಿಕೊಂಡು ವ್ಯವಹರಿಸುತ್ತಾರೆ. ಈ ಭಾಷಿಕ ವ್ಯತ್ಯಾಸಗಳು ಕೆಳವರ್ಗ, ಮಧ್ಯಮವರ್ಗ ಮತ್ತು ಅನಕ್ಷರಸ್ಥ ವ್ಯಕ್ತಿಗಳನ್ನು ನಿಯಂತ್ರಿಸುತ್ತದೆ. ಇದು ವಿಷಾದವೂ ಹೌದು. ಹೀಗೆ ಲಿಂಗಸಂಬಂಧವನ್ನು ಅರ್ಥ ಮಾಡಿಕೊಳ್ಳುವುದಲ್ಲದೆ, ಮೇಷ್ಟ್ರು ಹೆಂಡತಿಯನ್ನು ಗೌರವಯುತವಾಗಿ ಸಂಬೋಧಿಸುವುದು ಕೂಡ ಸಾಮಾಜಿಕ ಸ್ಥಾನಮಾನಗಳಲ್ಲಿ ಒಂದಾಗಿರುವುದನ್ನು ಈ ಮೂಲಕ ಕಂಡುಕೊಳ್ಳಲಾಗಿದೆ. ಕೆಳವರ್ಗದ ಪಾತ್ರಗಳು ತಮ್ಮ ಹೆಂಡತಿಯರನ್ನು ಏಕವಚನದಿಂದ ಹಾಗೂ ಆಡುನುಡಿ ಬಳಸುವ ಮೂಲಕ ಹೆಸರು ಹಿಡಿದು ಕರೆಯುವುದು ರೂಢಿಯಲ್ಲಿದೆ. ಮೇಲ್ವರ್ಗದ ಪಾತ್ರಗಳಲ್ಲಿ ಪತಿಯನ್ನು ಗೌರವ ಪೂರ್ವಕ ಸಂಬೋಧನೆ ಮಾಡುತ್ತಾರೆ. ಆದರೆ ಕೆಳವರ್ಗದ ಪಾತ್ರಗಳಲ್ಲಿ ಹೆಂಡತಿಯು ಕೂಡ ಗಂಡನನ್ನು ಏಕವಚನದ ಮೂಲಕ ಸಂಬೋಧಿಸುವುದನ್ನು ಈ ಮೂಲಕ ಗುರುತಿಸಿಕೊಳ್ಳಲಾಗಿದೆ.

ಗೃಹಭಂಗ ಧಾರಾವಾಹಿ

೨೦೦೧ರಲ್ಲಿ ಡಿ.ಡಿ.೧ರಲ್ಲಿ ಪ್ರಸಾರವಾಗಿದ್ದು, ೧೨-೧೩ ವರ್ಷ ಹಳೆಯದಾಗಿದೆ.

ಶಾನುಭೋಗರ ಕುಟುಂಬ.

ಗಂಗಮ್ಮ: ಮೇಲ್ವರ್ಗದ ಪಾತ್ರ

ಮಹಾದೇವಯ್ಯ: ಮಧ್ಯಮವರ್ಗ ಹಾಗೂ ಸನ್ಯಾಸಿ

ಮಹಾದೇವಯ್ಯ: ಗಂಗಮ್ಮನವರೇ ಏನು ಹುಡುಕ್ತಾ ಇದೀರಾ.

ಗಂಗಮ್ಮ: ನನ್ಮಕ್ಕಳು ಅಯ್ಯನೋರೇ ಗುಡೀಗೇನಾದ್ರು ಬಂದಿದ್ವಾ

ಮಹಾದೇವಯ್ಯ: ಇಲ್ವಲ್ಲ.

ಗಂಗಮ್ಮ: ಬೆಳಿಗ್ಗೆ ಹೊದವು, ಇನ್ನೂ ಮನೆಗೆ ಬಂದಿಲ್ಲ. ಮುಂಡೇವು ಹೊಟ್ಟೆಗೆ ಏನೂ ತಿಂದಿಲ್ಲ. (ಬಯ್ಗುಳ ರೂಪದಲ್ಲಿ ಮುಂಡೇವು ಎಂದು ಬಳಸುತ್ತಾಳೆ. ಮೇಲ್ವರ್ಗಕ್ಕೆ ಸೇರಿದರೂ ಕೂಡ ಅನಕ್ಷರಸ್ಥಳಾದ ಇವಳು ಆಡುನುಡಿಯ ಬಳಕೆ ಜನಸಾಮಾನ್ಯರಂತೆ ಇರುವುದನ್ನು ಈ ಉದಾಹರಣೆ ಮೂಲಕ ಗುರುತಿಸಿಕೊಳ್ಳಲಾಗಿದೆ. ಈ ರೀತಿಯ ಒಳನುಡಿಗೆ ಕಾರಣ ಸಾಮಾಜಿಕವಾಗಿ ಮೇಲ್ವರ್ಗದಲ್ಲಿದ್ದರೂ ಕೂಡ(ಶಾನುಭೋಗರ ಹೆಂಡತಿ) ಮನೆಯ ಯಜಮಾನ ಇಲ್ಲದೇ ಇರೋದು ಹಾಗೂ ಹಿರಿಯರಿಲ್ಲದೆ ಇರೋದು ಸಾಮಾನ್ಯ ಮಧ್ಯಮವರ್ಗ ಹಾಗೂ ಕೆಳವರ್ಗದ ಜನರ ನುಡಿಬಳಕೆಯನ್ನಿ ಗಂಗಮ್ಮ ಬಳಸುತ್ತಾಳೆ. ವಾಸ್ತವದಲ್ಲಿ ಶಾನುಭೋಗರ ಮನೆಯು

ಸುಸಂಸ್ಕೃತವಾಗಿದ್ದು ಶಿಷ್ಟ ಅಥವಾ ಪ್ರಮಾಣೀಕರಣ ರೂಪದ ಕನ್ನಡವನ್ನು ಬಳಸುತ್ತಾರೆ. ಆದರೆ ಬಾಳು ಸ್ಥಿತ್ಯಂತರಕ್ಕೆ ಒಳಗಾದಾಗ ಅಥವಾ ಆರ್ಥಿಕವಾಗಿ ದುರ್ಬಲವಾದಾಗ, ಈ ಭಾಷಿಕ ವಿವರಗಳು ಬದಲಾವಣೆಗೆ ಕಾರಣವಾಗುತ್ತವೆ. ಸಾಮಾಜಿಕವಾಗಿ ಶಾನುಭೋಗರ ಕುಟುಂಬ ಮೇಲ್‌ಸ್ತರ ಹುದ್ದೆಯನ್ನು ಹೊಂದಿದ್ದ ಕುಟುಂಬವಾಗಿತ್ತು. ಶಾನುಭೋಗರು ತೀರಿ ಹೋದ ಮೇಲೆ ಗಂಡುದಿಕ್ಕಿಲ್ಲದ ಮನೆಯಾಗಿದ್ದರಿಂದ ಸಾಮಾನ್ಯ ಕುಟುಂಬಗಳಂತೆ ವರ್ತಿಸುವುದನ್ನು ಈ ಉದಾಹರಣೆ ಮೂಲಕ ತಿಳಿಯಲಾಗಿದೆ. ಮಕ್ಕಳು ಕೂಡ ತಾಯಿಯ ಮಾತನ್ನು ಕೇಳದೇ ಇರೋದು, ತಾಯಿಯಾದವಳು ಶಿಷ್ಟಚಾರವನ್ನು ಪಾಲಿಸದೇ ಇರೋದು ಈ ಎಲ್ಲ ಕಾರಣಗಳು ಭಾಷಿಕ ವಿವರಗಳ ವೈರುಧ್ಯದಿಂದಲೇ ಕೂಡಿರುವುದನ್ನು ಗಂಗಮ್ಮ ಆಡುವ ಸಂಬೋಧನೆಗಳು, ಬೈಗುಳಗಳು, ಆಡುನುಡಿ, ಏಕವಚನದ ಬಳಕೆ(ಗಂಡುಬೀರಿ ಗಂಡುನುಡಿಯಲ್ಲಿ) ಮಾಡುವುದನ್ನು ಈ ಮೇಲಿನ ಭಾಷಿಕ ವಿವರಗಳಿಂದ ಕಂಡುಕೊಳ್ಳಲಾಗಿದೆ. ಅಲ್ಲದೇ ಈ ರೀತಿಯ ಆಡುನುಡಿಗಳು ಪ್ರಾದೇಶಿಕ ಪ್ರಭೇದಗಳಿಗೆ ಕಾರಣವಾಗಿದೆ. ಅಲ್ಲದೆ ಈ ಧಾರಾವಾಹಿಯು ದಕ್ಷಿಣ ಕರ್ನಾಟಕದ ತುಮಕೂರು ಮತ್ತು ಮೈಸೂರು ಪರಿಸರದ ಪ್ರಾದೇಶಿಕ ಇಲ್ಲವೇ ಹಾಸನದ ಪ್ರಾದೇಶಿಕ ಪರಿಸರದ ಪ್ರಭೇದವನ್ನು ಬಳಕೆ ಮಾಡಿರುವುದನ್ನು ಗುರುತಿಸಿಕೊಳ್ಳಲಾಗಿದೆ. ಅಲ್ಲದೆ ಗೃಹಭಂಗ ಧಾರಾವಾಹಿಯು ಎಸ್.ಎಲ್.ಭೈರಪ್ಪನವರ ಕಾದಂಬರಿಯಾಧರಿತ ಕಿರುತೆರೆ ಧಾರಾವಾಹಿಯಾಗಿದೆ. ಕಾದಂಬರಿಯ ಮೂಲ ರೂಪವನ್ನು ಯಥಾವತ್ತಾಗಿ ಸಾಂದರ್ಭಿಕವಾಗಿ ಬದಲಾಯಿಸಿಕೊಂಡು ರೂಪಿಸಿದ್ದಾರೆ.

ಗಂಗಮ್ಮ: ಪಾಪ ಎಷ್ಟು ಹಸ್ಕೊಂಡಿವೆಯೋ ಏನೊ? ನಾನು ಪಾಟೇಲ್ರಿಗೆ ಹೇಳ್ತಿನಂತ ಹೇಳೀ ಸುಮ್ನೆ ಹೆದ್ರಿಸಿಬಿಟ್ಟೆ ಅವುನ್ನ.

ಚನ್ನಿಗರಾಯ: (ಕಬ್ಬಿನ ಹೊಲಕ್ಕೆ ಬೆಂಕಿ ಹಚ್ಚಿರುವುದನ್ನು ಕಂಡು ತೆಂಗಿನ ಮರ ಹತ್ತಿರುತ್ತಾನೆ) ಹೇ ಬಿಡಿಸ್ರೊ, ಹೇ ಬಿಡಿಸ್ರೋ

ಪಾಟೇಲರ ಆಳು: ಪಾಟೇಲ್ರೆ, ಪಾಟೇಲ್ರೆ, ಪಾಟೆಲ್ರೇ ಕಬ್ಬಿನ ಗದ್ದೆಗೆ ಬೆಂಕಿ ಬಿದ್ದಿದೆ ಬನ್ನಿ.

ಪಾಟೇಲ: ಯಾವನೋ ಬೆಂಕಿ ಹಚ್ಚಿದವ್ನು.

ಪಾಟೇಲರ ಆಳು: ಗಂಗಮ್ಮೊರೆ, ಗಂಗಮ್ಮೋರೆ ಕಬ್ಬಿನ ಗದ್ದೆಗೆ ಬೆಂಕಿ ಬಿದ್ದಿದೆ ಚನ್ನಿಗಯ್ಯ ಸಿಕ್ಕಿ ಆಕಕ್ಕೊಂಡಿದ್ದಾರೆ.

ಗಂಗಮ್ಮ: ಹಾ! ನಮ್ಮ ಚನ್ನಗನಾ ಅಯ್ಯೊ ಯಾವ್ ಸೂಳೆಮಗ ಹಚ್ಚಿದನೇ ಬೆಂಕೀನ(ಬೈಗುಳ).

ಪಾಟೇಲರ ಆಳು: ಅಯ್ಯನೋರೆ, ಅಯ್ಯನೋರೆ ಕಬ್ಬಿನ ಗದ್ದೆಗೆ ಬೆಂಕಿ ಹತ್ತಿಕೊಂಡು ಬಿಟ್ಟೈತೆ. ಬೆಂಕಿಯನ್ನು ಎಲ್ಲರೂ ಸೇರಿ ನಂದಿಸುತ್ತಿದ್ದಾರೆ.

ಗಂಗಮ್ಮ: ನನ್ನ ಮಗ ತೆಂಗಿನ ಮರದಲ್ಲಿ ಸಿಕ್ಕಾಕಿಕೊಂಡು ಬಿಟ್ಟಿದ್ದಾನೆ ಯಾರದ್ರೂ ಉಳಿಸ್ರೊ. ಪಾಟೇಲ, ಪಾಟೇಲ ನನ್ನ ಮಗ ಬೆಂಕಿಯಲ್ಲಿ ಸಿಕ್ಕಹಾಕ್ಕೊಂಡು ಬಿಟ್ವಾನೆ ಯಾರ್ನದ್ರೂ ಕಳಿಸೋ.

ಪಾಟೇಲ್ರು: ಹೇ ತಡೀರಿ ಗಂಗವ್ವ, ಕಳಿಸಿದ್ದೀನಿ ಕರ್ಕಂಬರ್ತಾರೆ.

ಗಂಗಮ್ಮ: ತಡೀರಿ ಅಂತೆ ತಡೀರಿ ಅಂತೆ, ತಾಯಿ ಸಂಗಟ. ನಿನಗ್ಯಾಗೋ ಗೊತ್ತಾಗ್ಬೇಕು. ನಿನ್ನ ಮಕ್ಕಳು ಯಾರಾದ್ರು ಬೆಂಕಿಗೆ ಬಿದ್ದಿದ್ರೆ ಗೊತ್ತಾಕ್ತಿತ್ತು. ತಾಯಿ ಸಂಕಟ ಏನು ಅಂತ.

ಪಾಟೇಲ: ಹೇ ಈವಮ್ಮನ್ನ....

ಗಂಗಮ್ಮ: ಚನ್ನಗ, ಚನ್ನಗ, ಅಲ್ಲೇ ಇರು ಯಾರ್ನದ್ರು ಕರ್ಕೊಂಬರ್ತಿನಿ.

ಚನ್ನಿಗರಾಯ: ಅಮ್ಮ, ಅಮ್ಮ ಬೆಂಕಿ ಜಳ ಜೋರಾಗಿದೆ. ಸತ್ತೋಗಿ ಬಿಡ್ತೀನಿ.

ಗಂಗಮ್ಮ: ಲೋ ಬೀರ ಯಾರಾದ್ರು ಗಂಡಸ್ರು ನನ್ನ ಮಗನ್ನ ಕಾಪಾಡ್ರೋ. "ತೂ ಷಂಡ್ ಮುಂಡೆ ಮಕ್ಳ, ಇಲ್ಲಿ ಯಾವನೂ ಗಂಡಸ್ಗುಟ್ಟಿದೋನು ಇಲ್ಲವೇನ್ರೋ ಅಯ್ಯೊ, ಅಯ್ಯನೋರೆ, ಅಯ್ಯನೋರೆ, ನನ್ನ ಮಗ ಬೆಂಕೀಲಿ ಸಿಕ್ಕಾಕ್ಕೊಂಡು ಬಿಟ್ಟಿದ್ದಾನೆ. ಯಾರಾದ್ರು ಕಾಪಾಡಿ ಅವ್ನ.

ಮಹಾದೇವಯ್ಯ: ವಸಿ ತಡೀರಿ ಗಂಗಮ್ಮನೋರೆ. ಚನ್ನಗ ಮರಮ್ಯಾಗೆ ಇದ್ದಾನೆ. ಅವ್ನಗೆ ಬೆಂಕಿ ತಟ್ಟಲ್ಲ.

ಗಂಗಮ್ಮ: ಅಯ್ಯೊ ಸನ್ಯಾಸಿ ಮುಂಡೇದೆ. ಇಲ್ಲಿ ಪಾಟ ಹೇಳಕ್ ಬಂದ್ಯಾ, ನಿನಗೆ ಮನೆ ಇಲ್ಲ ಮಠ ಇಲ್ಲ, ನೀನೆ ಹೋಗಿ ಕರ್ಕೊಂಬಾ ಅವ್ನ.

ಮಹಾದೇವಯ್ಯ: ಆಯ್ತವ್ವ ನಾನೇ ಹೊಯ್ತಿನಿ. ಹೇ ಬಾರೋ ಬೀರಾ, ಆಕಾಡೆ ನೋಡು ಇದೆ ಬೆಂಕಿ ತಡೊಲ್ಲ, ಬಾ, ಬಾ, ಬಾರೊ, ಬಾರೊ(ಎಲ್ಲರೂ ಸೇರಿ ಬೆಂಕಿ ನಂದಿಸಿಕೊಂಡು ಎಲ್ಲರೂ ಮನೆ ಸೇರಲು ಸಿದ್ಧರಾಗಿದ್ದರು).

ಮಹಾದೇವಯ್ಯ: ಗಂಗಮ್ಮೋರೆ, ಗಂಗಮ್ಮೋರೆ, ಗಂಗಮ್ಮೋರೆ, ಗುಡೀಲಿ ಎಲ್ಲರೂ ಪಂಚಾಯ್ತಿ ಸೇರವ್ರೆ, ಉರಿಯೊ ಮನೇಲಿ ಇಲ್ಲದೆ ಇರೋನೇ ಜಾಣ ಅಂತ ಗಾದೆ ಐತೆ. ನಿನ್ನೆ ಕಬ್ಬಿನ ಗದ್ದೆಗೆ ಬೆಂಕಿ ಬಿದ್ದಿತ್ತಲ್ಲ ಅದ್ರಾಗೆ ಎಷ್ಟೆಷ್ಟು ಲಾಭಾ ಪಡೀಬೇಕು ಅಂತ ಕುಂತು ಲೆಕ್ಕ ಆಕ್ತಾವರ್ರೆ, ನೀವು ಪಂಚಾಯ್ತೀಲಿ ನಾಲಿಗೇನಾ ಬಿಗಿ ಹಿಡ್ದಿ ಮಾತಾಡಿ. ಬೀಸೋ ದೊಣ್ಣೆ ತಪ್ಪಿಸ್ಕೊಳಿ, ಸಿಟ್ಟೇನಾದ್ರು ಮಾಡಿಕೊಂಡ್ರೊ ತೊಂದ್ರಿಗೆ ಸಿಕ್ಕಾಕೋತೀರಾ ಏನು? ನಾನು ಹೇಳಿದ್ದು ತಿಳೀತು ಅಲ್ವಾ... ಬತ್ತೀನಿ.

ಪಾಟೇಲ: ಹೇ ಅಪ್ಪಣ್ಣ ಯಾಕ್ಲಾ ಕಬ್ಬಿನ ಗದ್ದೆಗೆ ಬೆಂಕಿ ಹಾಕ್ದೆ? ನೋಡು ಎದ್ರಿಕೊ ಬ್ಯಾಡ ಧೈರ್ಯವಾಗಿರು.

ಅಪ್ಪಣ್ಣ: ನಂಗೊತ್ತಿಲ್ಲ ಕಣ್‌ರಿ, ಅದ್ಯಾಕೆ ಬೆಂಕಿ ಅತ್ತಿಕೊಳ್ಳುತು ನಂಗೊತ್ತಿಲ್ಲ.

ಗಂಗಮ್ಮ: ನೋಡಿದ್ರಾ ಬೆಂಕಿ ಹಾಕಿದ್ದು ಅವ್ನು ಅಲ್ವಂತೆ.

ಪಾಟೀಲ: ಚನ್ನಿಗ ಬಾ ಇತ್ಲಾಗೆ. ನೀ ಏನು ಹೇಳ್ತಿಯಾ?

ಚನ್ನಿಗರಾಯ: ಅಪ್ಪಣ್ಣ ಸುಳ್ಳು ಹೇಳ್ತಾನ್ರಿ ನಾನೇ ನೋಡ್ದೆ ಅವ್ನೆ ಬೆಂಕಿ ಹಚ್ಚಿದ್ದು.

ಪಾಟೀಲ: ಕೇಳಿದ್ರಾ ಗಂಗಮ್ನೋರೆ ನಿಮ್ಮ ಹಿರಿಯ ಮಗ ಕಬ್ಬಿನ ಗದ್ದೆಗೆ ಬೆಂಕಿ ಹಚ್ಚಿದ್ದು ಹೌದು ಅಂತ ಒಪ್ಪಿಕೊಳ್ತಾನೆ. ನಿಮ್ಮ ಕಿರಿಮಗ ಇಲ್ಲ ಅಂತವ್ನೆ ನೀವು ಇದ್ರಾಗೆ ಯಾರ್ ಮಾತು ಒಪ್ಪಿಕೊಳ್ತೀರಾ ಹೇಳಿ.

ಸಂಗಪ್ಪ: ಗಂಗವ್ವರೆ ಸುಮ್ನೆ ಅವ್ರಂದ್ರೆ ಚನ್ನಿಗನ ಮಾತ್ನ ಒಪ್ಕೊಂಡೊರೆ ಅಂತಾಯ್ತು ಅಲ್ವೇನ್ರವ್ವ

ಮಹಾದೇವಯ್ಯ: ಪಾಟೇಲ್ರೆ ಈ ಸಂಗಪ್ಪ ಹೇಳೋ ಮಾತು ಒಪ್ಪಿಕೊಳ್ಳೋದು ಕಷ್ಟ. ಅಪ್ಪಣ್ಣ ಬಹಳ ಚುರುಕು. ಈ ಚನ್ನಿಗ ರವಷ್ಟು ಪೆದ್ದು. ಏನು ತಿಳಿಯಾಕಿಲ್ಲ. ಸಂಜೆ ಬೇರೆ ಮಸುಕು, ಮಸುಕು ಇವ್ನ್ ಏನ್ ಕಂಡ್ನೋ, ಏನ್ ಹೇಳಿದ್ನೊ ಹಂಗಾಗಿ ಇವ್ನ್ ಮಾತು ಒಪ್ಕೊಳ್ಳೋದು ಒಳ್ಳೇದಲ್ಲ.

ಗಂಗಮ್ಮ: ಹೇ ಜಂಗಮಯ್ಯ ನಮ್ಮ ಪರ ವಹಿಸಿಕೊಂಡು ಮಾತಾಡ್ತೀನಿ ಅಂತ ಬಂದುಬುಟ್ಟು, ಊರೋರು ಮುಂದೆಲ್ಲ ನನ್ನ ಮಗನ್ನ ಪೆದ್ದ, ದಡ್ಡ ಅಂತಿದೀಯಾ, ಯಾಕೆ ಪಿತ್ತ ನೆತ್ತಿಗೆ ಏರಿದೆಯೊ ಹ್ಯಾಗೆ? ಬಾರೋ ಚನ್ನಿಗ, ಹೇ ಪಾಟೇಲ ಊರ್ನೋರು ತಿಳ್ಕೊಂಡ ಹಾಗೆ ನನ್ನ ಮಗ ಏನೂ ದಡ್ಡ ಅಲ್ಲ. ನಮ್ಮ ಚನ್ನಿಗ ಬಹಳ ಚೂಟಿ.

ಮಹಾದೇವಯ್ಯ: ಗಂಗಮ್ನೋರೆ ನನ್ನ ಮಾತು ಕೇಳಿ.

ಗಂಗಮ್ಮ: ಕೇಳೋದು ಬ್ಯಾಡ ನೀವು ಹೇಳೋದು ಬ್ಯಾಡ.

ಮಹಾದೇವಯ್ಯ: ಚನ್ನಿಗ ಹೇಳಿದ್ದು ಸರಿ ಅಂತಾದ್ರೆ ಅಪ್ಪಣ್ಣ ಕಬ್ಬಿನ ಗದ್ದೆಗೆ ಬೆಂಕಿ ಇಟ್ಟುದ್ದು ಗೊತ್ತಾಗುತ್ತೆ. ಆಗ ಊರ್ನೊರೆಲ್ಲ ಸೇರ್ಕೊಂಡು ದಂಡ ಹಾಕ್ತಾರೆ. ಅದನ್ನ ನೀವೇ ಕೈಯಿಂದ ಕಟ್ಟಬೇಕಾಗುತ್ತೆ, ಅದಕ್ಕೆ ಈ ನಾಟಕ.

ಗಂಗಮ್ಮ: ನಾನೂ ಬ್ಯಾಡ, ಗೀಟ್ನಾನೂ ಬ್ಯಾಡ. ನಾವು ಯಾಕೆ ಎಲ್ಲರಿಗೂ ಹೆದ್ರಬೇಕು. ನನ್ನ ಮಕ್ಳು ಏನು ತಪ್ಪು ಮಾಡಿಲ್ಲ.

ಪಾಟೇಲ: ಸರಿ. ಈಗ ಯಾರ್‍ಯಾರ ಲುಕ್ಸಾನು ಎಷ್ಟೆಷ್ಟು.

ಗಂಗಮ್ಮ ಬಾಯಿಬಡುಕಿ. ಇವಳೇ ಶಾನುಭೋಗರ ಮನೆಯ ಯಜಮಾನಿ. ಇಲ್ಲಿ ಆಕೆ ಎಲ್ಲರನ್ನು ಏಕವಚನದಿಂದಲೇ ಸಂಬೋಧಿಸುವುದು ಇಲ್ಲವೇ ಹೆಸರು ಹಿಡಿದು ಕರೆಯುವುದು

ಇವಳ ಆಡುಮಾತಿನ ಲಕ್ಷಣಗಳಾಗಿವೆ. ಆದರೆ ಸಾಮಾಜಿಕ ವರ್ಗದಲ್ಲಿ ಶಾನುಭೋಗ ಮನೆತನಕ್ಕೆ ಸೇರಿದವಳಾಗಿದ್ದರು, ಶಾನುಭೋಗರನ್ನು ಕಳೆದುಕೊಂಡ ಈಕೆ ತನ್ನೆಲ್ಲ ಆರ್ಥಿಕ ಪರಿಸ್ಥಿತಿ ಹದಗೆಟ್ಟುದುದಕ್ಕಾಗಿ ದುರ್ಬಲಳಾಗುತ್ತಾಳೆ. ಆದ್ದರಿಂದ ಮಧ್ಯಮವರ್ಗಕ್ಕೆ ಇಲ್ಲವೇ ಕೆಳವರ್ಗಕ್ಕೆ ಸೇರುತ್ತಾಳೆ(ಆದರೆ ಆರ್ಥಿಕವಾಗಿ ಮಾತ್ರ). ಹೆಣ್ಣು ಹೆಚ್ಚು ಮಾತನಾಡುವುದಿಲ್ಲ ಎನ್ನುವುದು ಈಗಾಗಲೇ ಇರುವ ಚರ್ಚೆ. ಆದರೆ ಇಂತಹ ಪರಿಸ್ಥಿತಿಯನ್ನು ಹೊಂದಿದ ಹೆಣ್ಣು ಯಜಮಾನಿಯಾದಾಗ ಹೆಚ್ಚು ಮಾತನಾಡುತ್ತಾಳೆ ಎನ್ನುವುದನ್ನು ಈ ಮೇಲಿನ ಉದಾಹರಣೆಯೊಂದಿಗೆ ಗುರುತಿಸಿಕೊಳ್ಳಲಾಗಿದೆ. ಅಲ್ಲದೇ ಶಾನುಭೋಗರ ಹೆಂಡತಿಯಾಗಿದ್ದರಿಂದ ಈ ಊರಿನ ಜನರೆಲ್ಲರೂ ಇವರನ್ನು ಗೌರವಸೂಚಕವಾಗಿ ಸಂಬೋಧಿಸುತ್ತಾರೆ. ಅಲ್ಲದೇ ಗಂಡು ಮಕ್ಕಳಾಗಿದ್ದರೂ ಈ ಹೆಂಗಸಿನ ಮಾತನ್ನು ಎಲ್ಲರೂ ಕೇಳುತ್ತಾರೆ. ಕಾರಣ ಸಾಮಾಜಿಕವಾಗಿ ಆಡಳಿತಾತ್ಮಕ ಗುಂಪಿಗೆ ಸೇರಿದ ಶಾನುಭೋಗ ಮನೆಯಾಗಿದ್ದರಿಂದ, ಅವರು ಹೇಳಿದ ಹಾಗೆ ಕೇಳುತ್ತಾರೆ. ಅದೇ ಸಂಪ್ರದಾಯವನ್ನು ಶಾನುಭೋಗರು ನಿಧನ ಹೊಂದಿದ್ದರೂ ಕೂಡ ಶಾನುಭೋಗರ ಮೇಲಿರುವ ಗೌರವವನ್ನು ಬಹುವಚನಗಳ ಮೂಲಕ ಸಂಬೋಧಿಸುವುದನ್ನು ಕಂಡುಕೊಳ್ಳಲಾಗಿದೆ. ಅಲ್ಲದೇ ಪುರುಷರು ಕೂಡ ತನಗಿಂತಲೂ ಆರ್ಥಿಕವಾಗಿ ಮಧ್ಯಮವರ್ಗಕ್ಕೆ ಸೇರಿದ, ಇಲ್ಲವೇ ಕೆಳವರ್ಗಕ್ಕೆ ಸೇರಿದ ಪುರುಷರು ಮೇಲ್ವರ್ಗಕ್ಕೆ ಸೇರಿದ ಚಿಕ್ಕ ಮಕ್ಕಳನ್ನು ಸಹಿತ ಬಹುವಚನ ಹಾಗೂ ಗೌರವ ಸಂಬೋಧನೆಗಳನ್ನು ಬಳಸುತ್ತಿರುವುದನ್ನು ಗುರುತಿಸಿಕೊಳ್ಳಲಾಗಿದೆ. ಗ್ರಾಮೀಣ ಪ್ರದೇಶವನ್ನು ಆಧರಿಸಿ ರೂಪಿಸಿರುವ ಈ ಕಾದಂಬರಿ, ಕಿರುತೆರೆಯಲ್ಲಿ ಒಳನುಡಿಗಳನ್ನು ಆಡುವ ಪಾತ್ರಗಳು ನ್ಯಾಯವನ್ನು ಒದಗಿಸಿಕೊಡುವ ಪ್ರಯತ್ನ ಮಾಡುತ್ತವೆ(ಸಾಮಾಜಿಕ ವಿನ್ಯಾಸ ನೋಡಬೇಕು. ಗಾದೆ ಮಾತುಗಳ ಬಳಕೆ ಇದ್ದರೂ ವಿರಳ. ಸಂಪೂರ್ಣವಾಗಿ ಸಂಸ್ಕೃತಭೂಯಿಷ್ಠ ಇಲ್ಲವೇ ಪ್ರಮಾಣೀಕರಣ ಕನ್ನಡವನ್ನೇ ಬಳಸಿಕೊಂಡಿದ್ದಾರೆ. ಅನ್ಯಭಾಷಾ ಬಳಕೆ ಅತಿ ವಿರಳವೆಂದೇ ತಿಳಿಯಬಹುದು. ಇನ್ನು ನುಡಿಬೆರಕೆ, ನುಡಿಜಿಗಿತ ಆಗದೇ ಇರುವುದನ್ನು ಈ ಧಾರಾವಾಹಿ ಮೂಲಕ ಕಂಡುಕೊಳ್ಳಲಾಗಿದೆ). ಕಾದಂಬರಿ ಆಧಾರಿತ ಧಾರಾವಾಹಿಗಳಲ್ಲಿ ಇಂಗ್ಲೀಷ್ ಭಾಷಾಬಳಕೆ ಅತಿ ವಿರಳವಾಗಿ ಪ್ರಯೋಗವಾಗುವುದನ್ನು ಈ ಉದಾಹರಣೆ ಮೂಲಕ ಗುರುತಿಸಿಕೊಳ್ಳಲಾಗಿದೆ. ಒಳನುಡಿಗಳನ್ನು ಈ ಮೇಲಿನ ಅಧ್ಯಯನದ ಮೂಲಕ ಗುರುತಿಸಿಕೊಳ್ಳಲಾಗಿದೆ.

ಮಲೆಗಳಲ್ಲಿ ಮದುಮಗಳು

೯೦ರ ದಶಕದಲ್ಲಿ ದೂರದರ್ಶನದಲ್ಲಿ ಪ್ರಸಾರವಾದ ರಾಷ್ಟ್ರಕವಿ ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಕಾದಂಬರಿ ಆಧಾರಿತ ಕಿರುತೆರೆ ಧಾರಾವಾಹಿ(ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ಪರಿಸರವನ್ನು ಅನುಲಕ್ಷಿಸಿ ಈ ಕಾದಂಬರಿಯನ್ನು ರಚಿಸಿರುವುದು. ಈ ಕಾದಂಬರಿ ಮೂಲಕ್ಕೆ ದಕ್ಕೆಯಾಗದಂತೆ ರೂಪಿಸಿಕೊಳ್ಳಲಾಗಿದೆ). ನಿರ್ದೇಶಕ ಸಿ.ಚಂದ್ರಶೇಖರ್.

ಗುತ್ತಿ: ತನ್ನ ಗುಡಿಸಲಿನಿಂದ ಹೊರಗಡೆ ಹೊರಡುತ್ತಾನೆ(ಕಂಬಳಿ ಹಾಗೂ ಕೊಲನ್ನು ಹಿಡಿದುಕೊಂಡು). ತನ್ನ ಮನಸ್ಸಿನಲ್ಲಿಯೇ ತಾನು ಈ ರೀತಿ ಮಾತನಾಡಿಕೊಳ್ಳುತ್ತಾನೆ. ಈ ಸಾರಿ ನನ್ನತ್ತೆ ಮಗಳು ತಿಮ್ಮೀನ ಬೆಟ್ಟಳ್ಳಿಯಿಂದ ಆರಿಸಿಕೊಂಡು ಬರ್ಲಿಲ್ಲ ಅಂದ್ರೆ ನನ್ನ ಅಪ್ಪ ಅವ್ವನಿಗೆ ಹುಟ್ಟಿದ ಗಂಡೇ ಅಲ್ಲ ನಾನು. ಹೇ, ಆಚ್ಚಾ(ನಾಯಿಯನ್ನು ಕಂಡು) ಅಚ್ಚಾ ಹೇ ಹುಲಿಯಾ ಬೆಟ್ಟದಳ್ಳಿಗೆ ಹೊರಡುತ್ತಾನೆ. ಮತ್ತೆ ನಾಯಿಯನ್ನು ನೋಡಿ ಆಚ್ಚಾ ಹೇ ಹುಲಿಯ ಹಿಂದಗಡನೇ ಬರ್ತೀಯಾ ಹೊಗ್ ಅಡ್ಡೆಗುಟ್ಟಿದ್ದು(ಬಯ್ಗುಳ).

ಗುತ್ತಿ: ಅಯ್ಯಾ ನಾನು ಗುತ್ತಿ ಬಂದಿದ್ದೀನಿ ಕಣೋ

ಭರಮ ಹೆಗ್ಗಡೆ: ತಡೆ ಬಂದೆ. ಈಗ ಈ ಕಾಗದವನ್ನು ಎಂದು ಹೇಳುತ್ತಾ(ಕಾಗದವನ್ನು ಗುತ್ತಿಯ ಬೊಗಸೆಗೆ ಹಾಕುತ್ತಾರೆ).

ಗುತ್ತಿ: ಆಗ್ಲಿ ನನ್ನೊಡೆಯಾ.

ಭರಮ ಹೆಗ್ಗಡೆ: ಕಾಗದ ಕಳ್ದುಗಿಳಿದೀಯಾ, ಏನೋ ಆಗೋದು ಮತ್ತೇನೋ ಆಗ್ಬಿಟ್ಟೀತು.

ಗುತ್ತಿ: ಆತು ನನ್ನೊಡೆಯಾ.

ಭರಮ ಹೆಗ್ಗಡೆ: ಹೂಂ ನಿನೀನ್ನು ಹೊರಡು. ಪತ್ರ ಜೋಪಾನಾ.

ಮರಾಟಿ ಮಂಜ: ಏನೋ ಗುತ್ತಿ ಮುಗಿಲಕಡೆಗೆ ನೋಡ್ತಾ ನಿಂತೀ. ದೂರ ಒಳ್ಳೆ ದಡಬಿಸ್ತಾಗಿ ನಿಂತಿದಿಯಲ್ಲಾ ಆ...

ಗುತ್ತಿ: ಹಾಳ ಮಳೆ ಸಾಯ್ತದೋ ಏನೋ ಅಂತ ನೋಡ್ತಾ ಇದೀನಿ. ಮಳೆ ಪಕ್ಕಂದು ಬರ್ತಾದೇನ್ರೋ.

ಮರಾಟಿ ಮಂಜ: ನೀನು ಎಲ್ಲಿಗೆ ಹೋಗಬೇಕು ಹೇಳು

ಗುತ್ತಿ: ಲಕ್ಕುಂದಕ್ಕೆ ಕಣ್ರೋ

ಮರಾಟಿ ಮಂಜ: ಅಂಗಂದ್ರೆ ಏನು? ನಾನಾದ್ರೆ ಒಂದು ಚಣಕ್ಕೆ ಹೊಗ್ತಿದ್ದೆ.

ಗುತ್ತಿ: ಏನೋ ಅದು.

ಮರಾಟಿ ಮಂಜ: ಸುರುವಾಯ್ತಲ್ಲಪ್ಪ ವರತೆ ಇಂದ ಈ ಹೆಗ್ಗಡ್ತೇರಿಂದ ಸುಖ ಇಲ್ಲ. ಮೂರೊತ್ತು ಜಗಳ, ಜಗಳ. ಲಕ್ಕಮ್ಮ, ಜಟ್ಟಮ್ಮ, ಜಟ್ಟಮ್ಮ, ಲಕ್ಕಮ್ಮ, ನೀಮುಂಡೆ, ನೀಮುಂಡೆ, ನೀ ರಂಡೆ, ನೀ ರಂಡೆ ನಾನಾಗೋವತ್ತಿಗೆ ಇಲ್ಲಿ ಕಾಲ ಮಾಡ್ತೀನಿ....

ಗುತ್ತಿ: ಅಡ್ಬೇಗುಟ್ಟಿದ್ದು ಬಾ... ಬಾ...(ಎಂದು ನಾಯಿಯನ್ನು ಕರ್ಕೊಂಡು....)

ನಾಯಿ ಗುತ್ತಿ: ಈ ಸಾರಿ ನಾನು ತಿಮ್ಮೀನ ಆರಿಸಿಕೊಂಡು ಬರ್‍ಲಿಲ್ಲ ಅಂದ್ರೆ ನಮ್ಮ ಅಪ್ಪ ಅವ್ವನಿಗೆ ಹುಟ್ಟಿದ ಗಂಡೇ ಅಲ್ಲ ನಾನು(ದಾರಿಯಲ್ಲಿ ಹೋಗುತ್ತಿದ್ದಾಗ ಒಂದು ಗಿಡವನ್ನು ನರಿ ಅಲುಗಾಡಿಸುತ್ತದೆ. ಸ್ವಲ್ಪ ಭಯಗೊಂಡಂತೆ ಮಾಡಿ ಅಡ್ಡಾಡ್ಡಿ... ಅಡ್ಡಾಡ್ಡಿ... ಎಂದು ಬೆತ್ತ ಹಿಡಿದುಕೊಂಡು ಜೋರಾಗಿ ಸುತ್ತು ಹಾಕುತ್ತಾನೆ. ಗಿಡ ಅಲುಗಾಡುವುದು ನಿಂತ ಮೇಲೆ). ಮನೆ ಹಾಳಾಗೋಗ ಈ ನರಿಯಿಂದ ಅಷ್ಟು ಸುಖ ಇಲ್ಲ.

ಮಳೆ ಏನೋ ನಿಂತು, ಇನ್ನು ಈ ಹೊಳೆ ಇಳಿಯೋವರೆಗೂ ಈ ಹಳ್ಳದ ಹೆಣ ಕಾಯ್ದು ಕೂತುಕೊ ಬೇಕಾಯ್ತಲ್ಲ(ಎಲಿ ಅಡಿಕೆಯನ್ನು ಜಗಿಯುತ್ತಾನೆ). ನಾಯಿಯನ್ನು ಹೇ ಹುಲಿಯಾ ಹೇ ಹುಲಿಯಾ ಬಾ, ಬಾ ಎಂದು ಕರೆಯುತ್ತಾನೆ. ಅಡೆಬೆಗುಟ್ಟಿದ್ದು, ಗಾಳಿ ಊದಿಕೊಂಡು ಬಿಡೋ ಏನೋ ಬಾ ತೂ, ಕಳ್ಳಿ, ಬರುಬೇಡ ಅಂತ ಹೇಳಿ ಹೊಡ್ದು ಬಂದ್ರು ಮತ್ ಬಂದಿದಿಯಲ್ಲ? ಒಂದು ದಿನ ಗುರ್‍ಕುನ್ ಪಾಲಗ್ರಿಯಾ, ತೂ ಕಳ್ಳ ತೂ ಕಳ್ಳಿ ಎನ್ನುತ್ತಾನೆ(ನಾಯಿ ನೆಕ್ಕುತ್ತದೆ). ಮುಂಡೆದು ಬಾಯಿನೆ ನೆಕ್ಕುತ್ತಲ್ಲ ಎಂದು ಸಿಟ್ಟಿನಿಂದ ಮುಂಡೆದು ಹೋಗ್ ಹೋಗ್ ಎಂದು ಬಯ್ಯುತ್ತಾನೆ. ಹೋಗ್ ದೂರ್ ಹೋಗ್ ಎಂದು ಬಯ್ಯುತ್ತಾನೆ.

ಈ ವೇಳೇಲಿ ಮೀನ್ ಕಡಿಯಕ್ಕಿಂತರಲ್ಲಪ್ಪ, ಈ ದಿವುರ ಮಕ್ಕಳಿಗೆ ಕಳ್ಳ ಹೆಚ್ಚಾಗ್ಯಾದೆ.

"ಈ ಗದ್ದೆಕೋಗು ದಾಟಿ, ಆ ಕರಡದ ಬ್ಯಾಣ ದಾಡಿದರೆ ಸೈ. ಸೇಸನಾಯ್ಕರ ಮನೆ ಸಿಗ್ತಾದೆ. ಮೊದೊಲಷ್ಟು ಮೈ ಒಣಗಿಸಿಕೊಳ್ಬೇಕು... ಅನ್ನಾ ಇಲ್ಲಿದ್ರೆ ಗಂಜೀನಾದ್ರೂ ಹಾಕ್ದ ಇರ್‍ತಾರೇನು? ಹೆಗ್ಡೇರ್ ಮನೆ ಆಳು ಅಂತಾ ಕಳ್ಳಿಲ್ದೆ ಇದ್ರೆ ಒಂದು ಗಲ್ಡಾ ಹೆಂಡ ನಾದ್ರು ಸಿಕ್ಕ ಬೋದು! ಬಾ ಹುಲಿಯ, ಬಾ ನಿನ್ನ ಹಿಡುಕೊಳ್ಳದೇ ಇದ್ರೆ ಹೋದಲ್ಲಿ ತನಕಾ ಕೊಂಬು ಹುಯ್ಲೆ!" ಬಾ... ಎಂದು ಮುಂದೆ ಸಾಗುತ್ತಾನೆ. ಲಕ್ಕುಂದದಲ್ಲಿದ್ದ ಸೇಸನಾಯ್ಕರ ಮನೆಗೆ ಬರುತ್ತಾನೆ.

ಸೇಸಾನಾಯ್ಕ: ಸರ್ಕಾರದಿಂದ ಕಾನೂನು ಆಗಿ ಬಂದ ಮಾತ್ರಕ್ಕೆ ಅನ್ಯಾಯ ನ್ಯಾಯ ಆಗ್ತಾದಾ ತೆಗೆರಿ ತೆಗೆರಿ ನಮ್ ದಂಡಿಗಿ ಹಕ್ಕಿಗೆ ಕುದುಮಕ್ಕಳು ಬರೋದು ನ್ಯಾಯಾನ. ಹೊಡ್ದಾಟ ಆಗೋದಾದ್ರು ಸರಿಯೇ. ಅದೇನೆ ಇರ್‍ಲಿ ನಾಳೆ ನನ್ನ ಮಗನ ಮದುವೆಗೆ ದಂಡಿಗೆ ಸಿಗ್ದ ಇದ್ರು ಕುದ್ರೆ ಮೇಲೆ ಕೂಡ್ಸಿ ಮದುವೆ ದಿಬ್ಬಣ ತಗೊಂಡು ಹೋಗ್ಲೇಬೇಕು. ಜಾತಿ ಮಕ್ಕಳೆಲ್ಲ ಸಹಾಯ ಮಾಡಿದ್ರೆ ಒಂದು ಕೈ ನೋಡಿಯೇ ಬಿಡ್ತೀನಿ.

ತಿಮ್ಮನಾಯ್ಕ: ಸರಿ ಸರಿ ನಿಮ್ಮಾತು. ಅಲ್ಲಾ ನಮ್ ದುಡ್ಡು ಖರ್ಚು ಮಾಡೋಕೆ ಅವ್ರುದೇನು ಅಡ್ಡಿ.

ಸೇಸನಾಯ್ಕ: ಕಾಡಿಯೇ ಬೆಳಕು ತಗಂಬಾ ಕಾಡಿ ಬಾವಗ ಕುಡಿಯೋಕೆ ಏನು? ಕೊಡೇದಿಲ್ಲೇನು?

ಕಾಡಿ: (ದೇಸನಾಯ್ಕನ ಹೆಂಡತಿ)ಆಯ್ತು

ಸೇಸನಾಯ್ಕ: ಸರಿಯಾದ ಮಾತ್ನೆ ಆಡಿದ್ರಿ ಮಾವ ಆ ಜೇಡು ಮಕ್ಕಳಿಗೆ ಸರಿಯಾಗಿ ಬುದ್ದಿ ಕಲಿಸಬೇಕು.

ತಿಮ್ಮ ನಾಯ್ಕ: ಏನಂದ್ರಿ

ಸೇಸನಾಯ್ಕ: ಆ ಜೇಡು ಮಕ್ಕಳುದ್ದು.

ತಿಮ್ಮನಾಯ್ಕ: ಬಾರಿ ಹಡಿಯಾಯ್ತು ಬಿಡಿ. ಕಾನೂನು ಕಡ್ಲೆ. ಅಲ್ಲಿ ಯಾರು ಕೂಕಲಾರ್ದು.

ಸೇಸಾನಾಯ್ಕ: ಅಂಗೇಳಿ

ತಿಮ್ಮನಾಯ್ಕ: ನಿಮ್ಮ ಮಗ ಅಮಿಲ್ ಮದುವೆಗೆ ಜಂಗಡಿ ಏರ್ಪಟು ಮಾಡೋದನ್ನ ಕರಿಬೇಡಿ.

ಸೇಸನಾಯ್ಕ: ಅಂಗಾರ ಸೈ, ವಾದ್ಯ, ಕೊಂಬು, ಹಲಿಗೆ ಎಲ್ಲದನ್ನ ಇಲ್ಲಿಯೇ ಮಾಡೋನಾ. ಒಂದು ಮಾತಂತು ನಿಜ ಬಾವ. ನನ್ನ ಮದುವೇಲಿ ಗಂಡು ಹೆಣ್ಣನ್ನ ಕೂರ್ಸಿ ದಿಬ್ಬಣ ತಗೊಂಡು ಹೋಗ್ಲೆ ಬೇಕು. ಆ ಗೌಡು ಮಕ್ಕಳು ಏನು ಮಾಡ್ತಾರೊ ಮಾಡ್ಲಿ ನೋಡಣಾ?

ಸಂಬೋಧನೆಗಳು ಭಾವ-ಅಳಿಯರ ಮಾತುಕತೆಗಳು ಬಹುವಚನ ಹಾಗೂ ಗೌರವ ರೂಪದ ಸಂಬೋಧನೆಗಳನ್ನು ಬಳಸುವುದನ್ನು ಗುರುತಿಸಿಕೊಳ್ಳಲಾಗಿದೆ.

ಅದೇ ನಾಯಿಗುತ್ತಿ ಮೇಲ್ವರ್ಗದ ಜನರನ್ನು ಗೌರವಸೂಚಕ ಪದಗಳನ್ನು ಹಾಗೂ ಬಹುವಚನ ರೂಪಗಳನ್ನು ಬಳಸುವುದನ್ನು ಈ ಮೇಲಿನ ವಿವರಗಳಿಂದ ಮಾತನಾಡಿದ್ದನ್ನು ಗುರುತಿಸಿಕೊಳ್ಳ ಲಾಗಿದೆ. ಅಲ್ಲದೇ ತನಗಿಂತಲೂ ವಯಸ್ಸಿನಲ್ಲಿ ಚಿಕ್ಕವರಿದ್ದರೂ ಅವರಿಗೆ ಗೌರವ ಸಂಬೋಧನೆ ರೂಪಗಳನ್ನು ಬಳಸುವುದನ್ನು ಈ ಮೂಲಕ ಕಂಡುಕೊಳ್ಳಲಾಗಿದೆ. ಅಲ್ಲದೇ ಈ ಧಾರಾವಾಹಿಯಲ್ಲಿ ಹೆಣ್ಣಿನ ಪಾತ್ರ ಗಂಡಿನ ಪ್ರಭುತ್ವಕ್ಕೆ ತಂದಿರಿಸಿಹೋಗಿ ಗಂಡು ಹೇಳಿದ ಹಾಗೆ ನಡೆದುಕೊಳ್ಳುವುದು. ಅಲ್ಲದೇ ಮರು ಮಾತನಾಡದೆ ಇರುವುದನ್ನು ಈ ಪ್ರಾದೇಶಿಕ ಧಾರಾವಾಹಿಗಳಲ್ಲಿ ಕಂಡು ಕೊಳ್ಳಲಾಗಿದೆ.

ಗ್ರಾಮೀಣ ಪರಿಸರದ ಉಡುಗೆ ತೊಡುಗೆಗಳನ್ನು ಉಟ್ಟುಕೊಂಡೇ ಈ ಪಾತ್ರಗಳು ಈ ಕಥೆಗೆ ನ್ಯಾಯವನ್ನು ದೊರಕಿಸಿಕೊಟ್ಟಿವೆ.

ಕರೀಂ ಸಾಬು: "ಏಯ್, ಕಂಬಳಿ, ಇಲ್ಲಿ ಬಾ"(ಎಂದು ಕೂಗಿದನು) ನಿನ್ನ ಸಲಾಮ್ ಆಗಿರಲಿ ಎಲ್ಲಿಯೋ ನನ್ನ ಹಣ?

ನಾಯಿಗುತ್ತಿ: ಇನ್ನೊಂದೆಂಟು ದಿನ ತಡಕ್ಕೊಳ್ಳಿ, ನನ್ನ ಮದುವೆಗೆ ಹೆಗ್ಗಡೆಯವರ ಕೈಲಿ ದುಡ್ಡು ಕೇಳಿನಿ ಅದ್ರಾಗೆ ನಿಮ್ಮ ಚಿಲ್ರೇನು ಕೊಟ್ಟುಬಿಡ್ತೀನಿ.

ಕರಿಂ ಸಾಬು: ಎಷ್ಟು ದಿನಾ ಅಂತಾ ನನ್ನ ಸತಾಯಿಸುವುದು. ನಿಮಗೆ ಹೆಗ್ಗಡೆಯವರು ಕೊಟ್ಟರೆ ಕೊಡಲಿ, ಬಿಟ್ಟರೆ ಬಿಡಲಿ, ನಮ್ಮದು ದುಡ್ಡು, ಕಾಸು ಬಂದರೆ ಸಾಕು. ನೀನು ಹೇಳಿದಾ ಹಾಗೆ ಎರಡು ದಿನಾ ನೋಡುವಾ ನಮ್ಮದು ದುಡ್ಡು ಬಂದರೇ ಸರಿ ನಾನು ಹೆಗ್ಗಡೆ ಬಳಿ ಬರುತ್ತೇನೆ. ನನಗೂ ಕೆಲಸ ಉಂಟು ಅಲ್ಲಿ ಗೊತ್ತಾಯ್ತಾ(ಎಂದು ಹೇಳುತ್ತಾನೆ. ಗುತ್ತಿ ಸಲಾಮು ಹೊಡೆದು ಪಕ್ಕದ ಮನೆಯ ಅಯ್ಯನವರ ಮನೆಗೆ ಕಾಲಿಕ್ಕುತ್ತಾನೆ). ತೂ(ಮುಸ್ಲಿಂ ಬೈಗುಳ) ಎಂದು ಉಗಿಯುತ್ತಾ, ಲೌಡಿ ಮಗನಿಗೆ ಎಷ್ಟು ದಿಮಾಕು, ಎಷ್ಟು ರುಪಾಯಿ ಕೊಡಬೇಕು ನನಗೆ, ಅದನ್ನು ಚಿಲ್ಲರೆ ಅನ್ನುತ್ತಾನಲ್ಲ, ಹೆಗ್ಗಡೆಯವರ ಹಾಳು ಮಗ ಅಂತ, ದಿಮಾಕು ಅವನಿಗೆ.

ಕಣ್ಣ ಪಂಡಿತರು: ಹೇ ಗುತ್ತೀ ಏನೋ ಗುತ್ತಿ ಮದುವೆ ಮಗನ ಹಾಗೆ ಬಟ್ಟೆಯುಟ್ಟು ಹೊರಟಿದ್ದೀಯಲ್ಲವೋ!"(ಎಂದರು)

ತಮ್ಮಂಥ ಒಡೇರು ಕೊಟ್ಟರೆ ನಮ್ಮಂಥ ಬಡೋರಿಗೆ ಉಂಟು. ಹೆಣ್ಣು ಕೇಳುತ್ತಿದ್ದೆಯಲ್ಲವೆ? ಬೆಟ್ಟಳ್ಳೀ ದೊಡ್ಡ ಬೀರನ ಮಗಳು ತಿಮ್ಮಿಯನ್ನ.........

ನಾಯಿ ಗುತ್ತಿ: ಅಯ್ಯಾ, ನೀವು ದೇವರಿಗೆ ಸಮ; ನಿನ್ನ ಮನಸ್ಸಿನಲ್ಲಿರೋದನ್ನ, ನಾ ಹೇಳಬೇಕಾರೆ ಮೊದಲೆ, ನೀವೇ ಕೇಳಿದ್ದೀರಿ. ನಿಜವಾಗಿಯೂ ನೀವು ದೇವರಂತಾ ಮನುಷ್ಯರು"(ಎಂದನು).

ಕಣ್ಣ ಪಂಡಿತರು: "ಆ ಬಡ್ವ ಏನೋ ತಂಟೆ ಮಾಡುತ್ತಿದ್ದ ಎಂದು ಹೇಳಿದ್ದೇಯಲ್ಲಾ ನೀನು, ತಿಮ್ಮಿಯನ್ನ ತಾನು ಮದುವೆಯಾಗಬೇಕೆಂದು."

ನಾಯಿಗುತ್ತಿ: "ಆ ಬಚ್ಚನ ಹೆಣಾ ಅವನೇನು ಮಾಡ್ತಾನೆ? ನನ್ನ ಮಾವ ದೊಡ್ಡಬೀರನ ಮನಸ್ಸೇ ಅತ್ತಾ ಇತ್ತಾ ಆಗ್ತಾ ಇದೆ. ಬೆಟ್ಟಳ್ಳಿ ಗೌಡ್ರೂ ಅಡ್ಡಾ ಹಾಕ್ತಾ ಇದ್ದಾರೆ. ತಿಮ್ಮಿ ಮನಸ್ಸೇನೋ ಈ ಕಡೇನೆ ಇದೆ. ಆದ್ರೇನ್ಮಾಡೋದು, ಈವತ್ತೂ ನಮ್ಮ ಹೆಗ್ಗಡೇರು ಒಂದು "ಒಂದು ಕಾಗ್ದ. ಬರ್ದಾರೆ ಬೆಟ್ಟಳ್ಳಿಗೆ ಕೊಟ್ಟು ಬಾ ಅಂತ ಅದನ್ನ ಕೊಟ್ಟು ಬರ್ಲಿಕ್ಕೊಂಡವಿ. ನಮ್ಮ ಹೆಗ್ಗಡೇರಿಗೆ ಏನೋ ಜಾಸ್ತಿ ಕೊಟ್ಟಿದ್ದಂತೆ ಸ್ವಲ್ಪ ಗುಣಾ ಅದೆಯಂತೆ. ಮತ್ತೀಟು ಜಾಸ್ತಿ ಇಸುಕೊಂಡು ಬಾ ಅಂತ ಅಂದಾರೆ?

ಕಣ್ಣ ಪಂಡಿತರು: ಹಿಂದಕ್ಕೆ ಹೋಗುವಾಗ ಮತ್ತೆ ಬಾ ಕೊಡುತ್ತೇನೆ.

ನಾಯಿಗುತ್ತಿ: ಹಿಂದಕ್ಕೆ ಹೋಗಾಗ ಬರಾಕೆ ಹೆಂಗಾ ಆಯ್ತದ್ರೊ 'ಪಂಡಿತರು ಹಾ ಹಾ ಎನ್ನುತ್ತಾರೆ. ಅದಕ್ಕವನು "ಹೂಂ ಆಗ್ಲಿ ಬಂದು ತಗೊಂಡು ಹೋಗ್ತಿನಿ ಎನ್ನುತ್ತಾನೆ."

ಕಣ್ಣ ಪಂಡಿತರು: ಆಯ್ತು. ಇನ್ನ ಹೊರಡಬಹುದು. ಮತ್ತೇನು ನಿಂತದ್ದು(ಎಂದರು) ಮತ್ತೇ ಜಟ್ಟಮ್ಮ ಹೆಗ್ಗಡತಿಯರು ಏನಾದರೂ ಹೇಳಿದ್ದರೇನೋ.

ಗುತ್ತಿ: ಸೈ ಮರ್ತೆ ಬಿಟ್ಟಿದ್ದೆ.

ಕಣ್ಣ ಪಂಡಿತರು: ಕೊಡ್ತಿನೋ, ಆಮೇಲೆ ಬಾ.

ಗುತ್ತಿ: ಮಕ್ಕಳಾಕೆ ಔಸ್ತಿ ಕೊಡ್ತೀರಂತೆ ಹೌದೇನೋ

ಕಣ್ಣ ಪಂಡಿತರು: ಆಗುವುದಕ್ಕೆ, ಹೋಗುವುದಕ್ಕೆ ನಿನಗ್ಯಾತಕ್ಕೆ?

ಗುತ್ತಿ: ಅಲ್ಲ, ಪಾಪ ಅವರು ಮಕ್ಕಳಿಲ್ಲದೆ ಗೋಳಾಡ್ತಾ ಅದಾರೆ? ಹೆಗ್ಡೆಯವರು ಮತ್ತೊಂದು ಮದುವೆ ಆಕ್ತದಾರೆ. ಪಾಪ ಮಕ್ಳಾದ್ರೂ ಇದ್ದರೆ, ಹೋಗ್ಲಿ ಬಿಡೀ ಈ ಗರೀಬನಿಗ್ಯಾಕೆ? ನನಗೊಂದು ಅಂತ್ರ ಬೇಕಾಗಿತ್ತಲ್ರೋ

ಕಣ್ಣ ಪಂಡಿತರು: ಯಾವುದಕ್ಕೆ

ಗುತ್ತಿ: ಅದೇ ನೀವು ಹೇಳಿದ್ರಲ್ಲಾ ಅದಕ್ಕಾ

ಕಣ್ಣ ಪಂಡಿತರು: ಅಂದರಾ

ಗುತ್ತಿ: ಈ ನೋಡಿ ತಿಮ್ಮೀನ ಮದುವೆಯಾಗಬೇಕುಂತಾ ಸುಮಾರು ಕಾಲದಿಂದ ಕೇಳ್ತಿದೀನಿ. ಆ ಬಚ್ಚ ಮೊನ್ನೆ ಮೊನ್ನೆ ತಾನೆ ಮದುವೆಯಾಗಬೇಕು ಅಂತ ತಂಟೆ ಸುರು ಮಾಡ್ಯಾನೆ. ತಿಮ್ಮೀನ ನಾನೇ ಮದುವೆಯಾಗಂಗ್ಗೆ ಆಗ್ಲಿ ಅದ್ಕಕೊಂದು ಅಂತ್ರ ಕೊಡ್ರಿ, ನನ್ನ ಪಿರಾಣ ಇರೋ ತಂಕ ನಿಮ್ಮ ಗುಲಾಮನಾಗಿರುತ್ತೀನಿ ನನ್ನೊಡೆಯಾ.

ಸುಬ್ಬಣ್ಣ ಹೆಗ್ಗಡೆ: ತಿಮ್ಮಾ ತಿಮ್ಮಾ ಹೇ ತಿಮ್ಮ, ತಿಮ್ಮಾ ಹೇ ತಿಮ್ಮಾ ಹೇ ಲೇ ಲೇ ಜಂಬನೆ ಆರೋರು ಅಡಿದಂಗೆ ತುದಿಬೆಳ್ಳಲ್ಲಿ ಹಾರಿಕೊಂಡು ಬರ್ತೀಯಲ್ಲೋ. ಬಿಳಿ ಬಟ್ಟೆ ಕೆಸರಾಗ್ತಾದಾ ಏನೋ ನಿಂದು. ನಿಮ್ಮ ನೆರೆ ಮನೆ ಅಂಗಳಾದಾಗೆ, ಮನೆ ಹಾಳ್ ಜಾಡಿನಲ್ಲ ಕರೀತೀಯಲ್ಲೊ. ನಿನ್ನ ಕರಿ ಭೂತಕ್ಕೆ ಯಾಕೆ ಈ ಬಿಳಿ ಬಟ್ಟೆ.

ತಿಮ್ಮಯ್ಯ ಹೆಗ್ಗಡೆ: ಕರೆದ್ಯಾಕೆ

ಸುಬ್ಬಣ್ಣ ಹೆಗ್ಗಡೆ: ಹೋಗಿ ನೋಡೊ ಹಾಳ್ ಬಸಂತ ಬಂದ್ರೆ ಇಲ್ಲೊ ಹಾಳ್ ಮಕ್ಳ, ಮಳೆ ಬಂದು ಮರುದಿನಾನು ಬಿಸಿಲು ಬರೋತನಕ ಮಲಕೋಳೊ ನೀನು ಮನೆ ಇಟ್ಟುಕೊಂಡಾಗೆ, ಏನಾದ್ರು ಆಗ್ಲಿ ಹತ್ತು ಮುಖ ಹೋಗಾತಂಕಾ, ಅಮೇಲೆ ಮನೆ ಇಟ್ಟಕಂಡ್ರೆ ಇಟ್ಟಕೊ, ಬಿಟ್ರೆ ಬಿಡು. ಬಾರೊ ಇಲ್ಲಿ, ನಿನ್ನ ಮುಖ ನೋಡಿದ್ರೆ ನಿನ್ನ ಮಾತು ಕೇಳ್ತಾರೇನೋ ಹಾಳು ಮಕ್ಕಳು ತೂ ನಿನ್ನ ಭೂದಕ್ಕೆ ಬೆಂಕಿಯಾಕ, ಹೋಗಿ ಆ ಮುಖನಾದ್ರು ತೊಳ್ಕೊಂಡು ಹೋಗು. ಹೋಗೋ, ಹೋಗೋ ಕೆಡ್ತಾಪ್ಪ, ಕಾಲ ಕೆಡ್ತು. ನಮ್ಮಂತವರು ಕಾಲ ಕೆಡೋ ಮೊದ್ಲು ಇನ್ನು ಹೆಸಿದೆಲ್ಲ ಜನ್ಮ, ಹಾಳ ಕಣ್ಣು ಅದಕ್ಕ ಬ್ಯಾಡದನ ನಾನು, ಗುತ್ತಿ ಬಾರಪ್ಪ ಇಲ್ಲಿ ಸ್ವಲ್ಪ.

ಮಂಜಮ್ಮ: ಏನಪ್ಪಯ್ಯ ಲಪ್ಪುಸರಾಲ್ ಬಂದ್ನಿನೆ?

ಸುಬ್ಬಣ್ಣ ಹೆಗ್ಗಡೆ: ಲಪ್ಪುಸರಾಲ್ ಬಂದಿದ್ನೆನೆ?

ಅವ್ನ ಮನೆ ಹಾಳಾಗ ಎತ್ತ ಸತ್ನೊ, ಅದ್ಯಾರು ಬರೋದು ಹೂವಳ್ಳಿ ವೆಂಕಣ್ಣ ಬಾವ ಕಂಡಂಗೆ ಕಾಣ್ತದೆ.

ತಿಮ್ಮಯ್ಯ ಹೆಗ್ಗಡೆ: ಎಲ್ಲಿ ಸತ್ರೊ ಎಲ್ಲ ನಿಮ್ ಬಿಡಾರಕ್ಕೆ ಬೆಂಕಿ ಬೀಳಾ, ಊರಿಗೆಲ್ಲ ಹಗಲಾದ್ರು ನಿಮ್ಗಿನ್ನು ಬೆಳಕು ಬಿಲ್ಲಿಲ್ಲ ಏನ್ರೊ.

ಬೈರ: ಏನು ಗಲಾಟೆ ಕೆಲ್ಸಕ್ಕಂತ ಕರೆಯಾಕೆ ಬಂದಾರೇನೋ ನೋಡೆ.

ಸಿದ್ದ: ಈ ಹೊಡೆಯ ಬಂದು ಕೆಲ್ಸಕ್ಕಾ ಕರೀತಾ ಇದಾರೆ.

ತಿಮ್ಮಯ್ಯ ಹೆಗ್ಗಡೆ: ಯಾರು ಇಲ್ಲೇನೋ ಕೇರಿಲಿ, ಎಲ್ಲಿ ಹಾಳಾದ್ರೊ ಎಲ್ಲಾ, ಎಲ್ಲಿ ಕುಟ್ಟೆ ನಾಸ್ನ ಅದ್ರೇನೋ ತ್ತೂ... ಹೇ... ಹೇ... ಸಿದ್ದಾ, ತಿಮ್ಮಾ, ಬೈರಾ, ಸಣ್ಣ, ಹೂಕಣಕ್ಕೆ ಏನೋ ಆಗಿದೆ? ನಿಮ್ಮ ಗಂಟ್ಲು ಕೆಟ್ಹೋಗಾ, ತ್ತೂ.... ಮುಂಡೆ ಮಕ್ಕಳ್ರಾ.

ಬೈರ: ಆ ಬಾಳೆಗೊನೇನ ಅಲ್ಲಿ ಇಡ್ಬೇಡ ಕಾಣಂದಾಂಗೆ ಒಳಗಿಡು. ಸಣ್ಣ ಹೆಗ್ಗಡೆಯವರು ಬಂದಾರೆ(ಎಂದು ಹೆಂಡತಿಗೆ ಹೇಳುತ್ತಾನೆ).

ಸಿದ್ದ: ಹೆಬ್ಬುಟ್ಟ ಒಡೆಯರು ಕರೆಯದೇ ಬಂದಾರೆ.

ಹೆಣ್ಣು ೧: ಹೋ ಬಾವ ಸಣ್ಣ ಹೆಗ್ಗಡೇರು ಕೆಲ್ಸಕ್ಕೆ ಕರೀತಾರೊ.

ಬೈರ: ಕರ್ದ್ರೆ ಕರೀತಾರೆ ಬೀಡು, ಕೇಳಸ್ತಾ ಅದೆ ಗಲಾಟೆ. ಇರೋದೆ ನಾವೊಬ್ಬ ಮುಂಜಾನೆ ಗಂಜಿಗಿಂಜಿ ಕಾಸ್ಕೊಂಡು ಕುಡಿಯಾಕೆ ಉಪ್ಪು ಬ್ಯಾಡ ಏನು? ಒತ್ತಾರೆ ಎದ್ದು ಬಂದು ಬಿಡ್ತಾರೆ, ಕೆಲ್ಸಕ್ಕೆ ಕರಿಯಾಕೆ?(ಮೀನನ್ನು ಬೇಯಿಸುತ್ತಾ ಗೊಣಗಾಡುತ್ತಾನೆ)

ತಿಮ್ಮಯ್ಯ ಹೆಗ್ಗಡೆ: ತೂ... ಎಷ್ಟು ಕೂಗಬೇಕೋ ನಿಮ್ಮನ್ನ, ಸೋಮಾರಿ ನನ್ನ ಮಕ್ಕಳಾ, ದಿಕ್ಕಿನ್ನ ಹೊತ್ತು ಹಾಳಾಗ್ಯಾದ ಏನಾ? ಬಿಸಿಲು ನೆತ್ತಿಗೆ ಬಂದ್ರು ನೀವು ಮಾತ್ರ ಬರಲ್ಲಾ.

ಬೈರ: ಸಣ್ಣ ಹೆಗ್ಗಡೇರಾ ನಿಮ್ಮ ಗಂಡ್ಲ ದನಿ ಕೇಳಿ ಹೊಂಟು ಬಂದೀನಿ.

ತಿಮ್ಮಯ್ಯ ಹೆಗ್ಗಡೆ: ಏನೆ ಹೂವಿ(ಸಣ್ಣ ಹೆಣ್ಣು ಮಗು ಸುಮಾರು ೧೦-೧೫ ವರ್ಷದ್ದು).

ಹೂವಿ: ದೊಡ್ಡ ಅಯ್ಯನು ಹೇಳಿದ್ರು ಹಂದಿ ಎತ್ತಕೆ ಬಂದಷ್ಟು ಜನ ಕಳಿಸಬೇಕಂತೆ.

ತಿಮ್ಮಯ್ಯ ಹೆಗ್ಗಡೆ: ಹಂದಿ ಹೊಡೆದದ್ದು ಯಾರೆ?

ಹೂವಿ: ಯಾರೋ ನಂಗೊತ್ತಿಲ್ಲ.

ಕೆಲಸದ ಆಳು: ಎಲ್ಲ ಬನ್ರೊ, ಇಬ್ಬರು ಎಲ್ಲಿ ಸಕಾಗಾದ್ರೋ ಹಂದಿ ಎತ್ತಕೆ, ಎಲ್ಲ ಬಂದು ಬ್ಯಾಗ ಮಾಡ್ಕೊಟ್ಬು ಗದ್ದೆ ಕೆಲ್ಸಕ್ಕದ್ರೆ ಗದ್ದೆ ಕೆಲ್ಸಕ್ಕೆ ಹೋಯ್ತೀವಿ.

ತಿಮ್ಮಯ್ಯ ಹೆಗ್ಗಡೆ: ಏ... ಏನಾರಾ ಮಾಡಿಕೊಂಡು ಸಾಯ್ರಿ.

ವೇಚನೆ–ವೇಚ್ನೆ=ಯೋಚನೆ ಗುತ್ತಿ ಬಳಸುವುದು. ಆಡುನುಡಿ ಬಳಕೆ ಮಾಡುವುದನ್ನು ಪರಿಗಣಿಸಬೇಕು. ಸಂದರ್ಭ ಕಾಗದವನ್ನು ಸಿಂಬಾವೆ ಭರಮ ಹೆಗ್ಗಡೆಯವರು ಗುಟ್ಟಾಗಿ ಕೊಡಬೇಕೆಂದು ಹೇಳಿರುತ್ತಾರೆ. 'ಹೇಳ್ಬೇಡ' ಬೇಕೆಂದು ಹೇಳಿರ್ತಾರೆ. ತಿಮ್ಮಪ್ಪ ಹೆಗ್ಗಡೆಯವರಿಗೆ ಕೊಡಬೇಕೋ ಬೇಡವೋ ಎಂದು ಯೋಚಿಸುತ್ತಾನೆ. ಆಗ ಈ ಶಬ್ದವನ್ನು ಬಳಸುತ್ತಾನೆ.

ಗುತ್ತಿ: ಮುಗುಳುನಗುತ್ತಾ "ಅಯ್ಯೋ ದೇವರಾಣೇನೂ ಹಾಕಿ ಬಿಟ್ಟಿನಲ್ರೊ! ಇನ್ನು ಹ್ಯಾಂಗೆ ಕಾಗದ ಕೊಡಲಿ ಅಂತ ವೇಚ್ನೆ ಮಾಡ್ತಿದ್ದೀನಿ" ಎನ್ನುತ್ತಾನೆ. ಈ ರೀತಿಯ ಪದ ಬಳಕೆ ಕೆಳವರ್ಗಕ್ಕೆ ಮಾತ್ರ ಸೀಮಿತವಾಗಿದೆ.

ಐತ–ಪೀಂಚಲು–ಗಂಡಹೆಂಡತಿ

ಚಿಂಕ್ರ–ಕೆಳವರ್ಗದವ

ಚಿನ್ನಮ್ಮ–ಮುಕುಂದಯ್ಯನ ಹೆಂಡತಿಯಾಗುವ ಕನ್ಯೆ

ಸೇರೆಗಾರ–ಕೂಲಿ ಕೆಲಸದವನು

ಸಣ್ಣಯ್ಯ–ಕೂಲಿ ಕೆಲಸದವನು

ಪಿಜಿಜಿ–ಕೂಲಿ ಕೆಲಸದವಳು

ನಾಗಕ್ಕ–ನಾಗತ್ತೆ–ಮೇಲ್ವರ್ಗದ ಪಾತ್ರಗಳು

ಕೋಣುರೂ–ರಂಗಪ್ಪ ಗೌಡರು(ಯಜಮಾನ) ಮೇಲ್ವರ್ಗದ ಪಾತ್ರ

ಅನಂತಯ್ಯ–(ಅ)ಐನರು ಪಾಠ ಮಾಡುವ ಮೇಸ್ಟ್ರು.

ಬಚ್ಚ–ಕೆಳವರ್ಗದ ಪಾತ್ರ

ಜಮೀನ್ದಾರ–ಕಲ್ಲಯ್ಯಗೌಡ

ಪಾದ್ರಿ–ಮೇಲ್ವರ್ಗದ ಪಾತ್ರ

ಕೆಳಸ್ತಾರ ಜಾತಿ–ಪಾದ್ರಿ

ದ್ಯಾವೇಗೌಡ್ರು–ಮೇಲ್ವರ್ಗದ ಪಾತ್ರ (ಕಲ್ಲಯ್ಯ ಗೌಡರ ಹಿರಿಮಗ)

ಸೋಕಲ್ಪನಾ(ಅನ್ಯಭಾಷೆ ಬಳಕೆ)-(ಬೀಸೆಕಲ್ಲಿನ ಸವಾರಿ) ಬೈಸಿಕಲ್ ಕನ್ನಡದಲ್ಲಿ ಈ ಆಡು ನುಡಿಯಲ್ಲಿ ಈ ರೂಪವನ್ನು ಕನ್ನಡದ ಸ್ವರೂಪಕ್ಕೆ ಹೊಂದಿಕೊಂಡು ಮೂಲ ರೂಪವನ್ನು ಕಳೆದುಕೊಂಡಿರುವುದನ್ನು ಈ ಮೂಲಕ ತಿಳಿಯಬಹುದು.

ದ್ಯಾವೇಗೌಡ: ಪಾದ್ರಿಗಳೇ ಆ ಬಚ್ಚನಿಗೆ ಬೈಸಿಕಲ್ ಬರ್ತಿರೋದನ್ನ ಹೇಳಿದ್ದೆ. ಅಂವ ಇನ್ನು ಬಂದಂಗಿಲ್ಲ. ನೀವು ಇಲ್ಲೇ ಇರಿ ನಾನು ಹೋಗಿ ನೋಡಿ ಬರ್ತೇನೆ.

ಪಾದ್ರಿ: ಸರಿ ಆಗಬಹುದು.

ದ್ಯಾವೇಗೌಡ: ಹೇ ಸಣ್ಣ ಬೀರ ಬಾರೋ ನನ್ನ ಜೊತೆ. ಏನು ನೋಡ್ತಾ ನಿಂತಿಯೋ ಪೆದ್ದು ಮುಂಡೇದೆ(ಸೈಕಲ್ಲನ್ನು ಎಂದು ನೋಡಿರದ ಕರಿಬಸಯ್ಯ. ಇವನು ಆಶ್ಚರ್ಯ ಚಕಿತನಾಗಿ ಮುಟ್ಟಿದರೆ ಏನಾದ್ರು ಆಗುತ್ತದೋ ಏನೋ ಎಂದು ಹೆದರಿ ಹೆದರಿ ಮುಟ್ಟುತ್ತಾನೆ.) ಮಕ ಏನು ನೋಡೇಯೋ ಎತ್ತುಕೊಂಡು ನಡಿಯೋ. ಪಾದ್ರಿಗಳು ದ್ಯಾವೇಗೌಡರಿಗೆ ಸೈಕಲ್ ಕಲಿಸಲು ಹೊರಂಗಣಕ್ಕೆ ಬರುತ್ತಾರೆ. ಆ ಊರಿಗೆ ಅಲ್ಲಿನ ಜನರಿಗೆ ಇದರ ಪರಿಚಯವಿರದ ಕಾರಣ ಅವರು ತುಂಬ ಕುತೂಹಲಿಗಳಾಗಿ, ಆಶ್ಚರ್ಯಕರವಾಗಿ ನೋಡುತ್ತಾರೆ. ಸೈಕಲ್ ಬಂದ ನಂತರ ಎಲ್ಲರೂ ಕುಣಿದು ಕುಪ್ಪಳಿಸುತ್ತಾರೆ.

ಪಾದ್ರಿಗಳು: ಸೈಕಲ್ ಬೇಲ್ ಹಾಕುತ್ತಾರೆ. ಇದನ್ನು ಕೇಳಿಸಿಕೊಂಡ ಮಕ್ಕಳು ಅದೆಂತದೇ ಟ್ರೇಣ್, ಟ್ರೇಣ್ ಅಂತದೊಲ್ಲೊ, ದಾರಿ ಬಿಡುಸುಕೇ ಗಂಟೆ ಬಾರಿಸ್ತಾರ ಕಣೋ ಎಂದು ಮಾತನಾಡಿಕೊಳ್ಳುತ್ತಾರೆ. ಬೆಲ್ಲಿನ ಶಬ್ದ ಕೇಳಿದ ಕೆಲವು ಕೆಳವರ್ಗದ ಪಾತ್ರಗಳು ಹೆದರಿ ದೂರ ಸರಿಯುತ್ತವೆ.

ಸೇರೆಗಾರ: ಇದು ಎಂತದ್ದೊ ಮಹಾರಾಯ ಫಳ ಫಳ ಹೊಳೀತಾದಲ್ಲ. ಬೀಸೆಕಲ್ಲು.

ಐತ: ಬೀಸೆಕಲ್ಲಿಗೆ ಎರಡು ಹೊಲುಂಟು ಆದ್ರೆ ಇದಕ್ಕೆ ಎರಡು ಚಕ್ರ ಉಂಟಲ್ಲ ಮರಾಯ.

ಹೇ ಅದು ಬೀಸೆಕಲ್ಲು ಅಲ್ಲೊ. ಅದು ಬೈಸಿಕಲ್ಲು ಅಂತೆ. ಎಂದು ಮಾತನಾಡಿಕೊಳ್ಳುತ್ತಾರೆ. ಪಾದ್ರಿಗಳು ಸೈಕಲ್ ಸವಾರಿ ಮಾಡಿದ್ದನ್ನು ಕಂಡು ಸಿಳ್ಳೆ, ಕೇಕೆ ಹೊಡೆದು ಕುಣಿದು ಕುಪ್ಪಳಿಸುತ್ತಾರೆ.

ಪಾದ್ರಿಗಳು: ದ್ಯಾವೇಗೌಡ್ರ ನೀವು ಸೈಕಲ್ ಹತ್ತಿ ಎಂದು ಅವರಿಗೆ ಸೈಕಲ್ ಸವಾರಿ ಮಾಡಿಸುತ್ತಾರೆ.

ಚಿನ್ನಮ್ಮ: (ಪೀಂಚಲು ಮುಕುಂದಯ್ಯ ಹಾಗೂ ಚಿನ್ನಮ್ಮನವರ ಪ್ರೇಮಕ್ಕೆ ಗುಟ್ಟಾಗಿ ಸಹಕರಿಸುತ್ತಿದ್ದ ಮಧ್ಯವರ್ತಿ ಆಗಿದ್ದಳು. ಗುಟ್ಟಾಗಿ ಚಿನ್ನಮ್ಮಳನ್ನು ಭೇಟಿ ಮಾಡುತ್ತಾಳೆ. ಇವರಿಬ್ಬರ ಮಾತುಕತೆ ಮುಂದುವರೆಯುತ್ತದೆ.) ಎಷ್ಟೊಂದು ಬದಲಾಗಿದ್ದೀಯ ಗೊತ್ತಾ ಎಂದು ಹೇಳುತ್ತಾಳೆ.

ಪೀಂಚಲು: ನೀವು ಎಷ್ಟೊಂದು ಚಂದ ಆಗಿರಿ ಎನ್ನುತ್ತಾ ತಗೋಳಿ ಎನ್ನುತ್ತಾಳೆ?

ಚಿನ್ನಮ್ಮ: ಏನೇ ಇದು. ಕಲಸಂಪಿಗೆ ಹಣ್ಣು ಎಂದು ಹೇಳುತ್ತಾಳೆ. ಯಾರು ಕೊಟ್ಟಿದ್ದು.

ಪೀಂಚಲು: ನಾನೇ ತಂದದ್ದು.

ಚಿನ್ನಮ್ಮ: ಗಾಳಿಯಲ್ಲಿ ಬಿದ್ದಿದ್ದನ್ನು ಹರ್‌ಕಂಡು ತಂದಿಯೇನು?

ಪೀಂಚಲು: ಇಲ್ಲ ಕುಯ್ಕೊಂಡು ತಂದಿದ್ದು.

ಚಿನ್ನಮ್ಮ: ಮರಹತ್ತಿ, (ಇಬ್ಬರು ನಗುತ್ತಾರೆ) ನೀನು ಈಗ್ಲೂ ಮರ ಹತ್ತಿ ಏನೆ?

ಪೀಂಚಲು: ಯಾಕೆ? ಹತ್ತಬಾರ್ದೆನೊ?

ಚಿನ್ನಮ್ಮ: ಮದುವೆ ಆದ್ಮೇಲೆ ಮರ ಹತ್ತಿದ್ರೆ ದಿಂಡಿ ಬಸ್ವಿ ಅಂತಾರೆ.

ಪೀಂಚಲು: ನಾನು ಯಾಕೆ ಮರ ಹತ್ತಲಿ, ಹತ್ತೋರಿ ಹತ್ತಿ ಕುಯ್ದದ್ದು.

ಚಿನ್ನಮ್ಮ: ಅಂಗಾರೆ ಐತ ಕುಯ್ದುದ್ದ.

ಪೀಂಚಲು: ಇಲ್ಲ. ನನ್ನನ್ನ ಯಾರು ಇಲ್ಲಿಗೆ ಕಳಿಸಿದ್ರೊ ಅವ್ರು ಹತ್ತಿ ಕುಯ್ದುದ್ದು.

ಚಿನ್ನಮ್ಮ: ನೀ ತುಂಬ ಕಿಲಾಡಿ ಕಣೆ.

ಪೀಂಚಲು: ಅವ್ರ ಹೆಸರು ನೀವೇಕೆ ಹೇಳ್ಬಾರ್ದು

ಚಿನ್ನಮ್ಮ: ಮುಕುಂದ ಬಾವನೇನೆ. ಇನ್ನು ಸ್ವಲ್ಪ ಹೊತ್ತು ಇರು(ಅಂತಾಳೆ).

ಪೀಂಚಲು: ಐತ ಬರೊದೊಳಗೆ ಬಿಡಾರ್ದೊಳಗೆ ಇರ್ಬೇಕು(ಎನ್ನುತ್ತಾಳೆ).

ಮುಸ್ಲಿಂ ಪಾತ್ರಗಳು

ಕರಿಮೀನು ಸಾಬು–ಕರಿಂ ಸಾಬು ತತ್ಸಮ–ತದ್ಭವವಾಗಿದೆ.

ಪುಡೀ ಸಾಬು–(ಪುಡಿಯನ್ನು ತರಿಸೋರೆ)

ಅಜ್ಜಿ ಸಾಬು–ಅಜೀಜ್

ಲುಂಗೀ ಸಾಬು–(ವಿಚಿತ್ರ ಬಣ್ಣದ ಲುಂಗಿ ಉಡುತ್ತಿದ್ದರಿಂದ)

ಇಜಾರದ ಸಾಬು

ವ್ಯಕ್ತಿನಾಮಗಳೇ ತತ್ಸಮ–ತದ್ಭವವಾಗಿರುವುದನ್ನು ಈ ಮುಸ್ಲಿಂ ಪಾತ್ರಗಳಲ್ಲಿ ಗುರುತಿಸಬಹುದು. ನಿಜನಾಮ ಒಂದಾಗಿದ್ದರೆ, ಆಡುನುಡಿಯಲ್ಲಿ ಇನ್ನೊಂದು ಆಗಿರುವುದನ್ನು ಈ ಮೇಲಿನ ವ್ಯಕ್ತಿನಾಮಗಳಿಂದ ಗುರುತಿಸಿಕೊಳ್ಳಲಾಗಿದೆ.

ಮೇಲ್ವರ್ಗದ ಜನ ತಾವು ಕೊಟ್ಟ ಸಾಲ ವಸೂಲಿ ಮಾಡಲು ಈ ಐದು ಜನ ಸಾಬರನ್ನು ನೇಮಕ ಮಾಡಿಕೊಂಡಿದ್ದರು. ಇವರು ಹೊಡೆದು, ಬಡಿದು, ಚಿತ್ರಹಿಂಸೆ ಕೊಟ್ಟ ಹಣವನ್ನು ವಸೂಲಿ ಮಾಡುವುದು ಇವರ ಕಾಯಕ. ಇವರ ಹೊಡೆತಕ್ಕೆ ಇತರೆ ಹಿಂಸೆಗಳಿಗೆ ಸಾಲ ತೆಗೆದುಕೊಂಡ ಕೆಳವರ್ಗ ಜನರು ಹೆದರುತ್ತಿದ್ದರು.

ಕರಿಂ ಸಾಬು: (ಕರಿಮೀನು ಸಾಬು) (ದೊಡ್ಡ ಬೈರ ಹಾಗೂ ಅವನ ಮಗ ಕಲ್ಲಯ್ಯ ಗೌಡರ ಮನೆಗೆ ಬಂದು ಕುಳಿತದ್ದನ್ನು ನೋಡಿ) ಇವಂದುರೆ ಏನು ಅಂತಿಯಾ ಸೊಕ್ಕು ಕೇರಿಗೆ ಯಜಮಾನ ಅಂತ ಬಾಳ ದಿಮಾಕು. ಆ ಹೊತ್ತು ನಾನು ಅಜೀಜ್ ಚಮ್ಡಕ್ಕಾಗಿ ಕುದುರೆ ತಡು ತೆಗೆದುಕೊಂಡು ಇವ್ರ ಕೇರಿಗೆ ಹೋದ್ರೆ, ನಿಮ್ದುಕೆ ಒಳಗೆ ಬರ್‌ಬಾರ್ದು, ನಮ್ದುಕೆ ದೇವ್ರು ದಿಂಡ್ರು ಇದಾರೆ. ನಮ್ದು ಜಾತಿ ಕೆಟ್ಟು ಹೋಯ್ತಾದೆ. ಅಂತ ಏನೇನೋ ಬೊಗಳಿ ಬಿಟ್ಟಾ, ಇವತ್ತು ಇವ್ನಂದು, ಇವನ ಮಗನ ಸೊಕ್ಕು ಇಳಿಸಿಬಿಡ್ತೀನಿ. ಗೌಡ್ರು ಬೆತ್ತ ತಗೋ ಅನ್ಲಿ. ಇವತ್ತು ನಿನಗೆ ನಾಳೆ ಹೂವಳ್ಳಿ ನಾಯಕರಿಗೆ ಕೊಬ್ಬಿರೋ ಕರಗಿಸ್ತೀನಿ. ನೋಡ್ತಾ ಇರು.

ಲುಂಗಿ ಸಾಬು: ಇವತ್ತು ಗೊತ್ತಾಗ್ತಾದೆಯೊ ಹಣ್ಣುಳ್ಳ ಹೊತ್ತಾದ ರುಚಿ. ಮದುವೆ ಮಾಡಿಸ್ತೀನಿ ಅಂತ ಹೇಳಿ ಹುಡುಗಿನ ಪರಾರಿ ಮಾಡ್ತಿರಲ್ಲ ಅಂಥ ದಗಲ್ ಬಾಜಿಗಳು ನೀವು.

ಈ ಮೇಲಿನ ನುಡಿಗಳು ಮುಸ್ಲಿಮರ ಕನ್ನಡದಲ್ಲಿ ಭಾಷಿಕ ವ್ಯತ್ಯಾಸಗಳನ್ನು ಕಾಣಬಹುದು. ಇಕಾರ ಕೊನೆಗೊಳ್ಳುವುದನ್ನು ಈ ಪಾತ್ರಗಳ ಮೂಲಕ ಗುರುತಿಸಿಕೊಳ್ಳಲಾಗಿದೆ.

ಒಟ್ಟಾರೆ ಈ ಅಧ್ಯಾಯದಲ್ಲಿ ಧಾರಾವಾಹಿಗಳಲ್ಲಿ ಬಳಕೆಯಾಗುವ ವಿವಿಧ ಪ್ರಾದೇಶಿಕ ಪ್ರಭೇದಗಳನ್ನು ಅಥವಾ ಒಳನುಡಿಗಳ ಪ್ರಮಾಣವನ್ನು ಆಧಾರಸಹಿತ ಉದಾಹರಣೆಗಳೊಂದಿಗೆ ವಿಶ್ಲೇಷಿಸಲಾಗಿದೆ. ಅಲ್ಲದೆ ಯಾವ ಯಾವ ಧಾರಾವಾಹಿಗಳಲ್ಲಿ ಹೆಚ್ಚು ಒಳನುಡಿಗಳನ್ನು ಬಳಸಲಾಗಿದೆ ಮತ್ತು ಹೆಚ್ಚು ಬಳಸದೆ ಇರಲು ಕಾರಣಗಳೇನು ಎಂಬುದನ್ನು ಕುರಿತು ಚರ್ಚಿಸಲಾಗಿದೆ. ಬದಲಾಗುತ್ತಿರುವ ಸಂದರ್ಭದಲ್ಲಿ ಹೇಗೆ ಪರಿಣಾಮಕಾರಿಯಾಗಿದೆ ಎಂಬುದನ್ನು ಆಧಾರಸಹಿತ ಹಾಗೂ ವಿವಿಧ ವಿದ್ವಾಂಸರ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಕನ್ನಡ ಭಾಷೆಯ ಉಳಿವಿಗಾಗಿ ಹಾಗೂ ಭಾಷೆಯ ಸ್ವರೂಪ ಹೇಗಿರಬೇಕು ಎಂಬುದನ್ನು ಚರ್ಚಿಸಿದ ಹಿನ್ನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ. ಈ ಅಧ್ಯಾಯದಲ್ಲಿ ಹೆಚ್ಚಾಗಿ ಪ್ರಾದೇಶಿಕ ಧಾರಾವಾಹಿಗಳಲ್ಲಿ ಹೆಚ್ಚಾಗಿ ಒಳನುಡಿಗಳನ್ನು ಬಳಸಲಾಗಿದೆ. ಹಾಸ್ಯ ಧಾರಾವಾಹಿಗಳಲ್ಲಿ ಒಳನುಡಿಗಳ ಬಳಕೆಯು ಭಿನ್ನ ಮಾದರಿಯದ್ದಾಗಿದೆ. ಕಾರಣ ಹಾಸ್ಯ ಅಥವಾ ನಗುವನ್ನೇ ಕೇಂದ್ರೀಕರಿಸಿರುವುದರಿಂದ ಒಂದು ಪರಿಸರದ ಇಲ್ಲ ಪ್ರಾದೇಶಿಕತೆಯ ಒಳನುಡಿಗಳು ಅವಮಾನಿಸುವ ರೀತಿಯಲ್ಲಿ ಬಳಕೆಯಾಗುತ್ತಿವೆ. ಅಂದರೆ ನಗೆಚಟಾಕಿಗೆ ಸೀಮಿತವಾಗಿವೆ. ಇದರಿಂದ ಒಳನುಡಿಗಳನ್ನು ಗೇಲಿ ಮಾಡಿದಂತಾಗುತ್ತದೆ. ಈ ಎಚ್ಚರಿಕೆ ಇಲ್ಲದೆ 'ಹೇಗೆಂದರೆ ಹಾಗೆ ಒಳನುಡಿಗಳನ್ನು ಬಳಸಿಕೊಳ್ಳುತ್ತಿರು

ವುದು ವಿಷಾದದ ಸಂಗತಿಯಾಗಿದೆ. ಕೌಟುಂಬಿಕ ಧಾರಾವಾಹಿಗಳು ಮಧ್ಯಮವರ್ಗ ಹಾಗೂ ಕೆಳವರ್ಗದ ಪಾತ್ರಗಳಿಗೆ ಸೀಮಿತವಾಗಿರು ವುದನ್ನು ಗುರುತಿಸಿಕೊಳ್ಳಲಾಗಿದೆ. ಅಲ್ಲದೆ ಕೆಳವರ್ಗದ ಕುಟುಂಬ ಕಾಲಕ್ರಮೇಣ ಮೇಲ್‌ಸ್ತರಕ್ಕೆ ಹೋದಾಗ ಒಳನುಡಿಗಳನ್ನು ಕಳಚಿಕೊಳ್ಳುವುದನ್ನು ಗುರುತಿಸಿಕೊಳ್ಳಲಾಗಿದೆ. ಚಾರಿತ್ರಿಕ ಧಾರಾವಾಹಿ ಗಳಲ್ಲಿ ಸಂಪೂರ್ಣವಾಗಿ ಸಂಸ್ಕೃತಭೂಯಿಷ್ಠವಾದ ಕನ್ನಡವನ್ನೇ ಹೆಚ್ಚಾಗಿ ಬಳಸುತ್ತಿರುವುದ ರಿಂದ ಕೆಲವೇ ಕೆಲವು ಕೆಳವರ್ಗದ ಪಾತ್ರಗಳು ಒಳನುಡಿಗಳನ್ನು ಬಳಸುವುದನ್ನು ಉದಾಹರಣೆ ಸಹಿತ ವಿವರಿಸಿಕೊಳ್ಳಲಾಗಿದೆ.

ಅಡಿಟಿಪ್ಪಣಿಗಳು

೧. ಮಹಾದೇವಯ್ಯ ಸಿ., ೨೦೦೬, **ಕನ್ನಡ ಬಳಕೆ ಸಾಮಾಜಿಕ ವಿನ್ಯಾಸ,** ಪು.೧೦೩.

೨. ಅದೇ, ಪು.೧೦೪.

೩. ಅದೇ, ಪು.೧೦೫.

೪. ಅದೇ, ಪು.೧೦೫.

೫. ಅದೇ, ಪು.೧೦೫.

೬. ಅದೇ, ಪು.x(ಒಡಲ ನುಡಿಯಿಂದ).

ಅಧ್ಯಾಯ ನಾಲ್ಕು

ಧಾರಾವಾಹಿಗಳು: ಸಾಮಾಜಿಕ ವಿನ್ಯಾಸ

೪.೧. ಸಂಬೋಧನಾ ರೂಪಗಳು

೪.೨. ವ್ಯಕ್ತಿನಾಮಗಳು

೪.೩. ಬೈಗುಳಗಳ ಬಳಕೆ

೪.೪. ಗಾದೆ

೪.೫. ಧಾರಾವಾಹಿ ಶೀರ್ಷಿಕೆಗಳು

ಅಧ್ಯಾಯ ನಾಲ್ಕು

ಧಾರಾವಾಹಿಗಳು: ಸಾಮಾಜಿಕ ವಿನ್ಯಾಸ

"ಭಾಷೆ ಭಾವನೆಗಳ ಅಭಿವ್ಯಕ್ತಿ ಮಾಧ್ಯಮ. ಮಾನವನು ತನ್ನ ಮನದಲ್ಲಿ ಮೂಡುವ ಬಗೆಬಗೆಯ ಭಾವನೆಗಳನ್ನು ಅಭಿವ್ಯಕ್ತಿಗೊಳಿಸಲು ಇರುವ ಸಾಧನ. ಮನುಷ್ಯ ಇತರ ಎಲ್ಲ ಪ್ರಾಣಿಗಳಿಗಿಂತ ಭಿನ್ನವಾಗಿರುವುದು ಕೂಡ ಈ ಹಿನ್ನೆಲೆಯಿಂದಲೇ, ಅಂದರೆ ಭಾಷೆ ಸಂಪೂರ್ಣವಾಗಿ ಮಾನವಾಲಂಬಿ. ಅದಕ್ಕೆ ವ್ಯಕ್ತಿತ್ವ ಸಿದ್ಧಿಸುವುದು ಕೂಡ ಮಾನವರಿಂದಲೇ ಎಂದಾಯಿತು. ವ್ಯಕ್ತಿಗಳಿಂದಲೇ ಭಾಷೆಯೆಂದು ಪರಿಗಣಿಸುವುದಾದರೆ ಸಮಾಜ ಮತ್ತು ಭಾಷೆಯ ಕುರಿತ ಚರ್ಚೆಯನ್ನು ಕೈಗೆತ್ತಿಕೊಳ್ಳಬಹುದು. ಏಕೆಂದರೆ ಸಮಾಜ ಮತ್ತು ಭಾಷೆ ಬೇರೆ ಬೇರೆಯಲ್ಲ. ಇವರೆಡೂ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಭಾಷೆ ಒಂದು ಸಮಾಜದ ಸಂಸ್ಕೃತಿಯ ಅಂಗವಲ್ಲದೆ ಸಮಾಜದ ಎಲ್ಲಾ ಜೀವಂತ ಚಟುವಟಿಕೆಯ ಮೂಲವಾಗಿರುವುದರಿಂದ ಸಮಾಜದಿಂದ ಭಾಷೆಯನ್ನು ಭಾಷೆಯಿಂದ ಸಮಾಜವನ್ನು ಬೇರ್ಪಡಿಸಲಾಗದು. ಅಲ್ಲದೆ ವ್ಯಕ್ತಿಯ ದೈನಂದಿನ ವ್ಯವಹಾರಗಳೆಲ್ಲವೂ ಅವರು ವಾಸಿಸುವ ಭಾಷಿಕ ಸಮುದಾಯದ ಒಪ್ಪಿತ ನಡಾವಳಿಗಳ ಪ್ರತಿರೂಪವಾಗಿರುವುದರಿಂದ ಭಾಷೆಯನ್ನು ಸಮಾಜದ ಕೈಗನ್ನಡಿ ಎನ್ನಬಹುದು. ಹಾಗಾದರೆ ಸಾಮಾಜಿಕ ರಚನೆಯನ್ನು ಭಾಷೆಯ ಆಧಾರದ ಮೇಲೆಯೂ ಅರ್ಥ ಮಾಡಿಕೊಳ್ಳಬಹುದು ಎಂದಾಯಿತು."[೧]

"ಒಂದು ಸಮುದಾಯದಲ್ಲಿ ಒಂದೇ ಭಾಷೆಯನ್ನಾಡುವ ಜನರಿದ್ದರೂ ಎಲ್ಲಾ ವ್ಯಕ್ತಿಗಳು ಈ ಭಾಷೆಯನ್ನು ಒಂದೇ ರೀತಿಯಲ್ಲಿ ಬಳಸುವುದಿಲ್ಲ. ಅಷ್ಟೇ ಏಕೆ ಒಬ್ಬ ವ್ಯಕ್ತಿ ವಿವಿಧ ಸಾಮಾಜಿಕ ಸಂದರ್ಭಗಳಲ್ಲಿ ಒಂದು ಭಾಷೆಯನ್ನು ಒಂದೇ ರೀತಿಯಾಗಿ ಬಳಸಲಾರ. ಅಂದರೆ ಸಮಾಜದಲ್ಲಿ ಸಮುದಾಯಗಳು ಭಿನ್ನವಾದಂತೆಲ್ಲ ಅವು ಬಳಸುವ ಭಾಷೆಯೂ ಭಿನ್ನವಾಗುತ್ತಾ ಹೋಗುತ್ತದೆ. ಕ್ರಮೇಣ ಈ ಭಿನ್ನತೆಯು ಆಯಾ ಸಮಾಜದ ಭಾಷಿಕ ಚಹರೆಯಾಗಿ ರೂಪುಗೊಳ್ಳುತ್ತದೆ. ಯಾರೇ ಭಾಷೆಯನ್ನು ಬಳಸುತ್ತಿರಲಿ ಅವರ ಭಾಷೆಯನ್ನು ಗಮನಿಸಿ ಕೆಲವು ಚಹರೆಗಳನ್ನು ಗೊತ್ತು ಮಾಡುವುದು ಸಾಧ್ಯ. ವ್ಯಕ್ತಿಯು ಗಂಡಸೋ, ಹೆಂಗಸೋ,

ಯಾವ ಭೌಗೋಳಿಕ ಪ್ರದೇಶಕ್ಕೆ ಸೇರಿದವರು ಸಾಮಾಜಿಕವಾಗಿ ಅವರ ಸ್ಥಾನಮಾನವೇನು? ಈಗ ಮಾತನಾಡುತ್ತಿರುವ ಸಂದರ್ಭದ ಸ್ವರೂಪವೇನು? ಇವೇ ಮೊದಲಾದ ಅಂಶಗಳು ಅವರ ಮಾತನ್ನು ಕೇಳುವುದರಿಂದಲೇ ತಿಳಿಯುತ್ತದೆ. ಇಷ್ಟೇ ಅಲ್ಲದೆ ಅವರ ಮಾತಿನಿಂದ ಅವರು ಯಾರು ಎಂಬುದನ್ನು ತಿಳಿಯಲು ಸಾಧ್ಯ. ಅಂದರೆ ಪ್ರತಿ ವ್ಯಕ್ತಿಗೂ ಸಮುದಾಯಕ್ಕೂ ಪ್ರದೇಶಕ್ಕೂ ವಿಶಿಷ್ಟವಾದ ಅನ್ಯರಲ್ಲಿ ಇಲ್ಲದ ಕೆಲವು ಭಾಷಾಲಕ್ಷಣಗಳು ಅವರ ಭಾಷಾಬಳಕೆಯಲ್ಲಿ ಕಾಣಸಿಗುತ್ತವೆ. ಆ ಲಕ್ಷಣಗಳನ್ನು ಗುರುತಿಸಿ ಮಾತನಾಡುವ ವ್ಯಕ್ತಿ ಇಂಥವರೆ, ಇಂತಹ ಸಮುದಾಯದವರೇ, ಈ ಪ್ರದೇಶಕ್ಕೆ ಸೇರಿದವರೇ ಎಂದು ಗುರುತಿಸುತ್ತೇವೆ."[೨]

"ಪ್ರಸ್ತುತ ಅಧ್ಯಯನದಲ್ಲಿ ವ್ಯಕ್ತಿಯ ಭಾಷೆಯಿಂದಲೇ ಅವನ ಸಾಮಾಜಿಕತೆಯನ್ನು ಗುರುತಿಸಬಹುದು. ವ್ಯಕ್ತಿಯ ಭಾಷೆ ಸಾಮಾಜಿಕ ಚಹರೆಯಾಗಿ ಕಾರ್ಯ ನಿರ್ವಹಿಸುತ್ತದೆ ಎಂಬುದನ್ನು ಲಿಂಗ, ಅಧಿಕಾರ, ಶಿಕ್ಷಣ, ವ್ಯಕ್ತಿನಾಮ, ಸಂಬೋಧನೆ ರೂಪಗಳು, ಬೈಗಳಗಳ ಬಳಕೆ, ಧಾರಾವಾಹಿ ಶೀರ್ಷಿಕೆಗಳು ಇತರೆ ವಿವಿಧ ಸಾಮಾಜಿಕ, ಭಿನ್ನಾಂಶಗಳಲ್ಲಿ ಗುರುತಿಸಲಾಗಿದ್ದು, ವಿಶ್ಲೇಷಣೆ ಮತ್ತು ನಿದರ್ಶನಕ್ಕಾಗಿ ಧಾರಾವಾಹಿಗಳಿಂದ ಉದಾಹರಣೆಗಳನ್ನು ನೀಡುವ ಮೂಲಕ ಚರ್ಚಿಸಲಾಗಿದೆ."[೩] ಕಾರಣ ಧಾರಾವಾಹಿಗಳು ಸಾಮಾಜಿಕ ಸಂದರ್ಭವನ್ನು ಅಥವಾ ಸಾಮಾಜಿಕತೆಯನ್ನು ನಿರ್ಮಾಣ ಮಾಡುವಲ್ಲಿ ಸಾರ್ವತ್ರಿಕತೆಯನ್ನು ಒಳಗೊಂಡಿರುತ್ತವೆ.

ಧಾರಾವಾಹಿಗಳಲ್ಲಿರುವ ಸಮಾಜವು ಭಿನ್ನ ಭಿನ್ನ ಮಾದರಿಯ ಜೀವನಕ್ರಮಗಳನ್ನು ರೂಪಿಸಿಕೊಂಡಿದ್ದಾರೆ. ಸಮಾಜದಲ್ಲಿ ಜರುಗುವ ಘಟನೆಯನ್ನು ಆಧರಿಸಿ ಧಾರಾವಾಹಿಗಳಲ್ಲಿ ಕ್ಷಣಮಾತ್ರದಲ್ಲಿ ಚಿತ್ರೀಕರಿಸಿ ತೋರಿಸುತ್ತಾರೆ. ಇಂದಿನ ದಿನಗಳಲ್ಲಿ ಟಿ.ವಿ. ಪ್ರಬಲ ಮಾಧ್ಯಮ ವಾಗಿರುವುದರಿಂದ ಇಲ್ಲಿ ಅನೇಕ ಭಾಷಿಕ ವ್ಯಾಪ್ತಿಗಳನ್ನು ಭಿನ್ನ ಭಿನ್ನ ಮಾದರಿಯಲ್ಲಿ ಬಳಕೆ ಮಾಡುತ್ತಿರುವುದನ್ನು ಉದಾಹರಣೆ ಸಹಿತ ವಿಶ್ಲೇಷಿಸಲಾಗಿದೆ.

೪.೧. ಸಂಬೋಧನಾ ರೂಪಗಳು

'ಭಾಷೆಯಲ್ಲಿ ಸಂಬೋಧನಾ ರೂಪಗಳಿಗೆ ಭಾಷಿಕ ಮೌಲ್ಯಗಳನ್ನು ಹೊರತುಪಡಿಸಿ ವಿಶೇಷವಾದ ಸಾಮಾಜಿಕ ಸಾಂಸ್ಕೃತಿಕ ಮೌಲ್ಯವಿದೆ. ಸಾಮಾಜಿಕ ಸಂವಹನದ ಸಂದರ್ಭದಲ್ಲಿ ಸಂಬೋಧನಾ ರೂಪಗಳು ವ್ಯಕ್ತಿಗಳನ್ನು ಸಂಬೋಧಿಸುವ ಅಂಶಗಳಷ್ಟೇ ಆಗಿರದೇ ಬಳಸುವ ವ್ಯಕ್ತಿಗಳ ಮತ್ತು ಬಳಸಲ್ಪಡುವ ವ್ಯಕ್ತಿಗಳ ನಡುವಿನ ಸ್ಥಾನಮಾನ ಮತ್ತು ಸಂಬಂಧಗಳು ತಿಳಿಸುತ್ತವೆ. ಅಲ್ಲದೇ ಬಳಕೆಯಾಗುವ ಸಂಬೋಧನಾ ರೂಪಗಳನ್ನು ಸಮಾಜ ಹೇಗೆ ನಿಯಂತ್ರಿಸುತ್ತದೆ ಮತ್ತು ನಿರ್ದೇಶಿಸುತ್ತದೆ ಎಂಬುದೂ ತಿಳಿಯುತ್ತದೆ. ಆದುದರಿಂದಲೇ ಭಾಷೆಯಲ್ಲಿನ ಸಂಬೋಧನಾ ರೂಪಗಳು ಸಾಮಾಜಿಕ ರಚನೆಯನ್ನು ಪ್ರತಿನಿಧಿಸುವ ಅಂಶಗಳಾಗಿರುತ್ತವೆ. ಸಾಮಾಜಿಕ-ಸ್ಥಿರವಾದ ಲಿಂಗ, ವರ್ಗಗಳಂತಹ ಅಂಶಗಳಲ್ಲಿ ಮತ್ತು ಚಲನೆಯುಳ್ಳ ಸಾಮಾಜಿಕ

ಅಂಶಗಳಾದ ವಯಸ್ಸು, ಸಾಮಾಜಿಕ ಸ್ಥಾನಮಾನದಂತಹ ಅಂಶಗಳಲ್ಲಿ ಭಿನ್ನವಾಗಿರುತ್ತವೆ ಎಂಬುದನ್ನು ಆಯ್ದ ಧಾರಾವಾಹಿಗಳಲ್ಲಿನ ನಿದರ್ಶನಗಳೊಂದಿಗೆ ಪ್ರಸ್ತುತ ಅಧ್ಯಯನದಲ್ಲಿ ಚರ್ಚಿಸಲಾಗಿದೆ.'[೪]

ಸಮಾಜದಲ್ಲಿನ ವರ್ಗಶ್ರೇಣೀಕರಣದಲ್ಲಿ ಸಾಮಾನ್ಯವಾಗಿ ಕೆಳವರ್ಗದವರು ಮೇಲ್ವರ್ಗದವರನ್ನು ಸಂಬೋಧಿಸುವಾಗ ಗೌರವಸೂಚಕ ಮತ್ತು ಬಹುವಚನ ಪ್ರತ್ಯಯವನ್ನು ಬಳಸಿದರೆ, ಮೇಲ್ವರ್ಗದವರು ಏಕವಚನವನ್ನು ಬಳಸುತ್ತಾರೆ. ಅಲ್ಲದೇ ಗಂಡನನ್ನು ಏಕವಚನದಿಂದ ಸಂಬೋಧಿಸುವ ರೂಪಗಳು ಬಳಕೆಯಾಗುತ್ತಿವೆ.

ದಿನಾಂಕ ೧೪.೩.೧೩ರಂದು 'ಲಕ್ಷ್ಮೀ ಭಾರಮ್ಮ' ಧಾರಾವಾಹಿಯಲ್ಲಿ ಕೈಲಾಸ್‌ನನ್ನು ಕಲ್ಪನಾ ಏಕವಚನದಲ್ಲಿ ಸಂಬೋಧಿಸುವುದನ್ನು ಗುರುತಿಸಿಕೊಳ್ಳಲಾಗಿದೆ. ಕೈಲಾಸ್ 'ಸದ್ಯಕ್ಕೆ ನೀನಗೇನು ಗೊತ್ತಾಗೋದು ಬ್ಯಾಡ ಟೈಮ್ ಬಂದಾಗ ನಾನೇ ಎಲ್ಲಾ ನಿನಗೆ ಹೇಳ್ತೀನಿ' ಈ ಮಾತನ್ನು ಕಲ್ಪನಾ ತನ್ನ ಗಂಡನಿಗೆ ಹೇಳುತ್ತಾಳೆ(ಸಂದರ್ಭ ತನ್ನ ಮಗಳು ಶ್ರುತಿಯನ್ನು ಚಂದುಗೆ ಕೊಟ್ಟು ಮದುವೆ ಮಾಡುವ ವಿಷಯವನ್ನು ತನ್ನ ಅಕ್ಕ-ತಂಗಿಯರ ಜೊತೆ ಮಾತನಾಡುತ್ತಿದ್ದಾಗ ಕೈಲಾಸ್ ಅವರಿದ್ದಲ್ಲಿಗೆ ಬರುತ್ತಾನೆ. ಇವರಾಡುವ ಮಾತುಗಳನ್ನು ಕೇಳಿಸಿಕೊಂಡ ನಂತರ ನನಗೂ ಒಂದು ಸ್ವಲ್ಪ ಹೇಳಿದ್ರೆ ನಾನು ನಗ್ತೀನಿ ಎನ್ನುತ್ತಾನೆ). ಈ ಮೇಲಿನ ಸಂಬೋಧನಾ ರೂಪವು ಮೇಲ್ವರ್ಗಕ್ಕೆ ಸೇರಿದ ಸಮಾನ ವಯಸ್ಸುಗಳ ಗಂಡ-ಹೆಂಡತಿಯರ ಸಂಬೋಧನೆಗಳು ಏಕವಚನದಿಂದ ಕೂಡಿರುವುದನ್ನು ಈ ಉದಾಹರಣೆ ಮೂಲಕ ಗುರುತಿಸಿಕೊಳ್ಳಲಾಗಿದೆ. ಆದ್ರೆ ಹೊಸ ತಲೆಮಾರಿನವರು ಮದುವೆಯಾದ ಗಂಡ ಹೆಂಡತಿಯರಾದ್ರೆ ಸಮಸ್ಯೆ ಅಂತ ಅನ್ನಿಸುವುದೇ ಇಲ್ಲ. ಆದ್ರೆ ಮಧ್ಯ ವಯಸ್ಕರಾಗಿರುವ ಕೈಲಾಸ್-ಕಲ್ಪನಾರ ಸಂಬೋಧನೆಗಳು ಏಕವಚನ ರೂಪವನ್ನು ಬಳಸುತ್ತಿರುವುದು ವೈರುಧ್ಯದಿಂದ ಕೂಡಿದೆ ಎಂದರೆ ತಪ್ಪಾಗಲಾರದು. ಶ್ರೀಮಂತ ಕುಟುಂಬಗಳಲ್ಲಿ ಗಂಡಿನ ಸ್ವಾತಂತ್ರ್ಯ ಹರಣವಾಗಿರುವುದನ್ನು ಈ ಉದಾಹರಣೆ ನಿರೂಪಿಸುತ್ತದೆ. ವಾಸ್ತವದಲ್ಲಿ ಗಂಡನನ್ನು ರೀ ಎಂದು ಸಂಬೋಧಿಸುವುದು ರೂಢಿ. ಕಾರಣ ಇವರಿಬ್ಬರಿಗೆ ಮದುವೆ ವಯಸ್ಸಿಗೆ ಬಂದಿರುವ ಹೆಣ್ಣುಮಗಳು ಇದ್ದಾಗ್ಯೂ ಕೂಡಾ ಇಂತಹ ಅಹಂಕಾರದಿಂದ ಕೂಡಿದ ಸಂಬೋಧನೆಗಳನ್ನು ಕಂಡುಕೊಳ್ಳಲಾಗಿದೆ. ಅಲ್ಲದೇ ಮೇಲ್ವರ್ಗದ ಸ್ತ್ರೀಯನ್ನು ಮಧ್ಯಮವರ್ಗದ ಪುರುಷನು ಮದುವೆಯಾದರೆ ಅಗೌರವದಿಂದ ಸಂಬೋಧಿಸುವುದನ್ನು ಈ ಉದಾಹರಣೆ ನಿರೂಪಿಸುತ್ತದೆ.

ಮಾಯಾಮೃಗ ಧಾರಾವಾಹಿಯಲ್ಲಿ

ನರಸಿಂಹಶಾಸ್ತ್ರಿಗಳು ತಮ್ಮ ಮನೆಗೆ ಬಂದು ಅತಿಥಿಗಳನ್ನು ಗೌರವ ಸಂಬೋಧನೆ ಹಾಗೂ ಬಹುವಚನಗಳೊಂದಿಗೆ ಉಪಚರಿಸುವುದನ್ನು ಗುರುತಿಸಬಹುದು. ಸಾಮಾಜಿಕವಾಗಿ,

ಮಧ್ಯಮವರ್ಗಕ್ಕೆ ಸೇರಿದ ಕುಟುಂಬಗಳಲ್ಲಿ ಪರಸ್ಪರ ಗೌರವಿಸುವ ಪ್ರಕ್ರಿಯೆ ಇರುವುದನ್ನು ಈ ಧಾರಾವಾಹಿಯಲ್ಲಿ ಕಂಡುಕೊಳ್ಳಲಾಗಿದೆ. ಉದಾಹರಣೆಗೆ,

ನರಸಿಂಹ ಶಾಸ್ತ್ರಿಗಳು: ಶಿವರಾಮಯ್ಯನವರು ಬಹಳ ದೂರ ಬಂದ್ ಬಿಟ್ಟಿದೀರಿ ತಾವು.

ಶಿವರಾಮಯ್ಯನವರು ಮತ್ತು ಸಂಪತ್ತಪ್ಪನವರು ಶಾಸ್ತ್ರಿಗಳನ್ನು ಕಂಡು ನಮಸ್ಕಾರ ಮಾಡುತ್ತಾರೆ. (ಇದಕ್ಕೆ ಪ್ರತಿಯಾಗಿ ಈ ಮೇಲ್ಕಂಡಂತೆ ಮಾತನ್ನು ಆರಂಭಿಸುತ್ತಾರೆ).

ಸಂಪತ್ತಪ್ಪ: ನನ್ನ ಹೆಸರು ಸಂಪತ್ ಅಂತ. ನನ್ನ ಮಗನಿಗೂ ಇವ್ರು ಮಗಳಿಗೂ ಮದುವೆ ನಿಶ್ಚಯ ಆಗಿದೆ.

ನರಸಿಂಹಶಾಸ್ತ್ರಿಗಳು: ಬಹಳ ಸಂತೋಷ. ಏನು? ಮದುವೆ ನಿಶ್ಚಯ ಮಾಡ್ಬೇಕಾಗಿತ್ತಾ.

ಶಿವರಾಮಯ್ಯ: ಹೌದು ಶಾಸ್ತ್ರೀಗಳೇ(ಎನ್ನುತ್ತಾರೆ). ನೀವಂತೂ ನಮ್ಮ ಕುಲಪುರೋಹಿತರು. ನಿಮ್ಮನ್ನು ಬಿಟ್ಟು ಯಾವ ಕಾರ್ಯಾನು ಮಾಡೋದಿಲ್ಲ. ಆದ್ರೆ ಈಗ ಒಂದು ಸಣ್ಣ ಧರ್ಮಸೂಕ್ಷ್ಮ ಸಮಸ್ಯೆ ಬಂದಿದೆ. ತಾವೇ ನಿಂತು ಬಗೆಹರಿಸಿಕೊಡಬೇಕು.

ನರಸಿಂಹಶಾಸ್ತ್ರಿಗಳು: ಧರ್ಮಸೂಕ್ಷ್ಮ ಸಮಸ್ಸೇನಾ.

ಸಂಪತ್ತಪ್ಪ: ನಮ್ಮ ಜಾತಿಗಳು ಒಂದೇ ಆದ್ರು, ನಮ್ಮ ಪಂಗಡ ಬೇರೆ-ಬೇರೆ, ನಮ್ಮದು ಘಟ್ಟದ ಕೆಳಗಿನ ಪರಂಪರೆ, ಇವ್ರುದು ಈ ಕಡೇದು.

ನರಸಿಂಹಶಾಸ್ತ್ರಿಗಳು: ಹೂಂ, ಅರ್ಥವಾಯ್ತು. ನಿಮ್ಮಿಬ್ಬರ ವಿಚಾರಗಳು ಸಾಮ್ಯ ಇದ್ರೂ, ಆಚಾರ, ಸಂಪ್ರದಾಯದಲ್ಲಿ ವ್ಯತ್ಯಾಸ ಇದ್ದೆ ಇರುತ್ತೆ.

ಶಿವರಾಮಯ್ಯ: ಈಗ ಬಂದಿರೋದು ಅದೇ ಸಮಸ್ಯೆ. ಹೆಣ್ಣಿನ ಸಂಪ್ರದಾಯದಂತೆ ಮಾಡ್ಬೇಕು ಅಂತ ನಾವು, ಗಂಡಿನ ಸಂಪ್ರದಾಯದಂತೆ ಮಾಡ್ಬೇಕು ಅಂತ ಅವ್ರು. ಈಗ ಹೆಣ್ಣಂತೆ ಮಾಡೋದಾ, ಇಲ್ಲಾ ಗಂಡಿನಂತೆ ಮಾಡೋದಾ ತಾವೇ ಬಗೆಹರಿಸಿ ಕೊಡಬೇಕು.

ನರಸಿಂಹ ಶಾಸ್ತ್ರಿಗಳು: ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳೋದಕ್ಕೆ ಮುಂಚೆ ನಾನು ಒಂದು ವಿಷಯವನ್ನು ಹೇಳ್ಬಿಡ್ತೀನಿ. ನಮ್ಮ ಶಾಸ್ತ್ರದ ಪ್ರಕಾರ ಮದುವೆ ಅನ್ನೋದು ಕೇವಲ ಗಂಡು-ಹೆಣ್ಣುಗಳ ಮಿಲನವಲ್ಲ. ಎರಡು ಕುಟುಂಬಗಳ ಮಿಲನ. ನಿಮ್ಮಿಬ್ಬರ ಆಚಾರ ಸಂಪ್ರದಾಯಗಳು ಬೇರೆ-ಬೇರೆ ಅನ್ನೋದು, ಆದ್ರೆ ನಿಮ್ಮ ಎರಡು ಕುಟುಂಬಗಳ ನಡುವೆ ಸಾಮರಸ್ಯ ಹೇಗೆ ಸಾಧ್ಯ, ಹಾಗಾಗಿ ನನ್ನ ಪ್ರಕಾರ ಈ ನಡುವೆ ಶಾಸ್ತ್ರಸಮ್ಮತವಲ್ಲ.

ಶಿವರಾಮಯ್ಯ: ಶಾಸ್ತ್ರಿಗಳೇ ನೀವು ಹೇಳಿದ್ದೆಲ್ಲ ಸರಿಯಾಗಿದೆ. ಆದ್ರೆ ಹೆಣ್ಣಿನ ತಂದೆಯಾಗಿ ನಾನು ಈ ಮದುವೆ ಮಾಡ್ದೆ ಹೋದ್ರೆ ನನ್ನ ಮರ್ಯಾದೆ ಬೀದಿ ಪಾಲಾಗುತ್ತೆ.

ನರಸಿಂಹಶಾಸ್ತ್ರಿಗಳು: ಅಂಥಾದ್ದೇನಾಗಿದೆ.

ಶಿವರಾಮಯ್ಯ: ನಮ್ಮ ಹುಡುಗ್ರು ಮದುವೆಗೆ ಮುಂಚೇನೆ ಸಂಸಾರ ಹೂಡಿಬಿಟ್ಟಿದ್ದಾರೆ. ಈಗ ನನ್ನ ಮಗಳಿಗೆ ಮೂರು ತಿಂಗಳು.

ನರಸಿಂಹಶಾಸ್ತ್ರಿಗಳು: ಮದುವೆಯಲ್ಲಿ ಕನ್ಯಾದಾನ ಬಹಳ ಮುಖ್ಯ. ಇಲ್ಲಿ ಕನ್ಯೆ ಕನ್ಯೆಯಾಗಿಲ್ಲ ಅಂದ್ಮೇಲೆ ಕನ್ಯಾದಾನ ಎಲ್ಲಿಂದ ಬಂತು. ಈ ರೀತಿ ಯೋಚನೆ ಮಾಡಿದ್ರು ಕೂಡ ಈ ಮದುವೆ ಶಾಸ್ತ್ರಸಮ್ಮತವಲ್ಲ.

ಸಂಪತ್ತಪ್ಪ: ಹಾಗಾದ್ರೆ ಮುಂದೆ ನಾವೇನು ಮಾಡ್ಬೇಕು ಅಂತ ತಾವೇ ಹೇಳ್ಬೇಕು.

ಈ ಮೇಲಿನ ಸಂಭಾಷಣೆಯು ಗೌರವ ಮತ್ತು ಬಹುವಚನ ಪ್ರತ್ಯಯಗಳಿಂದ ಕೂಡಿವೆ. ಈ ರೂಪಗಳು ಮಧ್ಯಮವರ್ಗಕ್ಕೆ ಸೀಮಿತವಾಗಿವೆ. ಇಲ್ಲಿ ವಯಸ್ಸಿನಲ್ಲಿ ಸಮಾನರಾಗಿದ್ದರಿಂದ ರೂಢಿಯಲ್ಲಿರುವ ರೂಪಗಳಿಗೆ ವ್ಯತ್ಯಾಸಗಳೇನೂ ಆಗದೇ ಇರುವುದನ್ನು ಈ ಉದಾಹರಣೆಗಳು ನಿರೂಪಿಸುತ್ತವೆ.

ಕಮಲ: ನಿಮ್ಮ ತೀರ್ಮಾನ ನನಗೇನೋ ಸರಿ ಅನ್ನಿಸ್ತಿಲ್ಲ ರೀ.

ನರಸಿಂಹ ಶಾಸ್ತ್ರಿಗಳು: ಯಾಕೆ?

ಕಮಲ: ಅಲ್ಲ ಆ ಹುಡ್ಗ-ಹುಡ್ಗಿ ಅಷ್ಟೊಂದು ಮುಂದುವರೆದಿರುವಾಗ ಮದುವೆ ಮಾಡಿಸ್ದೆ ಇರೋದು ಸರೀನಾ.

ನರಸಿಂಹಶಾಸ್ತ್ರಿಗಳು: ಮದುವೆ ಮಾಡ್ಬೇಡಿ ಅಂತ ನಾನು ಹೇಳಿಲ್ವಲ್ಲಾ. ಧರ್ಮಶಾಸ್ತ್ರದ ಪ್ರಕಾರ ಈ ಮದುವೆ ಬೇಡಂದೆ. ಅದೇನೋ ರಿಜಿಸ್ಟ್ರು ಮಣ್ಣು ಮಸಿ ಅಂತ ಇದೆಯಲ್ಲಾ ಅದರ ಪ್ರಕಾರ ಮಾಡಿಕೊಂಡು ಹೋಗ್ಲೀಂತ ಹೇಳಿದ್ನಲ್ಲಾ.

ಕಮಲ: ಆಗ್ಲೂ ನಿಮ್ಗೆ ಅಲ್ವಾ ನಷ್ಟ.

ನರಸಿಂಹಶಾಸ್ತ್ರಿಗಳು: ಹ್ಯಾಗೆ

ಕಮಲ: ನೀವೇ ಮದುವೆ ಮಾಡ್ಸಿದ್ರೆ ಅಷ್ಟೊ ಇಷ್ಟೊ ದಕ್ಷಿಣೇನಾದ್ರು ಸಿಗ್ತಾ ಇತ್ತು. ಸಂಸಾರಕ್ಕೆ ಸಹಾಯ ಆಗ್ತಾ ಇತ್ತು. ಈಗ ಅದಕ್ಕೆ ಕೋತಾ ಆಯ್ತಲ್ಲ.

ಸಾಮಾಜಿಕ ಸ್ತರವಿನ್ಯಾಸದಲ್ಲಿ ಸ್ತ್ರೀ-ಪುರುಷ ಸ್ಥಾನಮಾನಗಳನ್ನು ಮತ್ತು ಸಾಮಾಜಿಕ ತಾರತಮ್ಯಗಳನ್ನು ಸೂಚಿಸುವ ಅನೇಕ ಭಾಷಿಕ ಅಂಶಗಳಿವೆ. ಭಾಷೆಯಲ್ಲಿ ವರ್ಗಭಿನ್ನತೆ ಸೂಚಿಸಲಿರುವ ಸ್ಥಿರಲಕ್ಷಣಗಳಂತೆ ಲಿಂಗಭಿನ್ನತೆಯನ್ನು ಸೂಚಿಸುವ ಸ್ಥಿರಲಕ್ಷಣಗಳು ಇವೆ. ಸಮಾಜದಲ್ಲಿ ಗಂಡು ಮೇಲು, ಹೆಣ್ಣು ದ್ವಿತೀಯ ಎಂದು ಹೇಳುತ್ತಿದ್ದಾಗಲೂ ಕೂಡ ಎಲ್ಲ

ಗಂಡಸರು ಮೇಲಾ? ಎಲ್ಲಾ ಹೆಂಗಸರು ದ್ವಿತೀಯರೇ? ಎಂಬುದನ್ನು ಪ್ರಶ್ನಿಕೊಂಡಾಗ ವರ್ಗಾಧಾರಿತ ಮತ್ತು ಶ್ರೇಣಿಯಾಧಾರಿತ ಈ ಸಮಾಜದಲ್ಲಿ ಸಿಗುವ ಉತ್ತರ ಭಿನ್ನವಾದುದಾಗಿದೆ. ಅಧಿಕಾರ, ಅಂತಸ್ತು, ವರ್ಗ ಇತರ ಅಂಶಗಳ ಕಾರಣಕ್ಕಾಗಿ ಉನ್ನತ ಸ್ಥಾನದಲ್ಲಿರುವ ಮೇಲ್ವರ್ಗದ ಗಂಡು-ಹೆಣ್ಣುಗಳಿಗೆ ಸಿಗುವ ಗೌರವಾದರಗಳು, ಇವುಗಳಿಂದ ಪುರುಷ ವಂಚಿತನಾಗುತ್ತಿದ್ದಾನೆ ಎನಿಸುತ್ತದೆ. ಲಕ್ಷ್ಮಿ ಭಾರಮ್ಮ ಧಾರಾವಾಹಿಯಲ್ಲಿ ಕೈಲಾಸ್‌ನನ್ನು ಏಕವಚನ ಹಾಗೂ ಹೆಸರು ಹಿಡಿದು ಸಂಬೋಧಿಸುವುದು ವೈರುಧ್ಯದಿಂದ ಕೂಡಿದ್ದಾಗಿದೆ. ಅಲ್ಲದೆ ನಗರವಾಸಿಗಳಾಗಿದ್ದು ಮತ್ತು ಮೇಲ್ವರ್ಗಕ್ಕೆ ಸೇರಿದ ವಿದ್ಯಾವಂತ ಕುಟುಂಬದಲ್ಲಿ ಈ ಸಂಬೋಧನಾ ರೂಪಗಳ ಬಳಕೆಯು ನಿದರ್ಶನವೆನಿಸುತ್ತದೆ. ಅದೇ ಮಾಯಾಮೃಗ ಧಾರಾವಾಹಿಯಲ್ಲಿ ನರಸಿಂಹ ಶಾಸ್ತ್ರಿಗಳ ಕುಟುಂಬದಲ್ಲಿ ಗಂಡ-ಹೆಂಡತಿಯರ ನಡುವಿನ ಸಂಭಾಷಣೆಯಲ್ಲಿ ಗಂಡು-ಹೆಣ್ಣು ಎಂಬ ತಾರತಮ್ಯ ಇರುವುದರಿಂದ ನರಸಿಂಹ ಶಾಸ್ತ್ರಿಗಳು ಅವರ ಹೆಂಡತಿಯನ್ನು ಕಮಲ ಎಂದು ಹೆಸರು ಹಿಡಿದು ಕರೆಯುತ್ತಾನೆ. ಅದೇ ಕಮಲ ಏನೂಂದ್ರೆ, ರೀ, ಎಂದು ಸಂಬೋಧಿಸು ತ್ತಾಳೆ. ಇಲ್ಲಿ ಗಂಡು-ಹೆಣ್ಣಿನ ನಡುವೆ ತಾರತಮ್ಯದಿಂದ ಕೂಡಿದ ಸಂಬೋಧನೆಯನ್ನು ನೋಡಬಹುದು.

ಪ್ರತಿದಿನ ರಾತ್ರಿ ೯.೩೦ಕ್ಕೆ ಉದಯವಾಹಿನಿಯ ಮದರಂಗಿ ಧಾರಾವಾಹಿಯಲ್ಲಿ

ನಾಣಿ: ಶಶಿಗೆ ಕಾಲಿನ ಪೆಟ್ಟು ಮಾತ್ರ ಅಲ್ಲ ಎದೆ ಹತ್ತಿರವೂ ಒಳಗೆ ಪೆಟ್ಟಾಗಿದೆಯಂತೆ, ಅದು ಸ್ವಲ್ಪ ಡೇಂಜರ್.

ರಾಘಣ್ಣ: ಹೌದಾ, ಹಾಗಾದ್ರೆ ಶಶಿ ಮೊದಲ ಹಾಗೆ ವೇಷಾ ಹಾಕಾಲಿಕ್ಕಾಗಲ್ವಾ

ನಾಣಿ: ಇಲ್ಲ ಯಜಮಾನರ್ರೆ ಅಂವಾ ಪೂರ್ತಿ ಗುಣವಾಗುವವರೆಗೆ ಇನ್ನು ಯಾವ ವೇಷವು ಇಲ್ಲ. ಕುಣಿತವೂ ಇಲ್ಲ. ಇನ್ನು ಬೇರೆ ದಾರಿ ಇಲ್ಲ ಯಜಮಾನ್ರೇ. ತೋಟದಲ್ಲಿ ಬೆಳೆ ತೆಗಿಯೋ ಕೆಲ್ಸಾನೆ ಮಾಡ್ಬೇಕಾಗ್ತಾ ಉಂಟೂ ಏನೋ?

ರಾಘಣ್ಣ: ಯಂತ ಹೇಳ್ತೀಯಾ ನಾಣಿ. ನಮ್ಮಂತ ಕಲಾವಿದರೂ ಕಲಾಕ್ಷೇತ್ರದಲ್ಲಿ ಬೆಳೆ ತೆಗೀಬೇಕು. ಅದು ಬಿಟ್ಟು ತೋಟದಲ್ಲಿ ಕೆಲ್ಸಾ ಮಾಡುವುದಾ.

ನಾಣಿ: ಮತ್ತೆ ಯಂತ ಮಾಡುವುದು ಯಜಮಾನ್ರೆ, ಅವನ ಈ ಪರಿಸ್ಥಿತೀಲಿ ಆಟದಲ್ಲಿ ವೇಷಾ ಕಟ್ಟುದು ದೂರದ ಮಾತೆ! ಕೆಲಸದವ್ರತ್ರ ನಿಂತು ತೋಟದ ಕೆಲ್ಸ ಮಾಡಿಸ್ಲಿ ಬಿಡಿ. ನನಗೂ ಗೊತ್ತು, ಒಮ್ಮೆ ಮುಖಕ್ಕೆ ಬಣ್ಣ ಹಚ್ಚಿದ್ರೆ ಅದ್ರ ಸೆಳೆತ ಕೊನೇವರೆಗೂ ಬಿಡೋದಿಲ್ಲಂತ. ಛಂಡೆ(ಚಂಡೆ) ಸದ್ದು ಕೇಳಿದ ಕೂಡ್ಲೆ ಯಂತವನಿಗೂ ಕಾಲು ದಿಗಣ ಹತ್ತಲಿಕ್ಕೆ ತಯಾರಾಗ್ಬಿಟ್ತದೆ.

ಮೇಲ್ವರ್ಗದ ಪಾತ್ರಗಳು ಕೆಳವರ್ಗ ಮತ್ತು ಮೇಲ್ವರ್ಗದ ಏಕವಚನ ಮತ್ತು ಹೆಸರು ಹಿಡಿದು ಕರೆಯುವುದನ್ನು ಈ ನಿದರ್ಶನದ ಮೂಲಕ ಕಂಡುಕೊಳ್ಳಲಾಗಿದೆ. ರಾಘಣ್ಣನ ಆಪ್ತ

ಸಹಾಯಕ ರಾಘಣ್ಣನನ್ನು ಯಜಮಾನ್ರೆ ಎಂಬ ಸಂಬೋಧನಾ ಪ್ರತ್ಯಯಗಳನ್ನು ಬಳಸುವುದರಲ್ಲಿ ಭಾಷಿಕ ವ್ಯತ್ಯಾಸವನ್ನು ಕಾಣಬಹುದು. ನಾಣಿ ಮಧ್ಯಮವರ್ಗಕ್ಕೆ ಸೇರಿದ ರಾಘಣ್ಣನಿಗಿಂತಲೂ ಚಿಕ್ಕವನಾಗಿರುವುದರಿಂದ ಈ ಸಂಬೋಧನೆ ಪ್ರತ್ಯಯ ಬಳಕೆಯಾಯಿತು. ಇದು ಉದಯ ಟಿ.ವಿ.ಯಲ್ಲಿ ೧೦ನೇ ಎಪಿಸೋಡಲ್ಲಿ(ರಂಗು)ಬಳಕೆಯಾಗಿದೆ.

ದಿನಾಂಕ ೨.೦೫.೧೩ರಂದು ಉದಯ ಟಿ.ವಿ.ಯಲ್ಲಿ ಪ್ರಸಾರವಾದ ಜೋಕಾಲಿ ಧಾರಾವಾಹಿಯಲ್ಲಿ ಈ ಸಂಬೋಧನೆ ಬಳಕೆಯಾಯಿತು. ರಮೇಶ್ ದುಡ್ಡು ತೆಗೆದುಕೊಂಡು ಹೋಗಲು ಮನೆಗೆ ಬರುತ್ತಾನೆ. ಅರ್ಚನಾ ಗಂಡನನ್ನು ಊಟಕ್ಕೆ ಕರೆಯುತ್ತಾಳೆ(ಮಧ್ಯಮವರ್ಗ).

ಅರ್ಚನಾ: ನೀನು ಹೋಗು ಕೈಕಾಲು ತೊಳ್ಕೊಂಡು ಬಾ ಊಟಕ್ಕೆ ಬಡಿಸ್ತೀನಿ.

ರಮೇಶ: ನನಗೆ ಊಟ ಬೇಡ.

ಅರ್ಚನಾ: ಯಾಕೆ

ರಮೇಶ: ಅದು ಮತ್ತೆ ನಾನು ಗ್ಯಾರೇಜ್‌ಗೆ ಹೋಗ್‌ಬೇಕು.

ಅರ್ಚನಾ: ಕೆಲ್ಸ ಜಾಸ್ತಿ ಇದೆಯಾ.

ರಮೇಶ: ಹಾಂ, ...ಅದು ಕಂಪನಿಯಿಂದ ಹತ್ತು ಗಾಡಿ ಕಳಿಸ್ತೀವಿ ಅಂತ ಹೇಳಿದ್ದಾರಲ್ಲಾ ಅದು ಹತ್ತು ಗಾಡೀನು ಒಟ್ಟಿಗೆ ಕಳ್ಸಿಬಿಟ್ಟಿದಾರೆ. ಒಂದು ವಾರ್ದೊಳಗೆ ಗಾಡಿ ರೆಡಿ ಮಾಡಿಕೊಡಕ್ಕಾಗಲ್ಲ.

ಹೂ.ವೆ(ಹೂವಿನಹಡಗಲಿ ವೆಂಕಟಪ್ಪ)

ಮಗನ ಅನಾರೋಗ್ಯದ ಸ್ಥಿತಿಯನ್ನು ತನ್ನ ಹೆಂಡತಿಗೆ ಫೋನ್ ಮಾಡಿ ತಿಳಿಸುತ್ತಾನೆ. **ಹೆಂಡತಿ ಹೆಸರೇಳದೆ, ನಾನು ಕಣೆ ಹೂವೆ ಮಾತಾಡ್ತಿರೋದು.**

ದಿನಾಂಕ ೨೬-೦೭-೨೦೧೩ ರಂದು ರಾತ್ರಿ ೨;೩೦ಕ್ಕೆ ಉದಯ ವಾಹಿನಿಯ ಜೋಕಾಲಿ ಧಾರಾವಾಹಿಯಲ್ಲಿ(ಮೇಲ್ವರ್ಗಕ್ಕೆ ತಲುಪಿದಾಗ).

ಅರ್ಚನಾ: ರೀ ಇವತ್ತು ಎಷ್ಟು ಸಂತೋಷ ಆಗ್ತಾ ಇದೆ ಗೊತ್ತಾ. ಮದುವೆ ಆದಾಗಿನಿಂದ ಮೊನ್ನೆ ಮೊನ್ನೆವರ್ಗೂ ತುಂಬಾ ಕಷ್ಟದಲ್ಲಿದ್ವಿ, ಕಷ್ಟ, ನೋವು, ದುಃಖ, ಅವಮಾನ ಎಲ್ಲಾ ಅನುಭವಿಸಿ ಬಿಟ್ಟಿದ್ದೀವಿ. ಏನೂ ಇಲ್ಲದೆ ಫುಟ್‌ಬಾತ್‌ನಲ್ಲಿ ಮಲ್ಗಿದ್ವಿ ಅದ್ರೇ ಇವತ್ತು ದೊಡ್ಡ ಬಂಗ್ಲೆ ಕಟ್ಟಿದ್ದೀವಿ. ಅವತ್ತು ನಮಗೆ ದೂರ ಮಾಡ್ದೊರೆಲ್ಲ ಇವತ್ತು ಹತ್ರ ಆಗಿದ್ದಾರೆ. ನಾನು ಇವತ್ತು ಈ ಮಟ್ಟಕ್ಕೆ ಬಂದು ಇಷ್ಟು ಸಂತೋಷವಾಗಿರ್ತೀನಿ ಅಂತ ನನ್ ಕನ್ಸ್ ಮನ್ಸ್‌ಲ್ಲಿ ಅಂದುಕೊಂಡಿರ್ಲಿಲ್ಲ. ಇಷ್ಟಕ್ಕೆಲ್ಲ ಕಾರಣ ನಿಮ್ಮ ಶ್ರಮ, ನಿಮ್ಮ ಪ್ರಾಮಾಣಿಕತೆ.

ರಮೇಶ: ಇಲ್ಲ ಅರ್ಚನಾ ನಿನ್ನ ಪ್ರೋತ್ಸಾಹ, ನಿನ್ನ ಉತ್ಸಾಹ, ಹೆಜ್ಜೆ ಹೆಜ್ಜೆಗೂ ನೀನ್ ನನಗೆ ಧೈರ್ಯ ಹೇಳ್ದೆ ಇದ್ದಿದ್ರೆ ನಾನು ಎಲ್ಲೋ ಒಂದು ಕಡೆ ಸೋತು ಹೋಗ್ತಿದ್ದೆ. ನಮ್ಮ ಜೀವನದಲ್ಲಿ ಇಷ್ಟೊಂದು ಗೆಲುವು ಸಾಧಿಸೋಕೆ ನೀನು ಮತ್ತೆ ನಂದಿನಿಯೇ ಕಾರಣ.

ಅರ್ಚನಾ: ಹೌದು ರೀ ನಾವು ಈ ಮಟ್ಟಕ್ಕೆ ಬೆಳೆಯೋಕೆ ಕಾರಣನೇ ನಂದಿನಿ.

ಭಾಗ್ಯ(ಹೂ.ವೆ.ಹೆಂಡತಿ): ಹೇಯ್ ನೀನು ಮಾತಾಡ್ತಿದೀಯಾ, ನನ್ನಿಂದ ನಂಬಾಕೆ ಆಗ್ತಿಲ್ಲಾ ಕಣಯ್ಯ ನನಗೆ ಎಷ್ಟು ಸಂತೋಷ ಆಗ್ತಿದೆ ಗೊತ್ತಾ. ನಾನ್ ಬಂದು ವಾಸು ಕಾಣ್ತಿಲ್ಲ ಕಣಯ್ಯ ಅಂದ್ರೆ ನೀನ್ ನನ್ನತ್ರ ಮಾತಾಡ್ಬೇಡ ನನ್ನ ಮಕ ನೋಡ್ಬೇಡ ಅಂತೇಳಿದಲ್ಲ.

ಇಲ್ಲಿಯೂ ಗಂಡ ಹೆಂಡತಿಯನ್ನು ಏಕವಚನದಲ್ಲೇ ಮಾತನಾಡಿದ್ದನ್ನು ಗುರುತಿಸಿ ಕೊಳ್ಳಲಾಗಿದೆ. ಗಂಡನನ್ನು 'ಕಣಯ್ಯ' ಎಂದು ಸಂಬೋಧಿಸುವ ಮಧ್ಯಮವರ್ಗಕ್ಕೆ ಮತ್ತು ೧ನೇ ತಲೆಮಾರಿಗೆ ಸೀಮಿತವಾಗಿದೆ. ಅಲ್ಲದೇ ಆರ್ಥಿಕವಾಗಿ ದುರ್ಬಲರಾಗಿರುವ ರಮೇಶ-ಅರ್ಚನರ ಮಾತುಗಳು ಏಕವಚನದಿಂದ ಕೂಡಿವೆ. ಅರ್ಚನಾಳನ್ನು ಮೋಸ ಮಾಡಿ ಮದುವೆ ಆದರೂ ಎಂದೂ ಮತ್ತು ಬಡವನಾಗಿದ್ದನಿಂದ ಅವನನ್ನು ಏಕವಚನದಲ್ಲಿಯೇ ಸಂಬೋಧಿಸುತ್ತಾಳೆ. ಅಲ್ಲದೆ ದುಡಿದು ಶ್ರೀಮಂತರಾದಾಗ ಆರ್ಥಿಕವಾಗಿ ಸಬಲತೆಯನ್ನು ಪಡೆದುಕೊಂಡಾಗ ಶ್ರೇಣೀಕರಣದ ವ್ಯವಸ್ಥೆಯಲ್ಲಿ ಸಂಬೋಧನಾ ರೂಪಗಳು ಬದಲಾಗುತ್ತದೆ. ಇದೇ ರಮೇಶನನ್ನು ರೀ ಎಂದು ಅರ್ಚನಾ ಸಂಬೋಧಿಸುತ್ತಾಳೆ. ಅಂದರೆ ಆರ್ಥಿಕ ಅಧಿಕಾರ ಅಂತಸ್ತು ಭಾಷೆಯನ್ನು ನಿಯಂತ್ರಿಸು ತ್ತಿರುತ್ತದೆ ಎನ್ನುವುದಕ್ಕೆ ಈ ಎರಡು ಪಾತ್ರಗಳೇ ಸಾಕ್ಷಿ.

ಅರಗಿಣಿ ಧಾರಾವಾಹಿಯಲ್ಲಿ: ದಿನಾಂಕ ೨೭-೮-೧೩ರಂದು ರಾತ್ರಿ ೮ ಗಂಟೆಗೆ ಸುವರ್ಣ ಟಿವಿಯಲ್ಲಿ ಪ್ರಸಾರವಾಗಿದ್ದು.

ಖುಷಿ: ಅಬ್ಬಾ ಚಹಾ ಅಂಗಡಿ ಐತಿ ಒಂದು ಕಡಕ್ ಚಹಾ ಕುಡಿದು ಆಮೇಲೆ ಮುಂದೆ ಯೋಚನೆ ಮಾಡೋಣ ಯಂಗು ನೌಕ್ರಿಯಂತು ಪಕ್ಕಾ ಆಯ್ತು? ಆ ಸಂತೋಷನಾ ಚಾ ಕುಡೀತಾ ದುಪ್ಪಟ್ಟು ಮಾಡ್ಕೊಳ್ತೀನಿ. ನಮಸ್ಕಾರಿ ಅಣ್ಣಾರಾ ನಮ್ಮೂರೋರು ಕಂಡಂಗ ಕಾಣಿಸ್ತೀರ ಬೆಂಗಳೂರ್ನಾಗ ನಿಂತು ಬಿಜಾಪೂರ ನೆನಪಾದಂಗೆ ಒಂದು ಕಡಕ್ ಚಾ ಕೊಡ್ರಿ ಮತ್ತಾ. ಈ ಪಾತ್ರ ಬಿಜಾಪುರ ಪ್ರದೇಶಕ್ಕೆ ಸೇರಿದ ಪ್ರಭೇದಗಳನ್ನೂ ಮಾತನಾಡುವುದಕ್ಕೆ ಸೀಮಿತವಾಗಿದೆ. ಪ್ರಾದೇಶಿಕವಾಗಿ ಸಂಬೋಧನಾ ರೂಪಗಳು ಭಿನ್ನತೆಯಿಂದ ಕೂಡಿರುತ್ತವೆ. ಉತ್ತರ ಕರ್ನಾಟಕದ ಜನರ ಸಂಬೋಧನೆಗಳಲ್ಲಿ ರೀ ಸೇರಿಸಿಕೊಳ್ಳುವುದು ಸಾಮಾನ್ಯ ಅಲ್ಲದೆ 'ಎ' ಕಾರ 'ಇ'ಕಾರವಾಗುವ ಬದಲಾವಣೆಯನ್ನು ಈ ಮೂಲಕ ಗುರುತಿಸಿಕೊಳ್ಳಲಾಗಿದೆ(ಕೌಟುಂಬಿಕ ಧಾರವಾಹಿ).

ಕೆಳದಿ ಚೆನ್ನಮ್ಮ ಧಾರಾವಾಹಿಯಲ್ಲಿ: ೧-೪-೧೩ರಂದು ಸುವರ್ಣ ಟಿ.ವಿಯಲ್ಲಿ ಪ್ರಸಾರ ವಾಗಿದೆ.

ಭದ್ರಪ್ಪನಾಯಕ ಯುದ್ಧದಲ್ಲಿ ಗೆದ್ದು ಬರುತ್ತಾನೆ. ತನ್ನ ಅಂಗರಕ್ಷಕರು ಹಾಗೂ ಸೈನಿಕರೊಂದಿಗೆ ಅರಮನೆಯನ್ನು ಪ್ರವೇಶ ಮಾಡುತ್ತಾನೆ. ಹೊಗಳು ಭಟ್ಟಂಗಿಗಳು ಜಯಘೋಷ ಮಾಡುತ್ತಾರೆ. ಅಲ್ಲದೆ ರಾಜನ ಬಿರುದಾವಳಿಗಳನ್ನು ವರ್ಣಿಸುತ್ತಾ ಸಾಗುತ್ತಾರೆ.

ಮಹಾರಾಣಿ: (ರಾಜನನ್ನು ಉದ್ದೇಶಿಸಿ ಮಾತನ್ನು ಆರಂಭಿಸುತ್ತಾಳೆ.) "ಸದ್ಯ ದೇವರ ದಯೆಯಿಂದ ವಿಜಯಶಾಲಿಯಾಗಿ ಬಂದಿರಲ್ಲ. ನೀವು ಬರುವವರೆಗೂ ಜೀವ ಅಂಗೈಯಲ್ಲಿ ಹಿಡಿದು ದೇವರ ಪ್ರಾರ್ಥನೆ ಮಾಡುತ್ತಿದ್ದೆ ಪ್ರಭು".

ಭದ್ರಪ್ಪ ನಾಯಕ: 'ನಮ್ಮ ಶಕ್ತಿಶಾಲಿಯ ಬಗ್ಗೆ ಮಹಾರಾಣಿಯವರಿಗೆ ಅಪನಂಬಿಕೆ ಇದೆ ಅಂತ ಆಯ್ತು'.

ಮಹಾರಾಣಿ: ಆಗಲ್ಲ ಪ್ರಭು. ನಿಮ್ಮ ಬಾಹುಬಲದ ಬಗ್ಗೆ ನನಗೆ ನಂಬಿಕೆ ಇದೆ. ಹಾಗೆಯೇ ದೈವಬಲದ ಬಗ್ಗೆಯೂ ನಂಬಿಕೆ ಇದೆ. ಸದ್ಯ ಎರಡೂ ಸುಳ್ಳಾಗಲಿಲ್ಲ.

ರಾಜಮಾತೆ: ಮಹಾರಾಣಿಯಂತೂ ಸಮಯವೆಲ್ಲ ಬರಿ ಪೂಜೆಯಲ್ಲೇ ಕಳೆದಳು(ರಾಜಮಾತೆ ತನ್ನ ಸೊಸೆಯನ್ನು ಉದ್ದೇಶಿಸಿ ಮಾತನಾಡುತ್ತಾಳೆ).

ಮಂತ್ರಿ: 'ಪ್ರಭು ತಮ್ಮ ದಿಗ್ವಿಜಯದ ಸುದ್ದಿ ಕೇಳಿ ಬಿದನೂರಿಗೆ ಬಿದನೂರೇ ಸಂಭ್ರಮಿಸುತ್ತಿದೆ ಪ್ರಭು.'

ಪ್ರಭು: ಅದಕ್ಕಾಗಿ ಸಂತೋಷವಾಯಿತು(ಎಂದು ಹೇಳುತ್ತಾನೆ).

ಭದ್ರಪ್ಪ ನಾಯಕ: ಅಂದ ಹಾಗೆ ಮಹಾಮಂತ್ರಿಗಳೇ ಯುವರಾಜರ ಸಮರ ಸಿದ್ಧತೆ ಹೇಗಿದೆ?

(ರಾಜ ಮತ್ತು ಮಂತ್ರಿಯೊಂದಿಗಿನ ಸಂಭಾಷಣೆ ಮುಗಿಯುತ್ತದೆ.)

ಯುವರಾಜ ಶಿವಲಿಂಗ ನಾಯಕನಿಗೆ ಸಮರಾಭ್ಯಾಸದಲ್ಲಿ ತೊಡಗಿದ್ದಾಗ ವಿರೋಧಿ ದಂಡುಕೋರರು ಮರೆ ಮಾಚಿ ಎದೆಗೆ ಬಾಣವನ್ನು ಬಿಡುತ್ತಾರೆ. ಇದರಿಂದ ಜೀವನ್ಮರಣ ಹೋರಾಟ ನಡೆಸುತ್ತಾನೆ. ತನ್ನ ಸ್ನೇಹಿತ ಸೋಮಪ್ಪನಾಯಕನ ಜೊತೆಗಿನ ಸಂಭಾಷಣೆ ಇಂತಿದೆ.

ಶಿವಲಿಂಗ ನಾಯಕ: ನಿನ್ನ ಮುಖದಲ್ಲಿ ರಾಜಕಳೆ ಇದೆ.

ಸೋಮಪ್ಪ ನಾಯಕ: ರಾಜಕಳೆ ಇದೆ ಎಂದು ಸಿಂಹಾಸನ ಏರಲು ಸಾಧ್ಯವೆ. ರಾಜಕುಮಾರನಾಗಿರ ಬೇಕು. ರಾಜಪರಂಪರೆಗೆ ಸೇರಿದವನಾಗಿರಬೇಕು. ರಾಜಕುಲ ಸಂಜಾತನಾಗಿರಬೇಕು. ಇತ್ಯಾದಿ–ಇತ್ಯಾದಿ–ಇತ್ಯಾದಿ.

ಶಿವಲಿಂಗ ನಾಯಕ: ಅದೆಲ್ಲ ಅರ್ಹತೆಗಳು ನಿನಗಿದೆಯಲ್ಲಯ್ಯ.

ಸೋಮಪ್ಪ ನಾಯಕ: ಅರ್ಹತೆಯೊಂದೇ ಇದ್ದರೆ ಸಾಲದು. ಅದಕ್ಕೆ ಹಕ್ಕು ಮುಖ್ಯ. ಅರ್ಹತೆಯನ್ನು ಸಾಧನೆಯಿಂದ ಯಾರು ಬೇಕಾದರೂ ಗಳಿಸಬಹುದು. ಹಕ್ಕು ಜನ್ಮಸಿದ್ಧವಾದುದು. ಭಾವಿ ದೊರೆಗಳೇ.

ಶಿವಲಿಂಗ ನಾಯಕ: ಒಟ್ಟಿನಲ್ಲಿ ನನ್ನನ್ನು ಪಟ್ಟಕ್ಕೇರಿಸಲು ನಿರ್ಧರಿಸಿ ಬಿಟ್ಟಿದ್ದೀಯಾ ಅಂತಾಯ್ತು.

ಸೋಮಪ್ಪ ನಾಯಕ: ಇದರಲ್ಲಿ ನನ್ನ ಪಾತ್ರವೇನೂ ಇಲ್ಲ.

ಶಿವಲಿಂಗ ನಾಯಕ: ನೀನು ಅಪಾತ್ರನಲ್ಲ. ನಿಜವಾದ ಸಾಮರ್ಥ್ಯ ಹೊಂದಿದ್ದರೆ ಯಾರೂ ನಿನ್ನನ್ನು ಅಲ್ಲಾಡಿಸಲಾರರಯ್ಯ. ಮೊದಲು ಸಾಮರ್ಥ್ಯವನ್ನು ಬೆಳೆಸಿಕೋ. ನನ್ನ ತಂದೆ ಅದನ್ನು ತಾಳ್ಮೆಯಿಂದ ಕಲಿಸಿಕೊಡಬೇಕು. ನನ್ನ ಅಪ್ಪಯ್ಯ ನಾನೇ ನಿನ್ನನ್ನು ಕೈ ಮುಗಿದು ಬೇಡುವೆ ಶಿವು.

ಸೋಮಲಿಂಗ ನಾಯಕ: ಸೋಮು ನೀನಿಲ್ಲದೆ ನಾನಿಲ್ಲ ಕಣ್ಣಯ್ಯ(ಹಿಂದೆ ನಡೆದ ಮಾತು ಕತೆಗಳನ್ನು ಈ ನೋವಿನ ಸಂದರ್ಭದಲ್ಲಿ ಜ್ಞಾಪಿಸಿಕೊಳ್ಳುತ್ತಾನೆ. ಆ ಸಂದರ್ಭವನ್ನು ಕುರಿತ ಸಂಭಾಷಣೆ).

ಸೋಮಪ್ಪ ನಾಯಕ: ಶಿವು

ಶಿವಲಿಂಗ ನಾಯಕ: ಹೇಳುವಂತವನಾಗು ಮಿತ್ರ ತೈತ, ತೈತ ತಕದಿಮಿ ತೈತ(ಎಂದು ಹಾಡು ಹೇಳುತ್ತಾ ಕುಣಿಯುತ್ತಾನೆ). ದಿಮ್‌ತನನ, ದಿಮ್‌ತನನ, ದಿಮ್‌ತನನ(ಎಂದು ಕುಣಿದು ಕುಪ್ಪಳಿಸುತ್ತಾನೆ).

ಸೋಮಪ್ಪ ನಾಯಕ: ಕೆಳದಿ ಸಂಸ್ಥಾನದ ಉಳಿವಿಗಾಗಿ ಪ್ರಜೆಗಳ ಕ್ಷೇಮಕ್ಕಾಗಿ ಹೋರಾಡ್ತೀನಿ ಅಂತ ಮಾತು ಕೊಡು.

ಶಿವಲಿಂಗ ನಾಯಕ: ನಮ್ಮದು ದೇಹ ಬೇರೆ ಬೇರೆ ಇರಬಹುದು. ಆತ್ಮ ಒಂದೇ. ನಿನ್ನನ್ನು ಬಿಟ್ಟುಬಿಟ್ಟು ಎಲ್ಲಿ ಹೋಗಲ್ಲ ಮಿತ್ರ, ನಾನು ಹುಚ್ಚಚ್ಚಾಗಿ ಏನೇನೋ ಮಾತಾಡ್ತೀನಿ ನಾನಿರೋದೆ ಹೀಗೆ. ಹಾಗೆ ಮಾತು ಪ್ರಮಾಣ ಏತಕ್ಕೋ ಮಿತ್ರ, ನನ್ನ ಆತ್ಮತೃಪ್ತಿಗೆ, ಸಮಾಧಾನಕ್ಕೆ, ನನ್ನ ಕಿರಿಯ ಸಹೋದರನಂತಿರುವ ನನ್ನ ಗೆಳೆಯನ ಮೇಲೆ ಇರುವ ಭರವಸೆಗೆ.

ಸೋಮಲಿಂಗ ನಾಯಕ: ಸರಿ ಮಿತ್ರ, ನೀನು ನನ್ನನ್ನು ಕಿರಿಯ ಸಹೋದರ ಎಂದಿದ್ದೀಯಾ, ನನ್ನ ದೇಹದಲ್ಲಿ ಕೊನೆಯ ತೊಟ್ಟು ರಕ್ತ ಹರಿಯುವವರೆಗೂ ನನ್ನ ಉಸಿರಿರುವವರೆಗೂ ಗುಲಗಂಜಿಯಷ್ಟು ಕುಸುವು ನನ್ನ ದೇಹದಲ್ಲಿ ಇರುವವರೆಗೂ ನಿನಗೆ ಯಾವುದೇ ಅಪಾಯ ಆಗದ ಹಾಗೆ, ಅಪವಾದ ಬಾರದ ಹಾಗೆ ನಿನ್ನ ನೆರಳಿನಂತೆ ನಾನಿರ್ತೀನಿ ಮಿತ್ರ, ನನ್ನ ಈ ಮಾತಿಗೆ ಕೆಳದಿ ರಾಮೇಶ್ವರನೇ ಸಾಕ್ಷಿ.

ಈ ಮೇಲಿನ ಸಂಬೋಧನೆಗಳು ಬಹುವಚನದಿಂದ ಕೂಡಿದ್ದು, ಪ್ರಮಾಣೀಕರಣ ಕನ್ನಡವನ್ನೇ ಅನುಸರಿಸಿರುವುದು ಚಾರಿತ್ರಿಕ ಧಾರಾವಾಹಿಗಳಿಗೆ ಸೀಮಿತವಾಗಿದೆ. ಅಲ್ಲದೆ ಇಲ್ಲಿ ರಾಜನನ್ನು ಸಂಬೋಧಿಸುವಾಗ ರಾಣಿ, ಮಂತ್ರಿ ಹಾಗೂ ಇತರ ಸೈನಿಕರು ಅಂಗರಕ್ಷಕರು, ರಾಜನನ್ನು ಪ್ರಭು ಎಂದು ಸಂಬೋಧಿಸುತ್ತಾರೆ. ಗೌರವದೊಂದಿಗೆ ಬಹುವಚನ ಪ್ರತ್ಯಯವನ್ನು ಬಳಸುವುದು ಈ ಪಾತ್ರಗಳಿಗೆ ಸೀಮಿತವಾಗಿದೆ. ಅದೇ ಶಿವಲಿಂಗ ನಾಯಕ ಹಾಗೂ ಸೋಮಪ್ಪ ನಾಯಕರಿಬ್ಬರ ಸಂಭಾಷಣೆಯಲ್ಲಿ ಬಹುವಚನ ಹಾಗೂ ಏಕವಚನ ಸಂಬೋಧನೆಗಳು ಬಳಕೆಯಾಗುವುದನ್ನು ಗುರುತಿಸಿಕೊಳ್ಳಲಾಗಿದೆ. ಕಾರಣ ಶಿವಲಿಂಗ ನಾಯಕ ಮತ್ತು ಸೋಮಪ್ಪ ನಾಯಕ ಇವರಿಬ್ಬರಲ್ಲಿ ಶಿವಲಿಂಗ ನಾಯಕ ಯುವರಾಜ, ಸೋಮಪ್ಪ ನಾಯಕ ಆಪ್ತ ಮಿತ್ರ. ಆದಾಗ್ಯೂ ಆಡಳಿತಾತ್ಮಕ ಸನ್ನಿವೇಶದಲ್ಲಿ ಸೋಮಪ್ಪನಾಯಕ ಶಿವಲಿಂಗ ನಾಯಕನನ್ನು ದೊರೆಗಳೇ ಎಂದು ಸಂಬೋಧಿಸುತ್ತಾನೆ. ಸೋಮಪ್ಪ ನಾಯಕನನ್ನು ನೀವು, ತಾವು ಎಂದು ಬಹುವಚನ ರೂಪವನ್ನು ಬಳಸುತ್ತಾನೆ. ಇವರಿಬ್ಬರು ವೈಯಕ್ತಿಕ ಬದುಕಿನ ವಿವರಗಳನ್ನು ಮಾತನಾಡಿಕೊಳ್ಳುವಾಗ ಏಕವಚನ ಮತ್ತು ಆಪ್ತತೆಯಿಂದ ಕೂಡಿದ ಮಾತುಗಳೇ ಮುಂದುವರಿಯುವುದನ್ನು ಈ ಉದಾಹರಣೆ ಮೂಲಕ ಕಂಡುಕೊಳ್ಳಲಾಗಿದೆ. ಮಿತ್ರ, ಇಲ್ಲವೇ ಹೆಸರಿಡಿದು ಕರೆಯುವುದು ಇತ್ಯಾದಿ. ಆಡಳಿತಾತ್ಮಕ ಸಂದರ್ಭದಲ್ಲಿ ಬಹುವಚನ ರೂಪಗಳು ಬಳಕೆಯಾದರೆ ಅದೇ ಇಬ್ಬರು ವೈಯಕ್ತಿಕ ಬದುಕಿನಲ್ಲಿ ಏಕವಚನವನ್ನು ಬಳಸುವುದು ಭಾಷಿಕ ವ್ಯತ್ಯಾಸಗಳಿಗೆ ಕಾರಣ ವಾಗಿರುವುದನ್ನು ಈ ಮೂಲಕ ಗುರುತಿಸಿಕೊಳ್ಳಲಾಗಿದೆ. ಅಲ್ಲದೆ ಆಡಳಿತಾತ್ಮಕ ವ್ಯವಹಾರವು ಕೆಲವೊಂದು ಸಂದರ್ಭದಲ್ಲಿ ಭಾಷೆಯನ್ನು ನಿಯಂತ್ರಿಸುತ್ತದೆ ಎನ್ನುವುದಕ್ಕೆ ಈ ಉದಾಹರಣೆಗಳೇ ಸಾಕ್ಷಿ. ಅಲ್ಲದೇ, ಮಹಾರಾಣಿ ಮತ್ತು ರಾಜಮಾತೆಯರು ರಾಜನ ಜೊತೆಗೆ ಗೌರವ ಸಂಬೋಧನೆಗಳೊಂದಿಗೆ ಸಂಭಾಷಿಸುವುದನ್ನು ಗುರುತಿಸಿಕೊಳ್ಳಲಾಗಿದೆ. ಅಲ್ಲದೆ ರಾಜಮಾತೆ ತನ್ನ ಮಗನಾಗಿದ್ದಾಗಲೂ ಬಹುವಚನವನ್ನು ಬಳಸುವುದು ನಿಯಮ ಎನ್ನುವುದನ್ನು ಈ ಮೂಲಕ ಗುರುತಿಸಿಕೊಳ್ಳಲಾಗಿದೆ. ರಾಜನ ವಯಸ್ಸಿನಲ್ಲಿ ಚಿಕ್ಕವನಾಗಿದ್ದರೂ ಸಹ ಅವನ ಗೌರವ ಸಂಬೋಧನೆಗಳಿಂದಲೇ ಸಂಭಾಷಿಸುವುದು ಈ ನಿಯಮ ಚಾರಿತ್ರಿಕ ಧಾರಾವಾಹಿಗಳಿಗೆ ಸೀಮಿತವಾಗಿರುವುದನ್ನು ಈ ಮೂಲಕ ಗುರುತಿಸಿಕೊಳ್ಳಲಾಗಿದೆ.

ಉದಯವಾಹಿನಿಯಲ್ಲಿ ಸಂಜೆ ೬ ಗಂಟೆಗೆ ಪ್ರಸಾರವಾದ ಸೀತಾ ಧಾರಾವಾಹಿಯ ಭಾಗ ೮,

(ಸಹೋದರಿಯರೆಲ್ಲರೂ ವನಸಂಚಾರಕ್ಕೆ ಬರುತ್ತಾರೆ(ಮಕ್ಕಳ ಪಾತ್ರದಲ್ಲಿ)

ಅಬ್ಬಾ! ನಾನು ಒಂದು ಗಿಡ ಕಿತ್ತಿದ್ದಕ್ಕೆ ಚಿಂತೆ ಮಾಡುತ್ತಿದ್ದೆ. ಇಷ್ಟೊಂದು ಗಿಡ ಬೆಳೆದಿರುವುದು ನೋಡಲು ಮನಸ್ಸಿಗೆ ಸಮಾಧಾನವಾಗುತ್ತಿದೆ. ಈ ಆನಂದ ಸಮಾಧಾನಕ್ಕೆ ನಮ್ಮ ಸಹೋದರಿ ಸೀತೆಯೇ ಕಾರಣ. ನಮ್ಮಿಂದ ತಪ್ಪಾಗುವುದನ್ನು ತಡೆಯುತ್ತಾಳೆ. ಅಪ್ಪಿತಪ್ಪಿ

ತಪ್ಪು ಮಾಡಿದಾಗ ತಿದ್ದಿ ಸರಿಪಡಿಸುತ್ತಾಳೆ. ಅಹುದು ಸಹೋದರಿಯು ನಮ್ಮಿಂದ ಇಂಥ ಒಳ್ಳೆಯ ಕೆಲಸವನ್ನು ಮಾಡಿಸಿ ಒಳ್ಳೆಯದಾಗುವಂತೆ ಮಾಡಿದ್ದಾಳೆ. ಅಕ್ಕ ನಿನ್ನ ಜೊತೆ ಇದ್ದರೆ ಎಷ್ಟೊಂದು ಒಳ್ಳೆಯ ವಿಚಾರಗಳು ತಿಳಿಯುತ್ತವೆ. ಬರೀ ತಿಳಿಯುವುದಲ್ಲ, ಸೀತಾ ಸಹೋದರಿಯಿಂದ ಒಳ್ಳೆಯ ಕೆಲಸವನ್ನು ಮಾಡುತ್ತೇವೆ.

ಸೀತೆ: ಸಹೋದರಿಯರೇ ಒಳ್ಳೆಯ ಕೆಲಸವನ್ನು ಮಾಡಲು ಯಾರು ಯಾರನ್ನೂ ಕಾಯ ಬೇಕಾಗಿಲ್ಲ. ಈ ರೀತಿ ಗಿಡಗಳನ್ನು ಬೆಳೆಸುವುದಾಗಲೀ ಕಷ್ಟದಲ್ಲಿರುವವರಿಗೆ ಸಹಾಯವನ್ನು ಮಾಡುವುದಕ್ಕಾಗಲೀ ಯಾರನ್ನೂ ಅವಲಂಬಿಸಬೇಕಾಗಿಲ್ಲ. ತಮ್ಮ ಸ್ವಇಚ್ಛೆಯಿಂದಲೇ ಮಾಡಬಹುದು.

ಸಹೋದರಿ: ಆಗಲಿ ಅಕ್ಕ ಎನ್ನುತ್ತಾಳೆ. ನೀನು ಹೇಳಿದ ಮಾತುಗಳನ್ನು ನಾವು ಯಾವಾಗಲೂ ನೆನಪಿಟ್ಟು ಕೊಳ್ಳುತ್ತೇವೆ. ಆದರೆ ಯಾವಾಗಲೂ ನಿನ್ನ ಜೊತೆ ಇರಬೇಕೆಂದು ಬಯಸುತ್ತೇವೆ. ಅಹುದು ಅಹುದು ಆದ್ದರಿಂದ ಯಾವಾಗಲೂ ಎಲ್ಲಾರೂ ಒಂದೇ ಕಡೆ ಇರೋಣ.

ರಾಮ ಲಕ್ಷ್ಮಣರಿಗೆ ಬಿಲ್ಲು ವಿದ್ಯೆಯನ್ನು ಕಲಿಸುವ ಸಂದರ್ಭ.

ವಿಶ್ವಾಮಿತ್ರ: ಭಲೇ ರಾಮಚಂದ್ರ ಭಲೇ, ನಿನ್ನ ಬಾಣದ ಗುರಿ ಅನುಪಮವಾದದ್ದು. ರಾಮನ ಬಾಣದ ಗುರಿ ಎಂದಿಗೂ ತಪ್ಪುವುದಿಲ್ಲ ಎಂಬ ಕೀರ್ತಿಗೆ ನೀನು ಪಾತ್ರನಾಗು.

ರಾಮ: ಎಲ್ಲವೂ ತಮ್ಮ ಅನುಗ್ರಹ.

ವಿಶ್ವಾಮಿತ್ರ: ಲಕ್ಷ್ಮಣ, ಭರತ, ಶತ್ರುಘ್ನ ನೀವು ಸಹ ಬಾಣ ಪ್ರಯೋಗಿಸಿ.

ರಾಮ: ಭಲೇ ಸಹೋದರರೆ ಭಲೇ, ನೀವು ಪ್ರಯೋಗಿಸಿದ ಬಾಣಗಳು ಗುರಿಯನ್ನು ತಲುಪಿ ಯಶಸ್ವಿಯಾದವು. ಗುರುಗಳೇ ನನ್ನ ಸಹೋದರರೂ ಕೂಡ ಬಾಣ ಪ್ರಯೋಗಿಸುವುದರಲ್ಲಿ ನಿಪುಣರಾಗಿದ್ದಾರೆ ಅಲ್ಲವೆ.

ವಿಶ್ವಾಮಿತ್ರ: ಹೌದು ರಾಮಚಂದ್ರ ನಿನ್ನ ಸಹೋದರರೆಲ್ಲರೂ ನಿನ್ನಂತೆಯೇ ಅಸ್ತ್ರ ಹೂಡುವುದನ್ನು ಕಲಿಯುತ್ತಿದ್ದಾರೆ. ಆದರೆ ಇನ್ನೂ ಸ್ವಲ್ಪ ಪರಿಶ್ರಮ ಬೇಕು.

ಈ ಮೇಲಿನ ಎಲ್ಲಾ ಉದಾಹರಣೆಗಳು ರಾಜಮನೆತನಕ್ಕೆ ಸೇರಿದ ಸಂಬೋಧನಾ ರೂಪಗಳಾಗಿವೆ. ಗೌರವಸೂಚಕ ಮತ್ತು ಬಹುವಚನದಿಂದ ಕೂಡಿವೆ. ಸೀತೆಯನ್ನು ಸಂಬೋಧಿಸು ವಾಗ ತನ್ನ ಅಕ್ಕ ತಂಗಿಯರೆಲ್ಲರು ಸಹೋದರಿ ಎಂದು ಸೀತೆ ತನ್ನ ಅಕ್ಕ ತಂಗಿಯರನ್ನು ಸಂಬೋಧಿಸುವಾಗ ಸಹೋದರಿಯರೇ ಎಂದು ಸಂಬೋಧಿಸುತ್ತಾಳೆ. ರಾಮನು ಸಹ ತನ್ನ ಸಹೋದರರನ್ನುದ್ದೇಶಿಸಿ, ಭಲೇ ಸಹೋದರರೇ ಭಲೇ ಎಂಬಂತಹ ಸಂಬೋಧನೆ ರೂಪಗಳು ಚಾರಿತ್ರಿಕ ಧಾರಾವಾಹಿಗಳಿಗೆ ಅಲ್ಲದೇ ರಾಜವಂಶಕ್ಕೆ ಸೇರಿದ ಸಂಬೋಧನಾ ರೂಪಗಳಾಗಿವೆ.

ದಶರಥ ಅರಣ್ಯಕ್ಕೆ ಬೇಟೆಯಾಡಲು ಬರುತ್ತಾನೆ. ಶ್ರವಣಕುಮಾರ ಕುರುಡರಾಗಿರುವ ತನ್ನ ತಂದೆ-ತಾಯಿಯನ್ನು ಬುಟ್ಟಿಯಲ್ಲಿ ಕೂರಿಸಿಕೊಂಡು ಕಾಡಿನ ಮಧ್ಯೆ ಹೊತ್ತುಕೊಂಡು ಸಾಗುತ್ತಿರುತ್ತಾನೆ. ಬಾಯಾರಿಕೆಯಾದ ತಂದೆ-ತಾಯಿಯರಿಬ್ಬರು ಶ್ರವಣ ಕುಮಾರನಿಗೆ ತಿಳಿಸುತ್ತಾರೆ. ಒಂದು ಮರದ ನೆರಳಲ್ಲಿ ಕೂರಿಸಿ ನೀರು ತರಲು ಹತ್ತಿರವಿರುವ ಕೊಳಕ್ಕೆ ಹೋಗುತ್ತಾನೆ. ನೀರು ತುಂಬಿಕೊಂಡ ಸದ್ದನ್ನು ಕೇಳಿದ ದಶರಥ ಶಬ್ದವೇಧಿ ಬಾಣವನ್ನು ಬಿಡುತ್ತಾನೆ. ಈ ಬಾಣ ಶ್ರವಣ ಕುಮಾರನ ಎದೆಗೆ ಚುಚ್ಚಿಕೊಳ್ಳುತ್ತದೆ. ದಶರಥ ಯಾವುದೋ ಪ್ರಾಣಿ ಇರಬಹುದೆಂದು ಹೋಗಿ ನೋಡುತ್ತಾನೆ. ಶ್ರವಣ ಜೀವನ್ಮರಣ ಹೋರಾಟ ನಡೆಸುತ್ತಾನೆ. ಶ್ರವಣ ತನ್ನ ಎಲ್ಲಾ ವಿವರಗಳನ್ನು ಹೇಳುತ್ತಾನೆ. ದಶರಥ ದುಃಖಿತನಾಗಿ ಶ್ರವಣನ ತಂದೆ ಹಿರಣ್ಯಗಜ, ತಾಯಿ ತಾಂಡವಿಗೆ ಹೋಗಿ ನೀರನ್ನು ಕೊಡುವ ಪ್ರಯತ್ನ ಮಾಡುತ್ತಾನೆ. ದಶರಥನ ಮೌನ ಹಾಗೂ ಸದ್ದನ್ನು ಗಮನಿಸಿ ನೀರು ತರಲು ನಮ್ಮ ಮಗ ಶ್ರವಣ ಹೋಗಿದ್ದ ನೀನು ಯಾರಪ್ಪ ನೀರು ತಂದಿರುವೆಯಲ್ಲ ಎಂದು ಏಕವಚನದಿಂದ ಮಾತನಾಡಿಸುತ್ತಾರೆ.

ದಶರಥ: ರಘುವಂಶದಲ್ಲಿ ಜನಿಸಿದ ಅಯೋಧ್ಯ ಅಧಿಪತಿಯಾದ ದಶರಥ ಮಹಾರಾಜ. ನಿಮಗೆ ಸಾಷ್ಟಾಂಗ ಪ್ರಾಣಾಮಗಳು(ಎಂದು ಹೇಳುತ್ತಾನೆ).

ಹಿರಣ್ಯಗಜ ತಾಂಡವಿ: ಆಹಾ, ದಶರಥ ಮಹಾರಾಜರೇ ಕೀರ್ತಿಶಾಲಿಯಾದವರು, ನಾಡಿಗೆ ದೊರೆಯಾದವರು ನಮಗೆ ಕುಡಿಯಲು ನೀರು ತಂದು ಉಪಕಾರ ಮಾಡುತ್ತಿರುವ ನಿಮಗೆ ಸಹಸ್ರ ವಂದನೆಗಳು.

ತಾಂಡವಿ: ಮಹಾಪ್ರಭು ನನ್ನ ಮಗ ನೀರು ತರಲು ಹೋಗಿ ಬಹಳ ಹೊತ್ತಾಯಿತು. ಬಹಳ ಕಾಲವಾದರೂ ಹಿಂತಿರುಗಿ ಬಂದಿಲ್ಲ. ದಯೆಮಾಡಿ ತಾವು ಹೊಳೆ ಇಲ್ಲಿ ಎಲ್ಲಿಯಾದರೂ ಹತ್ತಿರದಲ್ಲಿದೆಯೇ ಅಥವಾ ದೂರದಲ್ಲಿದೆಯೇ ದಯಮಾಡಿ ತಿಳಿಸುವ ಕೃಪೆ ಮಾಡಿ(ಎನ್ನುತ್ತಾರೆ).

ವಯಸ್ಸಿನಲ್ಲಿ ದಶರಥ ಮಹಾರಾಜನಿಗಿಂತ ದೊಡ್ಡವರಾಗಿದ್ದರೂ ಮಹಾರಾಜನನ್ನು ಬಹುವಚನ ಹಾಗೂ ಗೌರವ ಸಂಬೋಧನೆಗಳಾದ ಮಹಾಪ್ರಭು, ಮಹಾರಾಜರೇ, ದೊರೆಗಳೇ ಎಂದು ಸಂಬೋಧಿಸುತ್ತಾರೆ. ಆದರೆ ನೀರು ತಂದ ಸಂದರ್ಭದಲ್ಲಿ ಸಾಮಾನ್ಯವಾಗಿ ಯಾರಪ್ಪ ನೀನು ಎಂದು ಸಂಬೋಧಿಸುವುದು ಏಕವಚನದಿಂದ ಕೂಡಿದ್ದಾಗಿದೆ. ಈ ಎರಡು ಸಂಬೋಧನೆ ಗಳು ಏಕಕಾಲದಲ್ಲಿ ಬದಲಾವಣೆಯಾಗುವುದನ್ನು ಗುರುತಿಸಲಾಗಿದೆ. ಆಡಳಿತ ಅಧಿಕಾರಿಯನ್ನು ಸಂಬೋಧಿಸುವುದು ಗೌರವ ಹಾಗೂ ಬಹುವಚನಗಳಿಂದ ಕೂಡಿವೆ. ಅದೇ ವ್ಯಕ್ತಿ ಯಾರೆಂದು ತಿಳಿಯದೇ ಇದ್ದಾಗ ನೀನು ಯಾರಪ್ಪ ಎಂದು ಏಕವಚನದಿಂದ ಕೂಡಿದೆ. ಇಲ್ಲಿ ಭಾಷಿಕವಾಗಿ ವರ್ಗಾಧಾರಿತ ಸಂಭೋಧನಾ ರೂಪಗಳು ವ್ಯತ್ಯಾಸವಾಗುವುದನ್ನು ಗುರುತಿಸಿಕೊಳ್ಳಲಾಗಿದೆ. ಕೆಳವರ್ಗಕ್ಕೆ ಅಥವಾ ಮಧ್ಯಮವರ್ಗಕ್ಕೆ ಸೇರಿದ ಸಂಬೋಧನೆಗಳು ಏಕವಚನದಿಂದ ಕೂಡಿವೆ.

ಅದೇ ಮಧ್ಯಮವರ್ಗಕ್ಕೆ ಸೇರಿದವರು ಮೇಲ್ವರ್ಗಕ್ಕೆ ಸೇರಿದವರನ್ನು ಸಂಬೋಧಿಸುವಾಗ ಗೌರವ ಸೂಚಕ ಸಂಬೋಧನೆಗಳನ್ನು ಬಳಸುವುದನ್ನು ಈ ಅಂಶಗಳ ಹಿನ್ನೆಲೆಯಲ್ಲಿ ಗುರುತಿಸಿಕೊಳ್ಳಲಾಗಿದೆ.

Biscoot ವಾಹಿನಿಯಲ್ಲಿ ಪ್ರಸಾರವಾದ ಸಂತಪ್ತ ಧಾರಾವಾಹಿ(ಅಗ್ನಿ ಹೋತ್ರಿಗಳ ಕುಟುಂಬ)

ಅಗ್ನಿಹೋತ್ರಿಗಳ ತಾಯಿ: ಲೇ ವನಜಾ ನಿಂದು ಫಲಹಾರ ಮುಗಿದಿದ್ರೆ ತರಕಾರಿ ತಂದು ಸುರಿಯೇ ಹೆಚ್ಚಾದ್ರು ಕೊಡ್ತೇನೆ. ಹೆ ಸುಬ್ಬು ಸುರುವಾರದಲ್ಲಿ ನೀರು ತಗಂಬಾ.... ಹೇ ಸಾವಿತ್ರಿ ಎಲ್ಲೇ ನಿನ್ನ ಗಂಡ ಆ ಕುಸುಬರಟ್ಟಿ ಸೋಮರಾಯ ತಿಂಡಿ ತಿಂದು ತೋಟಕ್ಕೆ ಹೋದ್ನ.

ಸಾವಿತ್ರಿ: ಹೂಂ...ಹೂಂ.. (ಎಂದು ಭಯಭೀತಳಾಗಿ ಹೇಳುತ್ತಾಳೆ).

ಅಜ್ಜಿ: ಹೋಗು ಹಂಡೆ ಹೊಲೆ ಉರಿ ಹಾರಿಸಿ ಕೊಟ್ಟಿಗೆ ದೊಣಿಗೆ ಕಲ್ಲಚ್ಚು ಉರುಳಿಸು. ಹೇ ಏನು ಒಳ್ಳೆ ಗರ ಬಡಿದವರಂಗೆ ನಿಂತುಕೊಂಡುಬಿಟ್ಟೆ ಹೋಗು ಕೇಲ್ಸ ಮಾಡೋಗು.

ಅಜ್ಜಿ: ವನಜಾ ಎಷ್ಟೊತ್ತೆ ತರಕಾರಿ ತರೋದು.

ವನಜಾ: ಬಂದೇ ಹತ್ತೇ, ಹತ್ತೆ ಕಣ್ ಬ್ಯಾರೆ ಸರಿಯಾಗಿ ಕಾಣಲ್ಲಂತೀರಿ ತರಕಾರಿ ಹೆಚ್ಚುವಾಗ ಬೆರಳುಗಿರುಳು ಕೊಯ್ಕೊಂಡೀರಿ ಉಷಾರು.

ಅಜ್ಜಿ: ಏನೇ ನನಗೆ ಹಾಸ್ಯ ಮಾಡ್ತೀಯಾ? ನಾನು ಈ ಮನೆಗೆ ಸೊಸೆಯಾಗಿ ಕಾಲಿಟ್ಟಾಗ ನನಗೆ ಆಗ ಹತ್ತೇ ವರ್ಷ. ಆಗಿನಿಂದಲೂ ಇದರಲ್ಲೇ ತರಕಾರಿ ಹೆಚ್ಚುತ್ತಾ ಇರೋದು. ನನಗೆ ಕಣ್ಣೇ ಬೇಡ ಅಷ್ಟು ರೂಢಿಯಾಗಿ ಹೋಗಿದೆ. ಇದು ನನ್ನ ಜೀವಕ್ಕೆ ಅಂಟಿಕೊಂಡು ಬಂದಿರೋ ಗೆಳತಿ. ನನ್ನ ಜೀವ ಇರೋವರಿಗೂ ಇದು ಇರುತ್ತೋ ಏನೋ.

ಈ ಮೇಲಿನ ಸಂಬೋಧನಾ ರೂಪಗಳಲ್ಲಿ ಅಜ್ಜಿ ಮೇಲ್ವರ್ಗಕ್ಕೆ ಸೇರಿದವಳು. ಕೆಳವರ್ಗಕ್ಕೆ ಸೇರಿದ ಸಾವಿತ್ರಿ, ಸೋಮರಾಯನನ್ನು ಏಕವಚನದಿಂದ(ಸಿಟ್ಟುಮುಖ ಮಾಡಿಕೊಂಡು) ಸಂಬೋಧಿಸುತ್ತಾಳೆ. ಅದೇ ಸಾವಿತ್ರಿ ಗೌರವಯುತವಾಗಿ ಬಹುವಚನದಿಂದ ಅಜ್ಜಿ ಕೇಳಿದ ಪ್ರಶ್ನೆಗೆ ಉತ್ತರಿಸುತ್ತಾಳೆ). ಕೆಳವರ್ಗದ ಪಾತ್ರಗಳು ಮೇಲ್ವರ್ಗದ ಪಾತ್ರಗಳಿಗೆ ಗೌರವಪೂರ್ವಕ ಸಂಬೋಧನೆಗಳಿಂದ ಬಳಸಿದರೆ ಮೇಲ್ವರ್ಗದ ಪಾತ್ರಗಳು, ಏಕವಚನದಿಂದ ಸಂಬೋಧಿಸುವುದನ್ನು ಈ ಮೇಲಿನ ಉದಾಹರಣೆಗಳಿಂದ ಗುರುತಿಸಿಕೊಳ್ಳಲಾಗಿದೆ.

ಲೇ ವನಜಾ, ಸುಬ್ಬ(ಸುಬ್ಬಲಕ್ಷ್ಮಿ ಮಗಳು) ಇವರನ್ನು ನಗು ನಗುತ್ತಾ ಕರೆಯುವುದು ಅಲ್ಲದೇ ಸೊಸೆ ಹಾಗೂ ಮಗಳು ಹಾಸ್ಯ ಮಾಡುವುದನ್ನು ಗುರುತಿಸಿಕೊಳ್ಳಲಾಗಿದೆ. ಇಲ್ಲಿ ತಮ್ಮ ಮನೆಯ ಸದಸ್ಯರನ್ನು ಸಾಮಾನ್ಯ ಸಂಬೋಧನೆಯಿಂದ ಹಾಗೂ ಪ್ರೀತಿಯಿಂದ ಕೂಡಿದ ಸಂಬೋಧನೆಯಿಂದ ಮಾತಾಡಿಸುತ್ತಾರೆ. ಇಡೀ ಸಂಬೋಧನೆಗಳು ಕೆಳವರ್ಗದ ಪಾತ್ರಗಳಿಗೆ ನಿಷಿದ್ಧವಾಗಿರುವುದನ್ನು ಈ ಮೂಲಕ ಗುರುತಿಸಿಕೊಳ್ಳಲಾಗಿದೆ.

ಅಗ್ನಿಹೋತ್ರಿಗಳು ತೋಟಕ್ಕೆ ಭೇಟಿ ನೀಡುತ್ತಾರೆ. ತೋಟವನ್ನು ನೋಡಿಕೊಳ್ಳಲು ಮೇಸ್ತ್ರಿಯನ್ನು ನೇಮಿಸಿರುತ್ತಾರೆ. ತೋಟವನ್ನು ನೋಡಲು ಬರುತ್ತಾರೆ.

ಮೇಸ್ತ್ರಿ: ಅಡ್ಡುಬಿದ್ದೆ ಒಡೆಯ.

ಅಗ್ನಿಹೋತ್ರಿಗಳು: ಮಠದ ಭೂಮಿ ಎಲ್ಲಾ ದೇಕರಿಕೆ ನಡೆಯುತ್ತಾ ಇದೆ ಏನಪ್ಪ.

ಮೇಸ್ತ್ರಿ: ಹೌದು ಒಡೆಯ, ತಮ್ಮ ಉಸ್ತುವಾರಿಯಲ್ಲಿ ಎಲ್ಲಾ ಚೆನ್ನಾಗಿ ನಡೀತಾ ಇದೆ.

ಅಗ್ನಿಹೋತ್ರಿಗಳು: ತೋಟಕ್ಕೆ ಹೋಗಿ ಸುತ್ತಾಡಿಕೊಂಡು ಬರೋಣ(ಎನ್ನುತ್ತಾರೆ) ಮೇಸ್ತ್ರಿ. ಮಠದ ಲೆಕ್ಕಾಚಾರದಲ್ಲಿ ದವಸಧಾನ್ಯ ಎಲ್ಲಾ ಲೆಕ್ಕಾಚಾರವಾಯಿತೆ?

ಮೇಸ್ತ್ರಿ: ಆಯ್ತು ಹೊಡೆಯ

ಅಗ್ನಿಹೋತ್ರಿಗಳು: ಅಂದ್ವಾಗೆ ಕೆರೆ ಹೂಳೆತ್ತುವ ಕೆಲ್ಸ ಹಾಗೆ ಉಳಿದುಬಿಟ್ಟಿದೆ.

ಮೇಸ್ತ್ರಿ: ಹೌದು ಒಡೆಯ ಹೋದವರ್ಷ ಆಗ್ಬೇಕಿತ್ತು.

ಅಗ್ನಿಹೋತ್ರಿಗಳು: ಇದರ ಬಗ್ಗೆ ನಿಮ್ಮ ಹತ್ತಿರ ಮಾತನಾಡಬೇಕಾಗಿದೆ. ಬಾ ಮಾತನಾಡೋಣ. ಮೇಸ್ತ್ರಿ ಕೈಲಾಗಲ್ಲ ಅಂತ ಬಿಟ್ಟಿದಿದ್ದರೆ ಇಷ್ಟೊಂದು ಫಲ ಕೊಡ್ತಿತ್ತ. ನಿನ್ನ ಶ್ರಮದಿಂದ ನೋಡು ಈ ಪಾಳು ಬಿದ್ದ ಭೂಮಿ ಎಷ್ಟೊಂದು ಫಲ ಕೊಟ್ಟಿದೆ.

ಮೇಸ್ತ್ರಿ: ದೊಡ್ಡ ಮಾತು ಒಡೆಯಾ.

ಈ ಮೇಲಿನ ಎಲ್ಲಾ ಮಾತುಗಳು ಗೌರವಪೂರ್ವಕವಾಗಿವೆ. ಅಗ್ನಿಹೋತ್ರಿಗಳು ಮೇಲ್ವರ್ಗಕ್ಕೆ ಸೇರಿದ ಪುರೋಹಿತ ಕಾಯಕ ಮಾಡುವವರು. ಇವರು ಕೆಳವರ್ಗಕ್ಕೆ ಸೇರಿದ ಮೇಸ್ತ್ರಿಯನ್ನು ಏಕವಚನದಿಂದ ಸಂಬೋಧಿಸುತ್ತಾರೆ. ಮೇಸ್ತ್ರಿ ಒಡೆಯ, ಅಡ್ಡಬಿದ್ದೆ ಒಡೆಯ, ತಮ್ಮದು ದೊಡ್ಡ ಮಾತು ಒಡೆಯ, ಆಯ್ತು ಒಡೆಯ ಎಂಬ ಈ ಸಂಬೋಧನಾ ರೂಪಗಳು ಗೌರವ ಹಾಗೂ ಬಹುವಚನ ರೂಪಗಳೊಂದಿಗೆ ಸಂಬೋಧಿಸುವುದನ್ನು ಈ ಪಾತ್ರಗಳಲ್ಲಿ ಗುರುತಿಸಿಕೊಳ್ಳಲಾಗಿದೆ. ಅಲ್ಲದೇ ಭಕ್ತಿಪ್ರಧಾನ ಹಾಗೂ ಚಾರಿತ್ರಿಕ ಅಂಶಗಳುಳ್ಳ ಧಾರಾವಾಹಿಗಳಲ್ಲಿ ಈ ಸಂಬೋಧನೆಗಳು ಸೀಮಿತವಾಗಿವೆ.

ಶ್ರೀ ರಾಘವೇಂದ್ರ ಮಹಿಮೆ ಧಾರಾವಾಹಿ

ದಿನಾಂಕ: ೦೫ ಮಾರ್ಚ್ ೨೦೧೨ರಂದು ರಾತ್ರಿ ೮ ಗಂಟೆಗೆ ಈಟಿವಿ ಕನ್ನಡದಲ್ಲಿ ಪ್ರಸಾರವಾಗಿದೆ. ರಾಘವೇಂದ್ರ ಸ್ವಾಮಿಗಳು ಭಕ್ತರೊಬ್ಬರ ಮನೆಗೆ ಭೇಟಿ ನೀಡಿದ ಸಂದರ್ಭ.

ರಾಘವೇಂದ್ರ ಸ್ವಾಮಿ: ಇದು ರಾಮಮಂದಿರ. ಇದು ರಾಮಮಂದಿರ. ರಾಮ ನನಗಾಗಿ ಈ

ಪ್ರಸಾದವನ್ನು ಉಳಿಸಿರುವೆಯಾ ತಂದೆ, ನಾನು ಧನ್ಯನಾದೆ ರಾಮ, ನಾನು ಧನ್ಯನಾದೆ ತಾಯಿ. ನಮಗಾಗಿ ನೀಡಬೇಕಾಗಿರುವ ಭಿಕ್ಷೆ ಇದೆ ತಾಯಿ. ಇಡೀ ಭಿಕ್ಷೆಯನ್ನು ನೀಡಮ್ಮ. ನೀನು ತಾಯಿ ಸಂಶಯ ಬೇಡ. ಆ ದಿನ ಶಬರಿ ರುಚಿ ನೋಡಿ ತಿಂದುಕೊಟ್ಟ ಹಣ್ಣನ್ನು; ಆಕೆಯನ್ನು ಧನ್ಯಳನ್ನಾಗಿ ಮಾಡಿದ ರಾಮಚಂದ್ರ, ಈ ದಿನ ಪ್ರಸಾದವನ್ನು ನನಗಾಗಿ ಉಳಿಸಿ ನಮ್ಮನ್ನು ಧನ್ಯರನ್ನಾಗಿ ಮಾಡು ತಾಯೇ. ಈ ಭಾಗ್ಯಕ್ಕಾಗಿಯೇ ನಿನ್ನ ಮನೆಗೆ ಬಂದದ್ದು ತಾಯಿ, ಈ ಭಾಗ್ಯಕ್ಕಾಗಿಯೇ ನಿನ್ನ ಮನೆಗೆ ಬಂದದ್ದು; ಭಿಕ್ಷೆಯನ್ನು ನೀಡು ತಾಯೇ; ಭಿಕ್ಷೆಯನ್ನು ನೀಡು.

ಗೋಪಣ್ಣ: ಹೌದು ಯಜಮಾನ್ರೆ ಶ್ರೀರಾಮಚಂದ್ರರು ನಿಮ್ಮ ಮನೆ ಬಳಿ ಬಂದಿದ್ದರಂತೆ ಅಮ್ಮವ್ರನ್ನ ಕೇಳಿ ಪ್ರಸಾದ ತಿಂದರಂತೆ ಸ್ವತಃ ಶ್ರೀ ರಾಮಚಂದ್ರರೇ ಬಂದಿದ್ರು ಅಂತ ಜನ ಮಾತನಾಡಕೋತ ಇದ್ದಾರೆ.

ರಾಘವೇಂದ್ರ ಸ್ವಾಮಿಗಳು: ಎಲ್ಲಿ ತಂಗಿದ್ದರೋ.

ರಾಘವೇಂದ್ರ ಸ್ವಾಮಿಗಳು: (ಪೂಜೆಯನ್ನು ಮುಗಿಸುತ್ತಾರೆ) ದಿನವೂ ನಮ್ಮ ಸಂಗೀತವನ್ನು ಕೇಳಿ ಪ್ರಭುವಿಗೆ ಬೇಸರ ಬಂದಿರಬಹುದು. ಮತ್ಯಾರಾದರೂ ಹಾಡಬಾರದೇ...

ಶಿಷ್ಯರು: ಗುರುಗಳೇ.... ತಮ್ಮ ಸಂಗೀತದಿಂದ ಪ್ರಭುವಿಗೆ ಬೇಸರವೇ; ಸ್ವಯಂ ಸರಸ್ವತಿಯೇ ತಮ್ಮ ಬೆರಳಲ್ಲಿ ನುಡಿಸುವ ನಾದಮಾದುರ್ಯದಿಂದ ಪ್ರಭುವಿಗೆ ಬೇಸರವೇ; ತಾವು ತನ್ಮಯರಾಗಿ ನುಡಿಸಬೇಕು. ಕರುಣಾಳು ಪ್ರಭು ಆನಂದದಿಂದ ಜಗತ್ತನ್ನು ಅರಸಬೇಕು.

ರಾಘವೇಂದ್ರ ಸ್ವಾಮಿಗಳು: ಆ ಜಗತ್ಪಿತ ತನ್ನ ಮಕ್ಕಳು ಮನದಾಳದಿಂದ ಶ್ರದ್ಧೆ ಭಕ್ತಿಯಿಂದ ಆಡಿದರೇ ಆನಂದನೇ.

ಈ ಮೇಲಿನ ಸಂಬೋಧನೆಗಳು ಭಕ್ತಿಪೂರ್ವಕ ಮತ್ತು ವಿನಯಪೂರ್ವಕವಾಗಿ ಬಹುವಚನಗಳಿಂದ ಕೂಡಿವೆ. ತಾಯೆ, ಪ್ರಭುವೆ, ಗುರುಗಳೇ, ರಾಮಚಂದ್ರರು, ಬಂದಿದ್ರು,

ಪಾಂಡುರಂಗ ವಿಠಲ

ದಿನಾಂಕ ೨೦-೧೧-೧೩ರಂದು ಜೀ ಕನ್ನಡ ವಾಹಿನಿಯಲ್ಲಿ ರಾತ್ರಿ ೧೦.೩೦ಕ್ಕೆ ಪ್ರಸಾರವಾಯಿತು.

ಜಾಜಿ: ಲೇ ಚಂಪಾ ನಮ್ಮಣ್ಣ ಮನೆ ಬಿಟ್ಟು ಒಂದು ತಿಂಗಳಾಯ್ತು. ಮನೆಗೆ ಇನ್ನೂ ಬಂದೆ ಇಲ್ಲ.

ರಂಗಮ್ಮ: ಫ್ರೆಂಡ್ಸ್ ಜೊತೆ ಜಗಳ ಮಾಡಕೊಂಡು ಹೋದ. ಎಲ್ಲಿ ಹೋದನೋ, ಹೇಗಿದಾನೋ, ಏನು ಮಾಡ್ತಿದಾನೋ ಆ ದೇವರಿಗೆ ಗೊತ್ತು.

ಬೆಳಿಗ್ಗೆ, ಫೋನ್ ಮಾಡಿದ್ರು ಅತ್ತೆ ಇನ್ನೇನು ಬಂದುಬಿಡ್ತಾರೆ.

ಪಾಂಡುರಂಗ: ಸರ್ವೇ ಜನೋ ಸುಖಿನೋ ಭವಂತು.

ಜಾಜಿ: ಅತ್ತಿಗೆ ಬನ್ನಿ ಇಲ್ಲಿ.

ಜಾಜಿ: ಹಲೋ who is this

ರಂಗಮ್ಮ: ಮುಂದೆ ಬಂದು ನೋಡಮ್ಮ ಗೊತ್ತಾಗುತ್ತೆ.

ಜಾಜಿ: ಅಭಿ ನೀವಾ what is this nonsence

ಪಾಂಡುರಂಗ: ಎಲ್ಲರೂ ಹೇಗಿದ್ದಾರೆ ಅಜ್ಞಾನಿಗಳೇ.

ಜಾಜಿ: ನೀವೆಲ್ಲ ಒನ್ ಮಂತ್ ಎಲ್ಲೋಗಿದ್ರಿ.... ಅಜ್ಞಾನಿಗಳು ಅಂತ ಅಂದ್ರೆ ನಾನ್ ಸುಮ್ನಿರಲ್ಲ.

ಪಾಂಡುರಂಗ: ನಾನು ಸುಜ್ಞಾನಿ ಆದ ಮೇಲೆ ನೀವೆಲ್ಲ ಅಜ್ಞಾನಿಗಳು ತಾನೇ.

ಜಾಜಿ: ಹೋ Don't Talk ಅಭಿ ಈ ರೀತಿ ವೇಷ ಹಾಕ್ಕೊಂಡ್ ಮೇಲೆ ಜೈಲಿಗೆ ಸೇರಿಬಿಟ್ಟಿದ್ದಾರೆ. ಮದುವೆ ಆದ್ಮೇಲೆ ಗಂಡನ್ನ ಗೋಳಾಡಿಸ್ತಿದೀರಲ್ಲ ನಿಮ್ಮನ್ನ ಮೊದಲು ಜೈಲಿಗೆ ಹಾಕಿಸಬೇಕು.

ರಂಗಮ್ಮ: ಕಲಕ್ಟ್ ಆಗಿ ಹೇಳಿದೆ ಕಣೆ.(ಕರೆಕ್ಟ್ ಅನೋದು ಸರಿಯಾದ ರೂಪ. ಆದರೆ ಹಾಸ್ಯಕ್ಕಾಗಿಯೇ ರ ಕಾರವನ್ನು ಬಿಟ್ಟು ಉಚ್ಚರಿಸುವುದನ್ನು ಈ ಪಾತ್ರಕ್ಕೆ ಸೀಮಿತವಾಗಿರುವುದನ್ನು ಈ ಧಾರಾವಾಹಿಯಲ್ಲಿ ಗುರುತಿಸಿಕೊಳ್ಳಲಾಗಿದೆ. ಅಲ್ಲದೆ ಇಂತಹ ರೂಪಗಳು ವೀಕ್ಷಕರಲ್ಲಿ ನಗೆ ಉಕ್ಕಿಸುವ ಉದ್ದೇಶವನ್ನಿಟ್ಟುಕೊಂಡಿದ್ದಾರೆ).

ಜಾಜಿ: ಅತ್ತೆ ನಿಮ್ಮಗನಿಗೆ ಸಪೋರ್ಟ್ ಮಾಡೋದು ಬಿಟ್ಟು ಬಿಡಿ.

ಪಾಂಡುರಂಗ: ಒಂದು ತಿಂಗಳ ಹಿಂದೆ ನೀವು ನನ್ನ ಜೊತೆ ಜಗಳ ಆಡಿದ್ದು ನೆನಪಿದೆಯಾ ನೆನಪಿಲ್ಲಂತಾದ್ರೆ ಅಲ್ನೋಡಿ ಎಲ್ಲಾ ನೆನಪಾಗುತ್ತೆ.

ಜೀ ಕನ್ನಡ ವಾಹಿನಿಯಲ್ಲಿ ದಿನಾಂಕ ೨೫-೦೧-೨೦೧೨ ರಂದು ಪಾರ್ವತಿ ಪರಮೇಶ್ವರ ಧಾರಾವಾಹಿಯಲ್ಲಿ ಪ್ರಸಾರವಾದ ಸಂಭಾಷಣೆ.

ಪರಮೇಶ್ವರ: ಎಂ.ಎಲ್.ಎ. ಸಾಹೇಬ್ರು ನಿಮ್ಮ ಮಹಿಳಾ ಸಂಘಕ್ಕೆ ಫಂಡ್ ಕೊಡ್ತಿನಿ ಅಂತ ಹೇಳಿದ್ರು.

ವೇದಶ್ರೀ, ನಾಗವಲ್ಲಿ: ಅಯ್ಯೊ ಬರಿ ಬಾಯಿ ಮಾತಲ್ಲಿ ಹೇಳಿದ್ದು ರೀ, ಅಲ್ಲಿಗೆ ಹೊದ್ಮೇಲೇ ಏನಾಯ್ತು ಗೊತ್ತ. ನಮ್ಮನ್ನ ಕೆಳೋರೆ ಇಲ್ಲ. ನಾಯಿಗಿಂತ ಕಡೆಯಾಗಿ ಬಿಟ್ವಿ

ನಾಗವಲ್ಲಿ: ಇವತ್ತು ನಿಜ ಹೇಳಿದ್ರಿ ನೋಡಿ. ಎಂ.ಎಲ್.ಎ. ಗುಂಡಪ್ಪ ಅವರ ಮನೆ ಹತ್ರ ಹೋದ್ರೆ ಅಲ್ಲಿ ರಾಶಿ ಜನರೀ. ನಮ್ಮನ್ನ ಬೇಟಿ ಮಾಡೋಕೆ ಅವಕಾಶನೇ ಕೊಡ್ಲಿಲ್ಲ.

ಲಾಯರ್ ಗುಂಡಣ್ಣ: ಅಲ್ಲ ನಾಗವಲ್ಲಿಯವರೇ ಕೈ ಕುಲ್ಕುಅಲ್ಲವಾ.

ನಾಗವೇಣಿ: ಏನು ಕುಲ್ಕುಲಿಲ್ಲ.

ಪರಮೇಶ್ವರ: ಕರಿಕೋಟು ಬಿಳಿ ಬೆಡ್‌ಶೀಟ್ ಆಗಿ ಬಿಡುತ್ತೆ.

ನಾಗವಲ್ಲಿ: ಓಟು ಕೇಳುವಾಗ ನಯವಾಗಿ ಮಾತಡ್ತಾರೆ. ಕೈ ಮುಗಿತಾರೆ, ಕಾಲಿಗೆ ಬಿಳ್ತಾರೆ. ಓಟು ತಗಂಡ ಮ್ಯೇಲೆ ಯಾಕ್ರಿ ಇಂಗಾಡ್ತಾರೆ. ನಾವು ಇದೇ ಕ್ಷೇತ್ರದವರು ಅಂತ ಹೇಳಿದ್ರು, ಕೆರ್ ಮಾಡಿಲಲ್ಲ.

ಪರಮೇಶ್ವರ: ನನ್ನ ಹೆಸರು ಹೇಳ್ಬೇಕಾಗಿತ್ತು.

ಲಾಯರ್ ಗುಂಡಣ್ಣ: ಹೌದು ಹೌದು......

ನಾಗವಲ್ಲಿ: ನಿನ್ನ ಹೆಸರು ಹೇಳಿದ್ದಕ್ಕೆ, ಗೂರ್ಕ ಜಟವುಟ್ ಎಂದಿದ್ದು, ಅದನ್ನೆಲ್ಲ ವಿರೋಧಿಸಬೇಖು ಅಂತ ಅನಿಸ್ತಿಲ್ವ ನಿಮ್ಗೆ. ಅರ್ರೆ ಹೊಡೊಕೊಂಡು ಕೂತಿದಿರಲ್ಲ. ನಿವೆಂತ ಗಂಡುಸ್ರು.

ಪರಮೇಶ್ವರ: ಪತ್ರಿಕೆ ಹೆಸರನ್ನ ಕಿಡಿ ಕಿಡಿ ಯಂತ ಹೆಸರು ಇಟ್ಕೊಂಡ್ರೆ ಹಾಗೋಲ್ಲ. ಕಿಡಿಯಿಂದ ಬೆಂಕಿ ಅತ್ತಿಕೋಬೇಕು.

ಸುಬ್ರಹ್ಮಣ್ಯ: ಪೇಪರ್‌ಗೆ ಬೆಂಕಿ ಹಚ್ಚಿದ್ರೆ ಆಯ್ತಲ್ಲ.

ಪರಮೇಶ್ವರ: ಲೇಖಣಿ ಕತ್ತಿಗಿಂತ ಅರಿತವಾದದ್ದು ಅಂತ ಗಾದೇನೆ ಇದೆ. ಹಿಂದೆ ಬಾಲಗಂಗಾಧರ ತಿಲಕ್‌ರವರು ಕೇಸರಿ, ಮರಾಠ ಪತ್ರಿಕೆಗಳಲ್ಲಿ ಎಂಥೆಂಥ ಕ್ರಾಂತಿಕಾರಿ ಲೇಖನಗಳನ್ನು ಬರೆದ್ರು, ಅದ್ರಿಂದಾಗಿ ಹಿಡಿ ಭಾರತ ದೇಶನೇ ಬ್ರಿಟಿಷರ ವಿರುದ್ಧ ಎದ್ದು ನಿಲ್ತು.

ಸೋಮಶೇಖರ: ಈ ಥರ ಮಾತಾಡೋರು ತುಂಬಾ ಜನ ಸಿಗ್ತಾರೆ ಸಾರ್, ಆದ್ರೆ ಬರಿಬೇಕು. ನಾನು ಪ್ರಿಂಟ್ ಮಾಡೋಕೆ ರೆಡಿ ಇದ್ದಿನಿ, ನೀವು ಬರ್ದುಕೊಡ್ತಿರಾ, ನಿಮ್ಮ ಕೈಲಿ ಆಗುತ್ತಾ.

ಪರಮೇಶ್ವರ: ಆಯ್ತು ಭ್ರಷ್ಟ ರಾಜಕಾರಣಿ ಗುಂಡಪ್ಪನ ವಿರುದ್ಧನೇ ಕಾಂತಿಕಾರಕ ಲೇಖನವನ್ನ ಬರ್ದು ಕೊಡ್ತೀನಿ. ನೀವು ಪ್ರಿಂಟ್ ಮಾಡಿ, ಮುಂದೆ ಏನು ಆಗುತ್ತೋ ನೋಡೇ ಬಿಡೋಣ.

ಸೋಮಶೇಖರ: ಬೋಲೊ ಭಾರತ್ ಮಾತಕೀ, ತಾಯಿ ಭಾರತಾಂಬೆಗೆ ಜಯವಾಗಲಿ.

ಪರಮೇಶ್ವರ: ಶಬಾಷ್ ಕಣೋ.

ರೌಡಿಗಳು: ಸೋಮಶೇಖರ್ ಅಂದ್ರೆ ನೀವೇನಾ. ಕಿಡಿ ಕಿಡಿ ಪತ್ರಿಕೆ.

ಸೋಮಶೇಖರ: ಹೌದಪ್ಪ, ಪತ್ರಿಕೆ ಸಂಪಾದಕ.

ರೌಡಿಗಳು: ಏನ್ರೀ ದುಡ್ಡಿಗೋಸ್ಕರ ಪತ್ರಿಕೆ ನಡಿಸ್ತಿರಾ. ನಮ್ ಗುಂಡಪ್ಪಣ್ಣನ್ನತ್ರ ದುಡ್ಡು ಕೇಳಿದ್ರಂತೆ. ಗುಂಡಪ್ಪಣ್ಣ ಜನ ನಾಯಕ. ಅಷ್ಟೇ ಪ್ರಮಾಣಿಕ ಕೂಡ.

ಸೋಮಶೇಖರ: ನೋಡಿ ಇವ್ರೇ ಆ ಲೇಖನ ಬರೆದದ್ದು ಪರಮೇಶ್ವರ್ ಅವ್ರು, ಅದನ್ನ ಪ್ರಕಟ ಮಾಡಿದ್ದು ನಾನು.

ರೌಡಿಗಳು: ಈ ಅಣ್ಣನತ್ರ ಕ್ಷಮೆ ಕೇಳಿಲ್ಲ ಅಂದ್ರೆ ಏನಾಗುತ್ತೆ ಗೊತ್ತಾ.

ಪರಮೇಶ್ವರ: ಪಬ್ಲಿಕ್‌ಲ್ಲಿ, ಪಬ್ಲಿಕನ ಎದುರು ಹಾಕೋಳಕೆ ಹಾಗೋಲ್ಲ, ಹುಷರ್, ಹೆಯ್ ಏನು?

ರೌಡಿಗಳು: (ಹೊಡೆಯುತ್ತಾ) ಮಗ ಇದು ಶಾಂಪಲ್, ಮಿಕ್ಕಿದ್ದನ್ನು ನಾಳೆ ಕೊಡ್ತೀನಿ.

ಪರಮೇಶ್ವರ: (ಪೋನಿನಲ್ಲಿ) ಹಲೋ.

ಎಂ.ಎಲ್.ಎ. ಗುಂಡಣ್ಣ: ಹಲೋ

ಪರಮೇಶ್ವರ: ನಾನ್‌ರೀ ಲೇಖಕ ಪರಮೇಶ್ವರ ಮಾತಾಡ್ತೀರೊದು.

ಎಂ.ಎಲ್.ಎ.ಗುಂಡಣ್ಣ: ನಾನು ಬಡವರ ಬಂಧು ಗುಂಡಪ್ಪ ಮಾತಾಡೋದು.

ಪರಮೇಶ್ವರ: ರೀ ನೀವು ಬಡವರ ಬಂಧು ಅಲ್ಲರೀ, ಸಾಹುಕಾರರ ಬಂಧು

ಎಂ.ಎಲ್.ಎ.ಗುಂಡಪ್ಪ: ಖರ್ಚಿಗೆ ಕೊಟ್ಟದ್ದು ಸಾಲ್ದ, ಮತ್ತೆ ಹುಡುಗ್ರನ ಕಳ್ಸಿಲ್ಲ.

ಪರಮೇಶ್ವರ: ಅದೇ ವಿಷ್ಯ ಮಾತಾಡೋಕೆ ಫೋನ್ ಮಾಡಿದ್ದು, ನಿನ್ನ ಬಗ್ಗೆ ಇರೋ ದಾಖಲೆಗಳನ್ನು ಕಳ್ಸಿಕೊಟ್ರೆ ಅಂದ್ರೆ ಬೆಳಿಗ್ಗೆ ಐದು ಗಂಟೆಗೆ ಪೊಲೀಸಿನವರು ಬಂದು ಜೈಲಿಗೆ ತುಂಬುತ್ತಾರೆ. ಅಮೇಲೆ ಟಿ.ವಿ(೧೦)ಯವರು ದಿನ ನಿನ್ನ ಬಗ್ಗೆ ಹರಿಕತೆ ಮಾಡ್ತಾರೆ.

ಎಂ.ಎಲ್.ಎ.ಗುಂಡಪ್ಪ: ಆಯ್ತಾಪ್ಪ ನಿನ್ನತ್ರ ಒಂಚೂರು ಮಾತಾಡ್ಬೇಕು.

ಪರಮೇಶ್ವರ: ಎಲ್ಲಿಗೆ ಬರ್ಬೇಕು ಅಂತ ಹೇಳು ಬರ್ತೀನಿ.

ಎಂ.ಎಲ್.ಎ. ಗುಂಡಪ್ಪ: ಅಲ್ಲಿ ಬಾ.

ಪರಮೇಶ್ವರ: ಆಯ್ತು, ಖಂಡಿತಾ ಬರ್ತೀನಿ.

ಎಂ.ಎಲ್.ಎ.ಗುಂಡಪ್ಪ: ಹೆಯ್ ಎಲ್ಲಿಗೆ ಹೋಗ್ತಾ ಇದ್ದೀಯ, ಇಲ್ಲಿಗೆ ಬಾ.

ಪರಮೇಶ್ವರ: ನಮಸ್ಕಾರ್ ಸರ್, ನಾನು ಸತ್ಯನ ಬರ್ದದ್ದಕ್ಕೆ ರೌಡಿಗಳನ್ನ ಕಳ್ಸಿ ಆವಾಜ್ ಹಾಕ್ಸಿದ್ರಿ.

ಎಂ.ಎಲ್.ಎ.ಗುಂಡಪ್ಪ: ಏನೋ ದಾಖಲೇ ಇದೆ ಅಂತ ಹೇಳ್ತಾ ಇದ್ದೆ, ಏನಿದೇ ದಾಖಲೆ.

ಪರಮೇಶ್ವರ: ಇದೇ, ಇಷ್ಟೊಂದು ಇದಾವೆ(ಬ್ಯಾಗನ್ನ ತೋರಿಸ್ತಾ).

ಈ ಮೇಲಿನ ಸಂಬೋಧನೆಗಳು ಪರಸ್ಪರ ಬಹುವಚನ ರೂಪಗಳನ್ನು ಬಳಸಿಕೊಂಡಿವೆ. ಹಾಸ್ಯ ಧಾರಾವಾಹಿಗಳಿಗೆ ಸೀಮಿತವಾಗಿದ್ದರೂ ನಗೆ ಉಕ್ಕಿಸಲೆಂದೇ ಈ ಸಂಬೋಧನೆ ಗಳನ್ನು ಬಳಸಿಕೊಳ್ಳಲಾಗಿದೆ. ಪಾಂಡುರಂಗ ತನ್ನ ಹೆಂಡತಿ ಮತ್ತು ತನ್ನ ತಂಗಿಯನ್ನು ನೀವು, ತಾವು, ಅಲ್ನೋಡಿ, ನಿಮ್ಮನ್ನ, ಬನ್ನಿ ಇಲ್ಲಿ, ನೋಡಮ್ಮ, ಇನ್ನೇನು ಬಂದು ಬಿಡ್ತಾರೆ, ನೀವೆಲ್ಲ, ಎಲ್ಲರೂ ಈ ಎಲ್ಲವೂ ಬಹುವಚನಗಳಿಂದ ಕೂಡಿವೆ. ಇತರೆ ಕೆಲವು ಧಾರಾವಾಹಿಗಳಲ್ಲಿ ಏಕವಚನದಿಂದ ಗಂಡನನ್ನು ಮತ್ತು ಗಂಡ ಹೆಂಡತಿಯನ್ನು ಸಂಬೋಧಿಸುವುದನ್ನು ಗುರುತಿಸಿಕೊಂಡರೆ, ಕೆಲವು ಪದಗಳ ಬಳಕೆಯಲ್ಲಿ ನಿಯಮರಹಿತ ಪದಗಳನ್ನು ರಚಿಸಿ ವಾಕ್ಯ ಮಾಡುತ್ತಾರೆ. ಈ ಪ್ರಕ್ರಿಯೆಯೂ ಋಣಾತ್ಮಕವಾಗಿದೆ. ಕೇವಲ ಹಾಸ್ಯ ಅಥವಾ ನಗೆ ಚಟಾಕಿಗಳನ್ನು ಉಕ್ಕಿಸುವುದಕ್ಕಾಗಿ ಕನ್ನಡ ಭಾಷಾ ಪದ ಹಾಗೂ ವಾಕ್ಯರಚನೆಗಳನ್ನು ನಿರ್ದೇಶಕರು ಹೇಗೆಂದರೆ ಹಾಗೆ ಬಳಸಿಕೊಳ್ಳುತ್ತಿರುವುದು ಕನ್ನಡ ನುಡಿ ರಚನೆಗೆ ಮಾರಕವಾಗುತ್ತಿರುವುದನ್ನು ಗುರುತಿಸಿಕೊಳ್ಳಲಾಗಿದೆ. ಈ ಧಾರಾವಾಹಿಯಲ್ಲಿ ಈ ಸಂಬೋಧನೆಗಳು ವೀಕ್ಷಕರನ್ನು ನಗೆ ಉಕ್ಕಿಸಲಿಕ್ಕೇನೇ ತಯಾರಾಗಿವೆ ಎಂದೆನಿಸುತ್ತದೆ.

ಗುಡ್ಡದಭೂತ ಪ್ರಾದೇಶಿಕ ಧಾರಾವಾಹಿಯಲ್ಲಿ ಬಳಕೆಯಾದ ಸಂಬೋಧನೆಗಳು

ಸಂದರ್ಭ: ಪ್ರಯಾಣಿಕನೊಬ್ಬ ಕಾರು ಹತ್ತಲು ಕೈ ತಡೆಯೊಡ್ಡುತ್ತಾನೆ. ಕಾರು ನಿಲ್ಲುತ್ತದೆ. ಕಾರಿನಲ್ಲಿದ್ದ ಪ್ರಯಾಣಿಕನೊಬ್ಬ ಸಾಕು ತುಂಬಿಸಿದ್ದು, ಇನ್ನೆಲ್ಲಿ ಕೂಡಿಸ್ತೀರಿ ಎಂದು ಖಾಸಗಿ ವಾಹನ ಚಾಲಕನಿಗೆ ಹೇಳುತ್ತಾನೆ.

ಚಾಲಕ: ಹೇಳ್ತೇನೆ ಸ್ವಲ್ಪ ಸರ್ಕೊಳಿ.

ಪ್ರಯಾಣಿಕ: ಛೇ... ಎನ್ನುತ್ತಾನೆ.

ಚಾಲಕ: ಸರೀರಿ ಸ್ವಲ್ಪ, ಇನ್ನೂ ಎರಡು ಸೀಟು ಬಾಕಿ ಇದೆ ಗೊತ್ತಾ.

ಪ್ರಯಾಣಿಕ: ಎರಡು ಇದೆಯಾ.

ಚಾಲಕ: ಹಿಂದುಗಡೆ ಡಿಕ್ಕಿ ಒಳಗಡೆಎನ್ನುತ್ತಾನೆ(ಪ್ರಯಾಣೀಕರ ಕೋಪಕ್ಕೆ ಗುರಿಯಾಗುತ್ತಾನೆ. ಕಾರಣ ಈಗಾಗಲೇ ಸೀಟುಗಳು ಭರ್ತಿಯಾಗಿದ್ದರಿಂದ ಪ್ರಯಾಣಿಕರು ಸಾಕು ಹೆಚ್ಚಿನ ಸೀಟುಗಳನ್ನು ಹಾಕಬೇಡ ಎಂದು ಹೇಳುತ್ತಾರೆ. ಚಾಲಕ ಹಣ ಗಳಿಸುವುದಕ್ಕಾಗಿ ಹೆಚ್ಚು ಜನರನ್ನು ತುಂಬಿಸುತ್ತಾನೆ.

ಗಿರಿಯಪ್ಪ ಮತ್ತು ಮಗಳು ರತ್ನಾ ಬೊಂಬೈಯಿಂದ ಕಮರೊಟ್ಟು ಹಳೆ ಮನೆಗೆ ಹೋಗುತ್ತಾರೆ(ಎಲ್ಲ ವಿವರಗಳನ್ನು ಚಾಲಕನಿಗೆ ತಿಳಿಸುತ್ತಾರೆ).

ಚಾಲಕ: ಹೋ ನೀವು ಬೊಂಬೈಯಿಂದ ಬಂದವರಾ. ಹೋಹೋ ಈಗೆಲ್ಲಿ ಹೊರಟಿದೀರಿ(ಗುಡ್ಡ ಭೂತ ಧಾರಾವಾಹಿ).

ಚಾಲಕ: ನೀವ್ ಸ್ವಲ್ಪ ಸುಮ್ಮನಿರಿ ಮರಾಯರೇ,

ಅಂಗಾರಣ್ಣ: ನಿಮಗೆ ತುಳು ಬರೋದಿಲ್ಲವಾ

ಗಿರಿಯಣ್ಣ: ಸ್ವಲ್ಪ ಸ್ವಲ್ಪ ಬರುತ್ತೇ

ಗಿರಿಯಪ್ಪ: 'ತಗೋಳಿ ತಗೋಳಿ'(ನಶೆ ಪುಡಿಯನ್ನು)

ಗಿರಿಯಪ್ಪ: ಹಾಕ್ಕೋಳಿ ಹಾಕ್ಕೋಳಿ.

ಈ ಸಂಬೋಧನೆಗಳು ಗುಡ್ಡದ ಭೂತ ಧಾರಾವಾಹಿಯಲ್ಲಿ ಬಳಕೆಯಾಗಿದ್ದವು. ಈ ಎಲ್ಲ ಸಂಬೋಧನೆಗಳು ಬಹುವಚನದಿಂದ ಕೂಡಿವೆ. ಮೇಲ್ವರ್ಗದ ಗಿರಿಯಪ್ಪನನ್ನು ಕೆಳವರ್ಗದ ಅಂಗಾರಣ್ಣ ಬಹುವಚನದಿಂದಲೇ ಸಂಬೋಧಿಸುತ್ತಾನೆ. ಹೊಸದಾಗಿ ಕಮರೊಟ್ಟು ಗ್ರಾಮಕ್ಕೆ ಬಂದಿದ್ದರಿಂದ ಎಲ್ಲರನ್ನು ಗೌರವ ಸಂಬೋಧನೆಯಿಂದ ಬಳಸುವುದನ್ನು ಗುರುತಿಸಿಕೊಳ್ಳಲಾಗಿದೆ. ಅಲ್ಲದೆ ಇಲ್ಲ ಮರಾಯ, ಏನು ಮರಾಯ ಇತ್ಯಾದಿ ಸಂಬೋಧನೆಗಳು ಕೆಳವರ್ಗಕ್ಕೆ ಮತ್ತು ಮಧ್ಯಮವರ್ಗಕ್ಕೆ ಸೀಮಿತವಾಗಿದೆ. ಅಲ್ಲದೆ ಮೇಲ್ವರ್ಗದವರನ್ನು ಬಹುವಚನ ಬಳಸಿ ಸಂಬೋಧಿಸಿದರೆ ಕೆಳವರ್ಗದವರು ತಮ್ಮ ತಮ್ಮಲ್ಲಿ ಏಕವಚನವನ್ನು ಬಳಸುತ್ತಾರೆ.

ಗೃಹಭಂಗ ಧಾರಾವಾಹಿಯಲ್ಲಿ ಮೊದಲ ಎಪಿಸೋಡ್‌ನಲ್ಲಿ ಬಳಕೆಯಾದ ಸಂಬೋಧನಾ ರೂಪ. ಅಪ್ಪಣ್ಣ ಬುಗಿರಿ ಆಟ ಆಡುತ್ತಾ ಸ್ನೇಹಿತರೊಂದಿಗೆ ಜಗಳವಾಡುತ್ತಾನೆ. ತನ್ನ ತಾಯಿ ಆಟವಾಡುವುದನ್ನು ಕಂಡು ಅಯ್ಯನವರ ಹತ್ತಿರ ಪಾಠ ಕಲಿಯೋದು ಬಿಟ್ಟು ಆಟ ಆಡ್ತೀಯಾ ಎಂದು ಕಿವಿ ಹಿಂಡುತ್ತಾಳೆ.

ಅಪ್ಪಣ್ಣ: ಮೊದಲು ಕಿವಿ ಬಿಡು, ಆಮೇಲೆ ಹೇಳ್ತಿನಿ.

ಗಂಗಮ್ಮ: ನೀ ಮೊದಲು ಬೊಗಳು, ಆಮೇಲೆ ಕಿವಿ ಬಿಡ್ತೀನಿ.

ಅಪ್ಪಣ್ಣ: ನೀ ಮೊದ್ಲು ಕೈ ತೆಗಿ.

ಗಂಗಮ್ಮ: ಹೇ ನೀನ್ ಹೇಳ

ಅಪ್ಪಣ್ಣ: ನೀ ಮೊದ್ಲು ಕೈ ತಗಿ.

ಗಂಗಮ್ಮ: ನಾ ಮೊದ್ಲು ಕೈ ತೆಗಿಯಲ್ಲ, ನೀ ಮೊದ್ಲು ಬೊಗಳು.

ಅಪ್ಪಣ್ಣ: ನಾ ಶಾಲೆಗೆ ಹೊಗ್ದೆ ಇದ್ರೆ ನಿಂದೇನೇ ಗಂಟು ಹೋಗುತ್ತೆ.

ಗಂಗಮ್ಮ: ಏನಂದೆ, ಏನಂದೆ, ಮುಂಡೆದೆ.

ಅಪ್ಪಣ್ಣ: ನಾನಲ್ಲ ಮುಂಡೆ, ನೀನೆ ಮುಂಡೆ.

ಗಂಗಮ್ಮ: ಏನಂದೇ ನನ್ನೆ ಮುಂಡೆ ಅಂತಿಯಾ, ಅಯ್ಯೋ ಅನಿಷ್ಟ ಮುಂಡೆದೆ. ಹೆಯ್ ಬೋರಾ ಅವನ್ನ ಹಿಡ್ಕೊಳೋ(ಎನ್ನುತ್ತಾಳೆ).

ಬೋರಾ: ಆಯ್ತು ಅಮ್ಮರೇ, ಬುದ್ದಿ, ಬುದ್ದಿ, ಓಡ್ಬೇಡಿ.

ಅಪ್ಪಣ್ಣ: ಬೋರಾ ಹೇಯ್ ಬೋರಾ ಬಿಡೋ ಬೋರಾ ಬಿಡೋ.

ಅಪ್ಪಣ್ಣ ವಯಸ್ಸಿನ್ಲಲಿ ಕಿರಿಯವನಾಗಿದ್ದರು ತನಗಿಂತಲೂ ಹಿರಿಯರಾದ ತನ್ನ ತಾಯಿ ಗಂಗಮ್ಮ ಹಾಗೂ ಕೂಲಿ ಆಳು ಬೋರನನ್ನು ಏಕವಚನದಲ್ಲಿ ಸಂಬೋಧಿಸುವುದಲ್ಲದೆ ತನ್ನ ತಾಯಿಗೆ ಸಲ್ಲದ ಮಾತುಗಳನ್ನಾಡುವುದನ್ನು ಗಮನಿಸಲಾಗಿದೆ. ಅಂದರೆ ಶಾನಭೋಗರ ಮನೆಯ ಅಪ್ಪಣ್ಣ ತನ್ನ ತಂದೆಯನ್ನು ಕಳೆದುಕೊಂಡಿದ್ದರಿಂದ ಪೋಲಿ ಹುಡುಗನಾಗುತ್ತಾನೆ. ಆಗ ಆಡುನುಡಿಯಲ್ಲಿ ಗಂಗಮ್ಮ ಮತ್ತು ಅಪ್ಪಣ್ಣರ ಮಾತುಗಳು ಮನೆತನಕ್ಕೆ ಸಲ್ಲದ ಮಾತುಗಳನ್ನು ಆಡುತ್ತಿರುವುದು ಸಾಮಾಜಿಕವಾಗಿ ವೈರುಧ್ಯದಿಂದ ಕೂಡಿದೆ. ಈ ನುಡಿಗಳು ಮಧ್ಯಮವರ್ಗ ಹಾಗೂ ಕೆಳವರ್ಗದ ಜನರಾಡುವ ಮಾತುಗಳಾಗಿವೆ. ಗಂಡು ದಿಕ್ಕಿಲ್ಲದ ಮನೆ ರೀತಿ-ನೀತಿಗಳನ್ನು ಕಳಚಿಕೊಳ್ಳುತ್ತದೆ ಎನ್ನುವುದಕ್ಕೆ ಉತ್ತಮ ಉದಾಹರಣೆಯಾಗಿದೆ. ಮಾತಿನಲ್ಲಿ ಹೊರಟುತನ ಹಾಗು ತಮಗಿಂತಲೂ ಹಿರಿಯನಾದ ಬೋರನನ್ನು ಏಕವಚನದ ಮೂಲಕ ಹೆಸರಿಡಿದು ಕರೆಯುವುದು ಮೇಲ್ವರ್ಗಕ್ಕೆ ಸೀಮಿತವಾಗಿವೆ.

ಗೃಹಭಂಗ ಧಾರಾವಾಹಿಯ ಮೊದಲನೇ ಮತ್ತು ಎರಡನೇ ಎಪಿಸೋಡ್‌ನಲ್ಲಿ ಬಳಕೆಯಾದ ಸಂಬೋಧನೆಗಳು.

ಅಯ್ಯನೋರು: ಗಂಗಮ್ಮೋರೇ, ಏನು ಹುಡುಕ್ತಾ ಇದೀರಾ.

ಗಂಗಮ್ಮ: ನನ್ಮಕ್ಳು ಅಯ್ಯೋರೇ ಗುಡಿಗೇನಾದ್ರು ಬಂದಿದ್ವಾ? ಅಯ್ನೋರೇ

ಮಹಾದೇವಯ್ಯ: ಇಲ್ಲವಲ್ಲ.

ಗಂಗಮ್ಮ: ಬೆಳಿಗ್ಗೆ ಹೋದವು, ಇನ್ನೂ ಮನೆಗೆ ಬಂದಿಲ್ಲ. ಮುಂಡೇವು ಹೊಟ್ಟೆಗೆ ಏನೂ ತಿಂದಿಲ್ಲ. ಪಾಪ ಎಷ್ಟು ಹಸ್ಕೊಂಡಿವೆಯೋ ಏನೋ? ನಾನು ಪಾಟೇಲನಿಗೆ ಹೇಳ್ತೀನಂತ ಹೇಳಿ ಸುಮ್ನೆ ಹೆದ್ರಿಸಿದ್ದೆ?

ಚನ್ನಿಗ: (ಕಬ್ಬಿನ ಹೊಲಕ್ಕೆ ಬೆಂಕಿ ಬಿದ್ದಿರುತ್ತದೆ. ತೆಂಗಿನ ಮರವನ್ನು ಹಡರಿರುತ್ತಾನೆ.) ಹೇ ಬಿಡಿಸ್ರೊ ಹೇ ಬಿಡಿಸ್ರೋ.

ಪಾಟೇಲರ ಆಳು: ಪಾಟೇಲ್ರೆ, ಪಾಟೇಲ್ರೆ, ಪಾಟೇಲ್ರೆ ಕಬ್ಬಿನ ಗದ್ದೆಗೆ ಬೆಂಕಿ ಬಿದ್ದಿದೆ ಬನ್ನಿ.

ಪಾಟೇಲ: ಯಾವನೋ ಬೆಂಕಿ ಹಚ್ಚಿದೋನು?

ಪಾಟೇಲರ ಆಳು: ಗಂಗಮ್ಮೋರೆ, ಗಂಗಮ್ಮೋರೆ ಕಬ್ಬಿನ ಗದ್ದೆಗೆ ಬೆಂಕಿ ಬಿದ್ದಿದೆ. ಚನ್ನಿಗಯ್ಯ ಸಿಕ್ಕಾಕೊಂಡಿದ್ದಾರೆ.

ಪಾಟೇಲರ ಆಳು: ಅಯ್ಯನೋರೆ, ಅಯ್ಯನೋರೆ, ಕಬ್ಬಿನ ಗದ್ದೆಗೆ ಬೆಂಕಿ ಹತ್ತಿಕೊಂಡು ಬಿಟೈತೆ.

ಗಂಗಮ್ಮ: ನನ್ನ ಮಗ ತೆಂಗಿನ ಮರದಲ್ಲಿ ಸಿಕ್ಕಿಕೊಂಡು ಬಿಟ್ಟವನೆ ಯಾರದ್ರೂ ಉಳಿಸ್ರೋ, ಪಾಟೇಲ ಪಾಟೇಲ ನನ್ನ ಮಗ ಬೆಂಕಿಯಲ್ಲಿ ಸಿಕ್ಕಿ ಹಾಕಿಕೊಂಡು ಬಿಟ್ಟನ ಯಾರನ್ನಾದ್ರು ಕಳಿಸೋ.

ಪಾಟೇಲ್ರು: ಹೇ ವಸಿ ತಡೀರಿ ಗಂಗವ್ವ ಕಳಿಸಿದೀನಿ, ಕರ್ಕಂಡಬರ್ತಾರೆ.

ಪಾಟೇಲ: ಹೇ ಅಪ್ಪಣ್ಣ, ಯಾಕ್ಲಾ ಕಬ್ಬಿನಗದ್ದೆಗೆ ಬೆಂಕಿ ಹಾಕ್ದೆ? ನೋಡು ಹೆದ್ರಿಕೋಬ್ಯಾಡ ದೈರ್ಯವಾಗಿರು.

ಅಪ್ಪಣ್ಣ: ನಂಗೊತ್ತಿಲ್ಲ ಕಣ್ರಿ.

ಸಂಗಪ್ಪ: ಗಂಗವ್ವರೇ ಸುಮ್ನೆ ಚನ್ನಿಗನ ಮಾತ್ನ ಒಪ್ಕೊಂಡವರೆ ಅಂತಾಯ್ತು ಅಲ್ವೇನ್ರವ್ವ

ಈ ಮೇಲಿನ ಮಾತುಗಳಲ್ಲಿ ಶಾನುಭೋಗ ಮನೆತನಕ್ಕೆ ಸೇರಿದ ಗಂಗಮ್ಮ ವಿಧವೆ ಮಹಿಳೆ. ಮಧ್ಯ ವಯಸ್ಸಿಗೆ ಗಂಡನನ್ನು ಕಳೆದುಕೊಂಡವಳು. ಊರಿನಲ್ಲಿ ಶಾನುಭೋಗರ ಕೆಲಸವನ್ನು ಮಾಡುತ್ತಿದ್ದ ಮನೆತನವಾಗಿದ್ದರಿಂದ ಇವರೆಲ್ಲ ಗೌರವ ಸಂಬೋಧನೆಗಳನ್ನು ಬಳಸುವುದನ್ನು ಗುರುತಿಸಲಾಗಿದೆ. ಅಯ್ಯನವರು ಗಂಗಮ್ಮನವರು ವಯಸ್ಸಿಗಿಂತಲೂ ದುಪ್ಪಟ್ಟು ಇದ್ದರೂ ಮೇಲ್ವರ್ಗಕ್ಕೆ ಸೇರಿರುವುದರಿಂದ ಅವಳನ್ನು 'ಗಂಗಮ್ಮೋರೆ' ಎಂದು ಸಂಬೋಧಿಸುವುದು. ಅಲ್ಲದೆ ಗಂಗಮ್ಮ ಸಾಂದರ್ಭಿಕವಾಗಿ ಅಯ್ಯನೋರನ್ನು 'ಹೇ ಅಯ್ಯನೆ' ಎಂದು ಏಕವಚನದಲ್ಲಿ ಸಂಬೋಧಿಸುವುದುಂಟು. ಪಾಟೇಲನ ಮನೆ ಆಳು. ಪಾಟೇಲರು ಸಹ ಗಂಗಮ್ಮನನ್ನು ಗೌರವದ ಸಂಬೋಧನೆಗಳನ್ನು ಬಳಸುತ್ತಾರೆ. ಅಲ್ಲದೆ ಚನ್ನಿಗರಾಯ, ಅಪ್ಪಣ್ಣರಿಬ್ಬರು ವಯಸ್ಸಿನಲ್ಲಿ

ಕಿರಿಯರಾಗಿದ್ದರು ಪಾಟೇಲರ ಆಳುಗಳು(ಕೆಳವರ್ಗಕ್ಕೆ ಸೇರಿದ) ಇವರಿಬ್ಬರಿಗಿಂತಲೂ ದುಪ್ಪಟ್ಟು ವಯಸ್ಸಾಗಿದ್ದನ್ನು ಚನ್ನಿಗರಾಯರು, ಅಪ್ಪಣ್ಣರೇ ಎಂದು ಸಂಬೋಧಿಸುವುದನ್ನ ಗುರುತಿಸಿ ಕೊಳ್ಳಲಾಗಿದೆ. ಸಂಪೂರ್ಣವಾಗಿ ಈ ಧಾರಾವಾಹಿಯಲ್ಲಿ ಮೇಲ್ವರ್ಗದ ಹೆಣ್ಣು ಕೆಳವರ್ಗದ ಮತ್ತು ಮಧ್ಯಮ ವರ್ಗ ಪುರುಷ–ಸ್ತ್ರೀಯನ್ನು ಏಕವಚನದಲ್ಲಿಯೇ ಸಂಬೋಧಿಸುತ್ತಾಳೆ. ಪಾಟೇಲ, ಸಮಾನ ಅಂತಸ್ತನಾಗಿದ್ದು ಸಮಾನ ಅಧಿಕಾರದಲ್ಲಿದ್ದರೂ ಕೂಡ ಗಂಗಮ್ಮೋರೆ ಎಂದು ಕರೆಯುತ್ತಿದ್ದ. ಶಾನುಭೋಗರ ಮನೆಯವರನ್ನು ಬಹುವಚನದಲ್ಲಿ ಸಂಬೋಧಿಸುವುದನ್ನು ಗುರುತಿಸಿಕೊಳ್ಳಲಾಗಿದೆ.

ಚನ್ನಿಗರಾಯ, ಅಪ್ಪಣ್ಣರಿಬ್ಬರು ಕೆಳವರ್ಗದ ಹಾಗೂ ಮಧ್ಯಮವರ್ಗದವರನ್ನು ಏಕವಚನ ದಲ್ಲಿಯೇ ಸಂಬೋಧಿಸುವುದನ್ನು ಅಲ್ಲದೇ ಗಂಡ ಸತ್ತ ವಿಧವೆಯಾಗಿದ್ದರಿಂದ ಗಂಡಿಲ್ಲದ ದಿಕ್ಕಾಗಿದ್ದರಿಂದ ತನ್ನ ತಾಯಿಯನ್ನು ಏಕವಚನದಲ್ಲಿ ಹಾಗೂ ಸಲ್ಲದ ಬಯ್ಗುಳನ್ನು ಬಳಸುವುದನ್ನು ಕಂಡುಕೊಳ್ಳಲಾಗಿದೆ. ಈ ಎಲ್ಲಾ ಸಂಬೋಧನೆಗಳನ್ನು ಗೃಹಭಂಗ ಧಾರಾವಾಹಿ ಗಳಿಂದ ಸಂಗ್ರಹಿಕೊಳ್ಳಲಾಗಿದೆ.

ಮಲೆಗಳಲ್ಲಿ ಮದುಮಗಳು ಧಾರಾವಾಹಿ

ಗುತ್ತಿ: ಅಯ್ಯಾ ನಾನು ಗುತ್ತಿ ಬಂದ್ದೀನಿ ಕಣ್ರೋ.

ಭರಮ ಹೆಗ್ಗಡೆ: ತಡೆ ಬಂದೆ. ಈಗ ಈ ಕಾಗದವನ್ನು(ಗುತ್ತಿಯ ಬೊಗಸೆಗೆ ಹಾಕುತ್ತಾರೆ) ಹಳೇಮನೆ ಸುಬ್ಬಣ್ಣ ಹೆಗ್ಗಡೆಯವರ ಕೈಗೆ ತಲುಪಿಸಿ ಬರ್ಬೇಕು. ಎಂಡ ಕಳ್ಳಿ ಅಂತ ಅಲ್ಲಿ ಇಲ್ಲಿ ಕುಂತು ಕಾಲ ಕಳಿಬ್ಯಾಡ.

ಗುತ್ತಿ: ಆಗ್ಲಿ ನನ್ನೊಡೆಯಾ.

ಭರಮ ಹೆಗ್ಗಡೆ: ಕಾಗದ ಕಳ್ದುಗಿಳ್ದಿಯಾ, ಏನೋ ಆಗೋದು ಮತ್ತೇನೋ ಆಗ್ಬಿಟ್ಟೀತು?

ಗುತ್ತಿ: ಆತು ನನ್ನೊಡೆಯಾ

ಭರಮ ಹೆಗ್ಗಡೆ: ಹೂಂ ನೀನಿನ್ನು ಹೊರಡು, ಪತ್ರ ಜೋಪಾನಾ.

ಕರೀಂ ಸಾಬ್: 'ಹೆಯ್, ಕಂಬಳಿ ಇಲ್ಲಿ ಬಾ' ನಿನ್ನ ಸಲಾಮ್ ಆಗಿರಲಿ ಎಲ್ಲಿಯೋ ನನ್ನ ಹಣ?

ನಾಯಿಗುತ್ತಿ: ಇನ್ನೊಂದೆಂಟು ದಿನ ತಡಕ್ಕೊಳ್ರೋ, ನನ್ನ ಮದುವೆಗೆ ಹೆಗ್ಗಡೆಯರ ಕೈಲಿ ದುಡ್ಡು ಕೇಳಿವ್ನಿ ಅದ್ರಾಗೆ ನಿಮ್ಮ ಚಿಲ್ರೇನು ಕೊಟ್ಟುಬಿಡ್ತೀನಿ.

ಕಣ್ಣ ಪಂಡಿತರು: ಹೇ ಗುತ್ತೀ, ಏನೋ ಗುತ್ತಿ ಮದುಮಕ್ಕಳ ಹಾಂಗೆ ಬಟ್ಟೆಯುಟ್ಟು ಹೊರಟಿದ್ದೀಯಲ್ಲವೋ."

ಗುತ್ತಿ: ಅಯ್ಯಾ, ನೀವು ದೇವ್ರ ಸಮ. ನನ್ನ ಮನಸ್ನಲ್ಲಿರೋದನ್ನ ನಾ ಹೇಳಬೇಕಾದ್ರೆ ಮೊದಲೇ, ನೀವೇ ಹೇಳಿದ್ದಿರಿ ನಿಜವಾಗಿಯೂ, ನೀವು ದೇವರಂತ ಮನುಷ್ಯರು.

ಸುಬ್ಬಣ್ಣ ಹೆಗ್ಗಡೆ: ತಿಮ್ಮಾ ತಿಮ್ಮಾ ಹೇ ತಿಮ್ಮ, ತಿಮ್ಮ ಹೇ ತಿಮ್ಮ ಹೇ ಲೇ ಲೇ ಜಂಬನೆ ಆರೋರು ಆಡಿದಂಗೆ ತುದಿ ಬೆರಳಲ್ಲಿ ಹಾರಿಕೊಂಡು ಬರ್ತೀಯಲ್ಲೋ ಬಿಳಿ ಬಟ್ಟೆ ಕೆಸರಾಗ್ತಾದಾ ಏನೋ ನಿಂದು. ನಿಮ್ಮ ನೆರಮನೆ ಅಂಗಳಾದಾಗೆ ಮನೆ ಹಾಳ್ ಜಾಡಿನಲ್ಲ ಕರೀತೀಯಲ್ಲೊ, ನಿನ್ನ ಕರಿ ಭೂತಕ್ಕೆ ಯಾಕೆ ಈ ಬಿಳಿ ಬಟ್ಟೆ.

ತಿಮ್ಮಯ್ಯ ಹೆಗ್ಗಡೆ:(ಕೋಪಗೊಂಡು) ಕರೆದದ್ದೇಕೆ.

ಈ ಮೇಲಿನ ಸಂಬೋಧನೆಗಳು ಕೆಳವರ್ಗದ ಪಾತ್ರಗಳನ್ನು ಏಕವಚನದಿಂದ ಸಂಬೋಧಿಸಿದರೆ, ಮೇಲ್ವರ್ಗದ ಜನರನ್ನು ಗೌರವಸೂಚಕ ಮತ್ತು ಬಹುವಚನ ಬಳಸುವುದನ್ನು ಗುರುತಿಸಿಕೊಳ್ಳಲಾಗಿದೆ.

ಕೆಳವರ್ಗಕ್ಕೆ ಸೇರಿದ ಗುತ್ತಿ ಮೇಲ್ವರ್ಗಕ್ಕೇರಿದ ಭರಮ ಹೆಗ್ಗಡೆ, ಸುಬ್ಬಣ್ಣ ಹೆಗ್ಗಡೆ, ತಿಮ್ಮೇಗೌಡ ಕಣ್ಣಪಂಡಿತರು, ರಂಗಪ್ಪ ಗೌಡ್ರು, ಅನಂತಯ್ಯ, ಕಲ್ಲಯ್ಯಗೌಡ, ದ್ಯಾವೇಗೌಡ, ಮುಕುಂದಯ್ಯ, ನಾಗಕ್ಕ, ನಾಗತ್ತಿ, ವೆಂಕಟಪ್ಪ ನಾಯಕ ಪಾದ್ರಿ ಇನ್ನು ಮುಂತಾದ ಮೇಲ್ವರ್ಗದ ಪಾತ್ರಗಳಿಗೆ ಕೆಳವರ್ಗಕ್ಕೆ ಸೇರಿದ ಚಿಂಕ್ರ, ಸೇರೆಗಾರ, ಸಣ್ಣಯ್ಯ, ಪಿಣಜಿ, ಬಚ್ಚ, ಗುತ್ತಿ, ಐತ, ಪೀಂಚಲು ಈ ಪಾತ್ರಗಳು ಗೌರವಸೂಚಕ ಹಾಗೂ ಬಹುವಚನಸೂಚಕ ಸಂಬೋಧನೆಗಳನ್ನು ಬಳಸುವುದನ್ನು ಮಲೆಗಳಲ್ಲಿ ಮದುಮಗಳು ಧಾರಾವಾಹಿಯಲ್ಲಿ ಕಂಡುಕೊಳ್ಳಲಾಗಿದೆ. ಇದೇ ಮೇಲ್ವರ್ಗದ ಮತ್ತು ಮಧ್ಯಮವರ್ಗಕ್ಕೆ ಸೇರಿದ ಮುಸ್ಲಿಂ ಪಾತ್ರಗಳು ಕೆಳವರ್ಗದ ಪಾತ್ರಗಳನ್ನು ತಮಗಿಂತಲೂ ಹಿರಿಯರಿದ್ದಾಗಲೂ ಅವರನ್ನು ಹೆಸರು ಹಿಡಿದು ಕರೆಯುವುದಲ್ಲದೇ ಸಂಬೋಧನೆಯಲ್ಲಿ ಏಕವಚನವನ್ನು ಬಳಸುವುದನ್ನು ಈ ಧಾರಾವಾಹಿಯಲ್ಲಿ ಗುರುತಿಸಿಕೊಳ್ಳಲಾಗಿದೆ.

ಒಟ್ಟಾರೆಯಾಗಿ ಧಾರಾವಾಹಿಗಳನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿಕೊಳ್ಳಲಾಗಿದೆ. ಇದರಲ್ಲಿ ಕೌಟುಂಬಿಕ ಧಾರಾವಾಹಿಗಳಲ್ಲಿ ಸಂಬೋಧನೆಗಳಿಗೆ ಸಂಬಂಧಿಸಿದಂತೆ ಮೇಲ್ವರ್ಗದ ಪಾತ್ರಗಳು ಮಧ್ಯಮವರ್ಗ ಹಾಗೂ ಕೆಳವರ್ಗಕ್ಕೆ ಸೇರಿದ ಪಾತ್ರಗಳನ್ನು ಏಕವಚನದಿಂದ ಸಂಬೋಧಿಸುತ್ತವೆ. ಅಲ್ಲದೆ ಸಂಬಂಧವಾಚಕಗಳಲ್ಲಿ ಮಧ್ಯಮವಯಸ್ಕರಾಗಿರುವ ಕಲ್ಪನಾ ಹಾಗೂ ಕೈಲಾಸ್‌ರ ಸಂಬೋಧನೆಗಳು ಏಕವಚನದಿಂದ ಕೂಡಿವೆ. ಕಾರಣ ಇವರಿಬ್ಬರೂ ಸಮಾನ ಅಂತಸ್ತುಳ್ಳವರಾಗಿದ್ದು ಕೈಲಾಸ್‌ನನ್ನು ಹೆಸರು ಹಿಡಿದು ಕರೆಯುತ್ತಾಳೆ. ಇದು ಎರಡನೇ ತಲೆಮಾರಾಗಿರುವುದರಿಂದ ಇತರೇ ಸಾಮಾನ್ಯ ಅಂತಸ್ತುಗಳು ಸಮಾಜದಲ್ಲಿ ಕಾಣಬರುವುದಿಲ್ಲ. ಅಲ್ಲದೆ ೩ನೇ ತಲೆಮಾರಿನ ಪತ್ರಗಳು ತಮ್ಮನ್ನು ತಾವು ಸಂಬೋಧಿಸಿಕೊಳ್ಳುವಾಗ, ಗಂಡ–ಹೆಂಡತಿಯರಿಬ್ಬರು ಹೆಸರು

ಹಿಡಿದು ಕರೆಯುವುದು ಆಧುನಿಕತೆಯ ಪ್ರಭಾವ ಹಾಗೂ ನಗರವಾಸಿಗಳ ಪರಿವರ್ತನೆಗೊಳಗಾದ ಸಂಬೋಧನೆಗಳಾದರೆ, ಕೈಲಾಸ್ ಹಾಗೂ ಕಲ್ಪನಾರ ಸಂಬೋಧನೆಗಳು ಇದೇ ಮಾದರಿಯನ್ನು ಹೋಲುವುದನ್ನು ಗುರುತಿಸಿಕೊಂಡಾಗ ಅಂಥ ಶ್ರೀಮಂತ ಕುಟುಂಬದಲ್ಲಿ ಹೆಣ್ಣನ್ನು ಮದುವೆಯಾದರೆ ಆ ಕುಟುಂಬಕ್ಕೆ ಅಳಿಯನಾದವನನ್ನು ಕೀಳಾಗಿ ಕಾಣುವ ಅಥವಾ ನಿರ್ಲಕ್ಷ್ಯದಿಂದ ಕಾಣುವ ಲಕ್ಷಣಗಳನ್ನು ಗುರುತಿಸಿಕೊಳ್ಳಲಾಗಿದೆ. ಹೆಂಡತಿಯನ್ನು ತವರುಮನೆಯಲ್ಲಿ ಬಿಟ್ಟು ತಾನೊಬ್ಬ ಪೋಕರಿಯಾಗಿ ಇಲ್ಲವೇ ಉಡಾಳನಾಗಿ ತಿರುಗುತ್ತಿದ್ದರೆ ಕಿಮ್ಮತ್ತು ಮರ್ಯಾದೆ ಇಲ್ಲದೇ ಇದ್ದಾಗ ಗಂಡನನ್ನು ಏಕವಚನದಲ್ಲಿ ಸಂಬೋಧಿಸುವುದನ್ನು ಈ ಧಾರಾವಾಹಿಯ ಮೂಲಕ ಕಂಡು ಕೊಳ್ಳಲಾಗಿದೆ. ಮೂರನೇ ತಲೆಮಾರಿನ ಯುವಕರ ಸಂಬೋಧನೆಗಳು ಸಾಮಾನ್ಯವಾಗಿ ಹಿರಿಯರನ್ನು ಸಂಬೋಧಿಸುವಾಗ ಸಂಬಂಧವಾಚಕಗಳು ಹಾಗೂ ಗೌರವ ವಾಚಕಗಳನ್ನು ಬಳಸುತ್ತಿರುವುದನ್ನು ಗಮನಿಸಲಾಗಿದೆ. ಯುವಕ-ಯುವತಿಯರ ಸಂಬೋಧನೆಗಳು ಹೆಸರು ಹಿಡಿದು ಕರೆಯುವುದಲ್ಲದೆ, ಏಕವಚನದಿಂದ ಸಂಬೋಧಿಸುತ್ತಿರುವುದನ್ನು ಈ ಧಾರಾವಾಹಿ ಯಲ್ಲಿ ಗುರುತಿಸಿಕೊಳ್ಳಲಾಗಿದೆ. ಇದು ಕೇವಲ 'ಲಕ್ಷ್ಮಿ ಭಾರಮ್ಮ' ಧಾರಾವಾಹಿಗೆ ಸೀಮಿತವಾಗಿರದೆ, ಎಲ್ಲಾ ಕೌಟುಂಬಿಕ ಧಾರಾವಾಹಿಗಳಿಗೆ ಅನ್ವಯಿಸುತ್ತದೆ. ಕೌಟುಂಬಿಕ ಧಾರಾವಾಹಿಗಳಲ್ಲಿ ಹೆಚ್ಚಾಗಿ ಮೇಲ್ವರ್ಗ ಹಾಗೂ ಮಧ್ಯಮವರ್ಗವನ್ನು ಗುರಿಯಾಗಿಸಿ ಧಾರಾವಾಹಿಗಳನ್ನು ನಿರ್ದೇಶಿಸಿರುವುದರಿಂದ ಕೆಳವರ್ಗಕ್ಕೆ ಸೇರಿದ ಮತ್ತು ಗ್ರಾಮೀಣ ಪ್ರದೇಶಕ್ಕೆ ಸೇರಿದ ಪಾತ್ರಗಳ ಸಂಬೋಧನಾ ರೂಪಗಳಿಗೂ ಮತ್ತು ನಗರವಾಸಿಗಳಾದ ಒಂದು ವರ್ಗದವರನ್ನು ಮೆಚ್ಚಿಸಲಿಕ್ಕಲ್ಲದೆ ಸ್ತ್ರೀಯರನ್ನು ಕೇಂದ್ರೀಕರಿಸಿಕೊಂಡು ರಚನೆಯಾಗಿರುವುದರಿಂದ ಪುನಃ ಪುನಃ ಬಳಕೆಯಲ್ಲಿರುವ ಸಂಬೋಧನೆಗಳೇ ಪುನಾರಚನೆಯಾಗುತ್ತಿವೆ.

ಹಾಸ್ಯ ಧಾರಾವಾಹಿಗಳಲ್ಲಿ ನಗೆ ಉಕ್ಕಿಸಲಿಕ್ಕೆಂದೇ ಸಂಬೋಧನೆಗಳನ್ನು ಏಕವಚನ, ಬಹುವಚನ, ಹೆಸರು ಹಿಡಿದು ಕರೆಯುವುದು ಸಾಮಾನ್ಯ. ಇಲ್ಲಿ ವಯಸ್ಸಿನ ಮಿತಿ ಇಲ್ಲದೇ ಇರುವುದನ್ನು ಈ ಹಾಸ್ಯ ಧಾರಾವಾಹಿಗಳಲ್ಲಿ ಗುರುತಿಸಿಕೊಳ್ಳಲಾಗಿದೆ. ಹಾಸ್ಯಧಾರಾವಾಹಿಗಳಲ್ಲಿ ಸಾಮಾಜಿಕ ನಿಯಮಗಳಿಗೆ ವಿಶೇಷವಾಗಿ ಸಂಬೋಧನಾ ರೂಪಗಳು ಬಳಕೆಯಾಗುತ್ತಿರುವುದನ್ನು ಗುರುತಿಸಿಕೊಳ್ಳಲಾಗಿದೆ. ಪುರುಷ ಪಾತ್ರಗಳು ಸ್ತ್ರೀ ಪಾತ್ರಗಳನ್ನು ಗೌರವ ಸಂಬೋಧನೆಗಳಿಂದ ಮತ್ತು ಬಹುವಚನ ರೂಪದಿಂದ ಸಂಭಾಷಿಸುತ್ತವೆ. ಅದೇ ಸ್ತ್ರೀ ಪಾತ್ರಗಳು ಪುರುಷನನ್ನು ಏಕವಚನ ರೂಪದಿಂದಲೂ ಹಾಗೂ ಹೆಸರು ಹಿಡಿದು ಕರೆಯುವಂತಹ ಬದಲಾವಣೆಗಳನ್ನು ಮಾಡಿಕೊಂಡಿರುವುದು ಭಾಷಿಕ ಭಿನ್ನತೆಗೆ ಕಾರಣವಾಗಿದೆ. ಈ ಎಲ್ಲಾ ವಿವರಗಳು ವೀಕ್ಷಕರಿಗೆ ನಗೆ ಉಕ್ಕಿಸಲಿಕ್ಕಾಗಿಯೇ ರೂಪಿಸಲಾಗಿವೆ. ಈ ವಿಶಿಷ್ಟ ತಂತ್ರಗಳನ್ನು ಬಳಕೆ ಮಾಡಿಕೊಂಡು

ಭಾಷಿಕ ನಿಯಮಗಳು ಹಾಗೂ ಸಾಮಾಜಿಕ ನಿಯಮಗಳನ್ನು ಮುರಿದು ಕಟ್ಟುವ ಪ್ರಯತ್ನವನ್ನು ಮಾಡಲಾಗಿದೆ. ಈ ಬದಲಾವಣೆ ಕೇವಲ ಹಾಸ್ಯಧಾರಾವಾಹಿಗಳಿಗೆ ಮಾತ್ರ ಸೀಮಿತವಾಗಿರುವುದನ್ನು ಉದಾಹರಣೆ ಮೂಲಕ ಗುರುತಿಸಿಕೊಳ್ಳಲಾಗಿದೆ. ಅಲ್ಲದೆ ಸಮಾನ ವಯಸ್ಸುಳ್ಳ ಹಾಗೂ ಸಮಾನ ಮನಸ್ಕರಿರುವ ಈ ಪಾತ್ರಗಳು ಯಾವುದೇ ನಿಯಮಗಳನ್ನು ಅನುಸರಿಸದೇ ನಿರಾತಂಕವಾಗಿ ಬಳಸುತ್ತಿರುವುದು ವಿಶೇಷ(ಏನಮ್ಮ, ಹೇ ಇದೇನಾ, ಶೀಲಾ ಅವ್ರು, ಲಲಿತ ಅವ್ರು, ಹೋಗಮ್ಮ, ಬಾರಮ್ಮ) ಈ ಸಂಬೋಧನೆಗಳು ಸಾಮಾನ್ಯವಾಗಿ ನಗೆ ಉಕ್ಕಿಸಲಿಕ್ಕೆಂದೇ ಬಳಕೆಯಾಗುತ್ತಿವೆ.

ಚಾರಿತ್ರಿಕ ಧಾರಾವಾಹಿಗಳಲ್ಲಿ ಮನವಿ ರೂಪದ ಸಂಬೋಧನೆಗಳು ಹೆಚ್ಚಾಗಿ ಬಳಕೆಯಾಗುತ್ತವೆ. ಅಲ್ಲದೆ ಮೇಲ್ವರ್ಗದ ಪಾತ್ರಗಳಿಗೆ ಪ್ರಭು, ಮಹಾರಾಣಿ, ಮಹಾಮಂತ್ರಿಗಳೇ, ಮಹಾರಾಣಿಯವರೆ, ಸ್ವಾಮಿಜಿಗಳೇ, ರಾಘವೇಂದ್ರ ಸ್ವಾಮಿಗಳೇ, ಅಗ್ನಿಹೋತ್ರಿಗಳೇ, ಒಡೆಯ, ಅಯ್ಯನವರೆ, ಅಂತಹ ಗೌರವಸೂಚಕ ಹಾಗೂ ಬಹುವಚನ ರೂಪಗಳಿಂದ ಕೂಡಿವೆ. ಅದೇ ಮೇಲ್ವರ್ಗದ ಪಾತ್ರಗಳು ಆಜ್ಞಾರೂಪದ ಸಂಬೋಧನೆಗಳನ್ನು ಬಳಸುವುದನ್ನು ಗುರುತಿಸಲಾಗಿದೆ. ಮಾಡುವಂತವರಾಗಿ, ಕೇಳುವಂತವರಾಗಿ, ಪಾಲಿಸುವಂತವರಾಗಿ, ಯಾರಲ್ಲಿ, ಈ ತರಹದ ಸಂಬೋಧನೆಗಳು ಮಧ್ಯಮವರ್ಗ ಹಾಗೂ ಕೆಳವರ್ಗದ ಪಾತ್ರಗಳಿಗೆ ಸೀಮಿತವಾಗಿರುವುದನ್ನು ಗುರುತಿಸಿಕೊಳ್ಳಲಾಗಿದೆ. ಪರಸ್ಪರರು ಸಂಭಾಷಿಸುವಾಗ ಮನವಿ ರೂಪದಲ್ಲಿ ಹಾಗೂ ಅಜ್ಞಾಪನೆ ರೂಪದಲ್ಲಾದರೂ ಆಗಲೀ ಬಹುವಚನೆಗಳನ್ನೆ ಬಳಸಿರುವುದು ಈ ಧಾರಾವಾಹಿಗಳಲ್ಲಿ ಕಂಡುಕೊಳ್ಳಲಾಗಿದೆ. ಮೇಲ್ವರ್ಗದ ಸ್ತ್ರೀ ಪಾತ್ರಗಳು ಕೆಳವರ್ಗದ ಪುರುಷ ಪಾತ್ರಗಳನ್ನು ಆಜ್ಞಾಪಿಸುವಂತಹ ಸಂಬೋಧನೆಗಳೇ ಹೆಚ್ಚಾಗಿ ಬಳಕೆಯಲ್ಲಿವೆ. ವಯಸ್ಸಿನಲ್ಲಿ ಚಿಕ್ಕವರಾಗಿದ್ದರೂ ಸಹ ಕೆಳವರ್ಗದ ಪುರುಷಪಾತ್ರಗಳಿಗೆ ಅಲ್ಲದೇ ಏಕವಚನದಿಂದ ಸಂಬೋಧಿಸುವುದನ್ನು ಈ ಮೂಲಕ ಗುರುತಿಸಲಾಗಿದೆ. ವಯಸ್ಸಿನ ಅಂತರವಿದ್ದಾಗಲೂ ಮೇಲ್ವರ್ಗದ ಸ್ತ್ರೀ–ಪುರುಷರನ್ನು ಕೆಳವರ್ಗದ ಸ್ತ್ರೀ–ಪುರುಷರಿಬ್ಬರು ಗೌರವದಿಂದ ಸಂಬೋಧಿಸಿರುವುದನ್ನು ಈ ಮೇಲಿನ ಉದಾಹರಣೆಗಳು ನಿರೂಪಿಸುತ್ತವೆ.

ಪ್ರಾದೇಶಿಕ ಧಾರಾವಾಹಿಗಳಲ್ಲಿ ಬಳಕೆಯಾಗುವ ಸಂಬೋಧನಾ ರೂಪಗಳಿಗೂ ಈಗಾಗಲೇ ಚರ್ಚಿಸಿರುವ ರೂಪಗಳಿಗೂ ಯಾವ ಭಿನ್ನತೆಯೂ ಕಾಣಬರುವುದಿಲ್ಲ. ಆದರೆ ಇಲ್ಲಿ ಮೇಲ್ವರ್ಗದ ಪಾತ್ರಗಳು ಮಧ್ಯಮವರ್ಗದ ಹಾಗೂ ಕೆಳವರ್ಗದ ಪಾತ್ರಗಳಿಗೆ ಏಕವಚನವನ್ನು ಬಳಸುತ್ತವೆ. ಕೆಳವರ್ಗಕ್ಕೆ ಸೇರಿದ ಪಾತ್ರಗಳು ಮಧ್ಯಮವರ್ಗಕ್ಕೆ ಸೇರಿದ ಪಾತ್ರಗಳನ್ನು ಗೌರವಸೂಚಕ ಹಾಗೂ ಬಹುವಚನಗಳಿಂದ ಸಂಬೋಧಿಸುತ್ತವೆ. ಅದೇ ಕೆಳವರ್ಗದ ಪಾತ್ರಗಳು ಮೇಲ್ವರ್ಗದ ಪುರುಷರನ್ನು ಸಂಬೋಧಿಸುವಾಗ ವಯಸ್ಸಿನಲ್ಲಿ ಕಿರಿಯರಾಗಿದ್ದರೂ ಅವರನ್ನು ಸಂಬೋಧಿಸುವುದು ಬಹುವಚನ ರೂಪದಿಂದಲೇ. ಮೇಲ್ವರ್ಗಕ್ಕೆ ಸೇರಿದ ಸ್ತ್ರೀಯು ವಯಸ್ಸಿನಲ್ಲಿ ಹಿರಿಯರಾಗಿದ್ದರೂ

ಅವರನ್ನು ಏಕವಚನದಿಂದ ಹೆಸರು ಹಿಡಿದು ಕರೆಯುವುದನ್ನು ಈ ಉದಾಹರಣೆಗಳು ನಿರೂಪಿಸುತ್ತವೆ.

೪.೨. ವ್ಯಕ್ತಿನಾಮಗಳು

ಅಶಾಬ್ದಿಕ ಸಂವಹನ ಸಮುದಾಯವನ್ನು ಕಲ್ಪಿಸಿಕೊಳ್ಳಬಹುದೇನೋ ಆದರೆ ವ್ಯಕ್ತಿನಾಮಗಳಿಲ್ಲದ ಸಮುದಾಯವನ್ನು ಊಹಿಸಿಕೊಳ್ಳುವುದಕ್ಕೂ ಸಾಧ್ಯವಿಲ್ಲ. ಸಮುದಾಯವೊಂದರಲ್ಲಿ ಒಪ್ಪಿತ ವ್ಯಕ್ತಿನಾಮವಿಲ್ಲದಿದ್ದರೂ ಕೊನೆಯ ಪಕ್ಷ ಪರ್ಯಾಯನಾಮದೊಂದಿಗಾದರೂ ಸಂಬೋಧನೆ ಜರುಗುತ್ತಿರುತ್ತದೆ. ವಾಸ್ತವವಾಗಿ ವ್ಯಕ್ತಿಗಳಿಗೂ ಅಂದರೆ ಹೆಸರಿಗೂ ನಡುವೆ ಯಾವುದೇ ಸಂಬಂಧವಿಲ್ಲ. ಅಂದರೆ ಪರಸ್ಪರ ಇವೆರಡೂ ಯಾದೃಚ್ಛಿಕವಾದವು. ವ್ಯಕ್ತಿಗೆ ತಕ್ಕಂತೆ ಹೆಸರು ಇರುವುದಿಲ್ಲ. ಹೆಸರಿಗೆ ತಕ್ಕಂತೆ ವ್ಯಕ್ತಿಯು ಇರುವುದಿಲ್ಲ. ಇವೆರಡರ ನಡುವಿನ ಸಂಬಂಧ ಕೇವಲ ಸಂಬೋಧನೆಗಾಗಿ ಇದೆಯೇ ಹೊರತು, ಅದರಿಂದಾಚೆಗೆ ಏನೂ ಇರುವುದಿಲ್ಲ. ವ್ಯಕ್ತಿನಾಮಗಳು ಯಾವಾಗಲೂ ಭಾಷೆಯೊಂದರಲ್ಲಿ ಬೆಳವಣಿಗೆಯ ಹಾದಿಯಲ್ಲಿರುತ್ತವೆ. ಹಾಗಾಗಿ ವ್ಯಕ್ತಿನಾಮಗಳು ಹೆಸರಿಸುತ್ತವೋ ಅಥವಾ ವರ್ಣಿಸುತ್ತವೋ ಎಂಬುದು ಭಾಷೆಯಲ್ಲಿ ಚರ್ಚೆಯ ವಿಚಾರ. ಹೆಚ್ಚಿನ ಪ್ರಮಾಣದಲ್ಲಿ ವ್ಯಕ್ತಿನಾಮಗಳು ಹೆಸರಿಸುತ್ತವೆ. ಕೆಲವು ಸಂದರ್ಭದಲ್ಲಿ ವರ್ಣಿಸುತ್ತವೆ. ಮೆಳ್ಳಗಣ್ಣಪ್ಪನಿಗೆ, ಕಣ್ಣು ಗುಳ್ಳೆ ದಪ್ಪವಾಗಿರಬೇಕಾಗಿಲ್ಲ. ಇಂತಹ ಸಂದರ್ಭದಲ್ಲಿ ಹೆಸರು ವಂಶ ಪಾರಂಪರ್ಯವಾಗಿ ಬಳಕೆಯಲ್ಲಿರುತ್ತವೆ. ಅಂದರೆ ವ್ಯಕ್ತಿನಾಮಗಳು ಸಮುದಾಯದ ನಂಬಿಕೆಯ ಭಾಗವಾಗಿಯೂ ಬಳಕೆಯಲ್ಲಿವೆ.[೬]

"ಒಂದು ನಿರ್ದಿಷ್ಟ ಸಮಾಜದ ರಚನೆ ಅಥವಾ ಸಾಮಾಜಿಕ ವ್ಯವಸ್ಥೆಯನ್ನು ತಿಳಿಯಲು ವ್ಯಕ್ತಿನಾಮಗಳು ಸಹಾಯಕವಾಗಿವೆ. ವ್ಯಕ್ತಿನಾಮಗಳು ಸಮಾಜದಲ್ಲಿ ವ್ಯಕ್ತಿ ಮತ್ತು ಸಮಾಜದ ಕೊಂಡಿಯಾಗಿ ಕಾರ್ಯ ನಿರ್ವಹಿಸುತ್ತವೆ. ಒಂದು, ಧರ್ಮ ಮತ್ತು ಜಾತಿ. ಎರಡನೆಯದು, ಆರ್ಥಿಕತೆ ಮತ್ತು ಸಾಮಾಜಿಕತೆಯ ಸ್ತರಗಳು ಮುಖ್ಯವಾಗಿ ಜಾತಿ ಮತ್ತು ಧರ್ಮಗಳು ನಂಬಿಕೆ, ಸಂಸ್ಕೃತಿ, ಪರಂಪರೆ, ಆಚರಣೆಗಳನ್ನು ಒಳಗೊಂಡಿದ್ದರೆ, ವೃತ್ತಿ, ಆದಾಯ ಮತ್ತು ಆರ್ಥಿಕ ಸಾಮಾಜಿಕ ಸ್ತರಗಳನ್ನು ಸೃಷ್ಟಿ ಮಾಡುತ್ತವೆ. ವ್ಯಕ್ತಿನಾಮವನ್ನು ಕೇಳಿದ ತಕ್ಷಣ ಧರ್ಮವನ್ನು ನಿರ್ಣಯಿಸುವುದಕ್ಕೆ ಸಾಧ್ಯ. ಶಿವ, ಪಾರ್ವತಿ, ಲಕ್ಷ್ಮಿ, ಸರಸ್ವತಿ, ಶಂಕರ, ಬಸವ, ಮಹಾದೇವ, ಮಂಟೆಲಿಂಗ, ರಾಚಪ್ಪಾಜಿ ಮುಂತಾದವು ಹಿಂದೂ ಧರ್ಮವನ್ನು ಪ್ರತಿನಿಧಿಸಿದರೆ, ಅಕ್ಬರ್, ಅಬ್ದುಲ್, ರಹಮತ್, ರಫೀಕ್, ಅಕ್ರಮ್, ಫಾತಿಮಾ, ನವಾಜ್ ಮುಂತಾದ ಹೆಸರುಗಳು ಮುಸ್ಲಿಂ ಧರ್ಮವನ್ನು ಪ್ರತಿನಿಧಿಸುತ್ತವೆ. ಅದೇ ರೀತಿ ರಿಚರ್ಡ್, ಮೇರಿ, ಜೋಸೆಫ್, ಲೂಥರ್, ಜಾನ್‌ಸನ್, ಮಾರ್ಗರೇಟ್ ಮುಂತಾದ ಹೆಸರುಗಳು ಕ್ರಿಶ್ಚಿಯನ್ ಧರ್ಮವನ್ನು ಪ್ರತಿನಿಧಿಸುತ್ತವೆ. ಇಷ್ಟೇ ಅಲ್ಲದೆ ಹೆಸರುಗಳಿಂದ ಭಾಷಾಗಡಿಗಳನ್ನು ಗುರುತಿಸಲು ಸಾಧ್ಯ ಅಥವಾ ಇವರು

ಅನ್ಯಭಾಷಿಕರು ಎಂದು ಖಚಿತವಾಗಿ ನಿರ್ಧರಿಸಲು ಸಾಧ್ಯ. ಸೆಲ್ವಿ, ಮುರುಗೇಶ್, ಮರುಗನ್, ಮಣಿಯನ್, ಮಣಿ ಮುಂತಾದ ಹೆಸರುಗಳು ತಮಿಳುನಾಡಿನ ಹೆಸರುಗಳೆಂದು ನಿರ್ಧರಿಸಬಹುದು. ಇದೇ ರೀತಿ ಬೇರೆ ಬೇರೆ ಭಾಷೆಗಳ ಪ್ರಭಾವವನ್ನು ಗುರುತಿಸಲು ಸಾಧ್ಯವಿದೆ."

ಈವರೆಗೂ ಈ ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಚರ್ಚೆಗಳು ನಡೆದಿರುವುದೇ ಹೆಚ್ಚು. ಪ್ರಸ್ತುತ ಅಧ್ಯಯನಕ್ಕೆ ಸಂಬಂಧಿಸಿದಂತೆ ಧಾರಾವಾಹಿಗಳಲ್ಲಿ ವ್ಯಕ್ತಿನಾಮಗಳ ಸ್ವರೂಪವನ್ನು ಕಂಡುಕೊಳ್ಳುವುದು ಕೂಡ ಒಂದು ಚರ್ಚಿತವಾದ ವಿಷಯ. ಕಾರಣ ನಿರ್ದಿಷ್ಟವಾಗಿ ಇಂಥದ್ದೇ ಧರ್ಮ, ಜಾತಿ ಎಂದು ನಿರ್ಣಯಿಸಲು ಸಾಧ್ಯವಿಲ್ಲದೇ ಇರುವುದರಿಂದ ಚರ್ಚೆಗೆ ವಿಶೇಷ ಅವಕಾಶವುಂಟು. ಕೇವಲ ಇಲ್ಲಿ ವರ್ಗಾಧಾರಿತ ಮತ್ತು ಲಿಂಗ, ವಯಸ್ಸನ್ನು ಶಿಕ್ಷಣಕ್ಕೆ ಸಂಬಂಧಿಸಿ ದಂತೆ ಚರ್ಚಿಸಲು ಅವಕಾಶವಿದೆ. ಕೌಟುಂಬಿಕ, ಪ್ರಾದೇಶಿಕ, ಹಾಸ್ಯ ಮತ್ತು ಚಾರಿತ್ರಿಕ ಧಾರಾವಾಹಿ ಗಳೇ ಮೇಲ್ವರ್ಗ, ಮಧ್ಯಮವರ್ಗ, ಕೆಳವರ್ಗ ಎಂದು ಪರಿಗಣಿಸಿಕೊಂಡು ವ್ಯಕ್ತಿನಾಮಗಳ ವೈಶಿಷ್ಟ್ಯತೆಯನ್ನು ಗುರುತಿಸುವ ಪ್ರಯತ್ನ ಇದಾಗಿದೆ. ಅಲ್ಲದೆ ನಿರ್ದಿಷ್ಟ ವಾರ್ಗಿಕಗಳ ಹಿನ್ನೆಲೆಯಲ್ಲಿ ಸಾಮಾಜಿಕವಾಗಿ ಸಂಬೋಧಿಸುವ ಸಂದರ್ಭದಲ್ಲಿ ಯಾವುದು ಮೇಲ್ವರ್ಗಗಳಿಗೆ ಸೇರಿದ್ದು, ಯಾವುದು ಮಧ್ಯಮವರ್ಗಕ್ಕೆ ಸೇರಿದ್ದು, ಯಾವುದು ಕೆಳವರ್ಗಕ್ಕೆ ಸೇರಿದ್ದು ಎಂದು ಊಹಿಸಲು ಸಾಧ್ಯವಿದೆ. ಈ ಹಿನ್ನೆಲೆಯಲ್ಲಿ ಸ್ತ್ರೀ-ಪುರುಷ ವ್ಯಕ್ತಿನಾಮಗಳು ಚಾರಿತ್ರಿಕ ಹಾಗೂ ಆಧುನಿಕ ಸಂದರ್ಭದಲ್ಲಿ ಹೇಗೆ ಬದಲಾವಣೆಗಳನ್ನು ಪಡೆದುಕೊಂಡಿದೆ ಎಂಬುದನ್ನು ಗುರುತಿಸಿಕೊಳ್ಳಲಾಗಿದೆ.

ಕೌಟುಂಬಿಕ ಧಾರಾವಾಹಿಗಳಲ್ಲಿ ವ್ಯಕ್ತಿನಾಮಗಳು

ಪುರುಷರು	**ಸ್ತ್ರೀಯರು**
ಸಿದ್ಧಾರ್ಥ ಪಾಟೀಲ್(ಅರಗಿಣಿ)	ಪೂಜಾಸಿಂಧ್ಯಾ(ಅರಗಿಣಿ)
ಶಶಾಂಕ(ಅರಗಿಣಿ)	ಅಕ್ಷರಾ(ಅರಗಿಣಿ)
ವಿಜಯ್‌ದೇಸಾಯಿ(ಅಮೃತವರ್ಷಿಣಿ)	ಖುಷಿ(ಅರಗಿಣಿ)
ವಿನಯ್‌ದೇಸಾಯಿ(ಅಮೃತವರ್ಷಿಣಿ)	ಧನಲಕ್ಷ್ಮಿ(ಅರಗಿಣಿ)
ಭೂಪತಿ(ಬಂಗಾರ)	ಪಾವಣಿ(ಅರಗಿಣಿ)
ಕುಲಶೇಖರ(ಬಂಗಾರ)	ಅಮೃತ ದೇಸಾಯಿ(ಅಮೃತವರ್ಷಿಣಿ)
ಸಿದ್ಧಾರ್ಥ(ಬಂಗಾರ)	ವರ್ಷಿಣಿ ದೇಸಾಯಿ(ಅಮೃತವರ್ಷಿಣಿ)
ಚಂದ್ರಮೋಹನ(ಬಂಗಾರ)	ಯಶೋಧ(ಅಮೃತವರ್ಷಿಣಿ)
ಮೃತ್ಯುಂಜಯ(ಬಂಗಾರ)	ಕೋಮಲ(ಅಮೃತವರ್ಷಿಣಿ)

ಬೋರೆಗೌಡ(ಲಕ್ಷ್ಮೀ ಬಾರಮ್ಮ)	ಶಾಕುಂತಲ ದೇವಿ(ಅಮೃತವರ್ಷಿಣಿ)
ಬಸವರಾಜ(ಲಕ್ಷ್ಮೀ ಬಾರಮ್ಮ)	ಕಾವೇರಿ(ಬಂಗಾರ)
ನಂಜುಂಡ(ಲಕ್ಷ್ಮೀ ಬಾರಮ್ಮ)	ಕಾಂಚನ(ಬಂಗಾರ)
ಜುಟ್ಟಿ(ಮಹಾಪರ್ವ)	ಚಂದ್ರಾ(ಬಂಗಾರ)
ಸಿ.ಎಸ್.ಪಿ.(ಮಹಾಪರ್ವ)	ಸೌಪಾನಿಕ(ಬಂಗಾರ)
ಪ್ರಭುಶಂಕರ ದೇಸಾಯಿ(ಅಮೃತವರ್ಷಿಣಿ)	ಕಾವೇರಮ್ಮ(ಲಕ್ಷ್ಮೀ ಬಾರಮ್ಮ)
	ಲಕ್ಷ್ಮಿ(ಲಚ್ಚಿ)(ಲಕ್ಷ್ಮೀ ಬಾರಮ್ಮ)
	ನಾಗಮ್ಮ(ಲಕ್ಷ್ಮೀ ಬಾರಮ್ಮ)
	ತಾತಮ್ಮ(ಲಕ್ಷ್ಮೀ ಬಾರಮ್ಮ)
	ಸುಜಾತ(ಲಕ್ಷ್ಮೀ ಬಾರಮ್ಮ)
ಚಂದು(ಲಕ್ಷ್ಮೀ ಬಾರಮ್ಮ)	ಪಾರ್ವತಿ(ಲಕ್ಷ್ಮೀ ಬಾರಮ್ಮ)
ರಾಮು(ಲಕ್ಷ್ಮೀ ಬಾರಮ್ಮ)	ಶ್ರುತಿ(ಲಕ್ಷ್ಮೀ ಬಾರಮ್ಮ)
ಪ್ರಥಮ್(ಬದುಕು)	ಕಲ್ಪನಾ(ಲಕ್ಷ್ಮೀ ಬಾರಮ್ಮ)
ಪ್ರದೀಪ್(ಬದುಕು)	ಕುಮುದಾ(ಲಕ್ಷ್ಮೀ ಬಾರಮ್ಮ)
ಶಿವರಾಮಯ್ಯ(ಮಯಾಮೃಗ)	ಸುಲೋಚನಾ(ಲಕ್ಷ್ಮೀ ಬಾರಮ್ಮ)
	ನೇತ್ರಾ(ಲಕ್ಷ್ಮೀ ಬಾರಮ್ಮ)
ನರಸಿಂಹಶಾಸ್ತ್ರಿಗಳು(ಮಯಾಮೃಗ)	ಲಾವಣ್ಯ(ಬದುಕು)
ಸಂಪತ್(ಮಯಾಮೃಗ)	ಕಮಲ(ಮಯಾಮೃಗ)
ಶಾಮು(ಮಯಾಮೃಗ)	ಶ್ರೀಲಕ್ಷ್ಮಿ(ಮಯಾಮೃಗ)
ಮುಖ್ಯಮಂತ್ರಿ ಚಂದ್ರು(ಮಯಾಮೃಗ)	ರಾಧ(ಮಯಾಮೃಗ)
ಮನೋಹರ್(ನಾಕುತಂತಿ)	ಮಾಳವಿಕಾ(ಮಯಾಮೃಗ)
ಪ್ರಭು(ನಾಕುತಂತಿ)	ಅಮೃತ(ಮಯಾಮೃಗ)
ನಾಣಿ(ಮದರಂಗಿ)	ಪ್ರಕೃತಿ(ನಾಕುತಂತಿ)
ರಾಘಣ್ಣ(ಮದರಂಗಿ)	ಮೇಘಾ(ಮದರಂಗಿ)

ಹರಿಶ್ಚಂದ್ರ ಸೋಡಂಕಿ(ಮದರಂಗಿ)	ವೇದ(ಮದರಂಗಿ)
ಶ್ರವಣ(ಮದರಂಗಿ)	ಸತ್ಯವತಿ(ಮದರಂಗಿ)
	ಸ್ವರ(ಮದರಂಗಿ)
ರುದ್ರಣ್ಣ(ಅಕ್ಕ)	ಪರೀಕ್ಷಾ(ಮದರಂಗಿ)
ಮೋಚಿ(ಅಕ್ಕ)	ಜಲಜ
ಹೂವೆ(ಹೂವಿನ	ರಾಣಿ(ಜೋಕಾಲಿ)
ಹಡಗಲಿ ವೆಂಕಟಪ್ಪ)(ಜೋಕಾಲಿ)	ಭೂಮಿಕಾ(ಅಕ್ಕ)
ಆಕಾಶ್(ಅಕ್ಕ)	ದೇವಿಕಾ(ಅಕ್ಕ)
ರಮೇಶ್(ಜೋಕಾಲಿ)	ಪಾರ್ವತಿ(ಅಕ್ಕ)
ತಾಂಡವಮೂರ್ತಿ(ಮಹಾಪರ್ವ)	ಮಾಧವಿ ಪ್ರಿಯದರ್ಶಿನಿ ಪಾಟೀಲ್(ಮಹಾಪರ್ವ)
ಪಾಂಡುರಂಗದೇಸಾಯಿ(ಮಹಾಪರ್ವ)	ಗೌರಿವಿಭಾವರಿ(ಮಹಾಪರ್ವ)
ವಿಷ್ಣುಮೂರ್ತಿ ಚಿಂತಾದ್ರಿ(ಮಹಾಪರ್ವ)	ಶರ್ಮಿಳಾ ಚಿಂತಾದ್ರಿ(ಮಹಾಪರ್ವ)
ಗಜಪತಿ(ಮಹಾಪರ್ವ)	ಮಂದಾಕಿನಿ(ಮಹಾಪರ್ವ)
ಚಿಂತನ್(ಮಹಾಪರ್ವ)	ಲಲಿತಾಮಾಮಿ(ಮಹಾಪರ್ವ)
ವಿದ್ಯಾಧರ ಸಿದ್ದಾರ್ಥ್(ಮಹಾಪರ್ವ)	ಮೈಥಿಲಿ ಸುದರ್ಶನ ನಾಯಕ್(ಮಹಾಪರ್ವ)
ವೆಂಕಟೇಶ್(ವೆಂಕಿಮಾಮ)(ಮಹಾಪರ್ವ)	ಪರಿಣೀತ(ಮಹಾಪರ್ವ)
	ಚಿನ್ಮಯಿ(ಮಹಾಪರ್ವ)

ಈ ಮೇಲಿನ ವ್ಯಕ್ತಿನಾಮಗಳಲ್ಲಿ ಹಲವು ಮೇಲ್ವರ್ಗದ ಹಾಗೂ ಕೆಲವೇ ಕೆಲವು ಮಾತ್ರ ಕೆಳವರ್ಗಕ್ಕೆ ಸಂಬಂಧಿಸಿದಿವೆ. ಈ ಎಲ್ಲಾ ಪಾತ್ರಗಳು ಮಧ್ಯಮ ಮತ್ತು ಮೇಲ್ವರ್ಗದ ಪಾತ್ರಗಳಾಗಿರುವುದರಿಂದ ಮತ್ತು ವಾರ್ಗಿಕಗಳನ್ನು ಕಳಚಿಕೊಂಡಿರುವುದರಿಂದ ಇವುಗಳನ್ನು ಮೂರು ತಲೆಮಾರುಗಳಲ್ಲಿ ಗುರುತಿಸಿಕೊಳ್ಳಲಾಗಿದೆ.

೧ನೇ ತಲೆಮಾರಿನ ವ್ಯಕ್ತಿನಾಮಗಳು: ಪುರುಷ ವ್ಯಕ್ತಿನಾಮಗಳು: ಭೂಪತಿ, ಕುಲಶೇಖರ, ಮೃತ್ಯುಂಜಯ ಬೋರೇಗೌಡ, ಶಿವರಾಮಯ್ಯ, ನರಸಿಂಹಶಾಸ್ತ್ರಿ, ಹರಿಶ್ಚಂದ್ರ ಸೋಡಂಕಿ, ರುದ್ರಣ್ಣ ಹೂವೆ, ತಾಂಡವ ಮೂರ್ತಿ, ಪಾಂಡುರಂಗ ದೇಸಾಯಿ, ವೆಂಕಟೇಶ್(ವೆಂಕಿಮಾಮ).

ಸ್ತ್ರೀ ವ್ಯಕ್ತಿನಾಮಗಳು: ಪಾರ್ವತಿ, ಸುಲೋಚನಾ, ಸತ್ಯವತಿ, ಮಂದಾಕಿನಿ, ಲಲಿತಮಾಮಿ, ತಾತಮ್ಮ, ನಾಗಮ್ಮ, ಕಮಲ, ಶಾಕುಂತಲದೇವಿ.

ಅಂತಸ್ತನ್ನು ಸೂಚಿಸುವ ಮತ್ತು ವೃತ್ತಿಯನ್ನು ಸೂಚಿಸುವಂತಹ ಪುರುಷ ವ್ಯಕ್ತಿನಾಮಗಳನ್ನು ಕೌಟುಂಬಿಕ ಧಾರಾವಾಹಿಗಳಲ್ಲಿ ಬಳಸಿಕೊಳ್ಳಲಾಗಿದೆ. ಅಲ್ಲದೇ ಮನೆತನದ ಹೆಸರುಗಳು ವಾರ್ಗಿಕವಾಗಿ ಕೊನೆಗೊಳ್ಳುವುದನ್ನು ಆಡಳಿತಾತ್ಮಕ ಅಥವಾ ಅಧಿಕಾರ ಕೇಂದ್ರಿತ ನಾಮಗಳನ್ನು ವಾರ್ಗಿಕವಾಗಿ ಬಳಸಿಕೊಳ್ಳಲಾಗಿದೆ. ಉದಾಹರಣೆಗೆ: ಬೋರೇಗೌಡ ಬೋರಯ್ಯ+ಗೌಡ ನಿರ್ದಿಷ್ಟ+ವಾರ್ಗಿಕ

ಇಂತಹ ವ್ಯಕ್ತಿನಾಮಗಳು ಕೇವಲ ಅಂತಸ್ತನ್ನು ಮಾತ್ರವಲ್ಲದೆ ಗ್ರಾಮೀಣ ಪರಿಸರದ ವ್ಯಕ್ತಿನಾಮಗಳಿಗೂ ಮತ್ತು ನಗರ ಪ್ರದೇಶದ ವ್ಯಕ್ತಿನಾಮಗಳಿಗೂ ಇರುವ ವ್ಯತ್ಯಾಸವನ್ನು ಗುರುತಿಸಿ ಕೊಳ್ಳಲು ಸಾಧ್ಯವಿದೆ. ಹೀಗೆ ದೇಸಾಯಿ, ಮೂರ್ತಿ, ಸೋಡಂಕಿ, ಎಂಬಂತಹ ವಾರ್ಗಿಕಗಳೊಂದಿಗೆ ಕೊನೆಗೊಂಡಿವೆ.

ಸ್ತ್ರೀ ವ್ಯಕ್ತಿನಾಮಗಳು: ಶಾಕುಂತಲದೇವಿ, ಕಾಂಚನ, ಚಂದ್ರಾ, ತಾತಮ್ಮ, ಪಾರ್ವತಿ, ಸುಲೋಚನಾ, ರಾಧ, ಮಂದಾಕಿನಿ, ಲಲಿತಮಾಮಿ, ಸತ್ಯವತಿ, ಕಾವೇರಮ್ಮ ಇನ್ನೂ ಮುಂತಾದ ಹೆಸರುಗಳು ಆಧುನಿಕ ವ್ಯಕ್ತಿನಾಮಗಳಾಗಿದ್ದು, ಪುರುಷ ನಾಮಗಳಲ್ಲಿ ವಾರ್ಗಿಕದಲ್ಲಿ ಕೊನೆಗೊಳ್ಳುವ ಮನೆತನದ ಹೆಸರುಗಳಾಗಲೀ, ವೃತ್ತಿಸೂಚಕ ಹೆಸರುಗಳಾಗಲೀ ಕೊನೆಗೊಳ್ಳದೇ ಇರುವುದನ್ನು ಕೌಟುಂಬಿಕ ಧಾರಾವಾಹಿಗಳಲ್ಲಿ ಕಂಡುಕೊಳ್ಳಲಾಗಿದೆ.

೨ನೇ ತಲೆಮಾರಿನ ವ್ಯಕ್ತಿನಾಮಗಳು

ಪುರುಷ ವ್ಯಕ್ತಿನಾಮಗಳು: ಸಿದ್ಧಾರ್ಥ್ ಪಾಟೀಲ್, ಶಶಾಂಕ್, ವಿಜಯ್ ದೇಸಾಯಿ, ವಿನಯ್ ದೇಸಾಯಿ, ಸಿದ್ಧಾರ್ಥ, ಬಸವರಾಜ, ನಂಜುಂಡ, ಚಂದು, ರಾಮು, ಪ್ರಥಮ್, ಶಾಮು, ಪ್ರಭು, ನಾಣಿ, ಆಕಾಶ್, ರಮೇಶ್, ಶ್ರವಣ, ಮನೋಹರ್, ಚಿಂತನ್, ಪರೀಕ್ಷಿತ್, ಪ್ರಭುಶಂಕರ ದೇಸಾಯಿ ಈ ಎಲ್ಲಾ ವ್ಯಕ್ತಿನಾಮಗಳು ಆಧುನಿಕತೆಯ ಪ್ರಭಾವದಿಂದ ಯಾವುದೇ ವರ್ಗ, ಅಂತಸ್ತು, ಅಧಿಕಾರ, ಶಿಕ್ಷಣದ ಹಿನ್ನೆಲೆಯಲ್ಲಿ ಊಹಿಸಲು ಅಸಾಧ್ಯವಾಗುವಂತಹ ವ್ಯಕ್ತಿನಾಮ ಗಳಾಗಿವೆ. ಅಲ್ಲಲ್ಲಿ ತೀರ ಶ್ರೀಮಂತ ಅಥವಾ ಅಂತಸ್ತಿನವರು ಎಂಬ ಕಾರಣಕ್ಕಾಗಿ ಮನೆತನದ ಹೆಸರುಗಳನ್ನು ವಾರ್ಗಿವಾಗಿ ಬಳಸಿಕೊಂಡಿರುವುದನ್ನು ಗುರುತಿಸಿಕೊಳ್ಳಲಾಗಿದೆ. ಉದಾಹರಣೆಗೆ ವಿಜಯ್ ದೇಸಾಯಿ, ವಿನಯ್ ದೇಸಾಯಿ, ಸಿದ್ಧಾರ್ಥ ಪಾಟೀಲ್, ಪ್ರಭುಶಂಕರ್ ದೇಸಾಯಿ ಈ ಪಾತ್ರಗಳು ತಮ್ಮ ಮನೆತನದ ಹೆಸರನ್ನು ಪ್ರತಿಷ್ಠೆಯ ಪ್ರಶ್ನೆಯಾಗಿ ಧಾರಾವಾಹಿಗಳಲ್ಲಿ ಬಳಕೆಯಾಗಿವೆ. ಇನ್ನುಳಿದಂತೆ ಸಾಮಾನ್ಯ ವ್ಯಕ್ತಿನಾಮಗಳನ್ನು ಬಳಸಿಕೊಂಡಿದ್ದಾರೆ.

ಸ್ತ್ರೀ ವ್ಯಕ್ತಿನಾಮಗಳು: ಪೂಜಾಸಿಂಧ್ಯಾ, ಅಕ್ಷರಾ, ಖುಷಿ, ಪಾವನಿ, ಅಮೃತದೇಸಾಯಿ, ವರ್ಷಿಣಿ ದೇಸಾಯಿ, ಯಶೋಧ, ಕೋಮಲ್, ಕಾವೇರಿ, ಸೌಪಾನಿಕಾ, ಸುಜಾತ, ಶ್ರುತಿ ಕಲ್ಪನಾ, ನೇತ್ರ, ಲಾವಣ್ಯ, ಮಾಳವಿಕಾ, ಮೇಘಾ, ವೇದ, ಪರೀಕ್ಷಾ, ಮಾಧವಿಪ್ರಿಯದರ್ಶಿನಿ, ಪರಿಣೀತ, ಚಿನ್ಮಯಿ, ಪ್ರಕೃತಿ, ಅಮೃತ, ಸ್ವರ, ಶ್ರೀಲಕ್ಷ್ಮಿ, ಲಕ್ಷ್ಮಿ, ಶರ್ಮಿಳಾ ಚಿಂತಾದ್ರಿ ಇತ್ಯಾದಿ.

ಈ ಎಲ್ಲಾ ವ್ಯಕ್ತಿನಾಮಗಳು ಯಾವುದೇ ವಾರ್ಗಿಕಗಳಿಂದ ಕೊನೆಗೊಳ್ಳದೆ ನಿರ್ದಿಷ್ಟಕ್ಕೆ ಸೀಮಿತವಾಗಿವೆ. ಆಧುನಿಕತೆಯ ವ್ಯಕ್ತಿನಾಮಗಳನ್ನು ೨ನೇ ತಲೆಮಾರಿನವರೆಗೆ ಎರಡಕ್ಷರ, ಮೂರಕ್ಷರ ಹೆಸರುಗಳನ್ನು ಹೆಚ್ಚಾಗಿ ಬಳಸಿಕೊಳ್ಳಲಾಗಿದೆ. ಚಾರಿತ್ರಿಕ ವ್ಯಕ್ತಿಗಳು ಬದಲಾದ ಸನ್ನಿವೇಶದಲ್ಲಿ ಮಾಡರ್ನ್ ಆಗಿರುವಂತೆಯೂ ಕರೆಯಲು ಸುಲಭವಾಗಿರಲಿ ಎಂತಲೂ ಈ ವ್ಯಕ್ತಿನಾಮಗಳನ್ನು ಬಳಸಿಕೊಂಡಿರುವುದು ಕೌಟುಂಬಿಕ ಧಾರಾವಾಹಿಗಳಿಂದ ಗುರುತಿಸಿಕೊಳ್ಳಲಾಗಿದೆ (ಈ ಧಾರಾವಾಹಿಗಳಲ್ಲಿ ಕೆಳವರ್ಗದ ಪಾತ್ರಗಳು ಅತಿ ವಿರಳವಾಗಿ ಬಳಕೆಯಾಗಿರುವುದರಿಂದ ವ್ಯಕ್ತಿನಾಮಗಳ ಬದಲಾವಣೆಯನ್ನು ಗುರುತಿಸಿಕೊಳ್ಳಲು ಸಾಧ್ಯವಾಗಿಲ್ಲ). ಆದರೆ ಖಳನಾಯಕರ ಪಾತ್ರಕ್ಕೆ ಸೀಮಿತವಾಗಿರುವ ಎರಡು ವ್ಯಕ್ತಿನಾಮಗಳನ್ನು ಗುರುತಿಸುವ ಪ್ರಯತ್ನ ಮಾಡಿದೆ. ಒಂದು ಜುಟ್ಟಿ(ಮಹಾಪರ್ವ ಧಾರಾವಾಹಿ), ಪಚ್ಚಿ, ಮೋಚಿ, ಗೆಂಡೆ(ಅಕ್ಕ ಧಾರಾವಾಹಿ).

ಚಾರಿತ್ರಿಕ ಧಾರಾವಾಹಿಗಳಲ್ಲಿ ವ್ಯಕ್ತಿನಾಮಗಳು

ಪುರುಷ ವ್ಯಕ್ತಿನಾಮಗಳು	**ಸ್ತ್ರೀ ವ್ಯಕ್ತಿನಾಮಗಳು**
ಭದ್ರಪ್ಪ ನಾಯಕ(ಕೆಳದಿ ಚೆನ್ನಮ್ಮ)	ಸೀತೆ(ಸೀತೆ)
ಸೋಮಲಿಂಗ ನಾಯಕ(ಕೆಳದಿ ಚೆನ್ನಮ್ಮ)	ಚೆನ್ನಮ್ಮ(ಕೆಳದಿ ಚೆನ್ನಮ್ಮ)
ಶಿವಲಿಂಗ ನಾಯಕ(ಕೆಳದಿ ಚೆನ್ನಮ್ಮ)	ರಾಧೆ(ಸೀತೆ)
ಜಿಲ್ಲಪ್ಪನ್(ಶ್ರೀ ರಾಘವೇಂದ್ರಯ ಮಹಿಮೆ)	ರುಕ್ಮಿಣಿ(ಸೀತೆ)
ಯದುಲ್ಲಖಾನ್(ಶ್ರೀ ರಾಘವೇಂದ್ರಯ ಮಹಿಮೆ)	ಸುಬ್ಬಲಕ್ಷ್ಮಿ(ಸಂತಪ್ತ)
ಸರ್ಜಖಾನ್(ಶ್ರೀ ರಾಘವೇಂದ್ರಯ ಮಹಿಮೆ)	ವನಜಾಕ್ಷಮ್ಮ(ಸಂತಪ್ತ)
ಸಯ್ಯದ್(ಶ್ರೀ ರಾಘವೇಂದ್ರಯ ಮಹಿಮೆ)	ಜಲಜ(ಸಂತಪ್ತ)
ರಾಮ(ಸೀತೆ)	ವಿಮಲ(ಸಂತಪ್ತ)
ಲಕ್ಷ್ಮಣ(ಸೀತೆ)	ಸಾವಿತ್ರಿ(ಸಂತಪ್ತ)
ಭರತ(ಸೀತೆ)	
ಶತ್ರುಘ್ನ(ಸೀತೆ)	

ವಿಶ್ವಾಮಿತ್ರ(ಸೀತೆ)

ದಶರಥ(ಸೀತೆ)

ಶ್ರವಣಕುಮಾರ(ಸೀತೆ)

ಪದ್ಮನಾಭ(ಸಂತಪ್ತ)

ಅಗ್ನಿಹೋತ್ರಿಗಳು(ಸಂತಪ್ತ)

ಅನಿರುದ್ಧ(ಸಂತಪ್ತ)

ಆತ್ಮಾನಂದ(ಸಂತಪ್ತ)

ಸಹದೇವ(ಸಂತಪ್ತ)

ಋಷಿಕೇಶ(ಸಂತಪ್ತ)

ಸೋಮರಾಯ(ಸಂತಪ್ತ)

ರಾಘವೇಂದ್ರಸ್ವಾಮಿ(ಶ್ರೀ ರಾಘವೇಂದ್ರಯ ಮಹಿಮೆ)

ಗೋಪಣ್ಣ(ಶ್ರೀ ರಾಘವೇಂದ್ರಯ ಮಹಿಮೆ)

ಊಜಿಜ್(ಶ್ರೀ ರಾಘವೇಂದ್ರಯ ಮಹಿಮೆ)

ಹೂಜೂರ್(ಶ್ರೀ ರಾಘವೇಂದ್ರಯ ಮಹಿಮೆ)

ನವಾಬಾ(ಶ್ರೀ ರಾಘವೇಂದ್ರಯ ಮಹಿಮೆ)

ಈ ಮೇಲಿನ ಎಲ್ಲ ವ್ಯಕ್ತಿನಾಮಗಳು ಚಾರಿತ್ರಿಕ ಅಂಶಗಳ ಹಿನ್ನೆಲೆಯಲ್ಲಿ ಬಳಕೆಯಾಗಿವೆ. ಪುರುಷ ವ್ಯಕ್ತಿನಾಮಗಳು ೧ನೇ ತಲೆಮಾರಿನವರ ಹೆಸರುಗಳು ವಾರ್ಗಿಕದಿಂದ ಕೊನೆಗೊಂಡಿದ್ದರೆ, ೨ನೇ ತಲೆಮಾರುಗಳಲ್ಲಿ ವಾರ್ಗಿಕಗಳು ಬಳಕೆಯಲ್ಲಿಲ್ಲದಿರುವುದನ್ನು ಗಮನಿಸಬಹುದು. ಪ್ರಾಚೀನ ಮತ್ತು ಸಮಕಾಲೀನ ಚಾರಿತ್ರಿಕ ವ್ಯಕ್ತಿನಾಮಗಳು ಜನಸಾಮಾನ್ಯರ ಮೇಲೆ ಪ್ರಭಾವ ಬೀರಿದೆ. ಆದರೆ ಪ್ರಾಚೀನ ಕಾಲದ ವ್ಯಕ್ತಿನಾಮಗಳು ಜನಸಾಮಾನ್ಯರ ಮೇಲೆ ಬೀರಿರುವ ಪ್ರಭಾವ ತುಂಬ ಕಡಿಮೆ. ಮಧ್ಯಕಾಲೀನ ಅಥವಾ ಸಮಕಾಲೀನ ವ್ಯಕ್ತಿನಾಮಗಳು ಜನಸಾಮಾನ್ಯರ ಮೇಲೆ ಹೆಚ್ಚು ಪ್ರಭಾವ ಬೀರಿವೆ.

ಭದ್ರಪ್ಪ ನಾಯಕ, ಸೋಮಲಿಂಗ ನಾಯಕ, ಶಿವಲಿಂಗ ನಾಯಕ ಈ ವ್ಯಕ್ತಿನಾಮಗಳು ಆಡಳಿತಸೂಚಕವಾಗಿ ಬಳಕೆಯಾಗಿವೆ. ವಾರ್ಗಿಕವಾಗಿ ನಾಯಕ ಎಂಬುದು ಆಡಳಿತಕ್ಕೆ ಸಂಬಂಧಿಸಿದ್ದಾಗಿದೆ. ಈಗಲೂ ಕೂಡ ಇಂತಹ ಹೆಸರುಗಳನ್ನು ಚಿತ್ರದುರ್ಗ ಪರಿಸರದಲ್ಲಿ

ಕಾಣಬಹುದು. ಕೆಳದಿ ಚೆನ್ನಮ್ಮ ಧಾರಾವಾಹಿಯಲ್ಲಿ ಮೇಲ್ವರ್ಗಕ್ಕೆ ಸೇರಿದ ಮಹಾರಾಜರಿಗೆ, ಮಂತ್ರಿಗಳಿಗೆ ಮತ್ತು ಸೈನಿಕರಿಗೆ ನಾಯಕ ಎಂಬ ವಾರ್ಗಿಕದಿಂದ ಕೊನೆಗೊಳ್ಳುತ್ತಿದ್ದುದನ್ನು ಗುರುತಿಸಬಹುದು. ನಾಯಕ ಎನ್ನುವುದು ಒಂದು ಗುಂಪಿನ ಮುಖ್ಯಸ್ಥ ಎಂಬ ಅರ್ಥದಿಂದ ಬಂದಿದ್ದು, ಕಾಲಾನಂತರ ವ್ಯಕ್ತಿನಾಮಗಳಲ್ಲಿ ವಾರ್ಗಿಕವಾಗಿ ಕೆಲವು ಚಾರಿತ್ರಿಕ ಧಾರಾವಾಹಿಗಳಿಗೆ ಸೀಮಿತವಾಗಿ ಬಳಕೆಯಾಗಿರುವುದನ್ನು ಈ ಮೂಲಕ ಗುರುತಿಸಿಕೊಳ್ಳಲಾಗಿದೆ.

ಅಲ್ಲದೇ ಭಕ್ತಿಪ್ರಧಾನವಾಗಿರುವ ಸಂತಪ್ತ, ರಾಘವೇಂದ್ರಾಯ ನಮಃ ಧಾರಾವಾಹಿಗಳಲ್ಲಿ ಸ್ವಾಮಿ ಇಲ್ಲವೇ ಸಂಸ್ಕೃತಭೂಯಿಷ್ಠವಾದ ವ್ಯಕ್ತಿನಾಮಗಳನ್ನು ಬಳಸಿಕೊಂಡಿದ್ದಾರೆ. ಸಂಸ್ಕೃತದ ಪ್ರಭಾವ ಕನ್ನಡಕ್ಕೆ ಪೂರ್ವದಿಂದಲೂ ಪ್ರಭಾವವಾಗಿರುವುದರಿಂದ ಅಗ್ನಿಹೋತ್ರಿಗಳು, ಗೋಪಣ್ಣ, ಋಷಿಕೇಶ, ಸಹದೇವ, ಅನಿರುದ್ಧ, ಪದ್ಮನಾಭ, ಶ್ರವಣ ಕುಮಾರ, ದಶರಥ, ರಾಮಚಂದ್ರ ಈ ವ್ಯಕ್ತಿನಾಮಗಳು ೧ನೇ ತಲೆಮಾರಿನವರಲ್ಲಿ ಬಳಕೆಯಾಗಿರುವುದನ್ನು ಗುರುತಿಸಿಕೊಳ್ಳಲಾಗಿದೆ. ಅಲ್ಲದೆ ೨ನೇ ತಲೆಮಾರುಗಳಲ್ಲಿ ಲಕ್ಷ್ಮಣ, ಭರತ, ಆತ್ಮಾನಂದ, ಸಹದೇವ ಈ ಪ್ರಕಾರದಲ್ಲಿರುವ ವ್ಯಕ್ತಿನಾಮಗಳನ್ನೇ ನೇರವಾಗಿ ಬಳಕೆ ಮಾಡಿಕೊಂಡಿದ್ದಾರೆ. ಇಲ್ಲಿ ಬಳಕೆಯಾಗಿರುವ ವ್ಯಕ್ತಿನಾಮಗಳು ಸಂಕ್ಷಿಪ್ತ ರೂಪವನ್ನು ಹೊಂದಿವೆ. ಎರಡು ಮೂರು ಅಕ್ಷರಗಳಿಂದ ಬಳಕೆಯಾಗಿದ್ದು ವಾರ್ಗಿಕಗಳು ಇಲ್ಲದೇ ಇರುವುದನ್ನು ಈ ಧಾರಾವಾಹಿಗಳಲ್ಲಿ ಗುರುತಿಸಿಕೊಳ್ಳಲಾಗಿದೆ.

ಸ್ತ್ರೀ ವ್ಯಕ್ತಿನಾಮಗಳು

ಕೆಳದಿಚೆನ್ನಮ್ಮ, ಸೀತೆ, ರಾಧೆ, ರುಕ್ಮಿಣಿ, ವನಜ, ಜಲಜ, ಸಾವಿತ್ರಿ, ಸುಬ್ಬಲಕ್ಷ್ಮಿ ಪೌರಾಣಿಕ ಮುಂತಾದ ಸ್ತ್ರೀನಾಮಗಳು, ವ್ಯಕ್ತಿನಾಮಗಳು ಕೂಡ ಎರಡು ಮೂರು ಅಕ್ಷರಗಳಿಂದ ಕೂಡಿವೆ. ಅಲ್ಲದೇ ಚಾರಿತ್ರಿಕ ಧಾರಾವಾಹಿಗಳ ಸ್ತ್ರೀ ಪಾತ್ರಕ್ಕಿಂತಲೂ ಪುರುಷಪ್ರಧಾನವಾದ ಪಾತ್ರಗಳೇ ಹೆಚ್ಚು ಬಳಕೆಯಲ್ಲಿರುವುದರಿಂದ ಸ್ತ್ರೀ ವ್ಯಕ್ತಿನಾಮಗಳ ಅಲಭ್ಯತೆ ಈ ವಿಷಯದಲ್ಲಿ ಕೊರತೆಯನ್ನುಂಟು ಮಾಡಿದೆ. ಆದ್ದರಿಂದ ಇಲ್ಲಿ ತಲೆಮಾರುಗಳನ್ನು ಪರಿಗಣಿಸಲು ಸಾಧ್ಯವಾಗಲಿಲ್ಲ. ಇರುವ ವ್ಯಕ್ತಿನಾಮಗಳನ್ನು ಗುರುತಿಸುವ ಪ್ರಯತ್ನ ಇದಾಗಿದೆ.

ಪ್ರಾದೇಶಿಕ ಧಾರಾವಾಹಿಗಳಲ್ಲಿ ವ್ಯಕ್ತಿನಾಮಗಳು

ಪುರುಷ	**ಸ್ತ್ರೀ**
ಗಿರಿಯಪ್ಪ(ಗುಡ್ಡದ ಭೂತ)	ರತ್ನ(ಗುಡ್ಡದ ಭೂತ)
ಅಂಗಾರಣ್ಣ(ಗುಡ್ಡದ ಭೂತ)	ಗಂಗಮ್ಮ(ಗೃಹಭಂಗ)
ಬೋಜಪ್ಪ(ಗುಡ್ಡದ ಭೂತ)	ಮಂಜಮ್ಮ(ಗೃಹಭಂಗ)
ಶ್ರೀನಿವಾಸ(ಗುಡ್ಡದ ಭೂತ)	ಚಿನ್ನಮ್ಮ(ಮಲೆಗಳಲ್ಲಿ ಮದುಮಗಳು)

ರಾಮಕೃಷ್ಣ(ಗುಡ್ಡದ ಭೂತ)
ಚನ್ನಿಗರಾಯ(ಚನ್ನಿಗ)(ಗೃಹಭಂಗ)
ಅಪ್ಪಣ್ಣ(ಗೃಹಭಂಗ)
ಪಾಟೇಲ(ಗೃಹಭಂಗ)
ಸಂಗಪ್ಪ(ಗೃಹಭಂಗ)
ಮಹಾದೇವಯ್ಯ(ಗೃಹಭಂಗ)
ಅಯ್ಯಾಶಾಸ್ತ್ರಿ(ಗೃಹಭಂಗ)
ಅಣ್ಣ ಜೋಯಿಸ್ರು(ಗೃಹಭಂಗ)
ತಿಮ್ಮೇಗೌಡ(ಗೃಹಭಂಗ)
ಗುತ್ತಿ(ಮಲೆಗಳಲ್ಲಿ ಮದುಮಗಳು)
ಭರಮ ಹೆಗ್ಗಡೆ(ಮಲೆಗಳಲ್ಲಿ ಮದುಮಗಳು)
ಮರಾಟಿ ಮಂಜ(ಮಲೆಗಳಲ್ಲಿ ಮದುಮಗಳು)
ಸೇಸಾ ನಾಯ್ಕ(ಮಲೆಗಳಲ್ಲಿ ಮದುಮಗಳು)
ತಿಮ್ಮ ನಾಯ್ಕ(ಮಲೆಗಳಲ್ಲಿ ಮದುಮಗಳು)
ಕರಿಂ ಸಾಬು(ಮಲೆಗಳಲ್ಲಿ ಮದುಮಗಳು)
ಸುಬ್ಬಣ್ಣ ಹೆಗ್ಗಡೆ(ಮಲೆಗಳಲ್ಲಿ ಮದುಮಗಳು)
ಬೈರ(ಮಲೆಗಳಲ್ಲಿ ಮದುಮಗಳು)
ಸಿದ್ದ(ಮಲೆಗಳಲ್ಲಿ ಮದುಮಗಳು)
ಚಿಂಕ್ರ(ಮಲೆಗಳಲ್ಲಿ ಮದುಮಗಳು)
ಮುಕುಂದಯ್ಯ(ಮಲೆಗಳಲ್ಲಿ ಮದುಮಗಳು)
ಪೀಂಚಲು(ಮಲೆಗಳಲ್ಲಿ ಮದುಮಗಳು)
ನಾಗಕ್ಕ(ಮಲೆಗಳಲ್ಲಿ ಮದುಮಗಳು)
ಪಿಜಿಜಿ(ಮಲೆಗಳಲ್ಲಿ ಮದುಮಗಳು)

ಪ್ರಾದೇಶಿಕ ಧಾರಾವಾಹಿಗಳಲ್ಲಿ ವಾರ್ಗಿಕ ರೂಪಗಳಾದ ಅಣ್ಣ, ಅಪ್ಪ, ಶಾಸ್ತ್ರಿ, ಜೋಯಿಸ, ನಾಯ್ಕ, ಹೆಗ್ಗಡೆ, ಅಯ್ಯ ಈ ವಾರ್ಗಿಕಗಳಿಂದ ಕೂಡಿದ ವ್ಯಕ್ತಿನಾಮಗಳು ವರ್ಗಾಧಾರಿತವಾಗಿ ವ್ಯತ್ಯಾಸಗಳಿರುವುದನ್ನು ಈ ಮುಖೇನ ಗುರುತಿಸಿಕೊಳ್ಳಲಾಗಿದೆ. ವಾರ್ಗಿಕಗಳು ಕೇವಲ ಪುರುಷರಿಗಷ್ಟೇ ಸೀಮಿತವಾಗಿರದೆ, ಇಲ್ಲಿಯೂ ಕೂಡ ಅಕ್ಕ, ಅಮ್ಮ, ಅತ್ತೆ ಎಂಬ ವಾರ್ಗಿಕಗಳಿಂದ ಕೊನೆಗೊಂಡಿವೆ. ಪ್ರಾದೇಶಿಕ ಧಾರಾವಾಹಿಗಳಲ್ಲಿ ಸಾಮಾಜಿಕ ಸ್ತರವಿನ್ಯಾಸದಲ್ಲಿ ಬದಲಾವಣೆ

ಗಳಿರುವುದರಿಂದ ವ್ಯಕ್ತಿನಾಮಗಳ ವಾರ್ಗಿಕದಲ್ಲಿ ವ್ಯತ್ಯಾಸವಾಗಿರುವುದನ್ನು ಮೇಲಿನ ಉದಾಹರಣೆಗಳ ಮೂಲಕ ತಿಳಿದುಕೊಳ್ಳಬಹುದು.

ಉದಾಹರಣೆಗೆ: ಅಂಗಾರಣ್ಣ(ಗುಡ್ಡದ ಭೂತ), ಬೋಜಪ್ಪ, ಗಿರಿಯಪ್ಪ ಈ ವ್ಯಕ್ತಿ ನಾಮಗಳು ಮಧ್ಯಮವರ್ಗವನ್ನು ನಿರ್ದೇಶಿಸುತ್ತವೆ. ಅಯ್ಯಾಶಾಸ್ತ್ರಿ, ಅಣ್ಣ ಜೋಯಿಸ್ರು, ತಿಮ್ಮೇಗೌಡ, ಭರಮ ಹೆಗ್ಗಡೆ, ಸೇಸಾ ನಾಯ್ಕ. ಈ ವ್ಯಕ್ತಿನಾಮಗಳ ವಾರ್ಗಿಕದಲ್ಲಿ ಆಡಳಿತಕ್ಕೆ ಸಂಬಂಧಿಸಿದ ಹೆಸರುಗಳನ್ನು ಮೇಲ್ವರ್ಗಕ್ಕೆ ಸೇರಿದ ವ್ಯಕ್ತಿನಾಮಗಳ ವಾರ್ಗಿಕದಲ್ಲಿ ಕೊನೆಗೊಳ್ಳುವುದನ್ನು ಕಂಡುಕೊಳ್ಳಲಾಗಿದೆ. ನಾಗಕ್ಕ, ನಾಗತ್ತೆ, ಚಿನ್ನಮ್ಮ, ಗಂಗಮ್ಮ ಈ ವ್ಯಕ್ತಿನಾಮಗಳು ಕೂಡ ಮಧ್ಯಮವರ್ಗಕ್ಕೆ ಸೇರಿವೆ.

ಇಲ್ಲಿ ಪುರುಷರಿಗಷ್ಟೇ ಆಡಳಿತಕ್ಕೆ ಸೇರಿದ ಹೆಸರುಗಳು ವ್ಯಕ್ತಿನಾಮಗಳ ವಾರ್ಗಿಕವಾಗಿ ಬಳಕೆಯಾಗುವುದನ್ನು ಗುರುತಿಸಲಾಗಿದೆ. ಸ್ತ್ರೀ ವ್ಯಕ್ತಿನಾಮಗಳಲ್ಲಿ ಸಂಬಂಧವಾಚಕಗಳು ವಾರ್ಗಿಕವಾಗಿ ಕೊನೆಗೊಂಡಿರಬಹುದು. ಉದಾಹರಣೆಗೆ: ನಾಗತ್ತೆ, ನಾಗಕ್ಕ ಈ ಎರಡು ವ್ಯಕ್ತಿನಾಮಗಳಲ್ಲಿ ಅತ್ತೆ, ಅಕ್ಕ ಎಂಬ ಸಂಬಂಧವಾಚಕಗಳು ವಾರ್ಗಿಕಗಳಾಗಿ ಕೊನೆಗೊಂಡಿರುವುದನ್ನು ಈ ಮೂಲಕ ಗುರುತಿಸಿಕೊಳ್ಳಲಾಗಿದೆ. ವಯೋಮಿತಿ ಮಧ್ಯವಯಸ್ಕರಾಗಿದ್ದಾರೆ. ಸಾಮಾಜಿಕ ಸ್ತರ ವಿನ್ಯಾಸದಲ್ಲಿ ಮಧ್ಯಮವರ್ಗಕ್ಕೆ ಸೇರಿದ್ದಾರೆ. ಇಂತಹ ಅನೇಕ ವ್ಯಕ್ತಿನಾಮಗಳು ಧಾರಾವಾಹಿ ಗಳಲ್ಲಿ ಬಳಕೆಯಾಗುತ್ತಿರುವುದನ್ನು ಇಂತಹ ಪ್ರಾದೇಶಿಕ ಧಾರಾವಾಹಿಗಳಲ್ಲಿ ಶೋಧಿಸಲು ಅವಕಾಶವಿದೆ. ಅಧ್ಯಯನದ ಮಿತಿಯಲ್ಲಿ ಇಬ್ಬರ ಸ್ತ್ರೀನಾಮ ವಾರ್ಗಿಕದಲ್ಲಿ ಕೊನೆಗೊಂಡಿರುವುದನ್ನು ಗುರುತಿಸಿಕೊಳ್ಳಲಾಗಿದೆ.

ಹಾಸ್ಯ ಧಾರಾವಾಹಿಗಳಲ್ಲಿ ವ್ಯಕ್ತಿನಾಮಗಳು

ಪುರುಷ ವ್ಯಕ್ತಿನಾಮಗಳ ಸ್ತ್ರೀ ವ್ಯಕ್ತಿನಾಮಗಳು

(ಪಂಚರಂಗಿ ಪೊಂ ಪೊಂ)

ಮೈಲಾರಪ್ಪ	ರೇಣುಕಾ
ಮೀನನಾಥ	ಮೀನಾ
ಎಂ.ಪಿ.	ಮಂದಾಕಿನಿ
ಸೋಮಣ್ಣ	ಭವಾನಿ
	ಶೀಲಾ

(ಪಾರ್ವತಿ ಪರಮೇಶ್ವರ)

ಪರಮೇಶ್ವರ	ವೇದ
ಸುಬ್ರಮಣ್ಯ	ನಾಗವಲ್ಲಿ
ಲಾಯರ್ ಗುಂಡಣ್ಣ	
ಜನನಾಯಕ ಗುಂಡಪ್ಪ	
ಸೋಮಶೇಖರ	

(ಪಾಂಡುರಂಗ ವಿಠಲ)

ಪಾಂಡುರಂಗ	ರಂಗಮ್ಮ
ರಘುನಾಥ್ ಶೇಟು	ಜಾಜಿ
ಪರಮೇಶಿ	ವೈಶಾಲಿ
ಸುಬ್ರಹ್ಮಣ್ಯ	ವೇದಾ
ಬಸವರಾಜ	ಅನುಷ
	ಅಮೃತ

(ಸಿಲ್ಲಿ ಲಲ್ಲಿ ಧಾರಾವಾಹಿ)

ವಿಠಲ್	ಲಲಿತಮ್ಮ
ಲಲಿತ	ಶೈಲಾ
ರಂಗನಾಥ	ವಿಶಾಲ
ಗೋವಿಂದ	
ಮಠಾಷ್ ಮಾಮ	

ಈ ಹಾಸ್ಯ ಧಾರಾವಾಹಿಗಳಲ್ಲಿ ವ್ಯಕ್ತಿನಾಮಗಳು ಭಿನ್ನ ನೆಲೆಯಲ್ಲಿ ರಚನೆಯಾಗಿರುವುದನ್ನು ಗುರುತಿಸಲಾಗಿದೆ. ಇಲ್ಲಿ ಇರುವ ಹೆಸರನ್ನು ಕೆಲ ಸಂದರ್ಭಗಳಲ್ಲಿ ಮಾತ್ರ ಪೂರ್ಣ ಹೆಸರಿನಿಂದ ಕರೆಯುತ್ತಾರೆ. ಇನ್ನುಳಿದಂತೆ ಮೊಟಕುಗೊಳಿಸಿ ಹೆಸರನ್ನು ಕರೆಯುವುದುಂಟು. ಇಲ್ಲಿ ಹೆಚ್ಚಾಗಿ ಮಧ್ಯವಯಸ್ಕರನ್ನು ಹಾಸ್ಯಕ್ಕೆ ಬಳಸಿಕೊಂಡಿರುವುದರಿಂದ ಇವರ ಹೆಸರಿಗೆ ಆಧುನಿಕ ವ್ಯಕ್ತಿ ನಾಮಗಳು ಹೆಚ್ಚು ಬಳಕೆಯಾಗಿವೆ. ವಯಸ್ಸಾದ ಅಂದರೇ ೧ನೇ ತಲೆಮಾರಿನ ವ್ಯಕ್ತಿಗಳಿಗೆ

ಅಕ್ಕ, ಅಮ್ಮ, ಅಪ್ಪ ಇನ್ನೂ ಮುಂತಾದ ಇದೇ ಸ್ವರೂಪದ ವಾರ್ಗಿಕಗಳಿಂದ ಕೊನೆಗೊಂಡಿರುವುದನ್ನು ಈ ಹಾಸ್ಯ ಧಾರಾವಾಹಿಗಳಲ್ಲಿ ಗುರುತಿಸಲಾಗಿದೆ.

೧ನೇ ತಲೆಮಾರಿನ ವ್ಯಕ್ತಿಗಳಿಗೆ ವಾರ್ಗಿಕಗಳಿಂದ ಕೊನೆಗೊಂಡರೆ ೨ನೇ ತಲೆಮಾರಿನ ವ್ಯಕ್ತಿಗಳಿಗೆ ನಿರ್ದಿಷ್ಟದಿಂದ ಕೊನೆಗೊಂಡಿವೆ. ಇಲ್ಲಿ ವ್ಯಕ್ತಿನಾಮಗಳ ಸ್ವರೂಪದಲ್ಲಿ ಬದಲಾವಣೆಯಾಗಿದೆ. ಅಲ್ಲದೆ ಪ್ರಾದೇಶಿಕತೆಯ ಪ್ರಭಾವದಿಂದಾಗಿ ಉತ್ತರ ಕರ್ನಾಟಕ, ಮಂಗಳೂರು, ಬೆಂಗಳೂರಿನಂತಹ ಪ್ರದೇಶಗಳಲ್ಲಿ ಬಳಕೆಯಾಗುವ ಪ್ರಾದೇಶಿಕ ಪ್ರಬೇಧವನ್ನೇ ಬಳಸಿಕೊಂಡು ಹಾಸ್ಯಕ್ಕಾಗಿ ಮತ್ತು ನಗೆ ಉಕ್ಕಿಸಲು ಇಂತಹದೊಂದು ತಂತ್ರವನ್ನು ಹಾಸ್ಯ ಧಾರಾವಾಹಿಗಳಿಗೆ ಸೀಮಿತವಾಗಿರುವುದನ್ನು ಕಂಡುಕೊಳ್ಳಲಾಗಿದೆ. ಅಂದರೆ ಒಂದೇ ಧಾರಾವಾಹಿಯಲ್ಲಿ ಪ್ರಾದೇಶಿಕ ಪ್ರಬೇಧಗಳನ್ನು ಬಳಸಿ ಮಾತನಾಡುವುದನ್ನು ವಿವಿಧ ಪಾತ್ರಗಳು ಕ್ಷಣ ಮಾತ್ರದಲ್ಲಿ ಹಾಸ್ಯವನ್ನು ಸೃಷ್ಟಿಸಿಕೊಂಡು ನಗೆಯನ್ನು ಉಕ್ಕಿಸುತ್ತವೆ. ಈ ಧಾರಾವಾಹಿಗಳಲ್ಲಿ ಪ್ರಮುಖವಾಗಿ ಒಂದೇ ಸಮಯಕ್ಕೆ ಪ್ರಭೇದಗಳ ಬಳಕೆಯ ಜೊತೆಗೆ ವ್ಯಕ್ತಿನಾಮಗಳನ್ನು ಆಯಾ ಪ್ರದೇಶಕ್ಕೆ ಸಂಬಂಧಿಸಿದಂತೆ ಬಳಸಿಕೊಳ್ಳಲಾಗಿದೆ. ಉದಾಹರಣೆಗೆ: ಮೈಲಾರಪ್ಪ-ರೇಣುಕಾ, ಮೀನಾನಾಥ-ಮೀನಾ ಈ ಎರಡು ರೂಪಗಳಲ್ಲಿ ಮೊದಲ ಎರಡು ವ್ಯಕ್ತಿನಾಮಗಳಿಗೆ ಉತ್ತರ ಕರ್ನಾಟಕದ ವ್ಯಕ್ತಿನಾಮಗಳು ಬಳಕೆಯಾಗಿವೆ. ಅಂದರೆ ಉತ್ತರ ಕರ್ನಾಟಕದ ವ್ಯಕ್ತಿನಾಮಗಳು ದೈವ ಮೂಲದಿಂದ ಕೂಡಿರುವುದನ್ನು ಹಾಸ್ಯಕ್ಕೆ ಬಳಸಿಕೊಂಡು ನಗೆ ಉಕ್ಕಿಸುತ್ತಿದ್ದಾರೆ. ಮಂಗಳೂರು ಪರಿಸರದ ವ್ಯಕ್ತಿನಾಮಗಳು ಅಲ್ಲಿಯ ಪ್ರಾದೇಶಿಕತೆ ಮತ್ತು ಪ್ರಾದೇಶಿಕ ಪ್ರಭೇದಗಳಿಗೆ ಹೊಂದುವಂತೆ ಬಳಸಿಕೊಳ್ಳಲಾಗಿದೆ. ಕೆಲವು ನಗೆ ಉಕ್ಕಿಸಲಿಕ್ಕೆಂದೇ ಬೇರೆ ಬೇರೆ ಪ್ರಾದೇಶಿಕ ಪ್ರಭೇದಗಳನ್ನು ಬಳಸಿಕೊಳ್ಳುವುದು ಹಾಸ್ಯ ಧಾರಾವಾಹಿಗಳಿಗೆ ಸೀಮಿತವಾಗಿವೆ. ಇನ್ನುಳಿದಂತೆ ಆಧುನಿಕ ವ್ಯಕ್ತಿನಾಮಗಳನ್ನು ಹೆಚ್ಚಾಗಿ ಬಳಸಿಕೊಂಡಿದ್ದಾರೆ.

ಉದಾಹರಣೆಗೆ: ಪಾರ್ವತಿ ಪರಮೇಶ್ವರ ಧಾರವಾಹಿಯಲ್ಲಿ ಪರಮೇಶಿ-ಪರ್ಮ(ಕರೆಯುವಾಗ), ಸುಬ್ರಹ್ಮಣ್ಯ, ಎಂ.ಪಿ., ಸೋಮಣ್ಣ, ಬಸವರಾಜ ವಿಠಲ್, ರಂಗನಾಥ ಗೋವಿಂದ, ಮಠಾಪ್ ಮಾಮ, ಮಂದಾಕಿನಿ, ಭವಾನಿ, ಶೀಲಾ, ರಂಗಮ್ಮ, ಜಾಜಿ, ಅನುಷಾ, ಅಮೃತ, ಲಲಿತಮ್ಮ, ವಿಶಾಲ. ಈ ಎಲ್ಲ ವ್ಯಕ್ತಿನಾಮಗಳಿಗೆ ಆಧುನೀಕರಣಗೊಂಡ ವ್ಯಕ್ತಿನಾಮಗಳನ್ನು ಬಳಸಿಕೊಂಡಿದ್ದಾರೆ. ಇವು ಸಾಮಾನ್ಯ ಪಾತ್ರಗಳಿಗೆ ಬಳಕೆಯಾಗಿರುವುದನ್ನು ಈ ಮೂಲಕ ಗುರುತಿಸಿಕೊಳ್ಳಲಾಗಿದೆ.

(ಇದನ್ನು ದೈವಮೂಲ ವ್ಯಕ್ತಿನಾಮಕ್ಕೆ ಉದಾಹರಣೆ ಕೊಡಬೇಕು. ಪಾಂಡುರಂಗ-ಇದು ದಕ್ಷಿಣ ಕರ್ನಾಟಕದ ವ್ಯಕ್ತಿನಾಮವಾಗಿದ್ದು, ಹಾಸ್ಯ ಪಾತ್ರಕ್ಕೆ ಅದರಲ್ಲೂ ಪ್ರಮುಖ ಪಾತ್ರಕ್ಕೆ ಬಳಸಿಕೊಂಡಿದ್ದಾರೆ. ಪಾಂಡು, ರಂಗ ಎರಡು ನಿರ್ದಿಷ್ಟಗಳು ಸೇರಿ ಒಂದು ವ್ಯಕ್ತಿನಾಮವಾಗಿ ಬಳಸಿಕೊಳ್ಳಲಾಗಿದೆ. ಹಾಸ್ಯಕ್ಕಾಗಿ ದೈವಮೂಲದ ವ್ಯಕ್ತಿನಾಮಗಳನ್ನು ಬಳಸಿಕೊಳ್ಳುವುದನ್ನು ಈ

ಮೂಲಕ ಗುರುತಿಸಿಕೊಳ್ಳಲಾಗಿದೆ) ಹಾಸ್ಯ ಧಾರಾವಾಹಿಗಳಲ್ಲಿ ವಾರ್ಗಿಕಗಳೊಂದಿಗೆ ಕೊನೆಗೊಂಡರೂ ಎರಡು ನಿರ್ದಿಷ್ಟಗಳು ಸೇರಿ ಒಂದು ವಾರ್ಗಿಕವಾಗಿ ಬಳಕೆಯಾಗಿರುವುದನ್ನು ಗುರುತಿಸಿಕೊಳ್ಳಲಾಗಿದೆ.

ಒಟ್ಟಾರೆ ವ್ಯಕ್ತಿನಾಮಗಳು ಕೌಟುಂಬಿಕ ಮತ್ತು ಹಾಸ್ಯ ಧಾರಾವಾಹಿಗಳಲ್ಲಿ ಆಧುನಿಕತೆಯ ಪ್ರಭಾವದ ಪರಿಣಾಮದಿಂದ ಬದಲಾವಣೆಯಾಗಿರುವುದನ್ನು ಕಾಣಬಹುದು. ಅಲ್ಲದೆ ಪ್ರಾದೇಶಿಕ ಮತ್ತು ಭಕ್ತಿಪ್ರಧಾನ ಅಥವಾ ಚಾರಿತ್ರಿಕ ಧಾರಾವಾಹಿಗಳಲ್ಲಿ ಪಾರಂಪರಿಕ ವ್ಯಕ್ತಿನಾಮಗಳನ್ನು ಬಳಸಿಕೊಳ್ಳಲಾಗಿದೆ. ಈ ಧಾರಾವಾಹಿಗಳಲ್ಲಿ ವ್ಯಕ್ತಿನಾಮಗಳು ವಾರ್ಗಿಕಗಳೊಂದಿಗೆ ಕೊನೆಗೊಂಡಿವೆ. ಸಾಮಾಜಿಕ ಮತ್ತು ಹಾಸ್ಯ ಧಾರಾವಾಹಿಗಳ ಎರಡು ಅಥವಾ ಒಂದೇ ನಿರ್ದಿಷ್ಟ ನಾಮದಿಂದ ಕೊನೆಗೊಳ್ಳುವುದನ್ನು ಈ ಧಾರಾವಾಹಿಗಳಲ್ಲಿ ಕಂಡುಕೊಳ್ಳಲಾಗಿದೆ. ಈ ವ್ಯಕ್ತಿನಾಮಗಳ ಸ್ವರೂಪ ಧಾರಾವಾಹಿಗಳಿಂದ ಧಾರಾವಾಹಿಗಳಿಗೆ ತುಸು ಭಿನ್ನವಾದ ಸ್ವರೂಪವನ್ನು ಹೊಂದಿವೆ. ದೈವ ಮೂಲದ ವ್ಯಕ್ತಿನಾಮಗಳು ಪ್ರಾದೇಶಿಕ ಮತ್ತು ಐತಿಹಾಸಿಕ/ಚಾರಿತ್ರಿಕ ಧಾರಾವಾಹಿಗಳಲ್ಲಿ ಬಳಕೆಯಾಗಿವೆ. ಇದು ಇಂದಿನ ವಾಸ್ತವಿಕ ಸ್ಥಿತಿಗೆ ವ್ಯಕ್ತಿನಾಮಗಳ ಸ್ವರೂಪ ಬದಲಾವಣೆಗೆ ಒಳಪಡುತ್ತಿರುವುದನ್ನು ಗುರುತಿಸಲಾಗಿದೆ.

೪.೩. ಬೈಗುಳಗಳ ಬಳಕೆ

'ಈ ಅಧ್ಯಾಯದಲ್ಲಿ ಬಯ್ಗುಳ ಎಂದರೇನು? ಯಾವ ಬಗೆಯ ಶಬ್ದಗಳನ್ನು ಧಾರಾವಾಹಿಗಳಲ್ಲಿ ಬಯ್ಗುಳವೆಂದು ಪರಿಗಣಿಸಲಾಗಿದೆ ಎಂಬುದರ ಬಗ್ಗೆ ವಿಶ್ಲೇಷಣೆ ಮಾಡಲು ಪ್ರಯತ್ನಿಸಲಾಗಿದೆ.'

"ಬಯ್ಗುಳ ಎನ್ನುವುದಕ್ಕೆ ಕಿಟ್ಟೆಲ್ ಕೋಶದಲ್ಲಿ ಶಾಪ, ಆಕ್ರೋಶ, ಆಕ್ಷೇಪ, ಕ್ಷಾರಣಿ, ಸೋಲ್ಲುಣ್ಣ, ಸೋಲ್ಲಾಸ, ಸೋಪಹಾಸ, ಸಂಗ್ರಹ, ಅಭಿಷಂಗ, ತಿಟ್ಟು, ಗಾಳಿಮಾತು –ಎಂಬ ಅರ್ಥವನ್ನು ನೀಡಲಾಗಿದೆ. ಇದರ ಜೊತೆಗೆ reviling, abuse, bad-language, carsing ಎಂಬ ಇಂಗ್ಲೀಷ್ ಅರ್ಥಗಳನ್ನು ನೀಡಲಾಗಿದೆ.

ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟಿನಲ್ಲಿ 'ಬಯ್ಗುಳ' ಎಂಬ ಪದಕ್ಕೆ ಜರಿಯುವಿಕೆ, ನಿಂದೆ, ತೆಗಳಿಕೆ ಎಂಬ ಅರ್ಥಗಳನ್ನು ಕೊಡಲಾಗಿದೆ.

Encyclopaedia of Riligion and Ethics ಎಂಬ ಗ್ರಂಥದಲ್ಲಿ Abuse, Abuse Language ಪದಗಳ ಬಗ್ಗೆ ಪ್ರಸ್ತಾಪ ಮಾಡಿರುವುದನ್ನು ಈ ಕೆಳಕಂಡಂತೆ ಸಂಗ್ರಹ ರೂಪದಲ್ಲಿ ನೀಡುತ್ತಿದ್ದೇನೆ.

ನಾನಾ ಬಗೆಯ ಭಾವೋದ್ರೇಕಗಳಿಂದ ತುಯ್ದಾಡುತ್ತಾ, ನ್ಯಾಯಕ್ಕೆ ಅಥವಾ ಪ್ರೀತಿಗೆ ವಿರುದ್ಧವಾದ ರೀತಿಯಲ್ಲಿ ಭಾಷೆಯನ್ನು ಅಪಪ್ರಯೋಗ ಮಾಡುತ್ತಾ, ಅನ್ಯವ್ಯಕ್ತಿಗಳ ಮನಸ್ಸನ್ನು ನೋಯಿಸುವಂತ ಮತ್ತು ಘಾಸಿಗೊಳಿಸುವಂತ ನುಡಿಗಳನ್ನು Abuse Language ಎಂದು ವ್ಯಾಖ್ಯಾನಿಸಲಾಗಿದೆ. ದೈವದೂಷಣೆಯಿಂದ ಹಿಡಿದು ಅನ್ಯರನ್ನು ಕುಚೋದ್ಯ ಅಥವಾ ಪರಿಹಾಸ್ಯ

ಮಾಡುವ ತನಕ ಇದರ ವ್ಯಾಪ್ತಿಯು ಹರಡಿದೆ. ಐದು ಬಗೆಗಳಲ್ಲಿ ಇದು(Abuse language) ಪ್ರಯೋಗಗೊಳ್ಳುವುದನ್ನು ಗಮನಿಸಲಾಗಿದೆ.

೧. Coutuncly(ಧಿಕ್ಕಾರದ, ತಾತ್ಸಾರದ, ನಿರ್ಲಕ್ಷ್ಯದ ಮಾತು): ಸಮಾಜದಲ್ಲಿ ಸಾಕಷ್ಟು ಸ್ಥಾನಮಾನಗಳನ್ನು ಹೊಂದಿರುವ ಉತ್ತಮ ವ್ಯಕ್ತಿಗಳ ಘನತೆ-ಗೌರವಗಳನ್ನು ಕುಗ್ಗಿಸುವಂತೆ ಸಾರ್ವಜನಿಕವಾಗಿ ಆಡುವಂತಹ ಮಾತುಗಳು, ಕೋಪದ ತೀವ್ರತೆಯಿಂದ ಕೂಡಿರುವ ಈ ಬಗೆಯ ಮಾತುಗಳು ತನಗಾಗದ ವ್ಯಕ್ತಿಯ ಮೇಲೆ ಸೇಡನ್ನು ತೀರಿಸಿಕೊಳ್ಳುವದಂತಿರುತ್ತವೆ.

೨. Ditraction(ಅವರ್ಯಾದೆ): ದ್ವೇಷದ ಭಾವನೆಯಿಂದ ಮತ್ತು ದುರುದ್ದೇಶಪೂರ್ವಕವಾಗಿ ಅನ್ಯರ ಬಗ್ಗೆ ಇಲ್ಲಸಲ್ಲದ ಆಪಾದನೆಗಳನ್ನು ಹೋರಿಸಿ, ಅವರ ವ್ಯಕ್ತಿತ್ವಕ್ಕೆ ಮಸಿ ಬಳಿಯುವುದು. ಇಂತಹ ಪ್ರಸಂಗಗಳು ಪೂರ್ವನಿಯೋಜಿತವಾಗಿ ರೂಪಿಸಲ್ಪಡುತ್ತವೆ.

೩. Backbiting(ಚಾಡಿ ಹೇಳುವುದು): ಸ್ನೇಹ, ಪ್ರೀತಿ ಮತ್ತು ಇತರ ಬಗೆಯ ಮಧುರವಾದ ಸಂಬಂಧಗಳನ್ನುಳ್ಳ ವ್ಯಕ್ತಿಗಳ ನಡುವೆ ಪರಸ್ಪರ ಭಿನ್ನಾಭಿಪ್ರಾಯ ಮತ್ತು ಅಪನಂಬಿಕೆಯನ್ನುಂಟು ಮಾಡುವಂಥ ಮಾತುಗಳನ್ನು ಅವರಿಗೆ ಏಕಾಂತದಲ್ಲಿ ತಿಳಿಸಿ ಅವರ ಮನಸ್ಸನ್ನು ಕಲುಷಿತಗೊಳಿಸುವುದು ಮತ್ತು ಅವರನ್ನು ಪರಸ್ಪರ ದೂರ ಮಾಡುವುದು ಈ ಚಾಡಿ ಮಾತುಗಳ ಉದ್ದೇಶವಾಗಿರುತ್ತದೆ.

೪. Ridicule(ಅಣಕ, ಕುಚೋದ್ಯ, ಅಪಹಾಸ್ಯ, ಗೇಲಿ ಮಾಡು): ವ್ಯಕ್ತಿಯು ಹೊಂದಿರುವ ದೌರ್ಬಲ್ಯಗಳನ್ನು ಅಥವಾ ಆತನ ಅವಗುಣಗಳನ್ನು ಕುರಿತು ಅಣಕ ಮಾಡುವುದರ ಮೂಲಕ ಆ ವ್ಯಕ್ತಿಯ ಮನಶ್ಶಾಂತಿಗೆ ಧಕ್ಕೆ ತರುವುದು ಇಂತಹ ಮಾತುಗಳ ಉದ್ದೇಶವಾಗಿರುತ್ತದೆ. ಈ ರೀತಿ ಅಣಕಕ್ಕೆ ಗುರಿಯಾದವನು ಅಂತರಂಗದಲ್ಲಿ ತೀವ್ರವಾದ ಮಾನಸಿಕ ವೇದನೆಗೆ ಈಡಾಗಿದ್ದರೆ, ಅದೇ ಸಮಯದಲ್ಲಿ ಅಣಕ ಮಾಡುವವನು ಒಂದು ಬಗೆಯ ಸಂತೋಷ ಭಾವದಲ್ಲಿರುತ್ತಾನೆ.

೫. Cursing (ಶಾಪ ಹಾಕುವುದು): ಆಜ್ಞಾರ್ಥಕ ಅಥವಾ ಇಚ್ಛಾರ್ಥಕ ರೂಪದಲ್ಲಿ ಅನ್ಯ ವ್ಯಕ್ತಿಗಳಿಗೆ ಕೇಡನ್ನು ಬಯಸುವುದು ಇದರ ಉದ್ದೇಶವಾಗಿರುತ್ತದೆ. ಈ ರೀತಿ ಶಾಪಕ್ಕೆ ಗುರಿಪಡಿಸುವಂಥ ವ್ಯಕ್ತಿಗೆ ತೀವ್ರವಾಗಿ ಶಿಕ್ಷೆ ನೀಡುವ ಅಥವಾ ಅತಿ ಭಯಂಕರವಾದ ಹಾನಿ ಸಂಭವಿಸುವ ಅರ್ಥವನ್ನುಳ್ಳ ಶಬ್ದಗಳ ಸಂಯೋಜನೆಯು ಈ ಶಾಪದ ಮಾತುಗಳಲ್ಲಿರುತ್ತದೆ.

ಈ ಲೇಖನದಲ್ಲಿ Backbiting(ಚಾಡಿ ಹೇಳುವುದು)ಒಂದನ್ನು ಹೊರತುಪಡಿಸಿದರೆ, ಉಳಿದೆಲ್ಲ ಬಗೆಯ ಪ್ರಯೋಗಗಳು ಬಯ್ಗುಳ ಸಂದರ್ಭದಲ್ಲಿ ಕಂಡುಬರುವಂತಹ ಅಂಶಗಳೇ ಆಗಿವೆ. ಚಾಡಿಯ ಮಾತು ಬಯ್ಗುಳದ ವ್ಯಾಪ್ತಿಗೆ ಬರುವುದಿಲ್ಲ."

ಈ ಲೇಖನದಲ್ಲಿ ಚರ್ಚಿತವಾದ ಅಂಶಗಳು ದೂರದರ್ಶನ ಧಾರಾವಾಹಿಗಳಲ್ಲಿ ಸಾಂದರ್ಭಿಕವಾಗಿ ಬಯ್ಗುಳಗಳು ಬಳಕೆಯಾಗುತ್ತಿವೆ. ಆದರೆ ಇಲ್ಲಿ ಬಯ್ಗುಳಗಳನ್ನು ಬಳಸುವಲ್ಲಿ ಶಿಷ್ಟಾಚಾರವನ್ನು ಅಳವಡಿಸಿಕೊಳ್ಳಲಾಗಿದೆ. ಸಾಮಾನ್ಯ ಬಯ್ಗುಳಗಳನ್ನು ಅಂದರೆ ಆಡುಮಾತಿನಲ್ಲಿರುವ ಬಯ್ಗುಳಗಳನ್ನು ಬಳಸಿಕೊಳ್ಳದೆ ಕೆಲವೊಂದು ಬಯ್ಗುಳಗಳನ್ನು (ಸೋಸಿ) ಪರಿಶೀಲನೆ ಮಾಡಿ ಬಳಸಿಕೊಳ್ಳಲಾಗಿದೆ. ಈ ಬಯ್ಗುಳಗಳ ಬಗ್ಗೆ ಟಿ.ವಿ. ವೀಕ್ಷಕರು ಕೆಲವೊಂದು ಆಕ್ಷೇಪಣೆಗಳನ್ನು ಸಹ ಎತ್ತಿದ್ದಾರೆ. ತೀರಾ ಅಸಹ್ಯ ಎನ್ನಿಸುವಂತಹ ಬಯ್ಗುಳಗಳನ್ನು ಬಳಸಬೇಡಿ ಎಂದು ಸುಧಾ ಪತ್ರಿಕೆಯ ೪ಲನೇ ಪುಟವಾದ ಜಾಣರ ಪೆಟ್ಟಿಗೆಯಲ್ಲಿ ತಮ್ಮ ಅಭಿಪ್ರಾಯವನ್ನು ತಿಳಿಸಿರುವುದನ್ನು ಗಮನಿಸಲಾಗಿದೆ.

(ಕೌಟುಂಬಿಕ ಧಾರಾವಾಹಿಗಳಲ್ಲಿ)

ದಿನಾಂಕ ೨೩–೮–೧೩ರಂದು ರಾತ್ರಿ ೮ ಗಂಟೆಗೆ ಸುವರ್ಣ ವಾಹಿನಿಯ 'ಅರಗಿಣಿ' ಧಾರಾವಾಹಿಯಲ್ಲಿ ಈ ಬಯ್ಗುಳ ಬಳಕೆಯಾಗಿದ್ದನ್ನು ಉದಾಹರಿಸಬಹುದು.

ಸಿದ್ಧಾರ್ಥ: ಪೂಜಾ..... ಪೂಜಾ....(ಗಟ್ಟಿಯಾದ ಧ್ವನಿಯಲ್ಲಿ ಸಿಟ್ಟಿನಿಂದ ಹೆಸರು ಕರೆಯುತ್ತಾನೆ).

ಪೂಜಾಸಿಂಧ್ಯಾ: ಸಿದ್ದಾರ್ಥ್ ಯಾಕ್ ಕೂಗಿಕೊಂತ ಇದೀಯಾ.

ಸಿದ್ಧಾರ್ಥ್: ಮತ್ತೇನು ಮಾಡ್ಲಿ, ನೀನು ಮಾಡೋ ಕೆಲ್ಸಾನೆ ಅಂತದ್ದು. ನಮ್ಮನೆಗೆ ಫ್ಲವರ್ ಬೊಕ್ಕೆ ಕಳ್ಸಿದೀಯಾ ತಾನೆ. 'ಫಾರ್ ಮೈ ಲವ್ ಅಂತ ಟ್ಯಾಗ್' ಮಾಡಿ ಕಳ್ಸಿದೀಯಾ?

ಪೂಜಾಸಿಂದ್: ವ್ಹಾಟ್, ಫ್ಲವರ್ ಬೊಕ್ಕೇನಾ.

ಸಿದ್ದಾರ್ಥ್: ದಿಸ್ ಈಸ್ ಟೂ ಮಚ್ ಪೂಜಾ. ನಮ್ಮ ರಿಲೇಷನ್‌ಷಿಪ್ ಬಗ್ಗೆ ಎಲ್ಲಿ ಯಾವಾಗ ಹೇಳ್ಬೇಕು ಅಂತ ನನಗೆ ಚೆನ್ನಾಗಿ ಗೊತ್ತಿದೆ.

ಖುಷಿ: ಫೋನ್‌ನಲ್ಲಿ ಮಾತನಾಡುತ್ತಾ ತಾನು ನೌಕರಿ ಪಡೆದ ಆಫೀಸಿನಲ್ಲಿ ತನ್ನ ಛೇಂಬರ್‌ನಲ್ಲಿ ದುರ್ಗಾದೇವಿಯ ಮೂರ್ತಿಯನ್ನಿಟ್ಟುಕೊಂಡು ಪೂಜೆ ಮಾಡಲು ಹೋಗುತ್ತಿರುವಾಗ ತನ್ನ ಸಹೋದ್ಯೋಗಿಯೊಂದಿಗೆ ಇಂಗ್ಲೀಷ್‌ನಲ್ಲಿ ಬಯ್ಸಿಕೊಳ್ಳುತ್ತಾಳೆ. ಆಗ ಅವಳು ಈ ಬಯ್ಗುಳಗಳನ್ನು ಬಳಕೆ ಮಾಡುತ್ತಾಳೆ.

ಸಹೋದ್ಯೋಗಿ: "ಚಿನ್ನಾರಿ ನಿನ್ನ ಬಾಯಿ ಮಾತ್ರ ಅಲ್ಲ, ನಿನ್ನ ಕೈಕಾಲು ಸುಮ್ನಿರೋಲ್ವಾ ನನ್ ಫ್ರೆಂಡ್‌ಗೆ ಇನ್ನು ಗಾಸಿಪ್ ಹೇಳೋದು ಬಾಕಿ ಇತ್ತು ಗೊತ್ತಾ."

ಖುಷಿ: ಸಾರಿ ಕಣ್ರಿ ಎನ್ನುತ್ತಾ ಇನ್ವೆಂಟ್ರಿ ಕಛೇರಿ ನಂಬರ್ ಬೇಕಾಗಿತ್ತು ಕಣ್ರಿ.

ಸಹೋದ್ಯೋಗಿ: ಅದಕ್ಕೆ ಫೋನ್ ಬೀಳಿಸಿ ಬಿಡೋದಾ, "ಬೀ ಕೇರ್ ಫುಲ್ ಚಿನ್ನಾರಿ. ಈ ವೋವರ್ ಸ್ಪೀಡ್ ಒಳ್ಳೆಯದಲ್ಲ."

ಕೌಟುಂಬಿಕ ಧಾರಾವಾಹಿಗಳಲ್ಲಿ ಹೆಚ್ಚಾಗಿ ಮೇಲ್ವರ್ಗದ ಪಾತ್ರಗಳನ್ನೇ ಹೆಚ್ಚಾಗಿ ಬಳಸಿಕೊಳ್ಳುವುದರಿಂದ ಇಲ್ಲಿ ಇವರ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ಅಧಿಕಾರ ಈ ಎಲ್ಲಾ ಸ್ತರಗಳಲ್ಲೂ ಮುಂದುವರಿದವರಾಗಿರುತ್ತಾರೆ. ಇಂತಹ ಕೌಟುಂಬಿಕ ಧಾರಾವಾಹಿಗಳಲ್ಲಿ "ಇಂಗ್ಲೀಷ್ ಭಾಷೆಯನ್ನು ಬಳಕೆ ಮಾಡಿಕೊಂಡು ಈ ಮೇಲಿನ ಬಯ್ಗುಳಗಳನ್ನು ಬಳಕೆ ಮಾಡಿರುವುದು ಬಯ್ಗುಳಗಳ ಸ್ವರೂಪ ಬದಲಾವಣೆಯ ಸಂಕೇತವಾದ ಅಂದರೆ ಇಂಗ್ಲೀಷ್ ಗೊತ್ತಿರುವ ಪಾತ್ರಗಳು ಕನ್ನಡ ಬಯ್ಗುಳಗಳ ಸ್ವರೂಪದ ಮಾದರಿಯನ್ನು ಬಿಟ್ಟು ಇಂಗ್ಲೀಷ್ ಭಾಷೆಯಲ್ಲಿ ಬಯ್ಯುವುದನ್ನು ಈ ಕೌಟುಂಬಿಕ ಧಾರಾವಾಹಿಗಳಲ್ಲಿ ಗುರುತಿಸಲಾಗಿದೆ.

(ಆಜ್ಞಾಪನ ರೂಪದ ಬಯ್ಗುಳ)

ಈ ಕೌಟುಂಬಿಕ ಧಾರಾವಾಹಿಗಳಲ್ಲಿ ಕೆಲವು ಪಾತ್ರಗಳಿಗೆ ಮಾತ್ರ ಈ ಇಂಗ್ಲೀಷ್ ಭಾಷೆಯ ಸ್ವರೂಪದ ಬಯ್ಗುಳ ಬಳಕೆಯಲ್ಲಿದ್ದರೆ, ಮಧ್ಯಮವರ್ಗ ಹಾಗೂ ಕೆಳವರ್ಗದ ಪಾತ್ರಗಳು ಕನ್ನಡ ಭಾಷಾ ಸ್ವರೂಪದ ಬಯ್ಗುಳಗಳನ್ನು ಬಳಸುತ್ತಿರುವುದನ್ನು ಈ ರೀತಿಯ ಭಾಷಿಕ ವ್ಯತ್ಯಾಸಗಳನ್ನು ಒಂದೇ ಧಾರಾವಾಹಿಯಲ್ಲಿ ಭಿನ್ನ-ಭಿನ್ನವಾಗಿರುವುದನ್ನು ಗುರುತಿಸಿ ಕೊಳ್ಳಲಾಗಿದೆ. ಮಧ್ಯಮವರ್ಗದ ಪಾತ್ರಗಳು ಮೇಲ್ವರ್ಗದ ಪಾತ್ರಗಳೊಡನೆ ಬಯ್ಯುವ ಸಂದರ್ಭವನ್ನು ಈ ಕೆಳಗಿನ ಉದಾಹರಣೆ ನಿರೂಪಿಸುತ್ತದೆ.

ದಿನಾಂಕ ೭-೯-೧೩ರಂದು ರಾತ್ರಿ ೭.೩೦ಕ್ಕೆ ಸುವರ್ಣವಾಹಿನಿಯ 'ಅಮೃತವರ್ಷಿಣಿ' ಧಾರಾವಾಹಿಯಲ್ಲಿ ಈ ಬೈಗುಳ ಬಳಕೆಯಾಯಿತು.

ಉದಾಹರಣೆಗೆ: ಏನ್ ಏನ್ ಹಾಗ್ ನೋಡ್ತಾ ಇದೀರಾ ಶಾಕುಂತಲ ದೇವಿಯವರೇ. ನಾನು ಸೋತೆ ಅಂತಾನಾ. ಅದು ಮಾತ್ರ ಈ ಜನ್ಮದಲ್ಲಿ ಸಾಧ್ಯವಿಲ್ಲ. ಈ ಯಶೋಧ ಅಷ್ಟು ಸುಲಭವಾಗಿ ಸೋಲು ಒಪ್ಪಿಕೊಳ್ಳುವುದಿಲ್ಲ. ಅದೇನೇ ಆಗ್ಲಿ, ನನ್ ಮಗಳ್ನ ಈ ಮನೆಗೆ ಸೇರಿಸಿಯೇ ಸೇರಿಸ್ತಿನಿ.

ವರ್ಷಳ ತಾಯಿ ತನ್ನ ಮಗಳ ಗಂಡನ ಮನೆಯವರ ವಿರುದ್ಧ ಪೊಲೀಸ್ ಕಂಪ್ಲೇಂಟ್ ಕೊಟ್ಟಾಗ ಕಂಪ್ಲೇಂಟ್ ಸುಳ್ಳು ಎಂದು ಸಾಬೀತಾದಾಗ ಸಹಿಸಿಕೊಳ್ಳಲಾಗದೆ ತನ್ನ ಸಿಟ್ಟನ್ನು ಈ ಬಯ್ಗುಳದ ಮೂಲಕ ತನ್ನ ಸಿಟ್ಟನ್ನು ತೋರಿಸಿಕೊಳ್ಳುತ್ತಾಳೆ. ಆಜ್ಞಾಪನಾ ರೂಪದ ಬಯ್ಗುಳಗಳು ಸಾಮಾಜಿಕವಾಗಿ ಮೇಲಂತಸ್ತಿನ ಕುಟುಂಬದಲ್ಲಿ ಬಳಕೆಯಾಗುವ ಬಯ್ಗುಳ. ಧಾರಾವಾಹಿಗಳಲ್ಲಿ ಈ ಸ್ವರೂಪವನ್ನು ಹೊಂದಿವೆ. ಯಶೋಧಳ ಬೀಗತಿಯಮ್ಮ ಶಾಕುಂತಲದೇವಿ ತನಗಿಂತಲೂ ವಯಸ್ಸಿನಲ್ಲಿ ಹಿರಿಯಳೆಂದು ಗೊತ್ತಿದ್ದರೂ ಸಹ ಅವಳನ್ನು ಹೆಸರಿಡಿದು ಆಜ್ಞಾಪನಾ ರೂಪದಲ್ಲಿ ಬಯ್ಯುತ್ತಾಳೆ. ಈ ಸ್ವರೂಪದ ಬಯ್ಗುಳಗಳು ಕೌಟುಂಬಿಕ ಧಾರಾವಾಹಿಗಳಲ್ಲಿ ಮಾತ್ರ ಬಳಕೆಯಾಗುತ್ತವೆ. ಅಂತಸ್ತುಗಳು ಸಮಾನವಾಗಿದ್ದಾಗಲೂ ಈ ರೀತಿಯ ಬಯ್ಗುಳಗಳನ್ನು

ಬಳಸುವುದನ್ನು ಗುರುತಿಸಿಕೊಳ್ಳಲಾಗಿದೆ. ಅಲ್ಲದೆ ಸಮಾನ ವಯಸ್ಕರೂ ಕೂಡ ಇದೇ ರೀತಿಯ ಸ್ವರೂಪದ ಬಯ್ಗುಳಗಳನ್ನು ಬಳಸುತ್ತಿದ್ದಾರೆ. ದೇಸಾಯಿ ಕುಟುಂಬ ಯಶೋಧ ಕುಟುಂಬಕ್ಕಿಂತಲೂ ಮೇಲ್ವರ್ಗಕ್ಕೆ ಸೇರಿರುವಂತದ್ದು. ಆದರೂ ಕೂಡ ಮೇಲ್ವರ್ಗದ ಪಾತ್ರಗಳನ್ನು ಉದ್ದೇಶಿಸಿ ಬಯ್ಯುವಾಗ ಮಧ್ಯಮವರ್ಗಕ್ಕೆ ಸೇರಿದ ಯಶೋಧ ತನ್ನ ಆಜ್ಞಾಪನ ರೂಪದ ಕನ್ನಡ ಭಾಷೆಯ ಬಯ್ಗುಳಗಳನ್ನು ಬಳಸುತ್ತಿರುವುದನ್ನು ಇಂತಹ ಪಾತ್ರಗಳ ಮುಖೇನ ಗುರುತಿಸಿ ಕೊಳ್ಳಲಾಗಿದೆ.

ಇನ್ನು ಹೆಚ್ಚಿನ ಉದಾಹರಣೆಗಳು

ದಿನಾಂಕ ೩೧-೫-೧೩ರಂದು ಉದಯವಾಹಿನಿಯಲ್ಲಿ ರಾತ್ರಿ ೯ ಗಂಟೆಗೆ ಪ್ರಸಾರವಾದ ಧಾರಾವಾಹಿಯಲ್ಲಿ ಕುಲಶೇಖರ "ಬಿಡೋದಿಲ್ಲ ಭಾವ, ಬಿಡೋದಿಲ್ಲ ನನ್ನ ಚಂದ್ರನ್ನ ಈ ಗತಿ ತಂದವರಿಗೆ ಚಿತ್ರಹಿಂಸೆ ಕೊಟ್ಟು ಸಾಯಿಸ್ತೀನಿ, ನನ್ನ ಚಂದ್ರಾಗೆ ಈ ಗತಿ ತಂದಿದ್ದಾರೆ."

ಕುಲಶೇಖರನು ಹೆಂಡತಿ ಅನಾರೋಗ್ಯದಿಂದ ಬಳಲುತ್ತಿರುವಾಗ ತನ್ನ ಕಪಟಬುದ್ಧಿಯಿಂದ ನಾಟಕ ಮಾಡುತ್ತಾ ಈ ಬಯ್ಗುಳವನ್ನು ಬಳಸುತ್ತಾನೆ. ಈ ಬಯ್ಗುಳ ಕೂಡ ಆಜ್ಞಾಪನ ರೂಪದಿಂದ ಕೂಡಿದೆ.

ದಿನಾಂಕ ೫-೦೬-೧೩ರಂದು ರಾತ್ರಿ ೯ ಗಂಟೆಗೆ ಉದಯ ವಾಹಿನಿಯಲ್ಲಿ 'ಬಂಗಾರ' ಧಾರಾವಾಹಿಯಲ್ಲಿ ಕಾಲೇಜು ವಿದ್ಯಾರ್ಥಿಗಳಲ್ಲಿ ಬಳಕೆಯಾದ ಬೈಗುಳಗಳ ಮಾದರಿಗಳು ಹೀಗಿವೆ.

ರ್‍ಯಾಗಿಂಗ್ ವಿದ್ಯಾರ್ಥಿ: "ಹೇ ಯಾರೋ ಅವ್ನು ಮಧ್ಯದಲ್ಲಿ ಬಂದು ಕಡ್ಡಿ ಆಡಿಸ್ತೀರೋ ದೊಣ್ಣೆ ನಾಯ್ಕ."

"ಹೊಯ್ ನಿಂತಗೊಳೊ ಇಲ್ಲಿ ಹೇಯ್ ನೀವ್ ಇಲ್ಲಿರ್ರೋ(ತನ್ನ ಸ್ನೇಹಿತರನ್ನು ನಿಲ್ಲಿಸಿ). ಹೇಯ್ ಕಂದ ಹೇಯ್ ಸಿನ್ಮ ಹೀರೋನೇನೋ ನಮ್ ಪಾಡಿಗೆ ನಾವು ದರ್ಶ್ನ ಮಾಡಿಕೋತ ಇದ್ರೆ ಬಂದು ನಮ್ಮನ್ನ ಸಿಕ್ಕಾಗಿಸಿ ವಿಲನ್‌ತರ ಮಾಡಿಬಿಟ್ಟ್ಯಲ್ಲೋ, ಕಾಲೇಜ್‌ಗೆ ಹೊಸ್ಬನೇನೋ"

ಸಿದ್ದಾರ್ಥ್: ಹೌದು(ಎಂದು ಹೇಳುತ್ತಾನೆ).

ರ್‍ಯಾಗಿಂಗ್ ವಿದ್ಯಾರ್ಥಿ: ಜೂನಿಯರ್ ಆಗಿ ಸೀನಿಯರ್ ರೂಲ್ಸ್‌ಗೆ ಬ್ರೇಕ್ ಹಾಕ್ತಿಯಲ್ಲೋ ಎಷ್ಟೊ ಧೈರ್ಯ ನಿನಗೆ.

ಈ ಬಯ್ಗುಳಗಳು ಇಂಗ್ಲೀಷ್ ಭಾಷೆಯಿಂದ ಕೂಡಿವೆ. ಅಲ್ಲದೇ ಆಜ್ಞಾಪನ ರೂಪದ ಬಯ್ಗುಳ ಬಳಕೆಯಾಗಿವೆ. ಸೌಪಾನಿಕಳ ಒಳ ಅಂಗಗಳನ್ನು ನೋಡುವ ಸಲುವಾಗಿ ಸೀನಿಯರ್‌ಗಳು ಮೊಬೈಲ್‌ನ್ನು ಕೆಳ ಬೀಳಿಸಿ ಒಂದು ಸ್ಥಳದಲ್ಲಿ ಕುಳಿತು ಮೊಬೈಲನ್ನು ಎತ್ತಿಕೊಳ್ಳುವ ಸಂದರ್ಭದಲ್ಲಿ

ಸೌಪಾನಿಕಳ ಒಳ ಅಂಗಾಂಗಗಳನ್ನು ಬಗ್ಗಿ ತೆಗೆದುಕೊಳ್ಳುವಾಗ ಕಾಣುವುದನ್ನು ಊಹಿಸಿಕೊಂಡು ಮೊಬೈಲ್ ಬೀಳಿಸಿ ಕುತಂತ್ರದಿಂದ ರ್‍ಯಾಗ್ ಮಾಡುವುದನ್ನು ವಿರೋಧಿಸಿದ ಸಿದ್ಧಾರ್ಥನನ್ನು ಈ ಮೇಲಿನ ಬೈಯ್ಗುಳಗಳಿಂದ ಅವಮಾನಿಸುತ್ತಾರೆ. ಧಾರಾವಾಹಿಗಳಲ್ಲಿ ಈ ರೀತಿ ಬಳಕೆಯಾಗುವುದನ್ನು ಗುರುತಿಸಿಕೊಳ್ಳಲಾಗಿದೆ.

ದಿನಾಂಕ ೪, ಮಾರ್ಚ್ ೨೦೧೩ರಂದು ಈಟಿವಿ ಕನ್ನಡ ವಾಹಿನಿಯಲ್ಲಿ ರಾತ್ರಿ ೮ ಗಂಟೆಗೆ 'ಲಕ್ಷ್ಮೀ ಭಾರಮ್ಮ' ಧಾರಾವಾಹಿಯಲ್ಲಿ ಈ ರಿತಿಯ ಬಯ್ಗುಳಗಳು ಬಳಕೆಯಾಗಿದ್ದನ್ನು ಗುರುತಿಸಲಾಗಿದೆ. ಇಲ್ಲಿ ಪ್ರಮುಖವಾಗಿ ಗಮನಿಸಬೇಕಾದ ಅಂಶವೆಂದರೆ, ಮೇಲ್ವರ್ಗದ ಮತ್ತು ಶಿಕ್ಷಣ ಪಡೆದ ನಗರವಾಸಿಗಳು ಇಂಗ್ಲೀಷ್ ಭಾಷೆಯನ್ನು ಬಳಸಿಕೊಂಡು ಇಂಗ್ಲೀಷ್‌ನಲ್ಲಿ ಬಯ್ದರೆ ಗ್ರಾಮೀಣ ಪ್ರದೇಶದ ಮಧ್ಯಮವರ್ಗಕ್ಕೆ ಸೇರಿದ ಪಾತ್ರಗಳು ಕನ್ನಡದ ಬಯ್ಗುಳವನ್ನೇ ಬಳಸುವುದನ್ನು ಒಂದೇ ಧಾರಾವಾಹಿಯಲ್ಲಿ ಬಯ್ಗುಳದಲ್ಲಿ ಭಿನ್ನತೆಯಾಗುವುದನ್ನು ಗುರುತಿಸಿ ಕೊಳ್ಳಲಾಗಿದೆ. ಉದಾಹರಣೆಗೆ,

ನಾಗಮ್ಮ: 'ನನ್ನ ತಮ್ಮಯ್ಯ ಹೊತ್ತಾರೆ ಎದ್ದು ಅವ್ಳ ಮುಖ ನೋಡ್ದೆ ಹೋದ್ರೆ ಆಕಾಶನು ಭೂಮಿಯನು ಒಂದ್ ಮಾಡಿಬಿಡ್ತಾನೆ. ಎಲ್ಲೋದ್ಲೊ ಈ ದರಿದ್ರದೋಳು'.

ನಾಗಮ್ಮ: ತಲೆ ಕೆಟ್ಟಿದಿಯೇನೇ ನಿಂಗೆ. ಈ ಮನೆಯ ರೀತಿ ರಿವಾಜು ಮರ್‍ತೋಯ್ತಾ. ಹೊತ್ತಾರೆ ಎದ್ದು ಅವಳ ಮುಖಾನೆ ನೋಡೊದು ಅಂತ ನಿನ್ಗೆ ಗೊತ್ತಿಲ್ವ? ಹೊತ್ತಾರೆದ್ದು ಅವ್ಳ ಮುಖ ನೋಡಿದ್ರೆ ಅದೃಷ್ಟ ಬರುತ್ತೆ ಅಂತ ಯಾವ್ ನನ್ಮಗ ಹೇಳಿದ್ನೋ, ಲಚ್ಚಿ ಮುಖಕ್ಕೆ ಮಣ್ಣಾಕಾ. ಇಷ್ಟು ದಿನ ಏನು ಅಂತ ಗೊತ್ತಿದ್ದು ನೀನೆ ತಗೊಂಡು ಹೋಗಿ ಕೊಡ್ತೀಯಲ್ಲೆ, ಎಲ್ಲೋದ್ಲು ಆ ದರಿದ್ರದವಳು(ಶಾಪರೂಪದ ಬೈಯ್ಗುಳ).

ನಾಗಮ್ಮ: 'ಇವತ್ತು ಅವ್ಳು ಬರ್‍ಲಿ ಅವ್ಳಿಗೆ ಇದೆ ಮಾರಿಹಬ್ಬ'.

ನಾಗಮ್ಮ: 'ಆ ಹಾದ್ರಗುಟ್ಟಿದೋಳ ಮಕದಲ್ಲಿ ಅದೇನು ಅಂತ ಅದೃಷ್ಟ ಬರೆದ್ನೋ ಅವ್ನಿಗೆ ಗೊತ್ತಾಗ್ಬೇಕು.

ದಿನಾಂಕ ೪-೩-೧೩ರಂದು,

ಬಸ್ವ: ಮಾವಯ್ಯ ಅ ರುದ್ರೇಗೌಡ ಜಿಲ್ಲಾ ಪಂಚಾಯ್ತಿ ಎಲೆಕ್ಷನ್‌ನಲ್ಲಿ ಒಳಗೊಳಗೆ ನಿನ್ನ ಎದುರಿಗೆ ನಿಂತುಬಿಟ್ಟವ್ನೆ. ಎಷ್ಟು ಹೇಳಿದ್ರು ಕೇಳ್ತಾ ಇಲ್ಲ. ಎಷ್ಟು ಎದ್ರಿಸಿದ್ರು ಜಗ್ತಾ ಇಲ್ಲ ಬಡ್ಡಿ ಹೈದಾ ಕಾಸು ಕೇಳ್ತಾ ಇಲ್ಲ.

ನಾಕು ತಂತಿ ೧೪೫ನೇ ಎಪಿಸೋಡ್‌ನಲ್ಲಿ ಈಟಿವಿ ಕನ್ನಡವಾಹಿನಿಯಲ್ಲಿ ಪ್ರಸಾರವಾಗಿತ್ತು.

ಪ್ರಭು: ಹೇ ಗೂಬೆ, ಸಂಜೆ ಆಗ್ತಿದ್ದ ಹಾಗೆ ಕಿಟ್ಗಿಬಾಗ್ಲು ಹಾಕೋಕ್ಕೇನೆ ನಿನಗೆ. ಮನೆ ತುಂಬಾ ಬರಿ ಸೊಳ್ಳೆಗಳೇ ತುಂಬಿಕೊಂಡಿವೆ. ಆ ಸೊಳ್ಳೆಗೆ ಹೊಡೆಯುವ ಔಷಧ ಇತ್ತಲ್ಲ ತಗೊಂಡು ಬಾರೆ(ತಂಗಿಯನ್ನು ಉದ್ದೇಶಿಸಿ ಬಯ್ಯುವುದು).

ಪ್ರಭು: ಈ ಮನೆಯೊಳಗೆ ಬರೋದಕ್ಕೆ ಬರಿ ತಾಕತ್ತಲ್ಲ, ಮಾನಮರ್ಯಾದೇನು ಬೇಕು. ಹೇಯ್ ಎಲ್ಲಿಗೆ ಹೋಗಿತ್ತು ಸವಾರಿ? ಹೂಂ ಯಾರ್ದಾದ್ರು ಮನೆಗೆ ಹರಿಷಿಣ ಕುಂಕುಮ ಇಟ್ಟುಕೊಳ್ಳೋಕೆ ಹೋಗಿದ್ರೇನೋ? ಅಥವಾ ಸತ್ತೋರು ಮನೆಗೆ ನಮಸ್ಕಾರ ಮಾಡೋಕೆ ಹೋಗಿದ್ರೊ.

ಪ್ರಕೃತಿ: ಸಂಪಿಗೆ ಮರದಲ್ಲಿ ಹೂ ಬಿಟ್ರೆ ಯಾರು ಹೋಗಿ ನೋಡ್ಬೇಕಾಗಿಲ್ಲ, ವಾಸ್ನೆ ತಾನಾಗೆ ಬರುತ್ತೆ." ಅರಿಷಿಣ ಕುಂಕುಮದ ಮನೆಗೂ ಅಲ್ಲ, ಸತ್ತೋರ ಮನೆಗೂ ಅಲ್ಲ, ಆ ಮನು ಮನೆಗೆ.

ಪ್ರಭು: ಹೂಂ ಬೇಷ್ ಗಂಡ ಅನಿಸಿಕೊಂಡಿರೋ ಪ್ರಾಣಿ ಮನೆಯಲ್ಲಿ ಇರ್ಬೇಕಾದ್ರೆ ಮಟಮಟ ಮಧ್ಯಾಹ್ನ ಆ ತಬಲ ಬಾರಿಸೋ ಮನೆಗೆ ಗೀಲಿಟು ಹಾಡೋಕೋಗಿದೀರಲ್ಲ. ಆಹಾ ನಿಮ್ಮ ಧೈರ್ಯ ಮೆಚ್ಚಬೇಕಾದದ್ದೆ.

ಅಮೃತ: ಛಿ(ಚಿ), ಹೆಂಡತಿ ಹತ್ತಿರ ಇಂಥ ಹೊಲ್ಸು ಮಾತಾಡೋಕೆ ನಾಚಿಕೆ ಆಗೋಲ್ವ

ಪ್ರಭು: ಅಯ್ಯೋ ಗೂಬೆ, ನಾವಿಬ್ರು ಗಂಡ-ಹೆಂಡತಿ ಅನ್ನೋ ಸಂಬಂಧಕ್ಕೆ ಎಳ್ಳು ನೀರು ಬಿಟ್ಟು ಬಹಳ ದಿನ ಆಯ್ತು? ಏನಿದ್ರು ಕೋರ್ಟ್‌ನಲ್ಲಿ ಲೀಗಲ್ ಆಗಿ ಸಪ್ರೇಟ್ ಆಗಿ ಇರ್ಬೇಕು ಅಷ್ಟೆ.

ಅಮೃತ: ಬಿಡಿ ಹಾಗಾದ್ರೆ ನನ್ನ ಕೆಲ್ಸ ನಾನು ನೋಡ್ಕೋತೀನಿ.

ಪ್ರಭು: ಹೇ ಹಂದಿ, ನಮ್ಮನೆಯಲ್ಲೆ ಇರೋವರೆಗೂ ನಾನ್ ಹೇಳಿದಾಗೆ ಕೇಳಿಕೊಂಡು ಬಿದ್ದಿರೋ ಹಾಗೆ ಇದ್ರೆ ಬಿದ್ದಿರು. ಇಲ್ಲ ಅಂದ್ರೆ, ಗಂಟು ಮೂಟೆ ಕಟ್ಕೊಂಡು ತೊಲಗಿ ಹೋಗು. ಹೇಯ್ ನಿಂತುಕೊಳ್ಳೆ. ಚಮ್ಡ ಸುಲ್ದುಬಿಡ್ತೀನಿ. ಏನೇ ಹಾಗೆ ಗುರಾಯಿಸ್ತೀಯಾ ಬಾಸುಂಡೆ ಬರೋ ಹಾಗೆ ಬಾರಿಸ್ಬಿಡ್ತೀನಿ ಹುಷಾರ್.

ಅಮೃತ: ಬಾಸುಂಡೆ ಬರೋ ಹಾಗೆ ಬಾರಿಸೋ ಅಂತ ತಪ್ಪು ನಾನೇನು ಮಾಡಿಲ್ಲ.

ಪ್ರಭು: ಹೇಯ್(ಎಂದು ಕಪಾಳಕ್ಕೆ ಹೊಡೆಯುತ್ತಾನೆ).

ದಿನಾಂಕ ೫-೮-೧೩ ರಂದು ಈಟಿವಿ ಕನ್ನಡದಲ್ಲಿ ರಾತ್ರಿ ೯.೩೦ಕ್ಕೆ ಮಹಾಪರ್ವ ಧಾರಾವಾಹಿಯಲ್ಲಿ.

ತಾಂಡವಮೂರ್ತಿ(ಸಚಿವ ಸ್ಥಾನ): ಸೆಟಪ್ ಐ ಸೇ, ಪೊಲೀಸ್ ಯುನಿಫರ್ಮ್ ಹಾಕ್ಕೊಂಡು ಕೆಲ್ಸಕ್ಕೆ ಬಂದು ನಾಟಕ ಮಾಡ್ಬೇಡ. ಆ ಮಿನಿಸ್ಟ್ರು ನಿರಂಜನಯೋಗಿ ಇಟ್ಕೊಂಡು ಸಿ.ಎಂ. ಹತ್ರ ಹೋಗಿ ಕಣ್ಣೀರು ಹಾಕೋ ನಾಟಕ ಮಾಡ್ತೀಯಾ?

ಆಜ್ಞಾಪನ ರೂಪದ ಬೈಗುಳಗಳು ಅಧಿಕಾರ ಕೇಂದ್ರಿತ ಪಾತ್ರಗಳು ಬಳಸುತ್ತವೆ ಹಾಗೂ ಇಂಗ್ಲೀಷ್ ಬಯ್ಗುಳಗಳೇ ಹೆಚ್ಚಾಗಿ ಈ ಪಾತ್ರಗಳಲ್ಲಿ ಬಳಕೆಯಾಗಿರುವುದನ್ನು ಗಮನಿಸಲಾಗಿದೆ.

ದಿನಾಂಕ ೧೦-೧೨-೧೩ರಂದು ಈಟಿವಿ ಕನ್ನಡದಲ್ಲಿ ರಾತ್ರಿ ೭.೩೦ಕ್ಕೆ 'ಅಕ್ಕ' ಧಾರಾವಾಹಿಯಲ್ಲಿ ಈ ಉದಾಹರಣೆಯನ್ನು ಗಮನಿಸಬಹುದು.

ರುದ್ರಣ್ಣ(ಎಂ.ಎಲ್.ಎ.): ಅಡ್ಡಾದಿಡ್ಡಿ ಮಾತಾಡಿದ್ರೆ ಅಡ್ಡಾದಿಡ್ಡಿ ಸೀಳಿಬಿಟ್ಟು ಅಡಕೆ ಮರಕ್ಕೆ ನೇತಾಕಿ ಬಿಡ್ತೀನಿ ನಿಮ್ಮೆಣವಾ? ಸಿಕ್ಕಿದ್ಲೇನ್ಲಾ

ಹೇಯ್ ನಾನೇನು ಆಗಿದ್ದೀನಿ ನಿಮಗೆಲ್ಲ ನನ್ನ ರಾಜಕೀಯ ಭವಿಷ್ಯ ಏನಾಯ್ತದೆ ಎನ್ನೋದು ಸ್ವಲ್ಪ ಸಾಮಾನ್ಯ ಸೆನ್ಸ್ ಕೂಡ ಇಲ್ವಾ ನಿಮ್ಗೆ. ಇಂತ ಕೆಲ್ಸಾನ ಪಬ್ಲಿಕ್ ಪ್ಲೇಸಲ್ಲಿ ಮಾಡ್ಬಾರ್ದು ಕಣ್ಲಾ. ಯಾರು ನೋಡ್ದೆ ಇರೋ ಜಾಗಕ್ಕೆ ಕರ್ಕೊಂಡು ಹೋಗಿಬಿಟ್ಟು ಎತ್ ಬಿಡ್ರುಲಾ ಅಂತಾಂದ್ರೆ ಹೇಯ್ ತೂ.... ಇಡ್ಲಾ ಫೋನ್.

ಈ ಮೇಲಿನ ಎಲ್ಲಾ ಉದಾಹರಣೆಗಳು ಕೌಟುಂಬಿಕ ಧಾರಾವಾಹಿಗಳಲ್ಲಿ ಬಳಕೆಯಾಗಿವೆ. ಇಲ್ಲಿ ಬಳಕೆಯಾದ ಬಯ್ಗುಳ ಸ್ವರೂಪ ಕಾಲದಿಂದ ಕಾಲಕ್ಕೆ ಬದಲಾವಣೆ ಪಡೆದುಕೊಳ್ಳುತ್ತಾ ಸಾಗಿದೆ. ಮೇಲ್ವರ್ಗ, ಮಧ್ಯಮ ಹಾಗೂ ಕೆಳವರ್ಗಗಳ ಬಯ್ಗುಳಗಳನ್ನು ಬಳಸುವಲ್ಲಿ ಭಾಷಿಕ ಭಿನ್ನತೆಯನ್ನು ಕಾಣಬಹುದು. ಅಂದರೆ ಮೇಲ್ವರ್ಗದ ಪಾತ್ರಗಳು ಇಂಗ್ಲೀಷ್ ಭಾಷೆಯಲ್ಲಿ ಬಯ್ಗುಳಗಳನ್ನು ಬಳಕೆ ಮಾಡುವುದರ ಜೊತೆಗೆ ಆಜ್ಞಾಪನಾ ರೂಪದ ಬಯ್ಗುಳ ಸ್ವರೂಪವನ್ನು ಹೊಂದಿವೆ. ಮಧ್ಯಮವರ್ಗ ಹಾಗೂ ಕೆಳವರ್ಗದ ಪಾತ್ರಗಳು ಕನ್ನಡ ಬಯ್ಗುಳಗಳನ್ನು ಬಳಸಿರುವುದು ಕನ್ನಡ ಭಾಷೆಯ ಚಾರಿತ್ರಿಕತೆಯನ್ನು ತಿಳಿಸುತ್ತವೆ. ಇಂತಹ ಬಯ್ಗುಳಗಳ ಮೂಲಕ ಪ್ರಾದೇಶಿಕ ಪ್ರಭೇದಗಳನ್ನು ಗುರುತಿಸಿಕೊಳ್ಳಲು ಮತ್ತು ಪ್ರಭೇದಗಳ ಬಳಕೆಯು ಔಚಿತ್ಯವಾಗಿರುವುದನ್ನು ಗಮನಿಸಬಹುದು. ವಾಸ್ತವದಲ್ಲಿ ಮಧ್ಯಮವರ್ಗ ಹಾಗೂ ಕೆಳವರ್ಗದ ಪಾತ್ರಗಳು ಬಳಸುವ ಭಾಷಿಕ ವಿವರಗಳು ಕೀಳು ಮನೋಭಾವನೆಯಿಂದ ಕೂಡಿವೆ ಎಂಬ ಕಲ್ಪನೆ ಇದೆ. ಆದರೆ ಕನ್ನಡ ಭಾಷಿಕ ಪ್ರಭೇದಗಳನ್ನು ಮರುಸ್ಥಾಪಿಸುವ ಕೆಲಸವನ್ನು ಈ ಪಾತ್ರಗಳು ನಿರ್ವಹಿಸುತ್ತಿರುವುದನ್ನು ಈ ಕೌಟುಂಬಿಕ ಧಾರಾವಾಹಿಗಳಲ್ಲಿ ಗುರುತಿಸಿಕೊಳ್ಳಲಾಗಿದೆ.

ಪ್ರಾದೇಶಿಕ ಧಾರಾವಾಹಿಯಲ್ಲಿ ಬಯ್ಗುಳಗಳು

ಗೃಹಭಂಗ ಧಾರಾವಾಹಿಯಲ್ಲಿ ಡಿ.ಡಿ.೧ರಲ್ಲಿ ಪ್ರಸಾರವಾಗಿದ್ದು. (೧೨-೧೩ ವರ್ಷಗಳ ಹಿಂದೆ ಪ್ರಸಾರವಾದ ಹಳೆಯ ಧಾರಾವಾಹಿ)

ಗಂಗಮ್ಮ: "ಬೆಳಿಗ್ಗೆ ಹೋದವರು ಇನ್ನೂ ಮನೆಗೆ ಬಂದಿಲ್ಲ. ಮುಂಡೇವು ಹೊಟ್ಟೆಗೆ ಏನು ತಿಂದಿಲ್ಲ."

ಗಂಗಮ್ಮ ತನ್ನ ಮಕ್ಕಳನ್ನು ಹುಡುಕಿಕೊಂಡು ಮಠದ ಹತ್ತಿರ ಬಂದು ಅಯ್ಯನವರನ್ನು ವಿಚಾರಿಸಿದಾಗ ಬಳಕೆಯಾಗಿದ್ದ ಉದಾಹರಣೆ ಇದಾಗಿದೆ. ತನ್ನ ಮಕ್ಕಳನ್ನೇ ಮುಂಡೇವು, ಸೂಳೆ ಮಕ್ಕಳ, ತು ಷಂಡ್ ಮುಂಡೆ ಮಕ್ಳ ಎಂಬ ಪದಗಳನ್ನು ಬಳಸುತ್ತಾಳೆ. ಹಾಗೆಯೇ ತನ್ನ ಮಕ್ಕಳಾದ ಚನ್ನಿಗರಾಯ ಹಾಗೂ ಅಪ್ಪಣ್ಣ ಇವರು ಕೂಡ ನೀ ಮುಂಡೆ ಎಂಬಂತಹ ಬಯ್ಗಳಗಳನ್ನು ಬಳಸುತ್ತವೆ. ಈ ಬಯ್ಗುಳಗಳು ಪ್ರಾದೇಶಿಕ ಪ್ರಭೇದದಿಂದ ಕೂಡಿವೆ. ಈ ಬೈಗುಳಗಳನ್ನು ತುಚ್ಛೀಕರಿಸಿ ಮಾತನಾಡುವ, ಬಾಯಿಗೆ ಬಂದದ್ದನ್ನು ಮಾತಾನಾಡುವಂತಹ ಬಯ್ಗುಳಗಳು ಬಳಕೆಯಲ್ಲಿವೆ. ಅಂದರೆ ಅಧಿಕಾರಶಾಹಿ ಮನೆತನದ ಶಾನುಭೋಗರ ಕುಟುಂಬದಲ್ಲಿ ಶಾನುಭೋಗರು ತೀರಿಹೋದ ಮೇಲೆ ಗಂಡಿಲ್ಲದ ದಿಕ್ಕು ಹೇಳೋರು ಕೇಳೋರು ಇಲ್ಲದ ಮನೆಯಾಗಿದ್ದರಿಂದ ತಮ್ಮ ಇಷ್ಟಕ್ಕೆ ಬಂದ ಹಾಗೆ ನಡೆದುಕೊಳ್ಳುವುದನ್ನು ಗುರುತಿಸಿಕೊಳ್ಳಲಾಗಿದೆ. ಬಯ್ಗುಳಗಳನ್ನು ಸಾಮಾನ್ಯ ಜನರಂತೆ ಬಳಕೆ ಮಾಡುವುದನ್ನು ಈ ಧಾರಾವಾಹಿಯಲ್ಲಿ ಗುರುತಿಸಿಕೊಳ್ಳಲಾಗಿದೆ. ವಯಸ್ಸಿನ ಮಿತಿ ಇಲ್ಲದೆ ಹೇಗೆಂದರೆ ಹಾಗೆ ಬಯ್ಗುಳಗಳನ್ನು ಬಳಸಿಕೊಂಡಿದ್ದಾರೆ.

ಉದಾಹರಣೆಗೆ: "ಆ, ನಮ್ಮ ಚನ್ನಿಗನಾ ಅಯ್ಯೋ ಯಾವ್ ಸೂಳೆ ಮಗ ಹಚ್ಚಿದ್ನೊ ಬೆಂಕೀನಾ?"

"ಲೋ ಬೀರ ಯಾರಾದ್ರು ಗಂಡುಸ್ರು ನನ್ನ ಮಗನ್ನ ಕಾಪಾಡ್ರೊ"

"ತೂ.... ಷಂಡ್ ಮುಂಡೆ ಮಕ್ಳ. ಇಲ್ಲಿ ಯಾವನೂ ಗಂಡಸ್ಸುಟ್ಟಿದೋನು ಇಲ್ವೇನ್ರೋ"

ಗ್ರಾಮೀಣ ಪ್ರದೇಶದ ಪ್ರಭೇದದ ಬಯ್ಗುಳಗಳು ಈ ಧಾರಾವಾಹಿಯಲ್ಲಿ ಬಳಕೆಯಾಗಿವೆ. ಇಲ್ಲಿ ಯಾವುದೇ ಪ್ರಮಾಣೀಕರಣದ ಮಿತಿ ಇಲ್ಲದೇ ಇರುವುದರಿಂದ ನೇರವಾಗಿ ಬಯ್ಗುಳಗಳನ್ನು ಬಳಸಿಕೊಳ್ಳಲಾಗಿದೆ.

ಮಲೆಗಳಲ್ಲಿ ಮದುಮಗಳು ಧಾರಾವಾಹಿಯಲ್ಲಿ ಬಯ್ಗುಳ ಬಳಕೆ

ಗುತ್ತಿ: ಕಂಬಳಿ ಕೋಲನ್ನು ಹಿಡಿದುಕೊಂಡು ಗುಡಿಸಿಲಿನಿಂದ ಹೊರಗಡೆ ಬರುತ್ತಾನೆ. ತನ್ನ ಮನಸ್ಸಿನಲ್ಲಿ ಈ ರೀತಿ ಅಂದುಕೊಳ್ಳುತ್ತಾನೆ. ನನ್ನತ್ತೆ ಮಗಳು ತಿಮ್ಮಿನ ಬೆಟ್ಟಳ್ಳಿಯಿಂದ ಆರಿಸಿಕೊಂಡು ಬರ್ಲಿಲ್ಲ ಅಂದ್ರೆ ನನ್ನಪ್ಪ ಅಪ್ಪನಿಗೆ ಹುಟ್ಟಿದ ಗಂಡೆ ಅಲ್ಲ ನಾನು. ಹೇ ಅಚಾ ಅಚ್ಚಾ ಹೇ ಹುಲಿಯಾ ಬೆಟ್ಟಳ್ಳಿಗೆ ಹೊರಡುತ್ತಾನೆ. ಮತ್ತೆ ನಾಯಿಯನ್ನು ನೋಡು ಅಚ್ಚಾ ಹೇ ಹುಲಿಯಾ ಹಿಂದುಗಡೆಗೆನೆ ಬರ್ತೀಯ ಹೋಗ್ ಅಡ್ಡೆಗುಟ್ಟಿದ್ದು.

ಮರಾಟಿ ಮಂಜ: ಸುರುವಾಯ್ತಲ್ಲಪ್ಪ ಈಕಡೆಯಿಂದ ಈ ಹೆಗ್ಗಡ್ತೇರಿಂದ ಸುಖ ಇಲ್ಲ. ಮೂರೋತ್ತು ಜಗಳ, ಜಗಳ. ಲಕ್ಕಮ್ಮ, ಜಟ್ಟಮ್ಮ, ಜಟ್ಟಮ್ಮ ಲಕ್ಕಮ್ಮ, ನೀ ಮುಂಡೆ, ನೀ ಮುಂಡೆ, ನೀ ರಂಡೆ, ನೀರಂಡೆ, ನಾನಾಗೋವತ್ತಿಗೆ ಇಲ್ಲಿ ಕಾಲ ಮಾಡ್ತೀನಿ.

ಗುತ್ತಿ: ಅಡ್ಡೆಗುಟ್ಟಿದ್ದು. ಬಾ... ಬಾ...(ನಾಯಿಯನ್ನು ಬಯ್ಯುತ್ತಾನೆ) ಈ ಸಾರಿ ನಾನು ತಿಮ್ಮೀನ ಆರಿಸಿಕೊಂಡು ಬರ್ದಾ ಇದ್ರೆ ನಮ್ಮ ಅಪ್ಪ ಅವ್ವನಿಗೆ ಹುಟ್ಟಿದ ಗಂಡೇ ಅಲ್ಲ ನಾನು.(ದಾರಿಯಲ್ಲಿ ಹೋಗುತ್ತಿದ್ದಾಗ ಒಂದು ಗಿಡವನ್ನು ನರಿ ಅಲುಗಾಡಿಸುತ್ತದೆ. ಸ್ವಲ್ಪ ಭಯಗೊಂಡಂತೆ ಮಾಡಿ ಅಡ್ಡಡ್ಡಿ... ಅಡ್ಡಡ್ಡಿ... ಎಂದು ಉಚ್ಚರಿಸಿ ಬೆತ್ತ ಹಿಡಿದುಕೊಂಡು ಜೋರಾಗಿ ಸುತ್ತುತ್ತಾನೆ. ಗಿಡ ಅಲುಗಾಡುವುದು ನಿಂತ ಮೇಲೆ/ ಮನೆ ಹಾಳಾಗೋಗ ಈ ನರಿಯಿಂದ ಅಷ್ಟು ಸುಖ ಇಲ್ಲ.

ಕರೀಂ ಸಾಬು: "ಲೌಡಿ ಮಗನಿಗೆ ಎಷ್ಟು ದಿಮಾಕು, ಎಷ್ಟು ರೂಪಾಯಿ ಕೊಡಬೇಕು ನನಗೆ, ಅದನ್ನು ಚಿಲ್ಲರೆ ಅನ್ನುತ್ತಾನಲ್ಲ. ಹೆಗ್ಗಡೆಯವರ ಹಾಳು ಮಗ ಅಂತ ದಿಮಾಕು ಅವನಿಗೆ."

ಸುಬ್ಬಣ್ಣ ಹೆಗ್ಗಡೆ: ಹೋಗಿ ನೋಡ್ಡೋ ಹಾಳ್ ಬಸಂತ ಬಂದ್ರೆ ಇಲ್ಲೊ ಹಾಳ್ ಮಕ್ಕಳ್, ಮಳೆ ಬಂದು ಮರುದಿನ ಬಿಸಿಲು ಬರೋತನ್ಕ ಮಲ್ಕೊಳೋ ನೀವು ಇಟ್ಟುಂಡಂಗೆ. ಹೇ ಏನಾದ್ರು ಅಗ್ಲಿ ಹತ್ತು ಮುಖಾ ಹೋಗಾತಂಕಾ, ಆಮೇಲೆ ಮನೆ ಇಟ್ಟಕಂಡ್ರೆ ಇಟ್ಕೊ, ಬಿಡ್ರೆ ಬಿಡು. ಬಾರೋ ಇಲ್ಲಿ, ಬಾರೋ ಇಲ್ಲಿ ನಿನ್ನ ಮುಖ ನೋಡಿದ್ರೆ ನಿನ್ನ ಮಾತು ಕೇಳ್ತಾರೇನೋ ಹಾಳ್ ಮಕ್ಕಳ ತ್ಥೂ.... ನಿನ್ನ ಭೂದಕ್ಕೆ ಬೆಂಕಿಯಾಕ, ಹೋಗಿ ಆ ಮುಖಾನಾದ್ರು ತೊಳ್ಕೊಂಡು ಹೋಗು. ಹೋಗೋ ಹೋಗೋ... ಕೆಡ್ತಪ್ಪ ಕಾಲ ಕೆಡ್ತು, ಕಾಲ ಕೆಡ್ತು, ನಮ್ಮಂತವರು ಕಾಲ ಕೆಡೋ ಮೊದಲು ಇನ್ನೂ ಹೇಸಿದ್ದಿಲ್ಲ ಜನ್ಮ, ಹಾಳ ಕಣ್ಣು ಅದಕ್ಕ ಬ್ಯಾಡದನ ನಾನು. ಗುತ್ತಿ ಬಾರಪ್ಪ ಇಲ್ಲಿ.

"ಅವ್ನ ಮನೆ ಹಾಳಾಗಾ ಎತ್ತ ಸತ್ನೊ"

ತಿಮ್ಮಯ್ಯ ಹೆಗ್ಗಡೆ: ಎಲ್ಲಿ ಸತ್ರೋ ನಿಮ್ಮ ಬಿಡಾರಕ್ಕೆ ಬೆಂಕಿ ಬೀಳಾ, ಊರಿಗೆಲ್ಲ ಹಗಲಾದ್ರು ನಿಮ್ಗಿನ್ನ ಬೀಳ್ಲಿಲ್ವೆನ್ರೋ.

ಯಾರು ಇಲ್ಲೇನ್ರೋ ಕೇರೀಲಿ, ದಿಲ್ಲಿ ಹಾಳಾದ್ರೋ ಎಲ್ಲಾ, ಎಲ್ಲಿ ಕುಟ್ಟಿ ನಾಶ್ನ ಆದ್ರೇನೋ ತ್ಥೂ... ಹೇ, ಹೇ, ಸಿದ್ದಾ, ತಿಮ್ಮ, ಬೈರಾ, ಸಣ್ಣ ಕೂಕೊಣಕ್ಕೆ ಏನೋ ಆಗಿದೆ ನಿಮ್ಗೆ? ನಿಮ್ಮ ಗಂಟ್ಲು ಕೆಟ್ಟೋಗಾ ತ್ಥೂ... ಮುಂಡೆ ಮಕ್ಳಾ.

ತ್ಥೂ... ಎಷ್ಟು ಕೂಗುಬೇಕೋ ನಿಮ್ಮನ್ನ ಸೋಮಾರಿ ನನ್ಮಕ್ಳ, ದಿಕ್ಕಿನ್ನ ಹೊತ್ತು ಹಾಳಾಗ್ಯದೇ ಏನಾ? ಬಿಸಿಲು ನೆತ್ತಿಗೆ ಬಂದ್ರು ನೀವ್ ಮಾತ್ರ ಬರಲ್ಲಾ.

ಕರೀಂ ಸಾಬು: ದೊಡ್ಡ ಬೈರಾ ಮತ್ತು ಅವನ ಮಗ ಕಲ್ಲಯ್ಯ ಗೌಡರ ಮನೆಗೆ ಬಂದು ಕುಳಿತದ್ದನ್ನು ನೋಡಿ 'ಇವಂದುರೆ ಏನು ದಿಮಾಕು ಅಂತಿಯಾ ಸೊಕ್ಕು, ಕೇರಿಗೆ ಯಜಮಾನ ಅಂತ ಬಾಳ ದಿಮಾಕು. ಆ ಹೊತ್ತು ನಾನು ಅಜೀಜ್ ಚಮ್ಡಕ್ಕಾಗಿ ಕುದುರೆ ತಟ್ಟು ತೆಗೆದುಕೊಂಡು ಇದ್ರ ಕೇರಿಗೆ ಹೋದ್ರೆ, ನಿಮ್ದುಕೆ ಒಳಗೆ ಬರ್‌ಬಾರ್ದು, ನಮ್ದುಕೆ ದೇವ್ರು ದಿಂಡ್ರು ಇದಾರೆ. ನಮ್ದು ಜಾತಿ ಕೆಟ್ಟು ಹೋಯ್ತದೆ ಅಂತ ಏನೇನೋ ಬೊಗಳೆ ಬಿಟ್ಟಾ, ಇವತ್ತು ಇವಂದು ಇವನ ಮಗನ ಸೊಕ್ಕು ಇಳಿಸಿ ಬಿಡ್ತೀನಿ. ಗೌಡ್ರು ಬೆತ್ತ ತಗೋ ಅನ್ಲಿ... ಇವತ್ತು ನಿನಗೆ ನಾಳೆ ಪೂವಳ್ಳಿ ನಾಯಕರಿಗೆ ಕೊಬ್ಬಿರೋದನ್ನೆಲ್ಲ ಕರಗಿಸ್ತೀನಿ ನೋಡ್ತಾ ಇರು.

ಲುಂಗಿ ಸಾಬು: ಇವತ್ತು ಗೊತ್ತಾಗ್ತಾದೋ ಹಣ್ಣುಳ್ಳ ಹೊತ್ತಾದ ರುಚಿ. ಮದುವೆ ಮಾಡಿಸ್ತಿನಿ ಅಂತ ಹೇಳಿ ಹುಡುಗೀನ ಪರಾರಿ ಮಾಡ್ತಿರಲ್ಲ, ಎಂಥ ದಗಲ್ ಬಾಜಿಗಳು ನೀವು.

ಈ ಮೇಲಿನ ಉದಾಹರಣೆಗಳು ಕೆಳವರ್ಗದ ಪಾತ್ರಗಳನ್ನು ಬಯ್ಯುವ ಸ್ವರೂಪವನ್ನು ಹೊಂದಿವೆ. ಈ ಬಯ್ಗುಳಗಳ ಶಾಪ ಈ ಪದದಿಂದ ಕೂಡಿದ ಮತ್ತು ಆಜ್ಞಾಪನ ರೂಪದಿಂದ ಕೂಡಿದ ಬಯ್ಗುಳಾಗಿವೆ. ಈ ಬಯ್ಗುಳಗಳೆಲ್ಲಾ ಮುಸ್ಲಿಂ ಪಾತ್ರಗಳು ದಿಮಾಕು ಎನ್ನುವ ಅನ್ಯಭಾಷಾ ಬಳಕೆಯ ಪದವನ್ನು ನುಡಿಮಿಶ್ರಣ ಮಾಡಿ ಬಯ್ಯುವುದನ್ನು ಈ ಪಾತ್ರಗಳ ಮುಖೇನ ಕಂಡುಕೊಳ್ಳಲಾಗಿದೆ. ಸಂಪೂರ್ಣವಾಗಿ ಮಲೆನಾಡು ಪ್ರಾದೇಶಿಕ ಪ್ರಭೇದಗಳನ್ನು ಬಳಸಿಕೊಂಡು ಬಯ್ಗುಳ ಸ್ವರೂಪ ಎಂಥದ್ದು ಎಂಬುದನ್ನು ಈ ಉದಾಹರಣೆಗಳು ನಿರೂಪಿಸುತ್ತವೆ.

ಒಟ್ಟಾರೆಯಾಗಿ ಬಯ್ಗುಳಗಳ ಬಳಕೆಯು ಕೌಟುಂಬಿಕ ಹಾಗೂ ಪ್ರಾದೇಶಿಕ ಧಾರಾವಾಹಿಗಳಲ್ಲಿ ಹೆಚ್ಚು ಬಳಕೆಯಾಗಿವೆ. ಹಾಸ್ಯ ಮತ್ತು ಚಾರಿತ್ರಿಕ ಧಾರಾವಾಹಿಗಳಲ್ಲಿ ಬಯ್ಗುಳಗಳ ಬಳಕೆ ವಿರಳವಾಗಿವೆ. ಇಲ್ಲಿ ಕೌಟುಂಬಿಕ ಹಾಗೂ ಪ್ರಾದೇಶಿಕ ಧಾರಾವಾಹಿಗಳಲ್ಲಿ ಬಳಕೆಯಾಗಿರುವ ಬಯ್ಗುಳಗಳನ್ನೇ ಹೆಚ್ಚಾಗಿ ಉದಾಹರಿಸಲಾಗಿದೆ. ಹಾಸ್ಯ ಮತ್ತು ಚಾರಿತ್ರಿಕ ಧಾರಾವಾಹಿಗಳಲ್ಲಿ ವಿರಳವಾಗಿರುವುದರಿಂದ ಅವುಗಳನ್ನು ಬಳಸಿಕೊಳ್ಳಲು ಸಾಕಷ್ಟು ಉದಾಹರಣೆಗಳು ಇಲ್ಲ. ಇನ್ನು ಈ ಧಾರಾವಾಹಿಗಳಲ್ಲಿ ಬಳಕೆಯಾಗಿರುವ, ಬಳಕೆಯಾಗುತ್ತಿರುವ ಬಯ್ಗುಳಗಳ ಕುರಿತು ವೀಕ್ಷಕರು ಸುಧಾ ಪತ್ರಿಕೆ ಹಾಗೂ 'ಓ ಮನಸೆ' ಪತ್ರಿಕೆಗಳಲ್ಲಿ ವಿಮರ್ಶಿಸುತ್ತಿರುವುದನ್ನು ಗಮನಿಸಲಾಗಿದೆ. ಕೆಲವೊಂದು ಬಯ್ಗುಳಗಳನ್ನು ನಿರ್ದೇಶಕರು ಎಚ್ಚರಿಕೆಯಿಂದ ಬಳಸಬೇಕು ಎನ್ನುವುದನ್ನು ಗಮನಿಸಲಾಗಿದೆ.

ಧಾರಾವಾಹಿಗಳೆಂದರೆ ಸ್ಥಿರ ಮಾದರಿ ಬಯ್ಗುಳಗಳನ್ನು ಬಳಸುವುದನ್ನು ವಿಮರ್ಶಿಸಿದ್ದಾರೆ.

ಉದಾಹರಣೆಗೆ: ಮೂದೇವಿ, ಗೂಬೆ, ದರಿದ್ರದವಳು, ಬಿನ್ನಾಣಗಿತ್ತಿ, ಲೋಫರ್, ಈಡಿಯಟ್, ಮುಠ್ಠಾಳ, ಮನೆಹಾಳಿ, ಸೋಂಬೇರಿ, ನಾಲಾಯಕು ನನ್ಮಗ, ಮಳ್ಳಿ ಇತ್ಯಾದಿ.

ಈ ಬಯ್ಗುಳಗಳನ್ನು ಸ್ಥಿರವಾಗಿರಿಸಿಕೊಂಡು ಎಲ್ಲಾ ಧಾರಾವಾಹಿಗಳಲ್ಲಿ ಬಳಸುತ್ತಿದ್ದಾರೆ. ಇವು ಸೀರಿಯಲ್‌ಗಾಗಿಯೇ ಹುಟ್ಟಿಕೊಂಡಿರುವ ಬಯ್ಗುಳಗಳಾಗಿವೆ.

ಕೇವಲ ಪ್ರಾದೇಶಿಕ ಮತ್ತು ಇತರೆ ಧಾರಾವಾಹಿಗಳ ಮಧ್ಯಮವರ್ಗ ಹಾಗೂ ಕೆಳವರ್ಗಗಳಿಗೆ ಕೆಲವು ಬಯ್ಗುಳಗಳು ಸೀಮಿತವಾಗಿವೆ. ಈಗಾಗಲೇ ಈ ಸಮಸ್ಯೆಯನ್ನು ಕುರಿತು ವಿಶ್ಲೇಷಿಸಲಾಗಿದೆ. ಪ್ರಮುಖವಾಗಿ ತಿಳಿಯಬೇಕಾದ ವಿಚಾರ ವಾಸ್ತವದಲ್ಲಿ ಬಳಕೆಯಾಗುತ್ತಿರುವ ಬಯ್ಗುಳಗಳಿಗೂ ಧಾರಾವಾಹಿಗಳಲ್ಲಿ ಬಳಸುತ್ತಿರುವ ಬಯ್ಗುಳಗಳಿಗೆ ವ್ಯತ್ಯಾಸವಿದೆ. ವೀಕ್ಷಕರನ್ನು ಗಮನದಲ್ಲಿರಿಸಿ ಕೊಂಡು ಬಯ್ಗುಳಗಳನ್ನು ಫಿಲ್ಟರ್ ಮಾಡಿದ್ದಾರೆ. ವೀಕ್ಷಕರಿಗೆ ತಲೆ ಕೆಡದಂತೆ ಎಚ್ಚರಿಕೆ ವಹಿಸಿರುವುದನ್ನು ಈ ಉದಾಹರಣೆಗಳು ನಿರೂಪಿಸುತ್ತದೆ(ಸುಧಾ ಪತ್ರಿಕೆಯ ವಿಮರ್ಶೆಯನ್ನು ನೋಡಲಾಗಿದೆ). ಭಾಷಿಕವಾಗಿ ಬಯ್ಗುಳಗಳ ಪ್ರಭಾವ ಮತ್ತು ಪರಿಣಾಮಗಳನ್ನು ಗಮನದಲ್ಲಿರಿಸಿಕೊಂಡು ಧಾರಾವಾಹಿಗಳಲ್ಲಿ ಎಚ್ಚರಿಕೆಯಿಂದ ಬಳಸಿರುವುದು ಉಚಿತವಾಗಿದೆ.

೪.೪. ಗಾದೆ

'ನಾಣ್ಣುಡಿ' ಎಂದು ಕರೆಯುವ ನುಡಿಗಳಿಗೆ ಗಾದೆ ಎಂದೂ ಕರೆಯುತ್ತಾರೆ. ಇದಕ್ಕೆ ಗಾದೆಯ ಮಾತು ಎಂದೂ ಹೆಸರಿದೆ. ಇದನ್ನೇ ಕೆಲವರು ಲೋಕೋಕ್ತಿ(ಲೋಕ+ಉಕ್ತಿ) ಎಂದು ಕರೆಯುವುದುಂಟು. ಲೋಕೋಕ್ತಿ ಎಂಬುದು ನಾಣ್ಣುಡಿ ಎಂದುದಕ್ಕೆ ಸಮಾನಾರ್ಥಕ ಸಂಸ್ಕೃತ ಶಬ್ದ. ನಾಣ್ಣುಡಿಗಳು ಅನುಭವದ ಮಾತುಗಳೇ ಆದುದರಿಂದ ಗಾದೆ ಎಂದರೆ ಅನುಭವದ ಮಾತು ಎಂದೇ ಪ್ರಸಿದ್ಧವಾಗಿವೆ.

"ರೂಢಿಯ ಮಾತೆ ಗಾದೆ ನಾಡಿನ ನಡತೆಯ ನಿಯಮ" ಎಂಬ ನಾಣ್ಣುಡಿಯಂತೆ ಗಾದೆಗಳಿಗೆ ನಿಯಮಬದ್ಧವಾದ ಯಾವ ಲಕ್ಷಣಗಳೂ ಇಲ್ಲವಾದರೂ ಸೂಕ್ಷ್ಮವಾಗಿ ಗಮನಿಸಿದಾಗ ಕೆಲವು ಅಂಶಗಳು ಗೋಚರಿಸುತ್ತವೆ. ಇವುಗಳ ಲಕ್ಷಣಗಳನ್ನು ಕುರಿತು ಹಲವು ವಿದ್ವಾಂಸರು ಹಲವಾರು ಬಗೆಯ ವ್ಯಾಖ್ಯಾನಗಳನ್ನು ನೀಡಿದ್ದಾರೆ. ಇವುಗಳಲ್ಲಿ ಜೇಮ್ಸ್ ಎ.ಕೊಲೊ ಅವರು ಹೇಳುವಂತೆ 'ಸಂಕ್ಷಿಪ್ತತೆ, ಸಾರವತ್ತತೆ, ತೀಕ್ಷ್ಣತೆ ಮತ್ತು ಜನಪ್ರಿಯತೆಗಳೆ' ಗಾದೆಯ ಲಕ್ಷಣಗಳೆಂದು ಒಪ್ಪಬಹುದು.

ಗಾದೆಗಳ ಆಕರ ಸಂಕ್ಷಿಪ್ತತೆಯಿಂದ ಕೂಡಿದ್ದು ಸಾವಿರ ಮಾತಿನಲ್ಲಿ ಹೇಳಬಹುದಾದ್ದನ್ನು ನಾಲ್ಕು ಮಾತು ಒಳಗೊಳ್ಳುತ್ತವೆ. ಜನರೆ-ಜೀವನಾನುಭವಗಳೇ ಅವುಗಳ ಉಸಿರು. ಕಲಾತ್ಮಕತೆ ಅವುಗಳ ಜೀವಾಳ. ಸಂಜೀವನ ಶಕ್ತಿ ಮತ್ತು ಲೋಕಪ್ರಿಯತೆ ಅವುಗಳ ಚಿರಂತನತೆಯ ಮರ್ಮವೆಂದು ಹೇಳಬಹುದಾಗಿದೆ. ನೂರಾರು ಜ್ಞಾನವೃದ್ಧರ ವಿವೇಕಿಗಳ ಅನುಭವಿಗಳ ಅನುಭವಾಮೃತದ ರಸಾಯನವೇ ಗಾದೆ. ಅದು ಬಹುಕಾಲದ ಪರಂಪರೆಯ ರಸಪಾಕ.

ಹಲವು ತಿಳುವಳಿಕೆಗಳ ಜೀವಸಾರ. ಅವು ಹಠಾತ್ತನೆ ಅನೈಚ್ಛಿಕವಾಗಿ ಚಿಮ್ಮಿದರೂ ಅವುಗಳ ಹಿಂದೆ ನೂರಾರು ಜನ್ಮಗಳ ನೂರಾರು ಹಿರಿಯರ ಸಂಸ್ಕಾರ ಪರಂಪರೆಯಿದೆ. ಅನುಭವ ವೀಕ್ಷಣೆ ಮತ್ತು ಪ್ರಯೋಗಗಳೇ ಅದರ ಉಗಮಕ್ಕೆ ಕಾರಣವಾದುದರಿಂದ ಗಾದೆ ಎಲ್ಲ ಜ್ಞಾನ ವಿಜ್ಞಾನಗಳ ತವರು ಎಂದು ಹೇಳಿದರೆ ತಪ್ಪಾಗಲಾರದು.

'ಗಾದೆ ಮಾತು ವೇದಕ್ಕೆ ಸಮಾನ', 'ಮಾತಿಗೆ ಮೊದಲು ಗಾದೆ, ಊಟಕ್ಕೆ ಮೊದಲು ಉಪ್ಪಿನಕಾಯಿ' ಎಂಬ ನಾಣ್ಣುಡಿಯಂತೆ ಯಾವ ಅಂತಸ್ತಿನ ಜನರೇ ಆಗಲಿ ಅವರ ದಿನಬಳಕೆಯ ಸಹಜಮಾತುಗಳಿಂದ ಹಿಡಿದು ಉಪದೇಶ, ಬೋಧನೆ, ಚರ್ಚೆ, ಬರಹ, ಭಾಷಣಗಳಲ್ಲಿ ಒಟ್ಟಿನಲ್ಲಿ ಭಾಷೆ ಬಳಸುವೆಡೆಯಲ್ಲೆಲ್ಲ ಗಾದೆಗಳು ಅನೈಚ್ಛಿಕವಾಗಿ ಸಹಜಾಭಿವ್ಯಕ್ತಿಯ ಮಾಧ್ಯಮಗಳೋ ಎನ್ನುವಂತೆ ಮಾತಿನ ಅನಿವಾರ್ಯ ಅಂಶ ಎನ್ನುವಂತೆ ನುಗ್ಗಿ ಬರುತ್ತವೆ. ದಿನ ಬೆಳಗಾದರೆ ಅವುಗಳನ್ನು ಬಳಸದ ಜನರಿಲ್ಲ. ಉಪ್ಪಿನಕಾಯಿ, ಹಪ್ಪಳ, ಸಂಡಿಗೆ ಮೊದಲಾದ ವ್ಯಂಜನಗಳು ಊಟದ ಸ್ವಾದವನ್ನು ಹೆಚ್ಚಿಸುವಂತೆ ಗಾದೆಗಳು ಮಾತಿನ ಮಹತ್ವವನ್ನು ಹಿರಿದು ಮಾಡಿ ಸಾಂದರ್ಭಿಕ ಮಹತ್ವವನ್ನು ವೃದ್ಧಿಗೊಳಿಸುತ್ತವೆ.

ಭಾವಾರ್ಥಗಳ ಸ್ಫುಟತ್ವಕ್ಕೆ ಶೀಘ್ರ ಬೋಧನೆಗೆ ಪರಿಣಾಮ ಸಾಧನೆಗೆ ಗಾದೆಗಳಿಂದ ಲಾಭವಾಗುತ್ತದೆ. ಒಂದು ಜನಾಂಗದ ಅನುಭವ ಸಂಪತ್ತು ಒಂದು ಭಾಷೆಯ ಕಸುವು ಮತ್ತು ಸಾರಸತ್ವಗಳು ಗಾದೆಗಳಲ್ಲಿ ಸಂಗ್ರಹಗೊಂಡಿವೆ. ಇಂತಹ ಮಹತ್ವವನ್ನು ಹೊಂದಿರುವ ಗಾದೆಗಳು ಆಯಾ ಜನರ ಸಂಸ್ಕೃತಿಯ ಪಾರ್ಶ್ವ ಭೂಮಿಕೆಯನ್ನು ಪ್ರತಿಬಿಂಬಿಸುತ್ತದೆ ಎಂದ ಮೇಲೆ ಜನ ಜೀವನದ ಸಂಸ್ಕೃತಿಯ ಅಂತರಂಗವನ್ನು ಗಾದೆಗಳ ಮಾತಿನಲ್ಲಿ ಕಾಣಬಹುದು ಎಂದಾಯಿತು. ಅಲ್ಲಿಗೆ ಗಾದೆಗಳೂ ಕೂಡ ಸಾಮಾಜಿಕ ಚಹರೆಗಳಾಗಿ ಕಾರ್ಯ ನಿರ್ವಹಿಸುತ್ತವೆ ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಇದನ್ನು ಇನ್ನೂ ಸ್ವಲ್ಪ ವಿಸ್ತರಿಸುವುದಾದರೆ ಸಾಮಾಜಿಕ ಮೌಲ್ಯಗಳು ಅತ್ಯಂತ ಸಾಂದ್ರವಾಗಿ, ಸುಲಭವಾಗಿ, ಸಹಜವಾಗಿ, ಭಾಷಿಕ ನೆಲೆಯನ್ನಾಧರಿಸಿ ಬರುವುದನ್ನು ಗಾದೆಗಳಲ್ಲಿಯಂತೆ ಇನ್ನಾವುದಾದರೂ ಸಂಸ್ಕೃತಿ ವಾಹಕಗಳಲ್ಲಿ ಹರಳುಗಟ್ಟಿದೆಯೇ ಎಂಬ ಪ್ರಶ್ನೆಗೆ ಉತ್ತರಿಸುವುದು ಕಷ್ಟಸಾಧ್ಯ. ಗಾದೆಗಳು ಒಂದು ಸಮಾಜದ ಪ್ರತಿಮೆಗಳಾಗಿರುವಂತೆ ಜಾತಿವ್ಯವಸ್ಥೆಗೆ ಸಂಬಂಧಿಸಿದ ಮೌಲ್ಯಗಳು ಕೂಡ ಆಗಿವೆ. ಹಾಗಾಗಿ ಗಾದೆಗಳು ಒಂದು ಸಮಾಜದ ಅತ್ಯುತ್ತಮ ನಿದರ್ಶನಗಳಾಗಿವೆ.

ಗಾದೆಗಳ ಪ್ರತಿಮಾತ್ಮಕತೆ, ಸಂಕ್ಷಿಪ್ತತೆ, ಪ್ರಾಸ, ಲಯಬದ್ಧತೆಗಳೆಲ್ಲವೂ ಸೇರಿ ಗಾದೆಗಳನ್ನು ಪರಿಣಾಮಕಾರಿಯಾಗಿಸುತ್ತವೆ. ಜನರ ನೆನಪಿನಲ್ಲಿ ಉಳಿದು ಮುಂದುವರಿಯುವುದನ್ನು ಸುಲಭವಾಗಿಸುತ್ತವೆ. ಗಾದೆಗಳು ಕಲಾತ್ಮಕವಾಗಿವುದರಿಂದ ಸಾಮಾಜಿಕ, ಸಾಂಸ್ಕೃತಿಕ ಮೌಲ್ಯಗಳನ್ನು ಅವುಗಳ ಮೂಲಕ ರೂಢಿಸುವುದು ಅನಾಯಾಸವಾಗಿರುತ್ತದೆ.

ಗಾದೆಗಳು ಭಾಷೆಯ ಒಂದು ಭಾಗವೇ ಆಗಿರುವುದರಿಂದ ಯಾವ ಸಾಹಿತ್ಯ ರಚನೆಗಳನ್ನು ತಿಳಿಯದವರೂ ಕೂಡ ಭಾಷೆಯೊಡನೆ ಗಾದೆಗಳನ್ನು ಸಹಜವಾಗಿ ಕಲಿತು ಬಳಸುತ್ತಿರುತ್ತಾರೆ. ಅವರವರ ಭಾಷಾಜ್ಞಾನ, ಆಸಕ್ತಿಗೆ ಅನುಗುಣವಾಗಿ ತಿಳಿಯುವ ಗಾದೆಗಳ ಪ್ರಮಾಣ ಮತ್ತು ಗಾದೆಗಳ ರೀತಿಗಳು ಬೇರೆಯಾಗಿರಬಹುದು. ಆದರೆ ಎಂಥವರ ಭಾಷಾಕಲಿಕೆಯಲ್ಲೂ ಕೆಲವಾದರೂ ಗಾದೆಗಳು ಸೇರಿ ಹೋಗುತ್ತವೆ. ಆಗ ಕೇವಲ ಹೊಸ ಶಬ್ದ-ವಾಕ್ಯಗಳು ಮಾತ್ರ ನಮ್ಮ ಭಾಷಾ ಭಂಡಾರವನ್ನು ಸೇರುವುದಿಲ್ಲ. ಅದರ ಜೊತೆ ಜೊತೆಯಲ್ಲೇ ಸಾಂಸ್ಕೃತಿಕ ಮೌಲ್ಯಗಳನ್ನು ಅಂತರ್ಗತವಾಗಿಸಿಕೊಳ್ಳುತ್ತವೆ. ಎಷ್ಟೋ ಬಾರಿ ನಿಮಗೆ ಗೊತ್ತಿರುವ ಗಾದೆಗಳನ್ನು ಹೇಳಿ ಎಂದರೆ ನಾವೇ ಬಳಸುವ ಗಾದೆಗಳೂ ಕೂಡ ನೆರವಾಗುವುದಿಲ್ಲ. ಆದರೆ ಸಂದರ್ಭಕ್ಕೆ ತಕ್ಕಂತೆ ಅವು ಅಪ್ರಯತ್ನಪೂರ್ವಕವಾಗಿ ಹೊರಬರುತ್ತವೆ. ಅಷ್ಟು ಸಹಜವಾಗಿ ಅವು ನಮ್ಮೊಳಗೆ ಸೇರಿರುತ್ತವೆ. ಆದ್ದರಿಂದಲೇ ಜಾತಿಸೂಚಕ ವಾಹಕಗಳಾಗಿ ಗಾದೆಗಳು ತೀರಾ ಮುಖ್ಯವಾಗುತ್ತವೆ.

"ನಮ್ಮ ಸಂಸ್ಕೃತೀಕರಣದ ಪ್ರಕ್ರಿಯೆಯಲ್ಲಿ ನಾವು ಪಡೆಯುವ ಜಾತಿ ಮತ್ತು ಲಿಂಗ ವ್ಯವಸ್ಥೆಯ ಮೌಲ್ಯಗಳು ನಾವು ಕಲಿಯುವ ಗಾದೆಗಳ ಜೊತೆಯಲ್ಲೇ ನಮ್ಮೊಳಗೆ ಸೇರಿರುತ್ತವೆ. ಜನಸಾಮಾನ್ಯರ ಅಪ್ರಜ್ಞಾಪೂರ್ವಕ ನೆಲೆಗಳಲ್ಲಿ ಕುಳಿತ ಈ ಗಾದೆಗಳೊಳಗೆ ಜಾತಿ ವ್ಯವಸ್ಥೆಯ ಮೌಲ್ಯಗಳು ಕುಳಿತಿರುವುದರಿಂದ ಅವು ಅತ್ಯಂತ ಸುಭದ್ರವಾಗಿದ್ದು ರೂಢಿಗೊಳ್ಳುತ್ತ ಹೋಗುತ್ತವೆ. ಜೀವನಸ್ವರೂಪ ಬದಲಾದಂತೆ ನಾಗರಿಕತೆಯ ವಿನ್ಯಾಸ ವ್ಯತ್ಯಾಸಗೊಂಡಂತೆ ವಿಚಾರ ದೃಷ್ಟಿ ಹೊಸದಾದಂತೆ ಕ್ರಮೇಣ ಕೆಲವು ಗಾದೆಗಳು ಒಂದು ಭಾಷಾ ಸಂಸ್ಕೃತಿಯಿಂದ ಕಳಚಿಕೊಂಡು ಬಿಡಬಹುದು. ಇಲ್ಲವೇ ಪಳೆಯುಳಿಕೆಗಳಾಗಿ ಬಿಡಬಹುದು.

ಆದರೆ ಈ ಪ್ರಕ್ರಿಯೆ ಬಹಳ ನಿಧಾನ. ಆದಾಗ್ಯೂ ಗಾದೆಗಳು ಬಳಸುವ ಹೊರ ಚೌಕಟ್ಟು ಒಂದು ಜೀವನವಿಧಾನದಿಂದ ಹೊರಗುಳಿದಾಗಲೂ ಅದರ ಒಳ ಅರ್ಥ ಪ್ರಸ್ತುತತೆಯನ್ನು ಕಳೆದುಕೊಳ್ಳದೇ ಇರಬಹುದು." ಉದಾಹರಣೆಗೆ ಅತ್ತೆ ಸೊಸೆಯರು ಮಡಿಕೆ ಬಳಸುವುದನ್ನು ಬಿಟ್ಟಿರಬಹುದು. ಆದರೆ "ಅತ್ತೆ ಒಡೆದ ಮಡಿಕೆ ಅಟ್ಟ ಸೇರಿತು, ಸೊಸೆ ಒಡೆದ ಮಡಿಕೆ ಬೀದಿ ಸೇರಿತು" ಎಂಬ ಗಾದೆಯ ಮೂಲಾರ್ಥ ಇಂದಿನ ಸಮಾಜ ರಚನೆಯಲ್ಲಿ ಅಷ್ಟೇ ಅರ್ಥಪೂರ್ಣವಾದ ಸ್ಥಾನವನ್ನು ಉಳಿಸಿಕೊಂಡಿದೆ.

ಒಟ್ಟಿನಲ್ಲಿ ಒಂದು ಭಾಷೆಯ ಗಾದೆಯನ್ನು ನೋಡದೆ ಆ ಸಂಸ್ಕೃತಿಯ ಜಾತಿವ್ಯವಸ್ಥೆಯನ್ನು ತಿಳಿಸಿದರೆ ಆ ತಿಳುವಳಿಕೆ ಅಪೂರ್ಣ. ಗಾದೆಗಳು ಅತ್ಯಂತ ಸೂಚ್ಯವಾಗಿ ಜಾತಿವ್ಯವಸ್ಥೆಯ ಮೌಲ್ಯಗಳನ್ನು ಬಿಂಬಿಸುತ್ತವೆ. ಅಂದರೆ ಗಾದೆಗಳೂ ಕೂಡ ಸಾಮಾಜಿಕ ಚಹರೆಗಳಾಗಿ ಕಾರ್ಯ ನಿರ್ವಹಿಸುತ್ತವೆ ಎಂಬುದನ್ನು ಆಯ್ದ ಧಾರಾವಾಹಿಗಳಲ್ಲಿ ಬಳಕೆಯಾಗುತ್ತಿರುವ ಸಂಭಾಷಣೆಯಲ್ಲಿ ಗುರುತಿಸಬಹುದು. ಗಾದೆಗಳನ್ನು ಹೇಗೆ ವಿಭಿನ್ನವಾಗಿ ಬಳಕೆ ಮಾಡಿಕೊಂಡಿದ್ದಾರೆ ಎಂಬುದನ್ನು

ಈಗಾಗಲೇ ವಿಭಾಗಕ್ರಮ ಮಾಡಿಕೊಂಡು ವಿಶ್ಲೇಷಿಸಲಾಗಿದೆ. ಯಾವ ಯಾವ ಧಾರಾವಾಹಿಗಳಲ್ಲಿ ಯಾವ ಯಾವ ಪಾತ್ರಗಳು ಗಾದೆ ಮಾತುಗಳನ್ನು ಯಾವ ಯಾವ ಸಂದರ್ಭದಲ್ಲಿ ಸರಿಯಾಗಿ ಬಳಸಿಕೊಂಡಿವೆ ಹಾಗೂ ಅವುಗಳ ಪರಿಣಾಮ ಮತ್ತು ಪ್ರತಿಕ್ರಿಯೆಗಳನ್ನು ಸಂದರ್ಭಸಹಿತ ವಿವರಿಸುವ ಪ್ರಯತ್ನವನ್ನು ಮಾಡಲಾಗಿದೆ. ಇಂದು ಕೆಲವು ಗಾದೆ ಮಾತುಗಳು ಅಪ್ರಸ್ತುತವಾಗಿದೆ ಎಂಬ ಅಭಿಪ್ರಾಯಗಳಿವೆ. ಕಾರಣ ಆಧುನೀಕರಣ ಮತ್ತು ತಂತ್ರಜ್ಞಾನದ ಕಾಲವಾಗಿರುವುದರಿಂದ ಕೆಲವು ಗಾದೆಗಳು ಅಪ್ರಸ್ತುತವೇ ಆಗಿವೆ ಎಂಬ ವಾದವನ್ನು ಸಂದರ್ಭ ಸಹಿತ ವಿವರಿಸಿಕೊಳ್ಳಲಾಗಿದೆ.

ಭಾಷೆಯ ಉಳಿವಿಗಾಗಿ ಗಾದೆ ಮಾತುಗಳು ಬಾಯಿಂದ ಬಾಯಿಗೆ ಹರಿದಾಡುತ್ತಿರುವುದು ಕನ್ನಡ ಭಾಷೆಯ ಸ್ವರೂಪವಾಗಿದೆ. ಕಾರಣ ಪ್ರಾಸಬದ್ಧವಾಗಿರುವುದರಿಂದ ಸುಲಭವಾಗಿ ನೆನಪಿನಲ್ಲಿ ಇಟ್ಟುಕೊಂಡು ಸಂದರ್ಭನುಸಾರ ಬಳಕೆಯಾಗುತ್ತವೆ. ಇದರಲ್ಲಿ ಪ್ರಾಸವೇ ಪ್ರಮುಖ ಪಾತ್ರ ವಹಿಸುತ್ತದೆ. ಈ ಹಿನ್ನೆಲೆಯಲ್ಲಿ ಗಾದೆ ಮಾತುಗಳು ಕಾಲಕಾಲಾಂತರದಿಂದ ಉಳಿದುಕೊಂಡು ಬಂದಿವೆ. ಆಧುನಿಕತೆಯ ಪ್ರಭಾವ ಎಷ್ಟೇ ಆಗಿದ್ದರೂ ಕೂಡ ಗಾದೆ ಮಾತುಗಳ ಬಳಕೆ ಕೊರತೆ ಅನ್ನಿಸುತ್ತಿಲ್ಲ. ಕಾರಣ ಪ್ರಾಸಬದ್ಧವಾಗಿದ್ದು ಹೇಳಬೇಕಾದುದನ್ನು ಸೂಕ್ಷ್ಮವಾಗಿ ಸಂಕ್ಷಿಪ್ತವಾಗಿ ಒಂದು ವಾಕ್ಯದಲ್ಲಿ ಹೇಳುವ ಮೂಲಕ ತನ್ನ ಸ್ವರೂಪವನ್ನು ಉಳಿಸಿಕೊಂಡಿದೆ. ಕೆಲವೊಂದು ಬಾರಿ ಮನುಷ್ಯ ವರ್ತನೆಗಳನ್ನು ಕೇಂದ್ರೀಕರಿಸಿ ಕೊಂಡು ಗಾದೆ ಮಾತುಗಳನ್ನು ಬಳಕೆ ಮಾಡಿ ಕೊಂಡಾಗ ಕೆಲವರಿಗೆ ವ್ಯಂಗ್ಯವಾಗಿಯೂ, ಹಾಸ್ಯವಾಗಿಯೂ, ಸಹನೆಯ ಪ್ರತೀಕವಾಗಿಯೂ, ಬುದ್ಧಿಪರೀಕ್ಷೆ ಮಾಡಿಕೊಳ್ಳುವ ಸಂವಹನ ಪ್ರಕ್ರಿಯೆ ಈ ಗಾದೆ ಮಾತುಗಳ ಸ್ವರೂಪವಾಗಿದೆ. ಇಂಗ್ಲೀಷ್ ಭಾಷೆ ಬಳಕೆಯಾಗುವುದನ್ನು ಮತ್ತು ಅನ್ಯಭಾಷಾ ಬಳಕೆಯ ಪ್ರಭಾವವನ್ನು ಧಾರಾವಾಹಿಗಳ ಮೂಲಕ ತಿಳಿಯುವ ಮೂಲಕ ಕನ್ನಡದ ಸ್ವರೂಪವನ್ನು ವಿಶ್ಲೇಷಿಸಿಕೊಳ್ಳಲಾಗಿದೆ.

ಗಾದೆ ಮಾತುಗಳ ಬಳಕೆ

ಖುಷಿ: 'ಗಾಳಿ ಬಂದಾಗ ತೂರಿಕೋಬೇಕು ಕಣ್'ರಿ'(ಅರಗಿಣಿ ಧಾರಾವಾಹಿ)

ಖುಷಿ: 'ಸಿಕ್ಕಿದ್ದೆ ಸೀರುಂಡೆ ಅಂತ ನುಗ್ಗಿ ಬಿಡ್ತಿದ್ರಿ,

ಅರಗಿಣಿ ಧಾರಾವಾಹಿಯಲ್ಲಿ ಖುಷಿ ಚಹಾ ಕುಡಿದ ಮೇಲೆ ತನ್ನ ಆಫೀಸ್‌ಗೆ ಬಂದು ಮಾರಾಟ ಮಾಡ್ರಿ ಅಂತ ಹೇಳುತ್ತಾಳೆ. ಅದಕ್ಕೆ ಪ್ರತಿಯಾಗಿ ಇಲ್ಲ ತಾಯಿ ನಾನು ಇಲ್ಲಿ ಚೆನ್ನಾಗಿದ್ದೀನಿ ಅಂತ ಹೇಳ್ತಾನೆ. ಖುಷಿ ನಮ್ ಬಿಜಾಪುರದ ಕಡೆಯಾಗಿದ್ದಿದ್ರೆ ಅಂತ ಹೇಳ್ತಾ ಈ ಗಾದೆ ಮಾತನ್ನು ಹೇಳುತ್ತಾಳೆ. ಪ್ರಾದೇಶಿಕ ಒಳನುಡಿ ಮಾತನಾಡುವ ಖುಷಿ ಹಳ್ಳಿ ಸೊಗಡಿನ ಗಾದೆ ಮಾತುಗಳನ್ನು ವ್ಯವಹಾರ ಮಾಡುವವರಿಗೆ ಅವಕಾಶ ಸಿಕ್ಕಿದಾಗಲೇ ಹೆಚ್ಚು ಲಾಭ ಮಾಡಿಕೊಳ್ಳಬೇಕು ಎನ್ನುವ ಅರ್ಥದಲ್ಲಿ ಈ ಗಾದೆ ಮಾತನ್ನು ಬಳಸುತ್ತಾಳೆ.

ಹಾಕಿದ ಬಂಡ್ವಾಳ "ಹೊಳಿಯಾಗ ಹುಣಿಸೆ ಹಣ್ಣು ತೊಳೆದಂಗಾ ಆಗ್ತೈತಿ"(ಅರಗಿಣಿ ಧಾರಾವಾಹಿ)

ನೀನು ಮಾಡ್ತಿರೋದು "ಉರಿಯೋ ಬೆಂಕಿಗೆ ತುಪ್ಪಾ ಸುರಿಯೋ ಕೆಲ್ಸ" (ಅಮೃತವರ್ಷಿಣಿ ಧಾರಾವಾಹಿ)

ಯಶೋಧ : "ಆತುರಗೆಟ್ಟು ಆಂಜಾನೇಯಂತರ ಸೂರ್ಯನ್ನ ಹಣ್ಣು ಅಂದುಕೊಂಡು ತಿನ್ನೋದಕ್ಕೋಗಿ ಮೂತಿ ಸುಟ್ಟು ಕೊಂಡ್ನಲ್ಲ" ಹಾಗೆ ನೀನು ಮನೆ ಬಿಟ್ಟು ಬಂದು ಏನಾದ್ರು ಯಡವಟ್ಟು ಮಾಡಿಕೊಂಡು ಬಿಟ್ಟೀಯಾ(ಅಮೃತವರ್ಷಿಣಿ)

ಕಾವೇರಿ: 'ಪಾಲಿಗೆ ಬಂದದ್ದು ಪಂಚಾಮೃತ'(ಬಂಗಾರ)

ನಾಕುತಂತಿ, ೧೫೫ನೇ ಎಪಿಸೋಡ್, ಉದಯ ಟಿ.ವಿ.ಯಲ್ಲಿ ಪ್ರಸಾರವಾದದ್ದು.

ಪ್ರಕೃತಿ: "ಸಂಪಿಗೆ ಮರದಲ್ಲಿ ಹೂ ಬಿಟ್ರೆ ಯಾರು ಹೋಗಿ ನೋಡಬೇಕಾಗಿಲ್ಲ ವಾಸ್ನೇನೆ ತಾನಾಗೇ ಬರುತ್ತೆ"

ಪ್ರಭು: "ಹೂ ಹುಡಿಕೊಂಡು ದುಂಬಿ ಯಾಕೆ ಬರುತ್ತೆ"–ಮದರಂಗಿ ಧಾರಾವಾಹಿ

ಸತ್ಯವತಿ: "ಬೀಜದಂಗ ಮರ ಅಪ್ಪನಂಗ ಮಗಳು"–ಮದರಂಗಿ

ಶಾರದಮ್ಮ: "ಜಾರಿಕೊಳ್ಳೋದಕ್ಕೆ ಮೈಗೆ ಎಣ್ಣೆ ಹಚ್ಚಿಕೊಂಡು ಕೂತಿರ್ತೀಯಲ್ಲ"–ಮದರಂಗಿ

ನಾಗಮ್ಮ: "ನುಗ್ಗಿ ಗಿಡಾನ ಚಿವುಟಿ ಬೆಳೆಸಬೇಕು, ಮಕ್ಕಳ್ನ ಬಡ್ದು ಬೆಳೆಸ್ಬೇಕು"–ಲಕ್ಷ್ಮೀ ಬಾರಮ್ಮ

ತಾತಮ್ಮ: "ನಡೆಯೋ ಗಾಡಿಯಲ್ಲಿ ಮಾದಪ್ಪನ ಜಾತ್ರೆ, ಊದೊಸಂಕ ಊದೋದೇಯಾ"–ಲಕ್ಷ್ಮೀ ಬಾರಮ್ಮ

ನಾಗಮ್ಮ: "ಮನೆಗೆ ಮಾರಿ ಪರರಿಗೆ ಉಪಕಾರಿ"–ಲಕ್ಷ್ಮೀ ಬಾರಮ್ಮ

ನಾಗಮ್ಮ: "ಕೊಂಕಣ ಸುತ್ತಿಕೊಂಡು ಮೈಲಾರಕ್ಕೆ ಬರ್ಬೇಡ"–ಲಕ್ಷ್ಮೀ ಬಾರಮ್ಮ

ನಾಗಮ್ಮ: "ನೆಗೆದು ಹಾರಿದ್ರೆ ಮುಗಿಲು ಸಿಕ್ಕೊದಿಲ್ಲ"–ಲಕ್ಷ್ಮೀ ಬಾರಮ್ಮ

ತಾತಮ್ಮ: "ಊರು ಹೋಗು ಅಂತದೇ ಕಾಡು ಬಾ ಅಂತದೆ"–ಲಕ್ಷ್ಮೀ ಬಾರಮ್ಮ

ನಾಗಮ್ಮ: "ಬಿಸೋ ದೊಣ್ಣೆ ತಪ್ಪಿಸ್ಕೊಂಡ್ರೆ ನೂರು ವರ್ಷ ಆಯಸ್ಸು"–ಲಕ್ಷ್ಮೀ ಬಾರಮ್ಮ

ನಾಗಮ್ಮ: "ಕೈಯಲ್ಲಿ ಬೆಣ್ಣೆ ಹಿಟ್ಕಗಂಡು ತುಪ್ಪಕ್ಕೆ ಊರೆಲ್ಲ ಹುಡುಕಾಡಿದ್ರಂತೆ"–ಲಕ್ಷ್ಮೀ ಬಾರಮ್ಮ

"ಆತುರಗಾರನಿಗೆ ಬುದ್ಧಿಮಟ್ಟ ಕಡಿಮೆ"–ಲಕ್ಷ್ಮೀ ಬಾರಮ್ಮ

ದಿನಾಂಕ ೧೫ ಮತ್ತು ೧೬-೩-೧೩ ರಂದು ಈಟಿ.ವಿ ಕನ್ನಡ ವಾಹಿನಿಯಲ್ಲಿ.

ಬಸ್ವ: "ಬಡವ ನೀನು ಮಡಿಗಿದಂಗಿರು"-ಲಕ್ಷ್ಮೀ ಬಾರಮ್ಮ

ನಾಗಮ್ಮ: "ಗಂಡಿಸ್ಯಗ್ಯಕೆ ಗೌರಿ ದುಃಖ"-ಲಕ್ಷ್ಮೀ ಬಾರಮ್ಮ

ಬಸ್ವ: "ತೊಪ್ಪೆ ಎತ್ತೊನಿಗೆ ತಿಪ್ಪೆ ಸಾಸಿದಂಗೆ ಆಗ್ತಾದೆ"-ಲಕ್ಷ್ಮೀ ಬಾರಮ್ಮ

ಬಸ್ವ: "ಅಡಿಕೆಗೆ ಹೋದ ಮಾನ ಆನೆ ಕೊಟ್ರು ಬಾರದು"-ಲಕ್ಷ್ಮೀ ಬಾರಮ್ಮ

ನಾಗಮ್ಮ: "ಕೆಟ್ಟಮ್ಯಾಲೆ ಬುದ್ದಿಬಂತು, ಅಟ್ಟು ಮ್ಯಾಲೆ ಒಲೆ ಉರಿತು"-ಲಕ್ಷ್ಮೀ ಬಾರಮ್ಮ

ದಿನಾಂಕ ೧೮-೩-೧೩ರಂದು,

ನಾಗಮ್ಮ: "ಅನ್ನ ಆಗಗಂಟ ಕಾದಿಯಾ ಹಾರೋತಂಕ ತಡ್ಕೊಳ್ಳೋಕೆ ಆಗೋಕಿಲ್ವಾ"-ಲಕ್ಷ್ಮೀ ಬಾರಮ್ಮ

ದಿನಾಂಕ ೮-೧-೧೩ರಂದು ಸುವರ್ಣ ಟಿ.ವಿ.ಯ ಕೆಳದಿ ಚೆನ್ನಮ್ಮ ಧಾರಾವಾಹಿಯಲ್ಲಿ.

ಸೋಮಪ್ಪ ನಾಯಕ: "ಕೈ ಬಿಟ್ಟು ಹೋದ ಆಯುಧ ನಾಲಿಗೆಯಿಂದ ಜಾರಿದ ಮಾತು ಹಿಂದಕ್ಕೆ ಪಡೆಯಲಾಗದು"

(ಸೋಮಪ್ಪ ನಾಯಕ ಶಿವಲಿಂಗ ನಾಯಕನಿಗೆ ಸಂಭಾಷಣೆಯಲ್ಲಿ ಬಳಸಿದ್ದು, ಚಾರಿತ್ರಿಕ ಧಾರಾವಾಹಿ)

ದಿನಾಂಕ ೧೧-೧೨-೧೩ರಂದು ಸುವರ್ಣ ಟಿ.ವಿ. ಪಂಚರಂಗಿ ಪೊಂ...ಪೊಂ... ಧಾರಾವಾಹಿಯಲ್ಲಿ.

ಮೀನಾ: 'ಕಳ್ಳನಿಗೊಂದು ಪಿಳ್ಳೆ ನೆವಾ'-ಪಂಚರಂಗಿ ಪೊಂ ಪೊಂ

ರೇಣುಕಾ: 'ಕೂಸು ಹುಟ್ಟುವುದಕ್ಕಿಂತ ಮುಂಚೆ ಕುಲಾವಿ ಹೊಲಿಸ್ಟೇಕು ಅಂತರಲ್ಲಾ ಅಂಗ' ನಾನು ಯೋಚಿನಿ ಮಾಡೀನಿ.

ಗುಡ್ಡದ ಭೂತ ಧಾರಾವಾಹಿಯಲ್ಲಿ(ಪ್ರಾದೇಶಿಕ ಧಾರಾವಾಹಿ)

ಶ್ರೀನಿವಾಸ: "ಅಂಗೈ ತೋರಿಸಿ ಅವಲಕ್ಷಣ ಅನ್ನಿಸಿಕೊಂಡಂಗಾಯ್ತು"

ಗೃಹಭಂಗ ಧಾರಾವಾಹಿಯಲ್ಲಿ ಗಾದೆಮಾತು ಬಳಕೆ

ಮಹಾದೇವಯ್ಯ: "ಉರಿಯೋ ಮನೆಲಿ ಇಲ್ದ ಇರೋನೆ ಜಾಣ"

"ಬೀಸೋ ದೊಣ್ಣೆ ತಪ್ಪಿಸ್ಕೊಳ್ಳಿ"

ಮಲೆಗಳಲ್ಲಿ ಮದುಮಗಳು ಧಾರಾವಾಹಿಯಲ್ಲಿ(ಪ್ರಾದೇಶಿಕ)

ಚಿನ್ನಮ್ಮ: "ಮದುವೆ ಆದ್ಮೇಲೆ ಮರ ಹತ್ತಿದ್ರೆ ದಿಂಡಿ ಬಸ್ವಿ ಅಂತರೆ"

ನರಸಿಂಹಶಾಸ್ತ್ರಿ: "ಹೆಣ್ಣಿನ ಕಳಂಕ ಚಂದ್ರನ ಕಲೆ ಎರಡು ಒಂದೆ"–ಮಾಯಾಮೃಗ ಧಾರಾವಾಹಿ

ನರಸಿಂಹಶಾಸ್ತ್ರಿ: "ಹಿರಿಯಕ್ಕನ ಚಾಳಿ ಮನೆ ಮಂದಿಗೆಲ್ಲಾ"–ಮಾಯಾಮೃಗ

ನರಸಿಂಹಶಾಸ್ತ್ರಿ: "ಮನೆಯಲ್ಲಿ ಬೆಳೆದ ಹೆಣ್ಣು ಮಗಳು ಇಟ್ಟುಕೊಳ್ಳೋದು ಅಂಗೈಯಲ್ಲಿ ಬೆಂಕಿ ಕೆಂಡ ಹಿಡುಕೊಳ್ಳೋದು ಒಂದೇನೆ" –ಮಾಯಾಮೃಗ

ಈ ಮೇಲಿನ ಗಾದೆ ಮಾತುಗಳು ಸಂದರ್ಭೋಚಿವಾಗಿ ಬಳಕೆಕೊಂಡಿವೆ. ಎಲ್ಲಾ ಗಾದೆ ಮಾತುಗಳು ಗೂಡಾರ್ಥವನ್ನು ಹೊಂದಿವೆ. ಒಂದೊಂದು ಗಾದೆ ಮಾತು ಒಂದೊಂದು ಸನ್ನಿವೇಶದ ಪರಿಸ್ಥಿತಿಯನ್ನು ತಿಳಿಹೇಳುತ್ತವೆ. ಕೆಲವೊಂದು ಗಾದೆಗಳು ಸಿಟ್ಟೇಳಿಸುತ್ತವೆ. ಕೆಲವೊಂದು ಗಾದೆಗಳು ಮೌನವಾಗುವಂತೆ ಮಾಡುತ್ತವೆ. ಇನ್ನು ಕೆಲವು ಗಾದೆಗಳು ಅಪಾಯವಾಗುವುದನ್ನು ಸೂಕ್ಷ್ಮವಾಗಿ ತಿಳಿಯಪಡಿಸುತ್ತವೆ. ಒಟ್ಟಾರೆಯಾಗಿ ಸಾಹಿತ್ಯ ಕೃತಿಗಳಲ್ಲಿ ಬಳಕೆಯಾಗುವಂತೆ ಧಾರಾವಾಹಿಗಳಲ್ಲಿ ಬಳಕೆಯಾಗಿವೆ. ಇಲ್ಲಿ ಪ್ರಮುಖವಾಗಿ ಗಮನಿಸಬೇಕಾದ ಅಂಶವೆಂದರೆ ಹೆಚ್ಚಾಗಿ ಕೌಟುಂಬಿಕ ಧಾರಾವಾಹಿಗಳಲ್ಲಿ ಬಳಕೆಯಾಗಿವೆ. ಗಾದೆಗಳು ಗ್ರಾಮೀಣ ಪ್ರಭೇದಗಳು ಬಳಕೆಯಾಗಿರುವುದರಿಂದ ಇಲ್ಲಿ ಯಾವುದೇ ಮಡಿವಂತಿಕೆಯನ್ನಾಗಲಿ ಅಥವಾ ಪ್ರಮಾಣೀಕರಣ ವನ್ನಾಗಲಿ. ಅನುಸರಿಸದೇ ಅವು ಹೇಗಿವೆಯೋ ಹಾಗೆ ಬಳಸಿಕೊಳ್ಳಲಾಗಿದೆ. ಈ ಮೂಲಕ ಗಾದೆ ಮಾತುಗಳು ಉಳಿವಿಗೆ ಕಾರಣವಾಗಿವೆ. ಹಾಸ್ಯ, ಪ್ರಾದೇಶಿಕ, ಐತಿಹಾಸಿಕ ಧಾರಾವಾಹಿಗಳಲ್ಲಿ ವಿರಳವಾಗಿವೆ. ಕಾರಣ ನೇರವಾಗಿ ಒಳನುಡಿಗಳು ಬಳಕೆಯಾಗುವುದರಿಂದ ಅವುಗಳ ಬಳಕೆ ವಿರಳವಾಗಿವೆ. ಕೆಲವೊಂದು ಗಾದೆಗಳು ಅಂತ್ಯಪ್ರಾಸದಿಂದ ಕೊನೆಗೊಂಡಿವೆ.

"ಕಾಲಿಸೈಟು ಕಂಡಕೂಡ್ಲೆ ಡಿನೋಡಿಫೈ ಮಾಡಿಕೊಂಡು ಬಿಡ್ತಾರೆ"

ಮೀನಾನಾಥನು: ಹುಡಿಯರನ್ನ ಪಟಾಯಿಸುವುದಕ್ಕೆ ಬದಲಾಗಿ ಬಳಸಿದ ಗಾದೆ ಮಾತಾಗಿದೆ. ಈ ಸನ್ನಿವೇಶವು ಯಾವುದೇ ಹುಡುಗಿ ಯಾರನ್ನ ಪ್ರೀತಿಸುತ್ತಿಲ್ಲ ಅಂತ ಗೊತ್ತಾದ್ರೆ ಅವ್ರನ್ನ ಪ್ರೀತಿಯ ಬಲೆಯಲ್ಲಿ ಹಾಕಿಕೊಳ್ಳಬೇಕು ಎಂಬ ಅರ್ಥದಲ್ಲಿ ಬಳಸುತ್ತಾರೆ. ಆದರೆ ವಾಸ್ತವದಲ್ಲಿ ಇತ್ತೀಚಿನ ರಾಜಕೀಯ ಬೆಳವಣಿಗೆಯಿಂದಾಗಿ ಆಕ್ರಮ ಆಸ್ತಿಯನ್ನು ಗಳಿಸುವ ಹುನ್ನಾರ ನಡೆಯುತ್ತಿದೆ. ಈ ವಲಯದಲ್ಲಿ ಬಳಕೆಯಾಗುತ್ತಿರುವ ಕೆಲವು ನುಡಿಗಳು ಹುಡುಗಿಗೆ ಹೋಲಿಸಿಕೊಳ್ಳುವ ಮೂಲಕ ಹೊಸ ಗಾದೆಯನ್ನು ಈ ಸಂದರ್ಭಕ್ಕೆ ಬಳಸಿಕೊಂಡಿರುವುದನ್ನು ಗಮನಿಸವಂತಹ ಅಂಶ. ಒಂದು ವಲಯದಲ್ಲಿ ಬಳಕೆಯಾದ ನುಡಿ ಇನ್ನೊಂದು ವಲಯಕ್ಕೆ ವರ್ಗಾವಣೆಯಾದಾಗ ಅಲ್ಲಿ ಆಗುವ ಪರಿಣಾಮ ಬೇರೆ ರೀತಿಯ ಅರ್ಥವನ್ನು ನೀಡುತ್ತದೆ.

ಇಂತಹ ಅಂಶಗಳನ್ನು ಗಮನಿಸಲಾಗಿದೆ. ಈ ಪ್ರಕ್ರಿಯೆಯು ಇಂಗ್ಲಿಷ್ ಭಾಷೆ ಬಳಸುವ ಮೂಲಕ ನುಡಿಬೆರಕೆ ಗಾದೆ ಮಾತಾಗಿ ಪರಿವರ್ತನೆಗೊಂಡಿದೆ. ಅಂತ್ಯಪ್ರಾಸದಲ್ಲಿ ಇಂಗ್ಲಿಷ್ ಪದಗಳನ್ನು ಬಳಸಿ ಗಾದೆಯನ್ನು ಕೊನೆಗೊಳಿಸುವ ಪ್ರಯತ್ನ ಹಾಸ್ಯ ಧಾರಾವಾಹಿಗಳಲ್ಲಿ ನಗೆ ಉಕ್ಕಿಸಲಿಕ್ಕಾಗಿಯೇ ಬಳಕೆಯಾಗುತ್ತಿರುವುದು ಗಮನಿಸುವಂತಹ ಅಂಶವಾಗಿದೆ.

ಬದಲಾದ ಗಾದೆಮಾತು

'ಹಾಸ್ಯ ಧಾರಾವಾಹಿಯಲ್ಲಿ ಇಂಗ್ಲೀಷ್ ಪದ ಬಳಸಿಕೊಂಡು ಗಾದೆಯನ್ನು ಸೃಷ್ಟಿಸಿಕೊಳ್ಳಲಾಗಿದೆ.' ಉದಾ: ಪಂಚರಂಗಿ ಪೊಂ ಪೊಂ ಧಾರಾವಾಹಿಯಲ್ಲಿ "ಕಾಲಿ ಸೈಟು ಕಂಡ ಕೂಡಲೇ ಡಿನೋಟಿಫೈ ಮಾಡಿಕೊಂಡು ಬಿಡ್ತಾರೆ"

ನುಡಿಗಟ್ಟುಗಳ ಬಳಕೆಯನ್ನು ಮಧ್ಯವಯಸ್ಕರು ಹಾಗೂ ವಯಸ್ಸಾದ ಅಜ್ಜ ಅಜ್ಜಿಯರು ಬಳಸುತ್ತಾರೆ. ಗಾದೆ ಮಾತುಗಳು ಸಹ ಇದೇ ಮಾದರಿಯನ್ನು ಹೋಲುತ್ತವೆ. ಆಧುನಿಕತೆಗೆ ಒಗ್ಗಿಕೊಂಡ ಮೂರನೇ ತಲೆಮಾರು ಒಗಟು, ನುಡಿಗಟ್ಟು, ಗಾದೆ ಮಾತುಗಳನ್ನು ಬಳಸುತ್ತಿಲ್ಲ. ೧ನೇ ಮತ್ತು ಎರಡನೇ ತಲೆಮಾರುಗಳು ಬಳಸುತ್ತಿವೆ.

೪.೫. ಧಾರಾವಾಹಿಗಳ ಶೀರ್ಷಿಕೆಗಳು

ಧಾರಾವಾಹಿಗಳ ಶೀರ್ಷಿಕೆಗಳು ಕಾಲದಿಂದ ಕಾಲಕ್ಕೆ ಬದಲಾವಣೆಗೆ ಒಳಪಡುತ್ತಾ ಬಂದಿವೆ. ಧಾರಾವಾಹಿಗಳು ಆರಂಭವಾದ ಸಂದರ್ಭದಲ್ಲಿ ಉಚಿತವೆನ್ನಿಸುವ ಶೀರ್ಷಿಕೆಗಳನ್ನು ಬಳಸುತ್ತಿದ್ದರು. ದಿನೇ ದಿನೇ ಮಹಿಳಾ ವೀಕ್ಷಕರು ಹೆಚ್ಚಾದಂತೆಲ್ಲ ಮತ್ತು ಖಾಸಗಿ ವಾಹಿನಿಗಳು ಹೆಚ್ಚಾದಂತೆಲ್ಲ ಶೀರ್ಷಿಕೆಗಳ ಸ್ವರೂಪ ಬದಲಾವಣೆಯನ್ನು ಪಡೆದುಕೊಳ್ಳತೊಡಗಿತ್ತು. ಆರಂಭಿಕ ಧಾರಾವಾಹಿಗಳಿಗೆ ಎಲ್ಲ ವರ್ಗದ ಎಲ್ಲ ಸಮುದಾಯದ, ಪುರುಷ-ಸ್ತ್ರೀ ಎಂಬ ಭೇದವಿಲ್ಲದೆ ಶೀರ್ಷಿಕೆಗಳನ್ನು ಇಡುತ್ತಿದ್ದರು. ಆದರೆ ಕಳೆದ ನಾಲ್ಕೈದು ವರ್ಷಗಳಿಂದ ಸಿರಿಯಲ್‌ಗಳದ್ದೇ ಸಂತೆಯಾಗಿದ್ದು, ಮತ್ತು ಮಹಿಳಾ ವೀಕ್ಷಕರೆ ಹೆಚ್ಚಾಗಿದ್ದರಿಂದ ಮಹಿಳೆಯರನ್ನು ಕೇಂದ್ರೀಕರಿಸಿಕೊಂಡು ಸ್ತ್ರೀ ವ್ಯಕ್ತಿ ನಾಮಗಳನ್ನು ಶೀರ್ಷಿಕೆಗಳಾಗಿ ಇಡಲಾಗಿದೆ.

ಅಲ್ಲದೆ ಧಾರಾವಾಹಿಯ ಕಥೆಯ ಜೊತೆಗೆ ಗೀತ ಸಾಹಿತ್ಯದಲ್ಲಿಯೂ ಪುರುಷಪ್ರಧಾನ ವ್ಯವಸ್ಥೆಯ ಮೌಲ್ಯಗಳನ್ನು ಕಾಣಬಹುದಾಗಿದೆ.

'ಮಹಿಳೆಯನ್ನೇ ಕೇಂದ್ರ ಪಾತ್ರವಾಗಿರಿಸಿಕೊಂಡ ಈ ಧಾರಾವಾಹಿಗಳ ಬಗೆಗೆ ಒಂದು ರೀತಿ ಕುತೂಹಲ ಏರ್ಪಡುವ ರೀತಿಯಲ್ಲಿ ಕಾರ್ಯಕ್ರಮದ ಮಧ್ಯೆ ಮಧ್ಯೆ ಧಾರಾವಾಹಿಯ ಬಗೆಗೆ ಕೆಲವು ಪ್ರಶ್ನೆ, ಮಾಹಿತಿಗಳನ್ನು ಕೊಡುತ್ತವೆ. ಉದಾಹರಣೆಗೆ:

೧. ಅವಳ ಕುಂಕುಮ ಯಾರ ಸೌಭಾಗ್ಯ

ಅ. ವಿಷ್ಣು, ಆ. ವಿಶ್ವ, ಇ. ನರಸಿಂಹ

೨. ಕಾಂತಿ ಮಂಜುನಾಥನನ್ನು ಮದುವೆ ಆಗುವಳೇ

೩. ಕಾಂತಿಯ ಜೀವನ ದುಃಖಸಾಗರ

ಇಂತಹ ತಂತ್ರಗಳನ್ನು ಮಾಡುವ ಮೂಲಕ ನೋಡುಗರನ್ನು ತನ್ನತ್ತ ಸೆಳೆದುಕೊಳ್ಳುವಲ್ಲಿ ಮಾಧ್ಯಮ ಯಶಸ್ವಿಯಾಗಿದೆ.

ಹೀಗೆ ಮಹಿಳೆಯರನ್ನು ಕೇಂದ್ರೀಕರಿಸಿಕೊಂಡು ಧಾರಾವಾಹಿಗಳ ಶೀರ್ಷಿಕೆಗಳಿಗೆ ವ್ಯಕ್ತಿನಾಮಗಳನ್ನು ಬಳಸಿಕೊಂಡು ಹೊಸ ಹೊಸ ಶೀರ್ಷಿಕೆಯನ್ನಿಡುತ್ತಿದ್ದಾರೆ.

"ತೊಂಬತ್ತರ ದಶಕದಿಂದಲೇ ಅತ್ಯಂತ ತೀವ್ರವಾಗಿ ಮತ್ತು ವಿಸ್ತೃತ ಪರದೆಗೆ ತೆರೆದುಕೊಂಡು ಮಧ್ಯಮವರ್ಗದ ಪ್ರೇಕ್ಷಕರನ್ನು ಅದರಲ್ಲೂ ಹೆಚ್ಚಾಗಿ ಮಹಿಳೆಯರನ್ನು ತನ್ನತ್ತ ಆಕರ್ಷಿಸಿಕೊಂಡಿರುವ ಒಂದು ಬೃಹತ್ ಯೋಜನೆ ಎಂದರೆ ಮೆಗಾ ಧಾರಾವಾಹಿಗಳು. ಧಾರಾವಾಹಿಗಳ ಶೀರ್ಷಿಕೆಗಳಿಂದ ಹಿಡಿದು ಶೀರ್ಷಿಕೆಯ ಸಾಹಿತ್ಯ ಮತ್ತು ಪಾತ್ರಗಳು ಎಲ್ಲವೂ ಮಹಿಳೆಯನ್ನೇ ಕೇಂದ್ರವಾಗಿರಿಸಿಕೊಂಡವುಗಳಾಗಿವೆ. ಸಾಂಪ್ರದಾಯಿಕ ಧೋರಣೆಯ ಉತ್ಕೃಷ್ಟ ಮಾದರಿಗಳೆಂಬಂತೆ ಮನೆಮಗಳು, ಮಾಂಗಲ್ಯ, ಕನ್ಯಾದಾನ, ಮುತ್ತೈದೆ, ಚಿ.ಸೌ.ಸಾವಿತ್ರಿ, ಲಕುಮಿ, ಸೂರ್ಯಕಾಂತಿ, ಪ್ರೇರಣ, ಕುಂಕುಮಭಾಗ್ಯ, ಪುಣ್ಯಕೋಟಿ, ಕುಲಗೌರವ, ಕಲ್ಯಾಣಿ, ಬಂಗಾರ ಹೀಗೆ ದುಪ್ಪಟ್ಟು ಬೆಳೆಯುತ್ತಲೇ ಹೋಗುತ್ತದೆ. ಇನ್ನು ಶೀರ್ಷಿಕೆಗಳ ಗೀತ ಸಾಹಿತ್ಯವಂತೂ ಆದರ್ಶ ಹೆಣ್ಣಿನ ವೈಭವೀಕರಣದಲ್ಲಿ ಮುಂದಾಗಿದೆ. "ಬಂಧವು ಇದ್ದರೆ ಬೆಳಕಿನ ಸಂಭ್ರಮ ನಿಜ ನೀತಿಗೆ ನಡೆವಳು ಅಂಜಿ ಈ ಮನೆಮಗಳು ನಗುವುದು ಅಳುವುದು ಇವಳ ಒಡವೆ"(ಮನೆ ಮಗಳು ಧಾರಾವಾಹಿಯ ಗೀತ ಸಾಹಿತ್ಯದ ಪಲ್ಲವಿ) "ಸುಡುವ ಕೆಂಡದಲ್ಲಿ ಅರಳಿದ ಹೂ ಇವಳು ಸೂರ್ಯಕಾಂತಿ"(ಸೂರ್ಯಕಾಂತಿ ಧಾರಾವಾಹಿ). "ನೀ ನುಡಿದರೆ ಕಡಲು ನಡೆದರೆ ನವಿಲು ನೀ ನಗುವಾಗ ಹೂ ಮಳೆ"(ಪುಣ್ಯಕೋಟಿ ಧಾರಾವಾಹಿ). "ಮಾಂಗಲ್ಯ ಮಾಂಗಲ್ಯ ಇದು ಜೀವಕ್ಕಿಂತ ಮೌಲ್ಯ" (ಮಾಂಗಲ್ಯ ಧಾರಾವಾಹಿ). ಇನ್ನು ಹತ್ತು ಹಲವು ಸಂಗತಿಗಳು ಇಂಥ ಗೀತ ಸಾಹಿತ್ಯದಲ್ಲಿ ಅಡಗಿವೆ. ಧಾರಾವಾಹಿಯ ಕಥೆಯ ಜೊತೆಗೆ ಗೀತ ಸಾಹಿತ್ಯದಲ್ಲಿಯೂ ಮಹಿಳೆಯನ್ನು ಕೇಂದ್ರೀಕರಿಸಿಕೊಂಡು ಗೀತ ಸಾಹಿತ್ಯ ಹಾಗೂ ಶೀರ್ಷಿಕೆಗಳನ್ನು ಆಯ್ಕೆ ಮಾಡಿಕೊಳ್ಳುವ ಮೂಲಕ ಬದಲಾವಣೆಗೊಳಪಡುತ್ತಿವೆ.

ಮಾಧ್ಯಮಕ್ಕೆ ಏನೆಲ್ಲಾ ಬದಲಾವಣೆಗಳನ್ನು ತರುವ ಸಾಧ್ಯತೆ ಸಾಮರ್ಥ್ಯಗಳಿದ್ದರೂ ಮಹಿಳೆಯ ವಿಷಯದಲ್ಲಿ ಮಾತ್ರ 'ಸ್ಥಿರ ಮಾದರಿ' ಪಾತ್ರಗಳಲ್ಲಿ ಪ್ರತಿನಿಧೀಕರಿಸಲಾಗಿದೆ. ಹೆಚ್ಚಿನ ಧಾರಾವಾಹಿಗಳ ಮಹಿಳಾ ಪಾತ್ರಗಳು ಕೌಟುಂಬಿಕ ಕಲಹಗಳಿಗೆ ದಾರಿ ಮಾಡಿಕೊಡುವ ಮತ್ತು ಸವತಿಮತ್ಸರ,

ಅತ್ತೆ ಸೊಸೆ ಮತ್ಸರದಂಥ ಗುಣಲಕ್ಷಣಗಳನ್ನೇ ಹೊಂದಿವೆ. ಒಂದು ಕಡೆ ಕುಂಕುಮ ಸೌಭಾಗ್ಯ ಎಂಬ ಸಾಂಪ್ರದಾಯಿಕತೆಯಲ್ಲಿ ಅದ್ದಿ ತೆಗೆದ ಪಾತ್ರ ಒಂದು ಕಡೆ, ಇನ್ನೊಂದು ಕಡೆ ಆಧುನಿಕ ಮಹಿಳೆಯ ಹೆಸರಿನಲ್ಲಿ ಅತ್ಯಂತ ಅವಾಸ್ತವಿಕ ಮಾನವೀಯ ಪಾತ್ರಗಳಿಗೆ ಪ್ರತಿನಿಧಿಸುವುದು. ಉದಾಹರಣೆಗೆ ಕಲ್ಯಾಣಿ ಧಾರಾವಾಹಿಯ ನಾಯಕ ರಾಮ್ ಎರಡು ಮದುವೆ ಆಗುತ್ತಾನೆ. ಒಬ್ಬಳು ಕಲ್ಯಾಣಿ('ತ್ಯಾಗಮಯಿ' ಜೊತೆಗೆ ಸಾಂಪ್ರದಾಯಿಕ ಮಹಿಳೆ). ಇನ್ನೊಬ್ಬಳು ರೇಖಾ(ಆಧುನಿಕ ಮಹಿಳೆ, ಜೊತೆಗೆ ಅಮಾನವೀಯ ಹೆಣ್ಣು). ಮಹಿಳಾ ಅಧ್ಯಯನ ವಿಶ್ಲೇಷಣೆ ಮಾಡುವುದು ಆಧುನಿಕ ಮತ್ತು ಸಾಂಪ್ರದಾಯಿಕತೆಗಳಿಗಿಂತಲೂ ಇದರಾಚೆಗೆ ಮಹಿಳೆಗೆ ತನ್ನದೇ ಆದ ಕರ್ತೃತ್ವಶಕ್ತಿ ಇದೆ. ಅಸ್ತಿತ್ವ ಇದೆ. ಆದರೆ ಇವುಗಳನ್ನು ಮರೆಮಾಚುವ, ಅವಾಸ್ತವಿಕ ಸಂಗತಿಗಳನ್ನು ವೈಭವೀಕರಿಸುವ ಕೆಲಸ ಮಾಧ್ಯಮದ ಮೂಲಕ ಹೆಚ್ಚಾಗಿ ನಡೆಯುತ್ತಿದೆ.'

ಈ ಶೀರ್ಷಿಕೆಗಳೆಲ್ಲವೂ ಕೌಟುಂಬಿಕ ಧಾರಾವಾಹಿಗಳಿಗೆ ಸಂಬಂಧಿಸಿದವಾಗಿವೆ. ಈ ಧಾರಾವಾಹಿ ಗಳಲ್ಲಿ ವಿವಿಧ ವ್ಯಕ್ತಿನಾಮಗಳು, ಕೃತಿನಾಮಗಳು, ಇತರೆ ಶೀರ್ಷಿಕೆಗಳನ್ನು ಆಯ್ಕೆ ಮಾಡಿಕೊಂಡು ವೀಕ್ಷಕರನ್ನು ಗಮನ ಸೆಳೆಯುವ ತಂತ್ರವಾಗಿ ಶೀರ್ಷಿಕೆಗಳು ಬದಲಾವಣೆ ಗೊಳಪಡುತ್ತಿರುವುದನ್ನು ಗುರುತಿಸಿಕೊಳ್ಳಲಾಗಿದೆ.

ಪ್ರಾದೇಶಿಕ ಧಾರಾವಾಹಿಗಳಲ್ಲಿ ಕೌಟುಂಬಿಕ ಧಾರಾವಾಹಿಗಳ ಶೀರ್ಷಿಕೆಗಿಂತಲೂ ಭಿನ್ನ ಮಾದರಿಯ ಹಾಗೂ ಸಾಹಿತ್ಯ ಕೃತಿಗಳಿಂದ ಅಂದರೆ ಕಾದಂಬರಿಗಳನ್ನು ಆಧರಿಸಿ ಕಥೆಯನ್ನು ಆಯ್ಕೆ ಮಾಡಿಕೊಂಡಿರುವುದು ಕೆಲವು ಕಾದಂಬರಿಗಳ ಹೆಸರನ್ನು ಧಾರಾವಾಹಿಯ ಶೀರ್ಷಿಕೆಗಳಾಗಿ ಬಳಸಿಕೊಳ್ಳಲಾಗಿದೆ.

ಉದಾಹರಣೆಗೆ: ೧. ಮಲೆಗಳಲ್ಲಿ ಮದುಮಗಳು, ೨. ಗುಡ್ಡದ ಭೂತ ೩. ಗೃಹಭಂಗ ಇತ್ಯಾದಿ.

ಹೀಗೆ ಪ್ರಾದೇಶಿಕತೆಯ ಚಿತ್ರಣವನ್ನು ಗ್ರಹಿಸುವಂತಹ ಶೀರ್ಷಿಕೆಗಳನ್ನು ಆಯ್ಕೆ ಮಾಡಿಕೊಂಡಿರು ವುದು ಪ್ರಾದೇಶಿಕ ಧಾರಾವಾಹಿಗಳಿಗೆ ಸೀಮಿತವಾಗಿವೆ. ಶೀರ್ಷಿಕೆಗಳೇ ಕಥೆಯ ಸ್ವರೂಪ ಮತ್ತು ತಂತ್ರಗಾರಿಕೆಯನ್ನು ಗ್ರಹಿಸುವಂತವುಗಳಾಗಿವೆ.

ಸಾಂಪ್ರದಾಯಿಕ ಶೀರ್ಷಿಕೆಗಳನ್ನು ಆಯ್ಕೆ ಮಾಡಿಕೊಂಡಿರುವುದು ವೀಕ್ಷಕರ ಆಕರ್ಷಣೆಯಿಂದ ದೂರವಾಗುತ್ತಿವೆ ಎಂದೆನಿಸುತ್ತದೆ. ಕೇವಲ ಕೌಟುಂಬಿಕ ಹಾಗೂ ಹಾಸ್ಯ ಧಾರಾವಾಹಿಗಳ ಶೀರ್ಷಿಕೆಗಳು ವೀಕ್ಷಕರನ್ನು ಗಮನ ಸೆಳೆಯುವಂತವುಗಳಾಗಿರುವುದರಿಂದ ಸಾಂಪ್ರದಾಯಿಕ ಶೀರ್ಷಿಕೆಗಳಿಗೆ ಅಷ್ಟೊಂದು ಮನ್ನಣೆ ಇಲ್ಲವೆನಿಸುತ್ತದೆ. ಪ್ರಾದೇಶಿಕ ಧಾರಾವಾಹಿಗಳು ಆರಂಭದ ಕಾಲಘಟ್ಟದಲ್ಲಿ ಮಾತ್ರ ಪ್ರಸಾರವಾದವು. ಕಥೆ, ಕಾದಂಬರಿ, ಐತಿಹಾಸಿಕ ಘಟನೆಗಳನ್ನು ಮರು ರೂಪಿಸುವಂತಹ ಕಾರ್ಯವಾಗಿತ್ತು. ಧಾರಾವಾಹಿ ವೀಕ್ಷಕರನ್ನು ಗಮನ ಸೆಳೆಯುವ ಉದ್ದೇಶ

ಹಾಗೂ ಟಿ.ಆರ್.ಪಿ. ಹೆಚ್ಚಿಸಿಕೊಳ್ಳುವ ಸಲುವಾಗಿ ಸಾಂಪ್ರದಾಯಿಕತೆಯಿಂದ ಕೂಡಿದ ಶೀರ್ಷಿಕೆಗಳನ್ನು ಬಿಟ್ಟು ಆಧುನಿಕ ಹೆಸರುಗಳನ್ನು ಬಳಸಿಕೊಳ್ಳುತ್ತಿರುವುದು ಸ್ಥಿತ್ಯಂತರಕ್ಕೆ ಕಾರಣವಾಗಿದೆ. ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿ ಕೌಟುಂಬಿಕ ಸಮಸ್ಯೆಗಳನ್ನೇ ಕೇಂದ್ರವಾಗಿರಿಸಿಕೊಂಡಿರುವುದರಿಂದ ಪ್ರಾದೇಶಿಕ ಶಿರೋನಾಮಗಳುಳ್ಳ ಧಾರಾವಾಹಿಗಳು ಮತ್ತು ಪ್ರಾದೇಶಿಕ ಸೊಗಡನ್ನು ಮೂಡಿಸುವ ಯಾವ ಧಾರಾವಾಹಿಗಳು ಕಾಣಬರುತ್ತಿಲ್ಲ. ವೀಕ್ಷಕರನ್ನು 'ತಯಾರಿಸಿದ ಅಡಿಗೆ ಊಟ ಮಾಡುವಂತೆ' ತಮ್ಮ ಅಜೆಂಡಗಳಿಗೆ ಒಗ್ಗಿಸಿಕೊಳ್ಳುವಂತಹ ಕೆಲಸವನ್ನು ನಿರ್ದೇಶಕರು ಮತ್ತು ನಿರ್ಮಾಪಕರು ಹಾಗೂ ಟಿ.ವಿ. ಚಾನೆಲ್ಲಿನ ಮಾಲೀಕರು ತಯಾರಿಸುತ್ತಾರೆ. ಇದನ್ನೇ ನೀವು ನೋಡಬೇಕು ಎಂಬಂತಹ ಧೋರಣೆಯನ್ನು ಹೊಂದಿದ್ದಾರೆ. ಇಲ್ಲಿ ವೀಕ್ಷಕರ ಅಭಿರುಚಿಗೆ ಸರಿಯಾಗಿ ಧಾರಾವಾಹಿಗಳು ಪ್ರಸಾರವಾಗುತ್ತಿಲ್ಲ. ಬದಲಿಗೆ ಧಾರಾವಾಹಿ ನಿರೂಪಿಸುವವರ ಅಭಿರುಚಿಗೆ ತಕ್ಕಂತೆ ಹೊಂದಿಕೊಳ್ಳುವಂತೆ ಮಾಡಿದ್ದಾರೆ. ಇದು ಹಲವಾರು ಟೀಕೆಗಳಿಗೆ ಗುರಿಯಾಗಿದ್ದರೂ ಸಹ 'ಕೇವಲ ಕಾಲ್ಪನಿಕ' ಎಂಬ ಉತ್ತರವನ್ನು ಕೊಡುತ್ತಾರೆ. ಒಟ್ಟಾರೆ ಧಾರಾವಾಹಿ ವೀಕ್ಷಕರನ್ನು ತಮ್ಮ ಬಲೆಗೆ ಹಾಕಿ ಕೊಳ್ಳುತ್ತಿರುವುದಂತೂ ನಿಜ. ವೀಕ್ಷಕರಿಗೆ ಸ್ಲೋ ಪಾಯಿಸನ್ ಕೊಡುತ್ತಾ ಸಾಗಿದ್ದಾರೆ. ಈ ಕಾರಣದಿಂದ ಕೇವಲ ಮಧ್ಯಮವರ್ಗದ ಕೌಟುಂಬಿಕ ಸಮಸ್ಯೆಗಳನ್ನೇ ಹೆಚ್ಚಾಗಿ ತೋರಿಸುತ್ತಾರೆ. ಮಹಿಳಾ ವೀಕ್ಷಕರನ್ನು ಸೆರೆಹಿಡಿಯುವ ತಂತ್ರವಾಗಿ ನಿಧಾನಗತಿಯಲ್ಲಿ ಸಾಗಿ ಬಂದಿದೆ. ಇಂದು ಧಾರಾವಾಹಿಗಳನ್ನು ವೀಕ್ಷಿಸುತ್ತಿರುವವರ ಸಂಖ್ಯೆ ಗಣನೀಯವಾಗಿ ಮಹಿಳೆಯರೇ ಹೆಚ್ಚುತ್ತಿರುವುದು ಖೇದಕರ ಸಂಗತಿ. ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಪ್ರಾದೇಶಿಕ ಧಾರಾವಾಹಿಗಳ ಶೀರ್ಷಿಕೆಗಳು ಕಣ್ಮರೆಯಾಗಿ ಪ್ರಾದೇಶಿಕ ಪ್ರಭೇದಗಳು ಬಳಕೆಯಿಂದ ದೂರ ಉಳಿಯುವಂತವು(ಇನ್ನು ಇಂತಹ ಶೀರ್ಷಿಕೆಗಳನ್ನು ಶೋಧಿಸಬೇಕಾಗಿದೆ).

ಹಾಸ್ಯ ಧಾರಾವಾಹಿಯ ಶೀರ್ಷಿಕೆಗಳು ಭಿನ್ನ ಭಿನ್ನ ಮಾದರಿಯಲ್ಲಿ ರೂಪಗೊಂಡಿರುವುದನ್ನು ಗುರುತಿಸಿಕೊಳ್ಳಲಾಗಿದೆ. ಇಲ್ಲಿ ಕೇವಲ ವೀಕ್ಷಕರನ್ನು ಹಾಸ್ಯದ ಮೂಲಕ ನಗಿಸುವ ಉದ್ದೇಶವಿರುವುದರಿಂದ ಹಾಸ್ಯ ಧಾರಾವಾಹಿಯ ಶೀರ್ಷಿಕೆಗಳು ಕೂಡ ಭಿನ್ನ ಭಿನ್ನ ಮಾದರಿಯಲ್ಲಿ ರಚಿತವಾಗಿರುವುದನ್ನು ಈ ಕೆಳಗಿನ ಉದಾಹರಣೆಯನ್ನು ಗಮನಿಸಲಾಗಿದೆ.

ಉದಾಹರಣೆಗೆ: ೧. ಪಾಂಡುರಂಗ ವಿಠ್ಠಲ, ೨. ಪಾರ್ವತಿ ಪರಮೇಶ್ವರ, ೩. ಸಿಲ್ಲಿ ಲಲ್ಲಿ, ೪. ಪಂಚರಂಗಿ ಪೋಂ ಪೋಂ, ೫. ಪಾಪ ಪಾಂಡು ಇತ್ಯಾದಿ.

ಈ ಶೀರ್ಷಿಕೆಗಳ ಅಡಿಯಲ್ಲಿ ಹಾಸ್ಯ ಧಾರಾವಾಹಿಗಳನ್ನು ವೀಕ್ಷಕರ ಗಮನ ಸೆಳೆಯಲು ರೂಪಿಸಿಕೊಂಡಿರುವುದನ್ನು ಈ ಉದಾಹರಣೆಗಳು ನಿರೂಪಿಸುತ್ತವೆ. ಹಾಸ್ಯವನ್ನು ಉಕ್ಕಿಸುವ ಉದ್ದೇಶ ಹೊಂದಿದ್ದು, ಕೆಲವು ವಾಹಿನಿಗಳಲ್ಲಿ ಮಾತ್ರ ಬೆರಳೆಣಿಕೆಯಷ್ಟು ಹಾಸ್ಯ ಧಾರಾವಾಹಿಗಳು ಪ್ರಸಾರವಾಗುತ್ತಿವೆ. ಹಾಸ್ಯ ಧಾರಾವಾಹಿಗಳನ್ನು ವೀಕ್ಷಿಸುವವರ ಸಂಖ್ಯೆ ತುಸು ಕಡಿಮೆ ಎಂದೇ ಭಾವಿಸಬೇಕಾಗಿದೆ. ಕಾರಣ ಕೌಟುಂಬಿಕ ಧಾರಾವಾಹಿಗಳ ಅಬ್ಬರದಲ್ಲಿ ಈ ಧಾರಾವಾಹಿಗಳು

ನಿರ್ಲಕ್ಷ್ಯಕ್ಕೆ ಒಳಗಾಗಿವೆ. ಈ ಧಾರಾವಾಹಿಗಳನ್ನು ಕೇವಲ ಒಂದು ವರ್ಗ ಮಾತ್ರ ವೀಕ್ಷಿಸುತ್ತದೆ. ಹಾಸ್ಯ ಧಾರಾವಾಹಿಯನ್ನು ವೀಕ್ಷಿಸುವವರಲ್ಲಿ ಪುರುಷರು ಹಾಗೂ ಕಾಲೇಜು ವಿದ್ಯಾರ್ಥಿಗಳು ಮತ್ತು ಯುವಕ ಯುವತಿಯರು ವೀಕ್ಷಿಸುತ್ತಾರೆ. ಇನ್ನೂಳಿದಂತೆ ಕೆಲ ನೌಕರರು ಬಿಡುವಿನ ಸಮಯದಲ್ಲಿ ಹಾಸ್ಯ ಧಾರಾವಾಹಿಗಳನ್ನು ವೀಕ್ಷಿಸುತ್ತಾರೆ. ಆದರೂ ಕೂಡ ಹಾಸ್ಯ ಧಾರಾವಾಹಿಗಳು ಟಿ.ಆರ್.ಪಿ.ಯನ್ನು ಕಳೆದುಕೊಳ್ಳದೆ ಸಾಗಿವೆ. ಕಾರಣ ಹಾಸ್ಯ ಧಾರಾವಾಹಿಯು ನೋಡುಗರ ಅಪೇಕ್ಷೆಯಿಂದ ಮುನ್ನಡೆಯುತ್ತವೆ.

ಹಾಸ್ಯ ಧಾರಾವಾಹಿಗಳಲ್ಲಿ ಹೆಚ್ಚಾಗಿ ವೀಕ್ಷಕರನ್ನು ಹಾಸ್ಯದ ಮೂಲಕ ಸೆರೆಹಿಡಿಯುವ ಪ್ರಯತ್ನವಂತೂ ಇದ್ದೇ ಇದೆ. ಶೀರ್ಷಿಕೆಗಳಲ್ಲಿ ದೈವ ಮೂಲದ ವ್ಯಕ್ತಿಗಳು ಹಾಗೂ ಪಂಚರಂಗಿ ಪೋಂ ಪೋಂ ಎನ್ನುವ ಶೀರ್ಷಿಕೆಗಳು ರೂಪಿತವಾಗಿವೆ. ಇಲ್ಲಿ ನಗೆ ಉಕ್ಕಿಸುವುದು ಉದ್ದೇಶವಾಗಿರುವುದರಿಂದ ಸಹಜವಾಗಿ ಪಂಚ್ ಕೊಡುವುದು ಹಾಸ್ಯಕ್ಕೇ ಕಾರಣವಾಗುತ್ತದೆ. ಪಂಚ್ ಎನ್ನುವ ಇಂಗ್ಲೀಷ್ ಪದ ಕನ್ನಡೀಕರಣ ಮಾಡಿಕೊಂಡು 'ಪಂಚ' ಎಂದು ಹಾಗೂ 'ರಂಗಿ' ರಂಗಿ ಎಂದರೆ ರಂಗಿಸು, ರಂಜಿಸು ಎನ್ನುವ ಅರ್ಥಗಳು ಇರುತ್ತಿರುವುದರಿಂದ ಹಾಗೂ ವಿವಿಧ ಪ್ರಾದೇಶಿಕ ಪ್ರಭೇದಗಳ ಮೂಲಕ ಪಂಚ್ ಕೊಡುತ್ತಿರುವುದು 'ಪಂಚರಂಗಿ' ಪೋಂ ಪೋಂ ಶೀರ್ಷಿಕೆಯಾಗಿರಬಹುದು. ಇಂಗ್ಲೀಷ್ ಮತ್ತು ಕನ್ನಡದ ಪದಗಳನ್ನು ಸೇರಿಸಿ ಒಂದು ಶೀರ್ಷಿಕೆಯನ್ನಾಗಿ ಬಳಸಿಕೊಳ್ಳುತ್ತಿರುವುದು ಭಿನ್ನ ಮಾದರಿಯದ್ದಾಗಿದೆ. ಹೀಗೆ ಅನೇಕ ಹಾಸ್ಯ ಧಾರಾವಾಹಿಗಳ ಗೀತಸಾಹಿತ್ಯವು ಕೂಡಾ ಹಾಸ್ಯದಿಂದಲೇ ಕೂಡಿರುತ್ತದೆ.

ಉದಾಹರಣೆಗೆ: 'ಪಾರ್ವತಿ ಪರಮೇಶ್ವರ ಆಗುವುದೆಲ್ಲ ಅವಾಂತರ'

ಈ ಗೀತಸಾಹಿತ್ಯದಲ್ಲಿ ಹೆಚ್ಚಾಗಿ ಅಂತ್ಯಪ್ರಾಸ ಪದಗಳಿಂದ ಅಂತ್ಯಗೊಂಡಿರುವುದನ್ನು ಈ ಮೂಲಕ ಗುರುತಿಸಿಕೊಳ್ಳಲಾಗಿದೆ.

ಚಾರಿತ್ರಿಕ ಧಾರಾವಾಹಿಗಳು ಭಕ್ತಿಪ್ರಧಾನ ಹಾಗೂ ವ್ಯಕ್ತಿಪ್ರಾಧಾನ್ಯತೆಯಿಂದ ಕೂಡಿದ ಶೀರ್ಷಿಕೆ ಗಳನ್ನು ಹೊಂದಿರುವುದನ್ನು ಗುರುತಿಸಿಕೊಳ್ಳಲಾಗಿದೆ.

ಉದಾಹರಣೆಗೆ: ೧. ಸೀತೆ, ೨. ಶ್ರೀ ರಾಘವೇಂದ್ರ ಮಹಿಮೆ, ೩. ಸಂತಪ್ತ, ೪. ಕೆಳದಿ ಚೆನ್ನಮ್ಮ, ೫. ಮಹಾಭಾರತ ಇತ್ಯಾದಿ.

ಈ ಶೀರ್ಷಿಕೆಗಳು ಐತಿಹಾಸಿಕ ಘಟನೆ ಮತ್ತು ವ್ಯಕ್ತಿಗಳನ್ನು ನೆನಪಿಸುವಂತಹ ಮತ್ತು ಭಕ್ತಿಪೂರ್ವಕವಾದ ಭಾವನೆಗಳು ಬರುವಂತಹ ಶೀರ್ಷಿಕೆಗಳಿರುವುದನ್ನು ಗುರುತಿಸಿಕೊಳ್ಳಲಾಗಿದೆ. ಉದಾಹರಣೆಗೆ: ಸೀತೆ ಧಾರಾವಾಹಿಯು ಚಾರಿತ್ರಿಕ ಘಟನೆಯೊಂದನ್ನು ಹಾಗೂ ಪ್ರಮುಖ ವ್ಯಕ್ತಿಗಳನ್ನು ನೆನಪಿಸುತ್ತದೆ. ರಾಮಾಯಣದಲ್ಲಿ ನಡೆದ ಘಟನೆಯನ್ನು ಈ ಧಾರಾವಾಹಿಯು ನಿರೂಪಿಸುತ್ತದೆ. ಈ ಕಥೆಯ ನಾಯಕ ರಾಮ ಮತ್ತು ಸೀತೆ. ಈ ಕಥೆಯಲ್ಲಿ 'ಸೀತೆ'ಯ

ಹೆಸರನ್ನು ಧಾರಾವಾಹಿಯ ಶೀರ್ಷಿಕೆಯಾಗಿ ಬಳಸಿಕೊಂಡಿದ್ದಾರೆ. ನಿರ್ದೇಶಕ ಮತ್ತು ಟಿ.ವಿ. ಮಾಲೀಕರು ಟಿ.ಆರ್.ಪಿ.ಯನ್ನು ಹೆಚ್ಚಿಸಿಕೊಳ್ಳುವ ಸಲುವಾಗಿ ಸ್ತ್ರೀ ವ್ಯಕ್ತಿನಾಮವನ್ನು ಬಳಸಿಕೊಳ್ಳುವ ಮೂಲಕ ವೀಕ್ಷಕರನ್ನು ಸೆರೆ ಹಿಡಿಯುತ್ತಿದ್ದಾರೆ.

ಐತಿಹಾಸಿಕ ಕಥೆಯಲ್ಲಿ ಜೀವನವನ್ನು ತ್ಯಾಗ ಮಾಡಿದ ಮಹಾನ್ ವ್ಯಕ್ತಿಗಳ ಹೆಸರನ್ನು ಬಳಸಿಕೊಂಡಿದ್ದಾರೆ. ಉದಾಹರಣೆಗೆ ಕೆಳದಿ ಚೆನ್ನಮ್ಮ ವೀರ ಮಹಿಳೆ. ತನ್ನ ಸಾಮ್ರಾಜ್ಯವನ್ನು ಉಳಿಸಿಕೊಳ್ಳಲು ಬ್ರಿಟಿಷರೊಂದಿಗೆ ಹೋರಾಡಿದ ಧೀರ ಮಹಿಳೆಯಾಗಿದ್ದರಿಂದ ಇಂತಹ ವ್ಯಕ್ತಿ ನಾಮಗಳು ಮಹಿಳೆಯರನ್ನು ವೀಕ್ಷಕರನ್ನಾಗಿಸುವ ಸಲುವಾಗಿ ಈ ವ್ಯಕ್ತಿನಾಮಗಳನ್ನು ಬಳಸಿಕೊಳ್ಳ ಲಾಗಿದೆ. ಭಕ್ತಿಪ್ರಧಾನವಾದ ಧಾರಾವಾಹಿಗಳು ದೇವರ ನಾಮಸ್ಮರಣೆ ಹಾಗೂ ಭಕ್ತಿಪ್ರಾಧಾನ್ಯತೆ ಯಿಂದ ಕೂಡಿದ ಶೀರ್ಷಿಕೆಗಳನ್ನು ರೂಪಿಸಿಕೊಂಡಿವೆ. ಉದಾಹರಣೆ: ೧. ಶ್ರೀ ರಾಘವೇಂದ್ರ ಮಹಿಮೆ, ೨. ಸಂತಪ್ತ ಇತ್ಯಾದಿ.

ದೇವರನ್ನು ಸ್ತುತಿಸುವ ಮತ್ತು ಶಾಂತಿಯನ್ನು ನೆಲೆಸುವಂತಹ ಪರಿಸರವನ್ನು ಪರಿಚಯಿಸುವ ಸಲುವಾಗಿ ಈ ಧಾರಾವಾಹಿಗಳು ರೂಪುಗೊಂಡಿವೆ. ಧಾರಾವಾಹಿಗಳನ್ನು ಒಂದೋ ಎರಡೋ ವರ್ಗಗಳು ಅಂದರೆ ವಯಸ್ಸಾದ ಅಜ್ಜ-ಅಜ್ಜಿಯರು ಮತ್ತು ಭಕ್ತಿ ಪರಂಪರೆಯನ್ನು ಉಳಿಸಿಕೊಂಡು ಬಂದಿರುವ ಪುರೋಹಿತರು ವೀಕ್ಷಿಸುತ್ತಾರೆ. ಈ ಧಾರಾವಾಹಿಗಳನ್ನು ವೀಕ್ಷಿಸುವವರ ಸಂಖ್ಯೆ ವಿರಳವೆಂದೇ ತಿಳಿಯಲಾಗಿದೆ. ಹೀಗೆ ಅನೇಕ ಶೀರ್ಷಿಕೆಗಳು ಘಟನೆಯನ್ನು ಮತ್ತು ಚಾರಿತ್ರಿಕ ವ್ಯಕ್ತಿಯನ್ನು ನೆನಪಿಸಿಕೊಳ್ಳುವ ಹಾಗೂ ಭಕ್ತಿಪ್ರಾಧಾನ್ಯತೆಯನ್ನು ರೂಪಿಸುವಂತಹವುಗಳಾಗಿವೆ.

ಧಾರಾವಾಹಿ ಶೀರ್ಷಿಕೆಗಳು ಕಾಲದಿಂದ ಕಾಲಕ್ಕೆ ಬದಲಾಗುತ್ತಿರುವುದನ್ನು ಈಗಾಗಲೇ ಗಮನಿಸಿದ್ದೇವೆ. ಪ್ರಸ್ತುತ ಸಂದರ್ಭದಲ್ಲಿ ಮತ್ತೊಂದು ಬದಲಾವಣೆಯ ಮೂಲಕ ವೀಕ್ಷಕರನ್ನು ಸೆರೆ ಹಿಡಿಯುವ ತಂತ್ರವನ್ನು ರೂಪಿಸಿಕೊಂಡಿದ್ದಾರೆ. ಈ ಶೀರ್ಷಿಕೆಗಳು ಕೌಟುಂಬಿಕ ಧಾರಾವಾಹಿಗಳ ಪಟ್ಟಿಯಲ್ಲಿ ಬರುತ್ತವೆ. ಚಲನಚಿತ್ರದ ಶೀರ್ಷಿಕೆಗಳನ್ನು ಧಾರಾವಾಹಿ ಶೀರ್ಷಿಕೆಗಳಾಗಿ ಬಳಸಿಕೊಳ್ಳಲಾಗಿದೆ. ಈ ಮೂಲಕ ವೀಕ್ಷಕರಲ್ಲಿ ಇನ್ನಷ್ಟು ಮತ್ತಷ್ಟು ಬದಲಾವಣೆಯನ್ನು ಪಡೆಯುತ್ತಾ ಸಾಗಿವೆ. ಕಾರಣ ಕಳೆದ ಹತ್ತು ವರ್ಷಗಳ ಇತಿಹಾಸದಲ್ಲಿ ಸುಮಾರು ೧೫ ಕನ್ನಡದ ಖಾಸಗಿ ವಾಹಿನಿಗಳು ತಲೆ ಎತ್ತಿವೆ. ಪ್ರತಿಯೊಂದು ಖಾಸಗಿ ವಾಹಿನಿಯವರು ಟಿ.ಆರ್.ಪಿ. ಹೆಚ್ಚಿಸಿಕೊಳ್ಳುವ ಸಲುವಾಗಿ ಮತ್ತು ತಮ್ಮ ಟಿ.ವಿ ವೀಕ್ಷಕರನ್ನಾಗಿ ಅಣಿಗೊಳಿಸಲು ಅನೇಕ ಧಾರಾವಾಹಿಗಳನ್ನು ಪ್ರಸಾರ ಮಾಡಲು ಮುಂದಾದವು. ಈ ಹಿನ್ನೆಲೆಯಲ್ಲಿ ಇಂದು ವಾಹಿನಿಗಳು ಸ್ಪರ್ಧಿಸುವುದು ಅನಿವಾರ್ಯವಾಗಿದೆ. ತಮ್ಮ ಅಸ್ತಿತ್ವ ಹಾಗೂ ಹಣ ಸಂಪಾದನೆಯನ್ನು ಗುರಿಯಾಗಿಸಿಕೊಂಡು ಒಂದೊಂದು ಖಾಸಗಿ ವಾಹಿನಿಯೂ ದಿನಕ್ಕೆ ೧೦-೧೨ ಧಾರಾವಾಹಿಗಳನ್ನು ಪ್ರಸಾರ ಮಾಡುತ್ತದೆ. ಈ ಮೂಲಕ ಸ್ಪರ್ಧಾಜಗತ್ತಿಗೆ ಅಣಿಗೊಳಿಸುವ ಸಲುವಾಗಿ ಹಾಗೂ ವೀಕ್ಷಕರನ್ನು ಹೆಚ್ಚಿಸಿಕೊಳ್ಳುವ

ಸಲುವಾಗಿ ಸಿನಿಮಾ ಅಥವಾ ಚಲನಚಿತ್ರಗಳ ಶೀರ್ಷಿಕೆಗಳನ್ನು ಬಳಸಿಕೊಳ್ಳಲಾಗಿದೆ.

ಉದಾಹರಣೆಗೆ: ೧. ಮುಂಗಾರು ಮಳೆ, ೨. ಚಂದ್ರ ಚಕೋರಿ, ೩. ಜೊತೆ ಜೊತೆಯಲಿ, ೪. ಗಾಳಿಪಟ, ೫. ಅಮೃತವರ್ಷಿಣಿ, ೬. ಅಂಬಾರಿ, ೭. ಅಗ್ನಿಸಾಕ್ಷಿ, ೮. ಮಿಲನ ಇತ್ಯಾದಿ.

ಈ ಶೀರ್ಷಿಕೆಗಳು ಮೊಟ್ಟಮೊದಲಿಗೆ ಚಲನಚಿತ್ರಕ್ಕಾಗಿ ಬಳಸಿಕೊಂಡು ಜನಪ್ರಿಯತೆಯನ್ನು ಪಡೆದುಕೊಂಡಿವೆ. ಇಂತಹ ಶೀರ್ಷಿಕೆಗಳನ್ನು ಬಳಸಿಕೊಳ್ಳುವ ಮೂಲಕ ವೀಕ್ಷಕರನ್ನು ಸೆರೆ ಹಿಡಿಯುತ್ತಿದ್ದಾರೆ. ಕಥೆಗಳೆಲ್ಲವೂ ಒಂದೇ ಸ್ವರೂಪವನ್ನು ಹೊಂದಿವೆ. ಆದರೆ ಶೀರ್ಷಿಕೆಗಳು ಮಾತ್ರ ಬದಲಾವಣೆಯನ್ನು ಹೊಂದಿವೆ. ಈ ಬದಲಾವಣೆ ೯೦ರ ದಶಕದಿಂದಲೂ ಒಂದಲ್ಲ ಒಂದು ಕಾರಣಕ್ಕಾಗಿ ಶೀರ್ಷಿಕೆಗಳ ಸ್ವರೂಪ ಬದಲಾಗುತ್ತಿರುವುದನ್ನು ಗುರುತಿಸಿಕೊಳ್ಳಲಾಗಿದೆ.

೯೦ರ ದಶಕದಲ್ಲಿದ್ದ ಧಾರಾವಾಹಿ ಶೀರ್ಷಿಕೆಗಳು ನಂತರದ ಕಾಲಘಟ್ಟದಲ್ಲಿ ಅನೇಕ ಬದಲಾವಣೆಗಳನ್ನು ಪಡೆದುಕೊಳ್ಳುತ್ತಾ ಸಾಗಿವೆ. ಇದಕ್ಕೆಲ್ಲ ಕಾರಣ ಸ್ಪರ್ಧಾಜಗತ್ತು. ಟಿ.ವಿ. ಮಾಲೀಕರು ಮತ್ತು ಧಾರಾವಾಹಿ ನಿರ್ದೇಶಕರು ಸೇರಿ ಶೀರ್ಷಿಕೆಯನ್ನು ರೂಪಿಸುವ ಮೂಲಕ ತಮ್ಮ, ತಮ್ಮ ಅಸ್ತಿತ್ವ, ಹಣ ಗಳಿಸುವುದಷ್ಟೇ ಆಗಿರುತ್ತದೆ. ಕೆಲವೊಂದು ಶೀರ್ಷಿಕೆಗೂ ಹಾಗೂ ಕಥೆಯ ಹಂದರಕ್ಕೂ ಹೊಂದಾಣಿಕೆಯಾಗದೆ ಇರುವುದನ್ನು ಕೆಲವು ಧಾರಾವಾಹಿಗಳು ನಿರೂಪಿಸುತ್ತವೆ.(ಇದನ್ನು ಸುಧಾ ಪತ್ರಿಕೆಯಲ್ಲಿ ವ್ಯಂಗ್ಯ ಮಾಡಿರುವುದನ್ನು ಗಮನಿಸಲಾಗಿದೆ).

(ಹಳ್ಳ ಹಿಡಿದ, ದಾರಿ ಕಾಣದ, ಎಲ್ಲಿಂದಲೋ ಎಲ್ಲಿಗೆ ದಾರಿತಪ್ಪಿ, ಹಳಿತಪ್ಪಿದ ಇತ್ಯಾದಿ. ಹೀಗೆ ವ್ಯಂಗ್ಯಕ್ಕೆ ಗುರಿಯಾಗಿರುವುದನ್ನು ಗುರುತಿಸಿಕೊಳ್ಳಲಾಗಿದೆ.)

ಅಡಿಟಿಪ್ಪಣಿಗಳು

೧. ಅನ್ನಪೂರ್ಣ ಗುಡದೂರು, ೨೦೦೯, **ಕನ್ನಡ ಕಾದಂಬರಿಗಳಲ್ಲಿ ಭಾಷಾ ಪ್ರಭೇಧಗಳು,** ಪು.೮೦.

೨. ಅದೇ, ಪು.೮೦.

೩. ಅದೇ, ಪು.೮೧.

೪. ಅದೇ, ಪು.೯೦.

ಅಧ್ಯಾಯ ಐದು

ಧಾರಾವಾಹಿಗಳು: ಅನ್ಯಭಾಷಾ ಬಳಕೆ

೫.೧. ನುಡಿಬೆರಕೆ

೫.೨. ನುಡಿಜಿಗಿತ

ಅಧ್ಯಾಯ ಐದು

ಧಾರಾವಾಹಿಗಳು: ಅನ್ಯಭಾಷಾ ಬಳಕೆ

'ಮನುಷ್ಯ ಮನುಷ್ಯರ ಮಧ್ಯೆ ಸಂವಹನ ಕ್ರಿಯೆಯನ್ನುಂಟು ಮಾಡುವ ಸಾಧನಗಳೇ ಸಮೂಹ ಮಾಧ್ಯಮಗಳು. ಈ ಸಮೂಹ ಮಾಧ್ಯಮಗಳು ಕಳೆದ ಅರ್ಧ ಶತಮಾನದಲ್ಲಿ ದೊಡ್ಡ ಕ್ರಾಂತಿಯನ್ನೇ ಮಾಡಿವೆ. ಈ ಮೊದಲು ಇದ್ದ ಪತ್ರಿಕೆ ಜೊತೆಗೆ ರೇಡಿಯೋ, ಟೆಲಿವಿಷನ್, ಕಂಪ್ಯೂಟರ್ ಹಾಗೂ ಮೊಬೈಲ್ ಮಾನವರ ಬೌದ್ಧಿಕ ಆವಿಷ್ಕಾರದ ಕೂಸುಗಳಾಗಿದ್ದು, ಜಗತ್ತಿನ ಆಗು–ಹೋಗುಗಳನ್ನು ಜನರೆಡೆಗೆ ಬಹುಬೇಗನೆ ಕೊಂಡೊಯ್ಯುವುದರಿಂದ ಮಾಧ್ಯಮಗಳಿಲ್ಲದೇ ಜನರ ಬದುಕೇ ಇಲ್ಲ ಎನ್ನುವಂತಾಗಿದೆ. ಮಾಧ್ಯಮಗಳು ಜಗತ್ತನ್ನೇ ಜೇಬಿನಲ್ಲಿ ತಂದಿಟ್ಟಿವೆ. ಮಾನವರ ಬೌದ್ಧಿಕ ವಿಕಾಸ ಹಾಗೂ ಬದಲಾಗುತ್ತಿರುವ ಜಗತ್ತಿಗನುಗುಣವಾಗಿ ಹೊಸ ಹೊಸ ಜ್ಞಾನದ ವಲಯಗಳನ್ನು ಅನಾವರಣಗೊಳಿಸಿವೆ.'

ಮಾಧ್ಯಮಗಳು ಒಂದಲ್ಲ ಒಂದು ವಿಧದಲ್ಲಿ ಭಾಷೆಯನ್ನು ಬಳಸುತ್ತವೆ. ಭಾಷೆಯ ಎರಡು ರೂಪಗಳಾದ ಮಾತು ಮತ್ತು ಬರಹಗಳನ್ನು ಬೇರೆ ಬೇರೆ ರೀತಿಯಿಂದ ತಮ್ಮ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳುತ್ತಿವೆ. ಶಿಕ್ಷಣ, ಆಡಳಿತ ಹಾಗೂ ಮಾಧ್ಯಮವಲಯಗಳು ಭಾಷಾಬಳಕೆಯ ಪ್ರಮುಖ ವಲಯಗಳಾಗಿವೆ. ಪ್ರಭಾವಿ ಮಾಧ್ಯಮಗಳಲ್ಲಿ ಒಂದಾದ 'ದೂರದರ್ಶನ'ವು ದಿನದಿಂದ ದಿನಕ್ಕೆ ತೀವ್ರವಾಗಿ ಬೆಳೆದು ಅದೊಂದು ಉದ್ಯಮವಾಗಿದೆ. ದೃಕ್‌ಶ್ರವಣ ಮಾಧ್ಯಮವಾದ 'ದೂರದರ್ಶನ'ವು ಎಲ್ಲೋ ನಡೆದ ಘಟನೆಗಳನ್ನು ಚಿತ್ರಗಳ ಸಹಿತ ಚಲಿಸುವ ಚಿತ್ರಗಳನ್ನು ಕುಳಿತಲ್ಲಿಯೇ ನೋಡುವ ಅವಕಾಶವನ್ನು ಈ 'ದೂರದರ್ಶನ'ವೆಂಬ ಮಾಯಾಪೆಟ್ಟಿಗೆ ವೀಕ್ಷಕರನ್ನು ದಿಗ್ಭ್ರಮೆ ಮೂಡಿಸುವಂತೆ ಮಾಡಿದೆ.

ದೂರದರ್ಶನವು ಆರಂಭದ ದಿನಗಳಲ್ಲಿ ಪ್ರಮಾಣೀಕರಣ ಮಾದರಿಯ ಕನ್ನಡ ಭಾಷೆಯನ್ನು ಬಳಸಿಕೊಂಡರೂ ಜಾಗತೀಕರಣ, ಉದಾರೀಕರಣ, ಖಾಸಗೀಕರಣ, ಕೈಗಾರೀಕರಣ ಹಾಗೂ ನಗರೀಕರಣಗಳ ಪ್ರಭಾವದಿಂದಾಗಿ ಬದಲಾಗುತ್ತಿರುವ ಜಗತ್ತಿಗನುಗುಣವಾಗಿ ತನ್ನ ಅಸ್ತಿತ್ವವನ್ನು

ಉಳಿಸಿಕೊಳ್ಳುವ ಹಿನ್ನೆಲೆಯಲ್ಲಿ ಪದಕೋಶದಲ್ಲಿ ಪರಿಣಾಮಕಾರಿ ಪಲ್ಲಟ ಕಂಡುಬಂದಿದೆ. ಕನ್ನಡ ಪದಕೋಶದ ಜೊತೆಗೆ ಸಂಸ್ಕೃತ, ಇಂಗ್ಲೀಷ್, ಪರ್ಸೋ, ಅರೇಬಿಕ್, ಪಾರಸಿ, ಮರಾಠಿ ಹಾಗೂ ಹಿಂದಿ ಮತ್ತು ಅನ್ಯಪ್ರಾಂತ್ಯ ಭಾಷೆಗಳು ಬಂದು ಸೇರಿಕೊಳ್ಳುತ್ತಿವೆ. ದೂರದರ್ಶನ ಕಾರ್ಯಕ್ರಮಗಳಲ್ಲಿ ಇಂದು ಸುದ್ದಿವಾಹಿನಿಗಳು ಹೆಚ್ಚಾಗಿ ಅನ್ಯಭಾಷಾ ಬಳಕೆ ಮಾಡುವಲ್ಲಿ ದಾಪುಗಾಲು ಇಟ್ಟಿರುವುದನ್ನು ಈಗಾಗಲೇ ಗುರುತಿಸಲಾಗಿದೆ. ದೂರದರ್ಶನದಲ್ಲಿ ಪ್ರಸಾರವಾಗುವ ಕಾರ್ಯಕ್ರಮಗಳ ಪಟ್ಟಿಯಲ್ಲಿ 'ಧಾರಾವಾಹಿ'ಗಳು ಕೂಡ ವೀಕ್ಷಕರ ಮನಗೆದ್ದಿವೆ. ಅದರಲ್ಲೂ ಮಹಿಳಾ ವೀಕ್ಷಕರನ್ನು ಗ್ರಾಹಕರನ್ನಾಗಿಸಿಕೊಂಡಿವೆ ಎಂದರೆ ತಪ್ಪಾಗಲಾರದು. ಅಷ್ಟೊಂದು ಪ್ರಭಾವ ಆಗಿದೆ. ಧಾರಾವಾಹಿಗಳನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿಕೊಳ್ಳಲಾಗಿದೆ.

೧. ಕೌಟುಂಬಿಕ ಧಾರಾವಾಹಿಗಳು
೨. ಪ್ರಾದೇಶಿಕ ಧಾರಾವಾಹಿಗಳು
೩. ಹಾಸ್ಯ ಧಾರಾವಾಹಿಗಳು
೪. ಚಾರಿತ್ರಿಕ ಧಾರಾವಾಹಿಗಳು

ಈ ವಿಭಾಗಕ್ರಮದಲ್ಲಿ ಕೌಟುಂಬಿಕ ಹಾಗೂ ಹಾಸ್ಯ ಧಾರಾವಾಹಿಗಳು ಹೆಚ್ಚು ಅನ್ಯಭಾಷಾ ಬಳಕೆಯನ್ನು ಕನ್ನಡ ಭಾಷೆಯ ಜೊತೆಗೆ ನುಡಿಬೆರಕೆ ಮಾಡಿಕೊಳ್ಳುತ್ತ ಬಳಕೆಯಾಗುತ್ತಿರುವುದನ್ನು ಗುರುತಿಸಿಕೊಳ್ಳಲಾಗಿದೆ. ಕೆಲವು ಚಾರಿತ್ರಿಕ ಧಾರಾವಾಹಿಗಳಲ್ಲಿ ಹೆಚ್ಚಾಗಿ ಸಂಸ್ಕೃತಭೂಯಿಷ್ಟವಾದ ಕನ್ನಡವನ್ನೇ ಬಳಸುತ್ತಿವೆ. ಅಂದರೆ ಸಂಸ್ಕೃತ ಪದಗಳು ಹೆಚ್ಚಾಗಿ ಬಳಕೆಯಾಗುತ್ತಿವೆ. ಚಾರಿತ್ರಿಕ ಧಾರಾವಾಹಿಗಳಲ್ಲಿ ಸಂಸ್ಕೃತ ಭಾಷೆಯನ್ನು ಹೆಚ್ಚಾಗಿ ಬಳಸಿಕೊಳ್ಳಲಾಗಿದೆ. ಕಾರಣ ಕನ್ನಡ ಭಾಷೆಯ ಚರಿತ್ರೆಯನ್ನು ಗಮನಿಸಿದಾಗ ಶಾಸನಗಳಲ್ಲಿ ಉಲ್ಲೇಖವಾಗಿರುವ ಮತ್ತು ಹಸ್ತಪ್ರತಿಗಳಲ್ಲಿ ಉಲ್ಲೇಖವಾಗಿರುವ ದಾಖಲೆಗಳ ಪ್ರಕಾರ ಚಾರಿತ್ರಿಕ ನುಡಿಗಟ್ಟೊಂದು ಈ ರೀತಿ ಇತ್ತು ಎನ್ನುವುದಕ್ಕೆ ಸಾಕ್ಷಿಯಾಗಿರುವುದರಿಂದಲೂ ಚಾರಿತ್ರಿಕ ನುಡಿ ಬಳಸಿಕೊಂಡು ಧಾರಾವಾಹಿಗಳ ನುಡಿಯಾಗಿ ಹೊರಹೊಮ್ಮಿದೆ.

ಇನ್ನು ಕೌಟುಂಬಿಕ ಮತ್ತು ಹಾಸ್ಯ ಧಾರಾವಾಹಿಗಳಲ್ಲಿ ಇಂಗ್ಲೀಷ್ ಹಿಂದಿ ಹಾಗೂ ಇತರೆ, ಅನ್ಯಭಾಷಾ ಬಳಕೆ ಹೆಚ್ಚಾಗಿದೆ. ಇದಕ್ಕೆ ಬದಲಾಗುತ್ತಿರುವ ಭಾಷಾಸ್ವರೂಪದಲ್ಲಿ ಹಲವು ಬದಲಾವಣೆಯಾಗಿರುವುದನ್ನು ಕಳೆದ ಅರ್ಧಶತಮಾನದಿಂದಲೂ ಗುರುತಿಸಿಕೊಳ್ಳುತ್ತಾ ಸಾಗಿದೆ. ಈ ಹಿನ್ನೆಲೆಯಲ್ಲಿ ಅನ್ಯಭಾಷಾ ಬಳಕೆಯು ಅನಿವಾರ್ಯವಾಗಿದೆ. ಆದ್ದರಿಂದ ಸಾಂದರ್ಭಿಕವಾಗಿ ಪಾತ್ರಗಳ ಮುಖೇನ ಪದಕೋಶದ ಲಭ್ಯತೆಯನ್ನು ಹಾಗೂ ಪರಿಣಾಮವನ್ನು ಗುರುತಿಸಿಕೊಳ್ಳಲಾಗಿದೆ. ಪ್ರಾದೇಶಿಕ ಧಾರಾವಾಹಿಗಳಲ್ಲಿ ಅತಿವಿರಳವಾಗಿ ಅನ್ಯಭಾಷಾ ಬಳಕೆಯಾಗಿದೆ. ಈ ಮೂಲಕ ಅನ್ಯಭಾಷಾ ಪ್ರಭಾವವನ್ನು ಕುರಿತು ಈ ಅಧ್ಯಯನವು ಯಾವ ರೀತಿಯಲ್ಲಿ ಪರಿಣಾಮಕಾರಿಯಾಗಿ ಬಳಕೆಯಾಗುತ್ತಿದೆ ಎಂಬುದನ್ನು ವಿಶ್ಲೇಷಿಸುತ್ತದೆ.

ದೂರದರ್ಶನ ಧಾರಾವಾಹಿಗಳಲ್ಲಿ ಬಳಕೆಯಾಗಿರುವ ಅನ್ಯಭಾಷೆಯನ್ನು ಕುರಿತು ಗಮನಿಸುವಾಗ ಸಂಸ್ಕೃತ, ಇಂಗ್ಲೀಷ್, ಅರೇಬಿಕ್, ಹಿಂದಿ, ಮರಾಠಿ ಪದಗಳು ಬಳಕೆಯಾಗಿರುವುದು ಕಂಡುಬರುತ್ತದೆ. ಅದರಲ್ಲಿಯೂ ಸಂಸ್ಕೃತ ಮತ್ತು ಇಂಗ್ಲೀಷ್ ಪದಗಳು ಹೇರಳವಾಗಿ ಬಳಕೆಯಾಗುತ್ತಿದ್ದು ಅರೇಬಿಕ್, ಹಿಂದಿ, ಪಾರಸಿ, ಮರಾಠಿ ಪದಗಳ ಬಳಕೆ ಕಡಿಮೆ ಎಂದು ಹೇಳಬಹುದು. ಕನ್ನಡ ಪದಕೋಶ ಆಧುನೀಕರಣಕ್ಕಾಗಿ ಇಂಗ್ಲೀಷನ್ನು, ಪ್ರಮಾಣೀಕರಣಕ್ಕಾಗಿ ಸಂಸ್ಕೃತವನ್ನು ಅವಲಂಬಿಸಿರುವುದರಿಂದ ಆಡುಭಾಷೆಯಲ್ಲಿ ಇಂಗ್ಲೀಷನ್ನು ಹೆಚ್ಚಾಗಿ ಬಳಸಿ ಕೊಂಡರೆ, ಪ್ರಮಾಣೀಕರಣ ಕನ್ನಡದಲ್ಲಿ ಹೆಚ್ಚಾಗಿ ಸಂಸ್ಕೃತವನ್ನು ಬಳಸಿಕೊಂಡಿರುವುದರಿಂದ ಚಾರಿತ್ರಿಕ ಧಾರಾವಾಹಿಗಳನ್ನು ಹೊರತುಪಡಿಸಿ ಇತರೆ ಧಾರಾವಾಹಿಗಳಲ್ಲಿ ಗುರುತಿಸಿಕೊಳ್ಳಲಾಗಿದೆ. ಸಂಸ್ಕೃತಭೂಯಿಷ್ಟವಾದ ಕನ್ನಡ ಪ್ರಮಾಣೀಕರಣ ಅಥವಾ ಶಿಷ್ಟಕನ್ನಡವೆಂಬಂತೆ ಬಳಕೆಯಾಗುತ್ತಿದೆ. ಈ ರೂಪವು ಕೆಲವು ಪಾತ್ರಗಳಿಗೆ ಸೀಮಿತ ವಾಗಿರುವುದನ್ನು ಸಾಂದರ್ಭಿಕವಾಗಿ ಗಮನಿಸಲಾಗಿದೆ. ಕಾರಣ ಮೇಲ್ವರ್ಗದ ಪಾತ್ರಗಳು ಮತ್ತು ಕೆಲವು ಮಧ್ಯಮವರ್ಗದ ಪಾತ್ರಗಳು ಪ್ರಮಾಣೀಕರಣ ಕನ್ನಡವೆಂಬಂತೆ ಸಂಸ್ಕೃತ ಭೂಯಿಷ್ಟವಾದ ಕನ್ನಡವನ್ನು ಮಾತನಾಡುತ್ತವೆ. ಚಾರಿತ್ರಿಕ ಧಾರಾವಾಹಿ ಗಳಲ್ಲಿ ಹೆಚ್ಚಾಗಿ ಈ ನುಡಿ ಬಳಕೆಯಲ್ಲಿರುವುದನ್ನು ಕಾಣಬಹುದು. ಕೆಳವರ್ಗದ ಪಾತ್ರಗಳು ಕೆಲವು ಮಧ್ಯಮ ವರ್ಗದ ಪಾತ್ರಗಳು ಪ್ರಮಾಣೀಕರಣವಲ್ಲದ ಆಡುನುಡಿಯನ್ನು ತಮ್ಮ ತಮ್ಮ ಒಳನುಡಿಯಾಗಿ ಬಳಸುತ್ತಿರುವುದನ್ನು ಗುರುತಿಸಲಾಗಿದೆ.

ಇಂಗ್ಲೀಷ್ ಭಾಷಾ ಬಳಕೆಯು ಹೆಚ್ಚಾಗಿ ಕೌಟುಂಬಿಕ ಮತ್ತು ಹಾಸ್ಯ ಧಾರಾವಾಹಿಗಳಲ್ಲಿ ಕಾಣುತ್ತದೆ. ಕಾರಣ ಕೌಟುಂಬಿಕ ಧಾರಾವಾಹಿಗಳಲ್ಲಿ ಆಧುನಿಕತೆಯ ಪ್ರಭಾವದಿಂದ ಇಂಗ್ಲೀಷ್ ಭಾಷೆಯು ವ್ಯಾವಹಾರಿಕ ಭಾಷೆಯಾಗಿ ಬಳಕೆಯಾಗುತ್ತದೆ. ಇಲ್ಲಿ ಮಧ್ಯವಯಸ್ಸಿನ ಹಾಗೂ ಚಿಕ್ಕ ವಯಸ್ಸಿನ ಪಾತ್ರಗಳು ಹೆಚ್ಚಾಗಿ ಇಂಗ್ಲೀಷ್‌ಮಯವಾಗಿರುವ ಕನ್ನಡವನ್ನು ಬಳಸಿಕೊಂಡಿವೆ. ಇದು ಅನಿವಾರ್ಯವೂ ಕೂಡ. ಕಾರಣ ಟಿ.ಆರ್.ಪಿ.ಗಾಗಿಯೇ ಈ ಬದಲಾವಣೆ ಮಾಡಿಕೊಂಡು ಕೆಲವು ಪಾತ್ರಗಳಿಗೆ ಸೀಮಿತಗೊಳಿಸಿಕೊಳ್ಳಲಾಗಿದೆ. ವಯಸ್ಸಾದ ವೃದ್ಧರು ಹೆಚ್ಚಾಗಿ ಸಂಸ್ಕೃತ ಭೂಯಿಷ್ಟವಾಗಿರುವ ಪ್ರಮಾಣೀಕರಣ ಕನ್ನಡವನ್ನು ಬಳಸುತ್ತಾರೆ. ಇನ್ನು ಮೇಲ್ವರ್ಗಗಳಲ್ಲಿ ಹೆಚ್ಚಾಗಿ ಇಂಗ್ಲೀಷ್ ಭಾಷೆಯು ಶಿಕ್ಷಣ, ಲಿಂಗ, ಅಧಿಕಾರ, ವಯಸ್ಸು, ವರ್ಗಾಧಾರಿತವಾಗಿ ಬಳಕೆಯಾಗುತ್ತಿರುವ ಪ್ರಮಾಣವನ್ನು ಕಂಡುಕೊಳ್ಳಲಾಗಿದೆ. ಹಾಸ್ಯ ಧಾರಾವಾಹಿಗಳಲ್ಲಿ ಇಂಗ್ಲೀಷ್, ಹಿಂದಿ, ಸಂಸ್ಕೃತ, ಮರಾಠಿ, ತೆಲುಗು ಇತರೆ ಅನ್ಯಭಾಷೆಗಳನ್ನು ನಗು ಉಕ್ಕಿಸಲಿಕ್ಕೆಂದೇ ವ್ಯವಸ್ಥಿತ ವಾಕ್ಯರಚನೆಯಿಲ್ಲದೆ ಬಳಕೆಯಾಗುವುದನ್ನು ಗುರುತಿಸಿಕೊಳ್ಳಲಾಗಿದೆ. ಕೇವಲ ವೀಕ್ಷಕರನ್ನು ನಗಿಸುವ ಅಥವಾ ಮನೋರಂಜನೆ ನೀಡುವ ಉದ್ದೇಶಕ್ಕೆ ಸೀಮಿತವಾಗಿದೆ. ಈ ಮೂಲಕ ಇಲ್ಲಿ ಕೆಲವು ಹಾಸ್ಯ ಧಾರಾವಾಹಿಗಳು ತಮಗಿಷ್ಟ ಬಂದಂತೆ ಇಂಗ್ಲೀಷ್ ಭಾಷೆಯನ್ನು ಬಳಸಿ

ಕೊಳ್ಳುತ್ತಿರುವುದು ಒಂದು ರೀತಿಯ ಕನ್ನಡ ಭಾಷೆಗೆ ಹೊಡೆತವೆಂದೇ ಹೇಳಬಹುದು. ಇಲ್ಲಿ ಪ್ರಮುಖವಾಗಿ ಗಮನಿಸಬೇಕಾದ ಅಂಶವೇನೆಂದರೆ ಕನ್ನಡ ಭಾಷೆಯು ಅನ್ಯಭಾಷೆಯೊಂದಿಗೆ ಬಳಕೆಯಾಗುತ್ತಿರುವುದಕ್ಕೆ ಕೆಲವು ವಿದ್ವಾಂಸರು ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಇನ್ನು ಕೆಲವು ವಿದ್ವಾಂಸರು ಕನ್ನಡ ಸದಾ ಹರಿಯುತ್ತಿರುವ ನೀರು ಮತ್ತು ಯಾವ ಭಾಷೆ ಹೆಚ್ಚು ಹೆಚ್ಚು ಬದಲಾವಣೆಗೊಳ್ಳುತ್ತಾ ಸಾಗುತ್ತದೆಯೋ ಅಂತಹ ಭಾಷೆ ಚಲನಶೀಲವಾಗಿರುತ್ತದೆ. ಹೊಸ ಹೊಸ ಪದಗಳನ್ನು ಸ್ವೀಕರಿಸುವ ಮೂಲಕ ಭಾಷೆ ತನ್ನ ಅಂದವನ್ನು ಹಿಗ್ಗಿಸಿಕೊಳ್ಳುತ್ತದೆ ಎಂಬ ಅಭಿಪ್ರಾಯಗಳನ್ನು ನೀಡಿದ್ದಾರೆ. ಈ ಹಿನ್ನೆಲೆಯಲ್ಲಿ ಕನ್ನಡ ಭಾಷೆಯು ತನ್ನ ಸ್ವರೂಪವನ್ನು ಕಾಲದಿಂದ ಕಾಲಕ್ಕೆ ಬದಲಾಯಿಸಿಕೊಂಡಿರುವುದನ್ನು ಚಾರಿತ್ರಿಕವಾಗಿ ಗಮನಿಸಲಾಗಿದೆ. ಈ ಮೂಲಕ ಕನ್ನಡ ಭಾಷೆ ಇಂಗ್ಲೀಷ್ ಅಥವಾ ಸಂಸ್ಕೃತಗಳಿಂದ ಪದಗಳನ್ನು ತನ್ನ ಸ್ವರೂಪಕ್ಕೆ ಒಗ್ಗಿಸಿಕೊಳ್ಳುವುದರ ಮೂಲಕ ಭಾಷಾಸಂಗೋಪನೆ ಮಾಡಿಕೊಳ್ಳುತ್ತದೆ. ಕನ್ನಡ ಭಾಷೆಯ ಮೇಲೆ ಅನ್ಯಭಾಷಾ ಪ್ರಭಾವ ಹೆಚ್ಚಾಗಿ ಕನ್ನಡಕ್ಕೆ ಹೊಡೆತ ತರುತ್ತದೆ ಎಂಬ ಅಭಿಪ್ರಾಯವನ್ನು ತಳ್ಳಿಹಾಕುವಂತಿದೆ. ಕಾರಣ ಅನ್ಯಭಾಷೆ ಬಳಕೆಯು ಪ್ರಮಾಣೀಕರಣ ಕನ್ನಡವೆಂಬಂತೆ ಬಳಕೆ ಯಾಗುತ್ತಿರುವುದು ಒಂದು ರೀತಿಯ ಭಾಷಾಸಂಗೋಪನೆಯಾಗಿದೆ. ಅಲ್ಲದೇ ಮೇಲ್ವರ್ಗದ ಹಾಗೂ ಮಧ್ಯಮವರ್ಗದ ಪಾತ್ರಗಳು ಸಾಂದರ್ಭಿಕವಾಗಿ ಹೆಚ್ಚಾಗಿ ಇಂಗ್ಲೀಷ್ ಭಾಷೆಯನ್ನೇ ಬಳಸುತ್ತವೆ. ಇಲ್ಲಿ ಕನ್ನಡ ಪ್ರತ್ಯಯಗಳು ಬಂದು ಸೇರಿಕೊಳ್ಳುವುದರಿಂದ ಕನ್ನಡದ ಜಾಯಮಾನಕ್ಕೆ ಒಗ್ಗಿಕೊಂಡು ಬಳಕೆಯಾಗುತ್ತಿರುವುದು ವಿಶೇಷ ಮತ್ತು ಕೆಳವರ್ಗದ ಪಾತ್ರಗಳು ಇಂಗ್ಲೀಷ್ ಭಾಷೆಯನ್ನು ಬಳಸುವಾಗ ಕನ್ನಡ ಪ್ರತ್ಯಯಗಳು ಸೇರಿಕೊಳ್ಳುತ್ತವೆ. ಇಂತಹ ಸಂದರ್ಭದಲ್ಲಿ ಅನ್ಯಭಾಷಾ ಪ್ರಭಾವ ನಮಗರಿವಿಲ್ಲದಂತೆ ಆಗುತ್ತದೆ. ಅದು ಒಳನುಡಿಗಳಲ್ಲಿ ಬಳಕೆಯಾಗುತ್ತಿರುವುದು ಸತ್ಯ.

ಕೆಳವರ್ಗಕ್ಕೆ ಸೇರಿದ ಪಾತ್ರಗಳು ಹೆಚ್ಚಾಗಿ ಕನ್ನಡ ಜಾಯಮಾನಕ್ಕೆ ತಕ್ಕಂತೆ ಬಳಕೆಯಾಗು ತ್ತಿರುವುದು ಒಂದು ರೀತಿಯಲ್ಲಿ ಕನ್ನಡದ ಸ್ವರೂಪವನ್ನು ಬದಲಾಯಿಸಿಕೊಂಡಂತೆಯೇ. ಮಧ್ಯಮವರ್ಗ ಹಾಗೂ ಮೇಲ್ವರ್ಗದ ಕೆಲವು ಪಾತ್ರಗಳು ಇಂಗ್ಲೀಷ್ ಭಾಷಾ ಸ್ವೀಕರಣದಲ್ಲಿ ನುಡಿಬೆರಕೆ ಮತ್ತು ನುಡಿಪಲ್ಲಟವಾಗುವುದನ್ನು ಸಂದರ್ಭಸಹಿತ ವಿವರಿಸಲಾಗಿದೆ. ಹಾಸ್ಯ ಧಾರಾವಾಹಿಗಳಲ್ಲಿ ನುಡಿಪಲ್ಲಟವಾಗುವುದನ್ನು ಗುರುತಿಸಿಕೊಳ್ಳಲಾಗಿದೆ. ಇಲ್ಲಿ ಕೆಲವು ಅಧಿಕಾರ ಮತ್ತು ಆಡಳಿತಾತ್ಮಕ ಮತ್ತು ವ್ಯವಹಾರಿಕ ಪಾತ್ರಗಳು ಇಂಗ್ಲೀಷ್ ಭಾಷೆಯನ್ನು ಹೆಚ್ಚಾಗಿ ಬಳಸುತ್ತಿರುವುದರಿಂದ ಇಡೀ ವಾಕ್ಯರಚನೆಯಲ್ಲಿ ಇಂಗ್ಲೀಷ್ ಭಾಷೆ ಬಳಕೆಯಾಗುತ್ತಿರುವುದು ನುಡಿಪಲ್ಲಟಕ್ಕೆ ಕಾರಣವಾಗಿದೆ. ಇನ್ನು ವಾಕ್ಯದ ಮಧ್ಯೆ ಕೆಲವು ಪದಗಳು ಇಂಗ್ಲೀಷ್ ಭಾಷೆಯ ನುಡಿಪಲ್ಲಟವಾಗುತ್ತದೆ. ಧ್ವನಿರಚನೆಯಲ್ಲಿ ಯಾವ ಯಾವ ಪಾತ್ರಗಳಿಗೆ ಸೀಮಿತಗೊಂಡಿದೆ ಎಂಬುದನ್ನು ವಿಶ್ಲೇಷಿಸಿಕೊಳ್ಳಲಾಗಿದೆ.

ಕೌಟುಂಬಿಕ ಧಾರಾವಾಹಿಗಳಲ್ಲಿ ಅನ್ಯಭಾಷಾ ಬಳಕೆ

ದಿನಾಂಕ: ೨೩-೮-೧೩ ರಂದು ರಾತ್ರಿ ೮ ಗಂಟೆಗೆ ಸುವರ್ಣ ವಾಹಿನಿಯ ಅರಗಿಣಿ ಧಾರಾವಾಹಿಯಲ್ಲಿ ಬಳಕೆಯಾದ ಅನ್ಯಭಾಷಾ ಬಳಕೆ.

ಧನಲಕ್ಷ್ಮಿ: ಹಲೋ ಆಯ್ ಬಾಯ್ ಬಾಯ್ ಅಕ್ಷರಾ ನೀನು ಸೋ ಇನ್ನೋಸೆಂಟ್. ಅಜ್ಜಿ ಖಾರ ತಿನ್ನೋದೆ ಇರೋ ಅಷ್ಟು ಇನ್ನೋಸೆಂಟ್ ಏನೂ ಅಲ್ಲ. ಡಿಟೆಕ್ಟಿವ್ ಡಿಂಗ್‌ತರ ಸಿದ್ಧಾರ್ಥ್ ರೂಂನ ಫುಲ್ ಸರ್ಚಿಂಗ್.

ಅಕ್ಷರಾ: ಅಜ್ಜೀನಾ ಸಿದ್ಧಾರ್ಥ್ ರೂಮಲ್ಲಿ ಏನ್ ಮಾಡ್ತಿದಾರೆ(ಅದಕ್ಕೆ ಪ್ರತಿಯಾಗಿ).

ಧನಲಕ್ಷ್ಮಿ: ಹೂ ನೋಸ್. ಅವ್ರಿಗೆ ಈ ಹೋಮಲ್ಲಿ ಕ್ವಷನ್ ಮಾಡೋರು ಯಾರು? ಇದ್ದು ಇಲ್ಲದೆ ಡೆಸ್ಟ್ ಬಿನ್ ತರ ನಾನಿದೀನಿ.

ಅಕ್ಷರಾ: ಚಿಕ್ಕಮ್ಮ ವಿಷ್ಯಾನ ಎಲ್ಲಿಂದೆಲ್ಲಿಗೋ ತಗೊಂಡು ಹೋಗ್ತಾ ಇದೀರಲ್ಲ. ಅಜ್ಜಿ ಸಿದ್ಧಾರ್ಥ್ ರೂಂಗೆ ಹೆಜ್ಜೇನೆ ಇಡೋದಿಲ್ಲ. ಅಂತದ್ರಲ್ಲಿ ಯಾವುದನ್ನೋ ಹುಡುಡೋಕೆ ಹೋಗಿದಾರೆ ಅಂದ್ರೆ.

ಧನಲಕ್ಷ್ಮೀ: ವಿಚ್ ಒನ್ ಅಂದ್ರೆ ವೀಕ್‌ನೆಸ್ ಸರ್ಚ್ ಮಾಡೋಕೆ ಟ್ರೈಯಿಂಗ್ ಅನ್ಸುತ್ತೆ.

ಅಕ್ಷರಾ: ವೀಕ್‌ನೆಸ್?

ಧನಲಕ್ಷ್ಮಿ: ಪೂಜಾ ಸಿಂಧ್ಯಾನ ಬಗ್ಗೆ ವೀಕ್‌ನೆಸ್ ಕಲೆಕ್ಟ್ ಮಾಡೋದಕ್ಕೆ ಹೋಗಿದ್ರು ಅನ್ಸುತ್ತೆ.

ಅಕ್ಷರಾ: ಅಯ್ಯೋ ದೇವ್ರೆ, ಅಜ್ಜಿಗೆ ಅನುಮಾನ ಗಟ್ಟಿಯಾಗಿದೆ ಅನ್ಸುತ್ತೆ. ಫ್ಲವರ್ ಬುಕ್ ನಾಟಕ ಬುಕ್‌ಗೆ ಅವರೇ ಸೂತ್ರಧಾರಿ ಅನ್ಸುತ್ತೆ.

ಧನಲಕ್ಷ್ಮಿ: ಹಲ್ಲೊ ಹಾಯ್ ಬಾಯ್, ಬಾಯ್ ಪಯ್, ಸಿದ್ಧಾರ್ಥ್ ಅವ್ನ ಇಷ್ಟ ಪಟ್ಟಿರೋ ಗರ್ಲ್‌ಫ್ರೆಂಡ್‌ನ ಚಾಯ್ಸ್ ಮಾಡೋ ಇಂಡಿಪೆಂಡೆನ್ಸ್ ಇಲ್ವಾ ಹೋ ಮೈ ಗಾಡ್.

ಸಿದ್ಧಾರ್ಥ್: ಪೂಜಾ ಪೂಜಾ(ಆವೇಶದಿಂದ)

ಪೂಜಾಸಿಂಧ್ಯಾ: ಸಿದ್ಧಾರ್ಥ್ ಯಾಕ್ ಕೂಗಿಕೋತಾ ಇದ್ದೀಯಾ.

ಸಿದ್ಧಾರ್ಥ್: ಮತ್ತೇನು ಮಾಡ್ಲಿ. ನೀನು ಮಾಡೋ ಕೆಲ್ಸಾನೆ ಅಂತಾದ್ದು. ನಮ್ಮನೆಗೆ ಫ್ಲವರ್ ಬೊಕ್ಕೆ ಕಳ್ಸಿದಿಯಾ ತಾನೆ. ಫರ್ ಮೈ ಲವ್ ಅಂತ ಟ್ಯಾಗ್ ಮಾಡಿ ಕಳ್ಸಿದೀಯಾ?

ಪೂಜಾಸಿಂಧ್ಯಾ: ವಾಟ್ ಫ್ಲವರ್ ಬೊಕ್ಕೆನಾ.

ಸಿದ್ಧಾರ್ಥ್: ದಿಸ್ ಈಜ್ ಟೂ ಮಚ್ ಪೂಜಾ. ನಮ್ಮ ರಿಲೇಷನ್‌ಶಿಪ್ ಬಗ್ಗೆ ಎಲ್ಲಿ ಯಾವಾಗ ಹೇಳಬೇಕು ಅಂತ ನನಗೆ ಚೆನ್ನಾಗಿ ಗೊತ್ತಿದೆ.

ಪೂಜಾ ಸಿಂದ್ಯಾ: ನೋ ಸಿದ್ಧಾರ್ಥ ನಾನು ಫ್ಲವರ್ ಬೊಕ್ಕೆ ಕಳ್ಸಿಲ್ಲ. ನಾನು ಯಾವತ್ತೂ ಇಂಥ ಕೆಲ್ಸ ಮಾಡಿಲ್ಲ. ಮಾಡೋದಿಲ್ಲ. ನಾನು ಫ್ಲವರ್ ಬೊಕ್ಕೆ ಕಳ್ಸಿಲ್ಲ ಸಿದ್ಧಾರ್ಥ್.

ಸಿದ್ಧಾರ್ಥ್: ಇಟ್ಸ್ ಓಕೆ ಲಿವಿಟ್, ನಮ್ಮ ಬಿಜಿನೆಸ್ ನೋಡೋದಕ್ಕೆ ಬಿಲ್‌ಗೇಟ್ಸ್ ಬರ್ತಿದಾರೆ. ಮೀಟಿಂಗ್ ಅರೇಂಜ್ ಮಾಡು(ಒಂದೇ ವಯಸ್ಸಿನವರು ಶಿಕ್ಷಣ ಪಡೆದವರು ಮತ್ತು ಮೇಲ್ವರ್ಗಕ್ಕೆ ಸೇರಿದವರಾಗಿದ್ದಾರೆ).

ದಿನಾಂಕ ೨-೯-೧೩ ರಂದು ಮಧ್ಯಾಹ್ನ ೨ ಗಂಟೆಗೆ ಈಟಿ.ವಿ. ಕನ್ನಡ ವಾಹಿನಿಯಲ್ಲಿ ಬದುಕು ಧಾರಾವಾಹಿಯಲ್ಲಿ.

ಲಾವಣ್ಯ: ಸುಮ್ನೆ ಯಾಕೆ ಟೆನ್‌ಷನ್ ಮಾಡಿಕೊಳ್ತೀರಾ ಎಂದು ಹೇಳುತ್ತಾಳೆ. ಪೊಲೀಸ್ ಇನ್ಸ್‌ಪೆಕ್ಟರ್ ಇದೇ ಸಮಯಕ್ಕೆ ಬರುತ್ತಾರೆ. ಲಾವಣ್ಯಳ ತಂಗಿ ಅತ್ಯಾಚಾರಕ್ಕೆ ಒಳಗಾಗಿ ಆಸ್ಪತ್ರೆಯಲ್ಲಿ ಟ್ರೀಟ್‌ಮೆಂಟ್ ಪಡೆಯುತ್ತಾಳೆ.

ಸಬ್‌ಇನ್ಸ್‌ಪೆಕ್ಟರ್: ಟ್ರೀಟ್‌ಮೆಂಟ್ ನಡೀತಾ ಇದೆ. ಡಾಕ್ಟರ್ ಹೊರಗಡೆ ಬಂದ್ಮೇಲೆ ಎಲ್ಲಾ ಗೊತ್ತಾಗುತ್ತೆ.

ದಿನಾಂಕ ೧-೨-೧೩ರಂದು ರಾತ್ರಿ ೮-೩೦ಕ್ಕೆ ಸುವರ್ಣ ವಾಹಿನಿಯಲ್ಲಿ ಕೆಳದಿ ಚೆನ್ನಮ್ಮ ಧಾರಾವಾಹಿಯಲ್ಲಿ ಉರ್ದು ಭಾಷಾ ಪ್ರಯೋಗ.

ಸಯ್ಯದ್ ಸರ್ಜಖಾನ್: "ವೊಸ್ಲಾಲಾ ವೊಸ್ಲಾರಿಕೆ ಜೀಲಾಲ್ ಖಾನ್ ಹೀಗೆ ಆಗುತ್ತೆ ಅಂತ ಹೇಳೋದಕ್ಕೆ ನಾನೇನು ದೇವರು ಅಲ್ಲ.

ಸಯ್ಯದ್ ಸರ್ಜಖಾನ್: "ಜೀತ್ ಹಾಮಾರಿ ಹೋಗಾ" ಜೀನ್ನಪಂತ್ ಇರೋವರಿಗೂ ನಿಮಗೆ ಏನು ಆಗೋದಿಲ್ಲ.

ಸಯ್ಯದ್ ಸರ್ಜಖಾನ್: "ಸರ್ವನಾಶ ಹೋಗೈ"

ಸಯ್ಯದ್ ಸರ್ಜಖಾನ್: ಜಿನ್ನಪಂತ ಮಾತು ಕೇಳಿದ್ರೆ ಸೋಲೊದು ಪಕ್ಕ'

ಯದುಲ್ಲಾಖಾನ್: 'ಜಿನ್ನಪಂತ್ ನಿನ್ನ ಮಾತ್ ಕೇಳಿ ಪೂರಬರದೆ ಆಗಿ ಹೊದನ'

ಸಯ್ಯದ್ ಸರ್ಜಖಾನ್: 'ನೀನು ಮರಾಠಿಗ ಕನ್ನಡಿಗರ ಮೇಲೆ ದ್ವೇಷ ಇದೆ ಅಂತ ನಂಬ್ದೆ" ನೀನು ಇಂಗ ಮೋಸ ಮಾಡ್ತೀಯಾ ಅಂತ ಅಂದುಕೊಂಡಿರ್ಲಿಲ್ಲ. ಅದಕ್ಕೆ ಪ್ರತಿಯಾಗಿ ಜಿನ್ನಪಂಪ್ ನಿಯತ್ತಿನ ಬಗ್ಗೆ ಶೇಕ್ ಮಾಡ್ಬೇಡಿ ಯದುಲ್ಲಖಾನ್.

ಕೆಳದಿ ನಾಯಕರೊಂದಿಗೆ ಯುದ್ಧದಲ್ಲಿ ಸೋತಾಗ ಯದುಲ್ಲಖಾನ್ ಜಿನ್ನಪಂತ್‌ನನ್ನು ಕುರಿತು ಈ ಮೇಲಿನ ಮಾತನ್ನು ಹೇಳುತ್ತಾನೆ.

ಸಯ್ಯದ್ ಸರ್ಜಖಾನ್: 'ಕ್ಯಾ ಹೋಗಯಾ ಸರ್ಜಖಾನ್ ಕ್ಯಾ ಹೋಗಯಾ ಸರ್ಜಖಾನ್' ಎಂದು ಯದುಲ್ಲಖಾನ್ ತನ್ನ ತಮ್ಮ ಯುದ್ಧದಲ್ಲಿ ಮರಣವಪ್ಪಿದ ಸಂದರ್ಭದಲ್ಲಿ ಸಿಟ್ಟಿನಲ್ಲಿ ಈ ಮೇಲಿನ ಅನ್ಯಭಾಷಾ ಬಳಕೆಯನ್ನು ಬಳಸುತ್ತಾನೆ.

ದಿನಾಂಕ ೫-೩-೧೨ರಂದು ರಾತ್ರಿ ೮.೩೧ಕ್ಕೆ ಈಟಿ.ವಿ. ಕನ್ನಡ ವಾಹಿನಿಯ ಶ್ರೀರಾಘವೇಂದ್ರ ಮಹಿಮೆ ಧಾರಾವಾಹಿಯಲ್ಲಿ ಉರ್ದು ಭಾಷಾ ಬಳಕೆ.

ಮುಸ್ಲಿಂ ಪಾತ್ರಗಳು: ಇಸ್ಲಾಂ ಧರ್ಮೀಯರ ಅಸೂಯೆ ಮಾತುಗಳು.

ಉಜೀಜ್: ಸಲಮ್ ಉಲ್ಲಾಜೀ

ಉಲ್ಲಾಜಿ: ದೇಕೊ ಹೇ ಕಾಮ್ ಕಿಸಿಕೋ ಅಭಿ ಮೂಲುಹೊನಾಚಾಯಿಯೇ ಅಲ್ಲ ಕೋ ನಾಭಿ ಹೋನಾಚಾಯಿಯೇ ಐಸ ಹೇ ಕರೆಂಗೆ ಮುಲ್ಲ ಜೆ ಹೇ ಹಮಾರಾ ಮುನ್ಸಿಕ ಸಮಾಜ್‌ರ್ ಅಲ್ಲಕೋ ಕತಂ ಕತಂ ಖರೇಂಗೆ, ತುಮ್ ಜಾವ್.

ನುಡಿಬೆರಕೆ ನುಡಿ ಜಗಿತ

"ಜಗತ್ತಿನಲ್ಲಿ ಒಂದೇ ಭಾಷೆಯನ್ನು ಬಳಸುವ ಮಾನವರ ಸಮುದಾಯವನ್ನು ಕಾಣುವುದು ಅಸಾಧ್ಯ. ಅಂದರೆ ಒಂದು ಭಾಷೆಯನ್ನು ಆಡುವ ಜನರು ಒಂದಕ್ಕಿಂತ ಹೆಚ್ಚು ಸಮುದಾಯಗಳಲ್ಲಿ, ಭೂಪ್ರದೇಶಗಳಲ್ಲಿ ಕಾಣಸಿಗುವಂತೆ ಒಂದೇ ಸಮುದಾಯದಲ್ಲಿ ಒಂದಕ್ಕಿಂತ ಹೆಚ್ಚು ಭಾಷೆಗಳು ಬಳಕೆಯಾಗುತ್ತಿರುವುದು ಕಂಡುಬರುತ್ತದೆ. ಇದಕ್ಕೆ ಕಾರಣಗಳು ಹಲವು. ರಾಜಕೀಯ ಕಾರಣಗಳಿಂದಾಗಿ ನಡೆಯುವ ಆಡಳಿತವಲಯ ವಿಸ್ತರಣೆಗಳು, ಸಮುದಾಯಗಳ ಜನರು ಬೇರೆ ಬೇರೆ ಕಾರಣಗಳಿಗಾಗಿ(ಆರ್ಥಿಕ, ಸಾಮಾಜಿಕ, ರಾಜಕೀಯ, ಧಾರ್ಮಿಕ) ಬೇರೆ ಬೇರೆ ಭೂಪ್ರದೇಶಗಳಿಗೆ ಹೋಗಿ ನೆಲೆಸುವುದು. ರಾಷ್ಟ್ರೀಯತೆ ಮತ್ತು ದೇಶಕೂಟಗಳು ವಿದ್ಯೆ, ಸಂಸ್ಕೃತಿ, ವ್ಯಾಪಾರ ಅಂತರ್ವಿವಾಹ, ಆಧುನಿಕತೆಯ ಪ್ರಭಾವದಿಂದ ಮೊಬೈಲ್, ಇಂಟರ್‌ನೆಟ್ ಹಾಗೂ ಸಮೂಹ ಮಾಧ್ಯಮಗಳ ಇತ್ಯಾದಿ ಕಾರಣಗಳಿಗಾಗಿ ಹಾಗೂ ಸಮೂಹ ಮಾಧ್ಯಮಗಳು ಮತ್ತೊಂದರೊಡನೆ ಬೆರೆಯುವುದು ಅನಿವಾರ್ಯವಾಗುತ್ತದೆ. ಆಗ ಇಂತಹ ಸಮುದಾಯಗಳಲ್ಲಿ ಭಾಷಾಮಿಶ್ರಣದ ಪ್ರಕ್ರಿಯೆಗಳು ಕಂಡುಬರುತ್ತವೆ."[೨]

"ಆದರೆ, ಬಹಳ ಹಿಂದಿನಿಂದಲೂ ಈ ರೀತಿಯ ಭಾಷಾಮಿಶ್ರಣ ಅಥವಾ ನುಡಿಬೆರಕೆ ಪಂಡಿತರ ಕೋಪ, ಅವಹೇಳನ, ತಿರಸ್ಕಾರಗಳಿಗೆ ಗುರಿಯಾಗಿದೆ. ಈ ಪರಿಪಾಟವನ್ನು ಅನೇಕ ರೀತಿಯಲ್ಲಿ ಖಂಡಿಸಲಾಗಿದೆ. ಇದನ್ನು ಕಲಸುಮೇಲೋಗರವೆಂದು, ಇದು ಅಲ್ಲ, ಅದೂ ಅಲ್ಲದ ಎಡಬಿಡಂಗಿ ಮಾತು ಎಂದೂ ಕರೆಯುವವರಿದ್ದಾರೆ. ಒಂದು ಭಾಷೆಯನ್ನು ಮಾತನಾಡುವಾಗ ಮತ್ತೊಂದು ಭಾಷೆಯನ್ನು ಮಾತನಾಡುವುದು ಅಥವಾ ಬೆರೆಸುವುದು

ತಮ್ಮ ಭಾಷೆಯ ಅಜ್ಞಾನದ ಲಕ್ಷಣ ಅಥವಾ ಭಾಷಿಕರ ಸೋಮಾರಿತನದ ಲಕ್ಷಣ ಎಂದೂ ಹೇಳಲಾಗುತ್ತದೆ. ಈ ರೀತಿ ಮಾತನಾಡುವುದು ಭಾಷೆ ಹಾಳಾಗುವುದರ ಸ್ಪಷ್ಟ ಸಂಕೇತವೆಂದೂ, ಇದು ಭಾಷೆಯ ಬೆಳವಣಿಗೆಗೆ ಅಡ್ಡಿಯೆಂದೂ ಹೇಳುವುದು, ಪಾಂಡಿತ್ಯ ಪ್ರದರ್ಶನವೆಂದೂ, ಆಡಂಬರದ ಮಾತುಗಾರಿಕೆಯೆಂದೂ, ಕೊಬ್ಬು, ರೋಪು, ಜಮಾಯಿಸುವುದು ಎಂದೂ ಪರಿಗಣಿಸಲಾಗುತ್ತದೆ. ಒಟ್ಟಿನಲ್ಲಿ ಈ ಪ್ರಕ್ರಿಯೆಗೆ ತಾತ್ಸಾರ, ಅಸಮ್ಮತಿ, ಕೀಳರಿಮೆ ಭಾವನೆಗಳೇ ಹೆಚ್ಚು.[೩] ಆದರೆ ಈ ನುಡಿಬೆರಕೆ ಯಾವುದೋ ಅಶಿಕ್ಷಿತ, ಅಪ್ರಮುಖ, ಅಜ್ಞಾನಿ ಗುಂಪು ಅಥವಾ ವರ್ಗಕ್ಕೆ ಮಾತ್ರ ಸೀಮಿತವಾಗಿಲ್ಲ. ಬದಲಿಗೆ ಸುಶಿಕ್ಷಿತರ ಜ್ಞಾನಿಗಳಲ್ಲಿ ಎದ್ದು ಕಾಣುವ ಅಂಶವೆಂದೇ ಹೇಳಬಹುದು. ಅಲ್ಲದೇ ಇದು ಪ್ಯಾಶನ್ನಿನಂತೆ ಬಂದು ಹೋಗುವ ತಾತ್ಕಾಲಿಕ ಅಲೆಯೂ ಅಲ್ಲ ಅಥವಾ ಕೇವಲ ಕನ್ನಡಕ್ಕೆ ಸೀಮಿತವಾದುದೂ ಅಲ್ಲ. ದಿನಗಳೆದಂತೆ ಇಂತಹ ಭಾಷೆಯನ್ನು ಮಾತನಾಡುವರ ಮಾತು ಗಟ್ಟಿಗೊಂಡು ಹೊಸದೊಂದು ಭಾಷೆಯೇ ರೂಪುಗೊಳ್ಳುತ್ತದೆ. ಅಲ್ಲದೆ ಪ್ರಪಂಚದಲ್ಲಿರುವ ಎಲ್ಲ ಭಾಷೆಗಳಲ್ಲಿಯೂ ಈ ಪ್ರಕ್ರಿಯೆ ಕಂಡುಬರುತ್ತದೆ.[೪]

'ಜಗತ್ತಿನ ಯಾವುದೇ ಜೀವಂತ ಭಾಷೆಯೂ ಅನ್ಯಭಾಷೆಯ ಪ್ರಭಾವಕ್ಕೆ ಒಳಗಾಗದೇ ಉಳಿದಿಲ್ಲ. ಪ್ರತಿಯೊಂದು ಭಾಷೆ ಮತ್ತು ಉಪಭಾಷೆಗಳು ಒಂದಲ್ಲ ಒಂದು ಭಾಷೆಯ ಪ್ರಭಾವಕ್ಕೆ ಒಳಗಾಗಲೇಬೇಕು. ಸ್ವೀಕರಣವಿಲ್ಲದೆ ಸ್ವಭಾಷಾ ಶಬ್ದಭಂಡಾರ ಒಂದರಿಂದಲೇ ಸಮೃದ್ಧಿಯಾಗಿ ಬೆಳೆದು ಬಂದಿರುವ ಭಾಷೆಗಳು ಜಗತ್ತಿನಲ್ಲಿ ಬಹಳ ಕಡಿಮೆ. ಇಂತಹ ಭಾಷೆಗಳು ಜನರಾಡುವ ಭಾಷೆಯಿಂದ ಅಳಿವಿನ ಕಡೆಗೆ ಮುಖ ಮಾಡುತ್ತವೆ. ಮುಂದೊಂದು ದಿನ ಅಳಿದೇ ಹೋಗುತ್ತವೆ ಎಂದರೆ ತಪ್ಪಾಗಲಾರದು. ಈ ಕಾರಣದಿಂದಲೇ ಒಟ್ಟೊ ಯಸ್ಪರ್ಸನ್ ಎಂಬಾತನು No language is entirly free from borrowed words ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾನೆ. ಅಂದರೆ ಪ್ರತಿಯೊಂದು ಭಾಷೆಗೂ ಸ್ವೀಕರಣ ಪ್ರಕ್ರಿಯೆ ಅಗತ್ಯವಾದುದು ಮತ್ತು ಅಷ್ಟೇ ಸಹಜವಾದುದು ಕೂಡ ಎಂಬುದು ಇದರಿಂದ ಮನವರಿಕೆಯಾಗುತ್ತದೆ.[೫]

'ಭಾಷಾಮಿಶ್ರಣಕ್ಕೆ ಸಂಬಂಧಿಸಿದಂತೆ ಇಲ್ಲಿಯವರೆಗೆ ಅಧ್ಯಯನ ನಡೆದಿವೆಯಾದರೂ, ಅವು ಕೇವಲ ಪಟ್ಟಿ ರೂಪದವು. ಅಂದರೆ ಸ್ವೀಕರಣ ಯಾವ ಭಾಷೆಯಿಂದ ಆಗಿದೆಯೋ ಆ ಸ್ವೀಕರಣಗೊಂಡಿರುವ ಪದಗಳನ್ನು ಒಂದು ಪಟ್ಟಿಯ ರೂಪದಲ್ಲಿ ಕೊಡಲಾಗಿದೆ. ಆದರೆ ಪ್ರಸ್ತುತ ಅಧ್ಯಯನದಲ್ಲಿ ಭಾಷಾಮಿಶ್ರಣದ ಪ್ರಕ್ರಿಯೆಯನ್ನು ಇದಕ್ಕಿಂತಲೂ ಭಿನ್ನವಾಗಿ ನೋಡುವ ಪ್ರಯತ್ನ ಮಾಡಲಾಗಿದೆ. ಭಾಷಾಮಿಶ್ರಣದ ಬಗ್ಗೆ ವಿಶ್ಲೇಷಿಸುತ್ತ ಯಾವ ಧಾರಾವಾಹಿಯಲ್ಲಿ ಹೆಚ್ಚಾಗಿ ಸ್ವೀಕರಣ ನುಡಿಬೆರಕೆ ಮತ್ತು ನುಡಿಪಲ್ಲಟದಂತಹ ಪ್ರಕ್ರಿಯೆಗಳು ನಡೆದಿವೆ ಎಂಬುದನ್ನು ಗುರುತಿಸಿದೆ. ಅದರಲ್ಲೂ ಯಾವ ಸಾಮಾಜಿಕ ವರ್ಗ ಭಾಷಾಮಿಶ್ರಣಕ್ಕೆ ಹೆಚ್ಚಾಗಿ ತೆರೆದುಕೊಳ್ಳುತ್ತದೆ ಹಾಗೂ ಇಂತಹ ಮಿಶ್ರಣಗಳ ಶೈಲಿಯ ಬಳಕೆಯಿಂದ ಧಾರಾವಾಹಿಗಳಲ್ಲಿ ಹೆಚ್ಚು ಸಾಮಾಜಿಕ

ಸಂವಹನ ಆಗುತ್ತಿದೆಯೇ ಎಂಬುದನ್ನು ಚರ್ಚಿಸಲಾಗಿದೆ. ಜೊತೆಗೆ ಭಾಷಾಮಿಶ್ರಣದ ಹಲವು ಆಯಾಮಗಳಾದ ನುಡಿಬೆರಕೆ, ಸ್ವೀಕರಣ, ನುಡಿಪಲ್ಲಟಗಳೆಂದರೇನು? ಪರಸ್ಪರ ಇವುಗಳೊಳಗಿನ ವ್ಯತ್ಯಾಸಗಳೇನು? ಭಾಷಾ ಮಿಶ್ರಣದ ರಚನಾತ್ಮಕ ಲಕ್ಷಣಗಳೇನು ಮತ್ತು ಭಾಷಾಮಿಶ್ರಣದ ವಿವಿಧ ಆಯಾಮಗಳು ಧಾರಾವಾಹಿಗಳಲ್ಲಿ ಹೇಗೆ ಮೂಡಿ ಬಂದಿವೆ ಎಂಬುದನ್ನು ನಿದರ್ಶನ ಸಹಿತ ವಿಶ್ಲೇಷಿಸಲಾಗಿದೆ.[೬]

ಮಹಾಪ್ರಬಂಧಕ್ಕೆ ಇಪ್ಪತ್ತಕ್ಕೂ ಹೆಚ್ಚು ಧಾರಾವಾಹಿಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಈಗಾಗಲೇ ಆಯ್ಕೆ ಮಾಡಿಕೊಳ್ಳಲಾದ ವಿಭಾಗ ಕ್ರಮದಲ್ಲಿ ಮೊದಲಿಗೆ ಕೌಟುಂಬಿಕ ಧಾರಾವಾಹಿಗಳಾದ ಮಹಾಪರ್ವ, ಅರಗಿಣಿ, ಅಮೃತವರ್ಷಿಣಿ, ಮದರಂಗಿ, ಮಾಯಾಮೃಗ, ನಾಕುತಂತಿ, ಅಳಗುಳಿ ಮನೆ, ಸಾಧನೆ, ತಕದಿಮಿತಾ, ಲಕ್ಷ್ಮೀ ಬಾರಮ್ಮ, ಅಕ್ಕ, ಪ್ರೀತಿಪ್ರೇಮ, ಜೋಕಾಲಿ, ಬದುಕು ಇತ್ಯಾದಿ ಧಾರಾವಾಹಿಗಳ ಈ ಧಾರಾವಾಹಿಗಳು ಅನ್ಯಭಾಷೆಯ ಪ್ರಭಾವಕ್ಕೆ ಒಳಗಾದವುಗಳೇ ಆಗಿವೆ. ಈ ಧಾರಾವಾಹಿಗಳಲ್ಲಿ ಇಂಗ್ಲೀಷ್ ಭಾಷೆಯ ಮಿಶ್ರಣ ಹೆಚ್ಚಾಗಿದೆ. ಅಲ್ಲದೇ ಹಿಂದಿ, ಸಂಸ್ಕೃತ ಭಾಷೆಗಳು ಕನ್ನಡ ಭಾಷೆಯ ಸ್ವರೂಪಕ್ಕೆ ತಕ್ಕಂತೆ ನುಡಿಬೆರಕೆಯಾಗಿರುವುದು ಈ ಧಾರಾವಾಹಿಗಳಲ್ಲಿ ಹೆಚ್ಚಾಗಿರುವುದು ಸಾಮಾನ್ಯವಾಗಿದೆ.

ಪ್ರಾದೇಶಿಕ ಧಾರಾವಾಹಿಗಳಾದ ಮಲೆಗಳಲ್ಲಿ ಮದುಮಗಳು, ಗುಡ್ಡದ ಭೂತ, ಗೃಹಭಂಗ, ಕಥೆಗಾರ ಇತ್ಯಾದಿಗಳು. ಪ್ರಾದೇಶಿಕ ಭಾಷೆಯ ಬಳಕೆಯನ್ನಷ್ಟೇ ಹೊಂದಿವೆ. ಈ ಧಾರಾವಾಹಿಗಳಲ್ಲಿ ಅನ್ಯಭಾಷೆ ಪದಗಳು ಬಳಕೆಯಾಗಿರುವುದು ವಿರಳ. ಈ ಧಾರಾವಾಹಿಗಳಲ್ಲಿ ಸಾಂದರ್ಭಿಕವಾಗಿ ಮಾತ್ರ ಅನ್ಯಭಾಷಾ ಮಿಶ್ರಣವಾಗಿರುವುದನ್ನು ಈ ಪ್ರಾದೇಶಿಕ ಧಾರಾವಾಹಿಗಳ ಮುಖೇನ ತಿಳಿಯಬಹುದಾಗಿದೆ.

ಹಾಸ್ಯ ಧಾರಾವಾಹಿಗಳಾದ ಪಾರ್ವತಿ ಪರಮೇಶ್ವರ, ಪಂಚರಂಗಿ ಪೊಂ ಪೊಂ, ಪಾಂಡುರಂಗ ವಿಠಲ ಹಾಗೂ ಸಿಲ್ಲಿ ಲಲ್ಲಿ ಎಂಬ ಧಾರಾವಾಹಿಗಳಲ್ಲಿ ಹೆಚ್ಚಾಗಿ ಅನ್ಯಭಾಷಾ ಬಳಕೆಯಾಗುತ್ತಿದೆ. ನುಡಿಬೆರಕೆ–ನುಡಿಸ್ವೀಕರಣ ಹಾಗೂ ನುಡಿಜಿಗಿತಕ್ಕೆ ಕಾರಣವಾಗುತ್ತಿರುವುದು ಹಾಸ್ಯದ ಮುಖೇನಾ ನಗೆ ಉಕ್ಕಿಸುವುದೇ ಪ್ರಮುಖ ಉದ್ದೇಶವಾಗಿದೆ. ಇಲ್ಲಿ ನಡೆಯುವ ಈ ಕ್ರಿಯೆಯು ಯಾವ ಸ್ವರೂಪದ್ದು ಎಂಬುದನ್ನು ಉದಾಹರಣೆ ಸಹಿತ ವಿವರಿಸಲಾಗಿದೆ.

ಚಾರಿತ್ರಿಕ/ಐತಿಹಾಸಿಕ ಧಾರಾವಾಹಿಗಳಾದ ಸೀತೆ, ಕೆಳದಿ ಚೆನ್ನಮ್ಮ, ಶ್ರೀನಿವಾಸ ಕಲ್ಯಾಣ, ಸಂತಪ್ತ ಇತ್ಯಾದಿ ಧಾರಾವಾಹಿಗಳಲ್ಲಿ ಹೆಚ್ಚು ಸಂಸ್ಕೃತ ಭಾಷೆಯ ಪದಗಳು ಬಳಕೆಯಾಗುತ್ತವೆ. ಈ ಧಾರಾವಾಹಿಗಳಲ್ಲಿಯೂ ನುಡಿಬೆರಕೆ ನುಡಿಜಗಿತದ ಪ್ರಮಾಣ ಎಂಥದ್ದು ಎಂಬುದನ್ನು ನಿದರ್ಶನಸಹಿತ ವಿವರಿಸಲಾಗಿದೆ. ಅಲ್ಲದೇ ಇಲ್ಲಿ ಹೆಚ್ಚಾಗಿ ನುಡಿಸ್ವೀಕರಣವೇ ಆಗಿದೆ. ಸಂಸ್ಕೃತ ಭಾಷೆ ಹೊರತಾಗಿ ಬೇರೆ ಭಾಷೆಯ ಬಳಕೆ ವಿರಳವಾಗಿರುವುದರಿಂದ ಧಾರಾವಾಹಿಗಳಲ್ಲಿ

ನುಡಿಬೆರಕೆ ನುಡಿ ಜಿಗಿತವಾಗುವುದು ವಿರಳವೆಂದು ತಿಳಿಯಲಾಗಿದೆ. ಅಲ್ಲದೆ ನಿದರ್ಶನಸಹಿತ ವಿವರಿಸುವ ಪ್ರಯತ್ನ ಮಾಡಲಾಗಿದೆ.

ಅನ್ಯಭಾಷೆಗೆ ತೆರೆದುಕೊಳ್ಳುವ, ಕಲಿಯುವ ಮತ್ತು ಬಳಸುವ ಅವಕಾಶಗಳು ಕೇವಲ ಕೌಟುಂಬಿಕ ಮತ್ತು ಹಾಸ್ಯ ಧಾರಾವಾಹಿಗಳಿಗೆ ಮಾತ್ರ ಸೀಮಿತ ಎಂಬುದನ್ನು ಈ ಮೇಲೆ ತಿಳಿಸಿರುವ ಧಾರಾವಾಹಿಗಳು ಪ್ರತಿನಿಧಿಸಿದರೆ, ಪ್ರಾದೇಶಿಕ ಮತ್ತು ಚಾರಿತ್ರಿಕ ಧಾರಾವಾಹಿಗಳಲ್ಲಿ ಸಾಂದರ್ಭಿಕವಾಗಿ ಅನ್ಯಭಾಷೆ ಬಳಕೆಯಾಗುವುದರಿಂದ ಭಾಷಾ ಮಿಶ್ರಣದ ಪ್ರಕ್ರಿಯೆಯು ಕೇವಲ ಸಂಸ್ಕೃತಭೂಯಿಷ್ಟವಾದ ಕನ್ನಡದೊಡನೆ ಆಗುತ್ತದೆ. ಅದರಲ್ಲೂ ಮೇಲ್ವರ್ಗಕ್ಕೆ ಸೇರಿದ ಪಾತ್ರಗಳು ಇವನ್ನು ಪ್ರತಿನಿಧಿಸುತ್ತವೆ. ಮಧ್ಯಮವರ್ಗ ಹಾಗೂ ಕೆಳವರ್ಗದ ಪಾತ್ರಗಳು ಹೆಚ್ಚಾಗಿ ಆಡು ನುಡಿಯನ್ನು ಬಳಕೆ ಮಾಡುತ್ತಿವೆ. ಈ ಎರಡು ವರ್ಗಗಳು ನುಡಿಬೆರಕೆ ಮತ್ತು ನುಡಿ ಜಿಗಿತಕ್ಕೆ ಕಾರಣವಾಗದೆ ಇರುವುದನ್ನು ನಿದರ್ಶನಸಹಿತ ವಿಶ್ಲೇಷಿಸಲಾಗಿದೆ.

ಈ ಮೇಲ್ಕಂಡ ಧಾರಾವಾಹಿಗಳಲ್ಲಿ ನುಡಿಬೆರಕೆ ನುಡಿಜಿಗಿತಕ್ಕೆ ಕಾರಣವಾಗುವ ಅಂಶಗಳನ್ನು ವರ್ಗಾಧಾರಿತವಾಗಿ ಗುರುತಿಸಲಾಗಿದೆ. ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ಆಡಳಿತಾತ್ಮಕ ವ್ಯಾವಹಾರಿಕ, ಶೈಕ್ಷಣಿಕ ಹಾಗೂ ಲಿಂಗಾಧಾರಿತವಾಗಿ ಹೇಗೆ ನುಡಿಬೆರಕೆ ನುಡಿಜಿಗಿತಕ್ಕೆ ಕಾರಣವಾಗುತ್ತವೆ ಎಂಬುದನ್ನು ಗುರುತಿಸಲಾಗಿದೆ. ಅಲ್ಲದೆ ನಿದರ್ಶನಸಹಿತ ವಿಶ್ಲೇಷಿಸಿಕೊಳ್ಳುವ ಪ್ರಯತ್ನ ಮಾಡಲಾಗಿದೆ. ಈ ಹಿನ್ನೆಲೆಯಲ್ಲಿ ಸಾಂದರ್ಭಿಕ ಪಾತ್ರಗಳ ಮುಖೇನ ಪ್ರಮಾಣೀಕರಣ ಕನ್ನಡ ಹಾಗೂ ಒಳನುಡಿಗಳ ಬಳಕೆಯಲ್ಲಿ ಆಗುವ ಪಲ್ಲಟಗಳನ್ನು ಗುರುತಿಸಿಕೊಳ್ಳಲಾಗಿದೆ. ಹೆಚ್ಚಾಗಿ ಪ್ರಮಾಣೀಕರಣ ಕನ್ನಡ ಬಳಕೆಯನ್ನು ಬಳಸುವ ಸಂದರ್ಭದಲ್ಲಿ ನುಡಿಬೆರಕೆ ನುಡಿ ಜಿಗಿತಕ್ಕೆ ಕಾರಣವಾಗುತ್ತದೆ. ಇಲ್ಲಿ ಪ್ರಮುಖವಾಗಿ ಗಮನಿಸಬೇಕಾದ ಸಂಗತಿ ಏನೆಂದರೆ ಪ್ರಮಾಣೀಕರಣ ಕನ್ನಡವನ್ನು ಶಿಕ್ಷಣ ಕಲಿತ ನಗರವಾಸಿಗಳು ಹೆಚ್ಚಾಗಿ ಬಳಸುತ್ತಾರೆ. ಮಧ್ಯಮ ವರ್ಗಕ್ಕೆ ಸೇರಿದ ವರ್ಗಗಳು ಬಳಸುವ ಭಾಷೆಯಲ್ಲಿ ಇದು ವಿಶಿಷ್ಟವಾದ ಸ್ವರೂಪವನ್ನು ಪಡೆದುಕೊಳ್ಳುತ್ತದೆ. ಕಾರಣ ದಿನನಿತ್ಯ ವ್ಯವಹಾರದಲ್ಲಿ ಇಂಗ್ಲೀಷ್ ಭಾಷಾಬಳಕೆ ಅನಿವಾರ್ಯತೆಯನ್ನು ಸೃಷ್ಟಿಸಿರುವುದರಿಂದ ಇಲ್ಲಿ ವರ್ಗಧಾರಿತವಾಗಿ ಕೆಲವು ಸಂದರ್ಭಗಳಲ್ಲಿ ಈ ಪ್ರಕ್ರಿಯೆಯು ನಡೆಯುತ್ತದೆ.

ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಚರ್ಚಿಸುವ ಮೊದಲು ನುಡಿಬೆರಕೆ ನುಡಿಜಿಗಿತವೆಂದರೇನು ಎಂಬುದನ್ನು ಸಂಕ್ಷಿಪ್ತವಾಗಿ ತಿಳಿಯುವುದು ಸೂಕ್ತವೆನಿಸುತ್ತದೆ.

೫.೧. ನುಡಿಬೆರಕೆ

"ಎರಡು ಸ್ವತಂತ್ರ ಭಾಷೆಗಳ ನಡುವೆ ಹಾಗೂ ಎರಡು ಬೇರೆ ಬೇರೆ ಉಪಭಾಷೆಗಳ ನಡುವೆ ನಡೆಯುವ ಶಬ್ದ ಸ್ವೀಕಾರ ಮತ್ತು ಶಬ್ದ ಸ್ವೀಕೃತ ಪ್ರಕ್ರಿಯೆಗೆ ಭಾಷಾ ಸ್ವೀಕರಣ ಎಂದು

ಕರೆಯುತ್ತಾರೆ. ಈ ಬಗೆಯ ಭಾಷಾಸ್ವೀಕರಣದಲ್ಲಿ ಶಬ್ದಗಳನ್ನು ಕೊಡುವ ಭಾಷೆಯನ್ನು 'ಕೊಡುಗೆ' ಭಾಷೆಯೆಂದು ಸ್ವೀಕರಿಸುವ ಭಾಷೆಯನ್ನು 'ಪಡೆಯುವ' ಭಾಷೆಯೆಂದೂ ಕರೆಯಲಾಗುತ್ತದೆ. ಕೊಡುವ ಭಾಷೆಯಿಂದ ಪಡೆಯುವ ಭಾಷೆಗೆ ಬರುವ ಶಬ್ದಗಳು ಪಡೆಯುವ ಭಾಷೆಯ ಮೇಲೆ ಸಾಕಷ್ಟು ಪ್ರಭಾವವನ್ನು ಬೀರುತ್ತವೆ. ಭಾಷಾ ಸ್ವೀಕರಣದಲ್ಲಿ ಶಬ್ದಗಳು ಭಾಷೆಯಿಂದ ಭಾಷೆಗೆ ಅಥವಾ ಉಪಭಾಷೆಯಿಂದ ಉಪಭಾಷೆಗೆ ಯಾವ ವ್ಯತ್ಯಾಸವನ್ನು ಹೊಂದಿರುತ್ತದೆ. ಯಥಾವತ್ತಾಗಿಯೇ ಬಂದು ಸೇರಬಹುದು ಅಥವಾ ಅವರ ಶಬ್ದಗಳಿಗೆ ಸಂವಾದಿಯಾಗಿ ನಮ್ಮ ಶಬ್ದಗಳನ್ನು ಬಳಸಿಕೊಳ್ಳಬಹುದು. ಅಲ್ಲದೆ ಶಬ್ದಗಳ ಅರ್ಧಭಾಗವನ್ನು ಸ್ವೀಕರಿಸಿ, ಉಳಿದರ್ಧ ಭಾಗವನ್ನು ಪಡೆಯುವ ಭಾಷೆಯಿಂದಲೇ ಪೂರೈಸಿಕೊಳ್ಳಬಹುದು."

ಹೀಗೆ ಯಾವುದಾದರೂ ಎರಡು ಭಾಷೆ ಅಥವಾ ಒಂದೇ ಭಾಷೆಯ ಎರಡು ಉಪಭಾಷೆಗಳ ನಡುವೆ ನಡೆಯುವ ಶಬ್ದಗಳ ವ್ಯಾಕರಣಾಂಶಗಳ ಕೊಡುಕೊಳೆಯನ್ನು ಸ್ವೀಕರಣ ಎಂದು ಕರೆಯುವರು. ಆದರೆ ನುಡಿಬೆರಕೆ ಇದಕ್ಕಿಂತಲೂ ಸ್ವಲ್ಪ ಭಿನ್ನ ಪ್ರಕ್ರಿಯೆ. ಒಂದು ಭಾಷೆಯ ಪದ ಮತ್ತು ವಾಕ್ಯಗಳನ್ನು ಆಡುವ, ಪ್ರತಿಕ್ರಿಯಿಸುವ ಸಂದರ್ಭಗಳಲ್ಲಿ ಬೇರೆ ಭಾಷೆಯ ಪದಗಳನ್ನು ಸೇರಿಸುವ ಒಂದು ಪ್ರಕ್ರಿಯೆಯನ್ನು ನುಡಿಬೆರಕೆ ಎಂದು ಕರೆಯುತ್ತೇವೆ. ಇದನ್ನು ಆಯ್ಕೆ ಮಾಡಿಕೊಂಡ ಧಾರಾವಾಹಿಗಳಿಂದ ಉದಾಹರಿಸುವುದಾದರೆ,

ಕೌಟುಂಬಿಕ ಧಾರಾವಾಹಿಗಳಲ್ಲಿ ನುಡಿಬೆರಕೆ

ಸಿದ್ಧಾರ್ಥ: 'This to mutch pooja ನಮ್ Relationship ಬಗ್ಗೆ ಎಲ್ಲಿ ಯಾವಾಗ ಹೇಳಬೇಕು ಅಂತ ನನಗೆ ಚೆನ್ನಾಗಿ ಗೊತ್ತಿದೆ'(ಅರಗಿಣಿ ಧಾರಾವಾಹಿ).

ಸಹೊದ್ಯೋಗಿ : 'ನನ್ ಫ್ರೆಂಡ್ಸ್ ಇನ್ನು ಗಾಸಿಪ್ ಹೇಳೋದು ಬಾಕಿ ಇತ್ತು' (ಅರಗಿಣಿ ಧಾರಾವಾಹಿ)

ಶಕುಂತಲಾ ದೇಸಾಯಿ: 'ವಿಜಯ್ ಮೇನ್ ಗೇಟ್‌ನಲ್ಲಿರೊ ಸಿ.ಸಿ.ಕ್ಯಾಮರಾದಲ್ಲಿ ಎಲ್ಲಾ ರೆಕಾರ್ಡ್ ಆಗಿದೆಯಾ ಅಂತ ನೋಡು'(ಅಮೃತವರ್ಷಿಣಿ).

ಯಶೋಧ: 'ಇಲ್ಲ ಪೊಲೀಸಪ್ಪ ಇವ್ರೆಲ್ಲ ಸುಳ್ಳು ಹೇಳಿ ತಪ್ಪಿಸಿಕೊಳ್ಳೋಕೆ ಪ್ರಯತ್ನ ಮಾಡ್ತಿದ್ದಾರೆ' ನೀವ್ ಇವ್ರು ಮಾತ್ ಕೇಳಿ ಇಲ್ಲೇ ಇದ್ರೆ ನಿಮ್ಗೆ ಮಂಕು ಬೂದಿ ಎರ್ಚಿ ಬಿಡ್ತಾರೆ. ಮೊದ್ಲು ಇವ್ರಗೆ ಸ್ಟೇಷನ್‌ಗೆ ಕರೆದುಕೊಂಡು ಹೋಗಿ'(ಅಮೃತವರ್ಷಿಣಿ).

ಅಮೃತ: 'ಟಿ.ವಿ. ಸೌಂಡ್ ಬರ್ತಿದೆ'(ಅಮೃತವರ್ಷಿಣಿ)

ಕಾವೇರಿ: ಉಪ ಜಿಲ್ಲಾಧಿಕಾರಿ ಈಕೆ ಬಂದಾಗ ತನ್ನ ಕೆಳಹಂತದ ಅಧಿಕಾರಿಗಳು 'ಗುಡ್ ಮಾರ್ನಿಂಗ್' ಎಂದು ಗೌರವಿಸುತ್ತಾ ಶುಭ ಕೋರುತ್ತಾರೆ. ಎಲ್ಲವೂ 'ರೆಡಿಯಾಗಿದೆ' ನಿಮ್ಮ

ಬರುವಿಕೆಯೊಂದೇ ಬಾಕಿ ಇತ್ತು ಎಂದು ತಾಲ್ಲೂಕು ವೈದ್ಯಾಧಿಕಾರಿಗಳು ಪ್ರತಿಕ್ರಿಯಿಸುತ್ತಾರೆ.(ಪಲ್ಸ್ ಪೋಲಿಯೋ ಲಸಿಕೆ ಹಾಕುವ ಸಂದರ್ಭ) (ಬಂಗಾರ).

ವೈದ್ಯಾಧಿಕಾರಿ: 'Thank mam'(ಬಂಗಾರ).

ಕಾವೇರಿ: 'Its my Duty'(ಬಂಗಾರ).

ಸೌಪಾನಿಕ: 'ಅಲ್ಲ ಯಾರೋ ಮೊಬೈಲ್‌ನ ಮಿಸ್ ಮಾಡಿಕೊಂಡು ಹೋಗಿದ್ದಾರೆ'(ಬಂಗಾರ)

ಸಿದ್ದಾರ್ಥ: 'ಅದು ಮಿಸ್ ಮಾಡಿಕೊಂಡು ಹೋಗಿರೋದಲ್ಲ, ಬೇಕು ಅಂತಾನೆ ಇಟ್ಟಿರೋದು' (ಬಂಗಾರ).

ಸಿದ್ದಾರ್ಥ: 'ಅಲ್ಲೊಂದು ಗ್ಯಾಂಗ್ ನೀವ್ ಬಗ್ಗಿದ ತಕ್ಷಣ ಫೋಟೋ ತೆಗಿಯೋಕೆ ಕಾಯ್ತಾ ಇದ್ದಾರೆ'(ಬಂಗಾರ).

ರ್‍ಯಾಗಿಂಗ್ ವಿದ್ಯಾರ್ಥಿ: 'ಜ್ಯೂನಿಯರ್ ಆಗಿ ಸೀನಿಯರ್ ರೂಲ್ಸ್‌ಗೆ ಬ್ರೇಕ್ ಹಾಕ್ತೀಯಲ್ಲೋ ಎಷ್ಟೋ ಧೈರ್ಯ ನಿನಗೆ'(ಬಂಗಾರ)

ಸೌಪಾನಿಕ: 'ತೆಗೀರಿ ಕೈನಾ ತಪ್ಪು ಮಾಡಿರೊದು ನೀವು ಅದನ್ನ ತಡೆಯೋದಕ್ಕೆ, ಕೇಳೋದಕ್ಕೆ ಬಂದೋರ್ನ ಅವ್ರ ಮೇಲೆ ಕೈ ಮಾಡ್ತಾ ಇದೀರಾ ಇದು ಸರಿಯಲ್ಲ. ಸೀನಿಯರ್ಸ್ ಅದ್ರೆ ಏನಂತೆ ನಿಮ್ಗೆ ಎರಡು ಕೊಂಬು ಇದೆಯಾ ಕಾಲೇಜ್‌ನಲ್ಲಿ ರ್‍ಯಾಗಿಂಗ್ ಬಂದ್ ಆಗಿದೆ. ನೀವ್ ಮಾಡ್ತಿರೋದನ್ನ ಕಂಪ್ಲೇಂಟ್ ಮಾಡಿದರೆ, ಪಿಟ್ಟಿಕೇಸ್ ಹಾಕಿ ಒಳಗಡೆ ಹಾಕಿಸ್ತಾರೆ(ಬಂಗಾರ).

ರ್‍ಯಾಗಿಂಗ್ ವಿದ್ಯಾರ್ಥಿ: 'ಹೇ ಹೇ ಪಾಪು ಸ್ವಾಪು, ಯಾವ್ ಕ್ಲಾಸ್ ನಿಂದು'(ಬಂಗಾರ).

ಸಿದ್ದಾರ್ಥ: 'ಬಿ.ಕಾಂ.ಫಸ್ಟ್ ಈಯರ್'(ಬಂಗಾರ).

ರ್‍ಯಾಗಿಂಗ್ ವಿದ್ಯಾರ್ಥಿ: 'ನನಗೆ ರೂಲ್ಸ್ ಹೇಳ್ತಿದೀಯಾ, ನಿನಗೆ ಕ್ಲಾಸ್‌ನಲ್ಲಿದೆ'(ಬಂಗಾರ).

ರ್‍ಯಾಗಿಂಗ್ ವಿದ್ಯಾರ್ಥಿ: 'ಹೇ ಹೀರೋ ನೀನ್ ಯಾವ ಕ್ಲಾಸಪ್ಪ'(ಬಂಗಾರ)

ಸಿದ್ದಾರ್ಥ: 'ಬಿ.ಕಾಂ. ಫಸ್ಟ್ ಈಯರ್'(ಬಂಗಾರ).

ರ್‍ಯಾಗಿಂಗ್ ವಿದ್ಯಾರ್ಥಿ: 'ಹೋ.... ಹೋ... ಹೊ... ಇಬ್ರೂ ಒಂದೇ ಕ್ಲಾಸು ಹೇ ಕಂದ. ಈ ಹುಡುಗಿನ ಪಟಾಯಿಸೋಕೆ ಅಂತ ಹೀರೋ ತರ ಎಂಟ್ರಿ ಕೊಟ್ಟೇನಪ್ಪ. ಅದು ಫಸ್ಟ್ ಮೀಟಲ್ಲಿ ಇಂಪ್ರೆಸ್ ಮಾಡೋಕೆ ಹೊರ್‍ಟಿದ್ದೀಯಾ? ಅದಕ್ಕೆ ಹೆಣ್ಣು ತಾಯಿ ಅಂತೆಲ್ಲ ಡೈಲಾಗ್ ಹೊಡೀತಾ ಇದ್ದೀಯಾ ಎಂಟ್ರಿಗೆ ಲವ್ ಸ್ಟೋರಿ ಎಕ್ಸಿಟ್‌ಗೆ ಯಾವ ಸ್ಟೋರಿ ಹುಡುಗಿನ ನೋಡಿಕೊಳ್ರಿ ಮಮ್ಮಿ ಡ್ಯಾಡಿ ಸ್ಟೋರೀನಾ(ಬಂಗಾರ).

ಕೈಲಾಸ್: 'ಕಾಲೇಜ್‌ನಲ್ಲಿ ಏನೋ ಸಬ್ಮಿಷನ್ ಇದೆ' ಬರೋಕೆ ಆಗೋಲ್ಲ ಅಂತ ಹೇಳಿದ್ಲು(ಲಕ್ಷ್ಮೀ ಬಾರಮ್ಮ)

ಬಸ್ವ: 'ನನಗೊಂದು 'ಪಿಲಾನ್' ಹೋತದೆ ಮಾವ'(ಲಕ್ಷ್ಮೀ ಬಾರಮ್ಮ)

'ಸುಮ್ನೆ ಯಾಕೆ ಟೆನ್‌ಷನ್ ಮಾಡಿಕೊಳ್ತೀಯಾ'

ನರಸಿಂಹಶಾಸ್ತ್ರೀ: 'ಅದೇನೋ ರಿಜಿಷ್ಟ್ರು ಮದುವೆ ಅಂತ ಮಣ್ಣು ಮಸಿ ಇದೆಯಲ್ಲ ಅದನ್ನ ಮಾಡ್ಬಿಡಿ'(ಮಾಯಾಮೃಗ)

ಮುಖ್ಯಮಂತ್ರಿ ಚಂದ್ರು: 'ನಾನು ಯಾವುದೋ ಇಂಪಾರ್ಟೆಂಟ್ ಫೋನ್‌ಗಾಗಿ ಕಾಯ್ತಾ ಇದೀನಿ. ಆ ಕುಸಿಪುರದ ಎಕ್ಸ್‌ಟೆನ್ಷನ್ ಸೈಟು ಇತ್ಯರ್ಥ ಆಗೋದಿದೆ(ಮಾಯಾಮೃಗ).

ವೈಶಾಲಿ: 'ಬೆಳಿಗ್ಗೆನೆ ಆಫೀಸ್‌ಗೆ ಅಂತ ಹೋದೋಳು ಇನ್ನೂ ಬಂದಿಲ್ಲ'(ಮಾಯಾಮೃಗ).

ಮುಖ್ಯಮಂತ್ರಿ ಚಂದ್ರು: 'ಮತ್ತೆಲ್ಲಿಗೆ ವೆಹಿಕಲ್‌ನಲ್ಲಿ ಹೋಗಿದ್ದಾಳೆ'

ಮುಖ್ಯಮಂತ್ರಿ ಚಂದ್ರು: 'ಗಾಬ್ರಿಯಾಗೋ ಹಾಗೇನು ಇಲ್ಲ, ಸ್ವಲ್ಪ ಲೇಟಾಗುತ್ತೆ ಅಂತ ಅವ್ಳ ಗಂಡನಿಗೆ ಫೋನು ಮಾಡಿ ಹೇಳಿದ್ದಾಳಂತೆ'

ವೈಶಾಲಿ: 'ಅವ್ನು ಕ್ಲಬ್‌ನಲ್ಲಿ ಆ್ಯನಿವರ್ಸರಿ ಇದೆ ಅಂತ ಹೋಗಿದ್ದಾನೆ'

ಮಳಾವಿಕಾ: 'ನಾನು ಅಪ್ಪನ ಮನೇಲಿ ಹತ್ತು ನಿಮಿಷ ಇದ್ದೇ ಅಷ್ಟೆ. ಆಫೀಸಿನಲ್ಲಿ ಕೆಲ್ಸ ಜಾಸ್ತಿ ಇತ್ತು. ಅದಕ್ಕೆ ಲೇಟಾಯ್ತು ಸಾರಿ, ನಿಮ್ಮೆಲ್ಲರಿಗೂ ತೊಂದರೆ ಆಗಿದ್ದಕ್ಕೆ'

ಮಳಾವಿಕಾ: 'ಅತ್ತೆ ಪ್ಲೀಸ್... ಆ ತರಾ ಮಾತಾಡ್ಬೇಡಿ'

ವೈಶಾಲಿ: 'ಅಪ್ಪನ ಮನೆಗೆ ಹೋಗು, ಆದ್ರೆ ಆಫೀಸಲ್ಲಿ ಏನಿತ್ತು?

ಮಳಾವಿಕಾ: 'ಇವತ್ತು ಓವರ್ ಟೈಮ್ ಇತ್ತು. ಇನ್‌ಕಮ್ ಟ್ಯಾಕ್ಸ್ ರಿಟರ್ನ್ ಮಾಡೋದಕ್ಕೆ ಲಾಸ್ಟ್ ಡೇಟ್ ಇತ್ತು'

ಮುಖ್ಯಮಂತ್ರಿ ಚಂದ್ರು: 'I am Sorry ಮಾಳವಿಕಾ.

ಮಳಾವಿಕಾ: ಅಪ್ಪಗೂ ಯಾವುದೋ ಟೆನ್ಷನ್, ವಯಸ್ಸಾಗ್ತ ಬಂತಲ್ಲ'

ಮಳಾವಿಕಾ: 'ಅಮ್ಮ ಹೊದ್ಮೇಲೆ ಸ್ವಲ್ಪ ವೀಕಾಗೆ ಇದ್ದಾರೆ'(ಮಾಯಾಮೃಗ).

ಮೇಘಾ: 'ಸಾರ್ ಏನ್ ಸಾರ್ ಇದು'(ಮದರಂಗಿ)

ಎಂ.ಡಿ.: 'ಡಿಸ್ಮಿಸ್ ಲೆಟರ್'(ಮದರಂಗಿ)

ಮೇಘಾ: 'ನಂಗೊತ್ತು ಸಾರ್, ಯಾಕೆ ಅಂತ ಕೇಳ್ತಾ ಇದ್ದಿನಿ'(ಮದರಂಗಿ)

ಮೇಘಾ: 'ಡಿಸ್ಮಿಸ್ ಮಾಡೋ ಅಂತ ತಪ್ಪು ನಾನೇನು ಮಾಡ್ದೆ ಸಾರ್'(ಮದರಂಗಿ).

ಎಂ.ಡಿ.: 'ಸುಸೈಡ್ ಮಾಡ್ಕೋತೀನಿ ಅನ್ನೋ ವಿಷಯಾನಾ ಏರ್‌ಗೆ ಬಿಟ್ಟದ್ದು'(ಮದರಂಗಿ).

ಮೇಘಾ: 'ಇದಕ್ಕಾಗ್ಲೆ ಕ್ಲಾರಿಫಿಕೇಶನ್ ಕೊಟ್ಟಾಗಿದೆಯಲ್ಲ'(ಮದರಂಗಿ).

ಎಂ.ಡಿ.: 'ನೀವೇನೋ ಕ್ಲಾರಿಫಿಕೇಶನ್ ಕೊಡ್ತೀರಾ'(ಮದರಂಗಿ).

ಮೇಘಾ: 'ಸಾರ್ ಇಂಥ ಪ್ರಾಬ್ಲಮ್ ಆಗ್ಬಾರದು ಅಂತಾನೆ ನಾನೆ ಆ ಹುಡುಗನಿಗೆ ಮೀಟ್ ಮಾಡಿ ಮಾತಾಡ್ತೀನಿ ಅಂತ ಅಂದೆ. ನೀವೇ ಬೇಡಂದ್ರಲ್ಲ ಸಾರ್. ನಿನ್ನೇನೆ ಪರ್ಮಿಷನ್ ಕೊಟ್ಟಿದ್ದಿದ್ರೆ ನಾನು ಇಷ್ಟು ಬೆಳೆಯೋಕೆ ಬಿಡ್ತಾನೆ ಇರ್ಲಿಲ್ವಲ್ಲ ಸಾರ್'(ಮದರಂಗಿ).

ಸ್ವರ: 'ಅವ್ನೆಲ್ಲೆಮ್ಮ ಸಾಯ್ತಾನೆ? ನಮ್ಮನ್ನೆ ಸಾಯಿಸ್ತಾನಷ್ಟೆ. ಅವರಿಗೆ ಫೇಮಸ್ ಆಗೋ ಹುಚ್ಚು. ಅದಕ್ಕೆ ಮೀಡಿಯಾದವ್ರನ್ನ ಯೂಜ್ ಮಾಡಿಕೊಳ್ಳೋಕೆ ಟ್ರೈ ಮಾಡ್ದ ಅಷ್ಟೆ.'(ಮದರಂಗಿ)

ಸ್ವರ: 'ನನ್ನ ಫ್ರೆಂಡ್ಸ್ ಬಂದಿದ್ದು ನಿಜ ಪರೀಕ್ಷಾಗೆ ಡಿಕ್ಕಿ ಹೊಡ್ದದ್ದು ನಿಜ'

ಪರೀಕ್ಷಾ: 'ಹಾಗಾದ್ರಾ ನಾನ್ ಸುಮ್‌ಸುಮ್ನೆ ಬ್ಯಾಂಡೇಜ್ ಹಾಕ್ಕೊಂಡಿದೀನಾ'

ಹರಿಶ್ಚಂದ್ರ ಸೋಡಂಕಿ: 'ಬ್ಯಾಂಡೇಜ್ ಕಟ್ಟು ಮುಂದ ನಾನಾ ಇದ್ನಲ್ಲ'

ಹರಿಶ್ಚಂದ್ರ ಸೋಡಂಕಿ: 'ಈಕಿ ಕೈಗೆ ಬಾರಿ ಏಟು ಆಗ್ಯಾದಾ ನಾಡುದು ಡ್ಯಾನ್ಸ್ ಪರೀಕ್ಷಾ. ಈ ಕೈ ಇಟ್ಕೊಂಡು ಹ್ಯಾಂಗ ಡ್ಯಾನ್ಸ್ ಮಾಡ್ತಾಳಾ, ಯಂಗ ಪರೀಕ್ಷಾ ಬರೀತಾಳ'

ಸತ್ಯವತಿ: 'ಪರಿ ನಿಂದು ನಾಡ್ದ Exame ಅದನಾ'

ಪರೀಕ್ಷಾ: 'ಹೂಂ ಅದಕ್ಕಾ ಇವ್ನು ಇವ್ನ ಫ್ರೆಂಡ್ಸ್ ಸೇರಿಕೊಂಡು ಕೈ ಮುರಿದದ್ದು.'(ಮಂದರಂಗಿ)

ತಾಂಡವಮೂರ್ತಿ ಪಿ.ಎ.: 'ಸಾರ್ ಇನ್ಸ್‌ಪೆಕ್ಟರ್ ಸುದರ್ಶನ್ ನಾಯಕ್ ಅವರು ಬಂದು ವೆಯಿಟ್ ಮಾಡ್ತಾ ಇದರಂತೆ. ನಿಮ್ಮನ್ನ ಬೇಟಿ ಮಾಡ್ತಾರಂತೆ'(ಮಹಾಪರ್ವ).

'ಸಾರ್ ಆ ಸುದರ್ಶನ್ ನಾಯಕ್ ತುಂಬಾ ಕ್ರಿಮಿನಲ್ ಮನುಷ್ಯ.'

'ರುದ್ರಾಕ್ಷಿ ಪುರದಲ್ಲಿ ಇರುವಾಗ ನಾನು ಸಿಟ್ಟಿಂಗ್ ಎಂ.ಎಲ್.ಎ. ಆದ್ರೂ ಕೂಡ ನನ್ನನ್ನ ಅರೆಸ್ಟ್ ಮಾಡೋಕೆ ನೋಡ್ದಾ ಸಾರ್. ಹೇಗೋ ಮಾಡಿ ಬಿಡಿಸಿಕೊಂಡೆ ಸಾರ್. ಸಾರ್ ಅವ್ನು ಶಾನೆ ಕ್ರಿಮಿನಲ್ಲು ಸಾರ್. ತಾಂಡವಮೂರ್ತಿ ಆ ಬೆಟ್ಟಾಣಿ ಮರ್ಡರ್ ಕೇಸ್ ಅಲ್ವಾ, ತರ್ಲೆ ಅವ್ನು ಸಸ್ಪೆಂಡ್ ಆಗಿದ್ದ. ಈಗ ನನ್ನ ಏರಿಯಾಗೆ ಇನ್ಸ್‌ಪೆಕ್ಟರ್ ಆಗಿ ಬಂದಿದ್ದಾನೆ.'(ಮಹಾಪರ್ವ)

'ಸಾರ್ ಮಿನಿಸ್ಟ್ರುಗಳು ಅಂದ್ರೆ ಕೇರ್ ಇಲ್ಲ ಸಾರ್ ಅವ್ನಿಗೆ'(ಮಹಾಪರ್ವ)

ತಾಂಡವಮೂರ್ತಿ: 'ನನ್ನತ್ರ ಬಾಲ ಬಿಚ್ಚಂಗಿಲ್ಲ. ಬಾಲ ಅಲ್ಲಾಡಿಸಿದ್ರೆ ಬಾಲ ಕಟ್ ಮಾಡ್ಬಿಡ್ತೀನಿ. ತಿರುಗಾ ಡಿಸ್ಮಿಸ್(ಮಹಾಪರ್ವ)

ಈ ಮೇಲಿನ ಮಾತುಗಳೆಲ್ಲಾ ನುಡಿಬೆರಕೆಯಿಂದ ಕೂಡಿವೆ. ಕೌಟುಂಬಿಕ ಧಾರಾವಾಹಿಗಳಲ್ಲಿ ಇಂಗ್ಲೀಷ್ ಭಾಷೆಯನ್ನು ಸ್ವೀಕರಣ ಮಾಡಿಕೊಂಡು ಕನ್ನಡ ಭಾಷೆಯ ಸ್ವರೂಪಕ್ಕೆ ಹೊಂದಿಕೊಳ್ಳುವಂತೆ ಬಳಕೆಯಾಗಿದೆ. ಈಗಾಗಲೇ ಈ ಹಿಂದೆ ಪ್ರಾಚೀನ ಕಾಲದಿಂದಲೂ ಕನ್ನಡ ಸಂಸ್ಕೃತ ಭಾಷೆಯ ಪ್ರಭಾವಕ್ಕೆ ಒಳಗಾಗಿ ಸಂಸ್ಕೃತಭೂಯಿಷ್ಟವಾದ ಕನ್ನಡವನ್ನು ಬಳಸಿಕೊಂಡು ಬರಲಾಗಿದೆ. ಆದರೆ ಬದಲಾದ ಸನ್ನಿವೇಶಕ್ಕೆ ಇಂದು ಕನ್ನಡ ಭಾಷೆ ವಸಾಹತು ಶಾಹಿಗಳು ಭಾರತದಲ್ಲಿ ಆಡಳಿತ ನಡೆಸಿದ್ದರ ಪ್ರಭಾವ ಕಾಲಕ್ರಮೇಣ ಜಾಗತೀಕರಣದಿಂದಾಗಿ ಇಂಗ್ಲೀಷ್ ಭಾಷೆ ಬಳಕೆ ಹೆಚ್ಚಾಯಿತು. ಕೇವಲ ನಗರವಾಸಿಗಳಿಗಷ್ಟೆ ಸೀಮಿತವಾಗಿರದೆ, ಗ್ರಾಮೀಣ ಪ್ರದೇಶದ ವ್ಯಕ್ತಿಗಳ ಮೇಲೆ ತೀವ್ರತರವಾದ ಬದಲಾವಣೆಯನ್ನುಂಟು ಮಾಡಿದೆ. ಅಲ್ಲದೇ ಕನ್ನಡ ಮತ್ತು ಇಂಗ್ಲೀಷ್ ಎರಡು ಪದಗಳನ್ನು ಸೇರಿಸಿಕೊಂಡು ಮಾತನಾಡುವಾಗ ಇಂಗ್ಲೀಷ್ ಮಾತನಾಡುತ್ತಿದ್ದೇವೆ ಎನ್ನಿಸುವುದಿಲ್ಲ. ಅಷ್ಟರ ಮಟ್ಟಿಗೆ ನುಡಿ ಬೆರಕೆಯಾಗಿ ಹೋಗಿದೆ. ಕನ್ನಡ ಭಾಷೆಯ ಜಾಯಮಾನಕ್ಕೆ ಹೊಂದಿಕೊಂಡಿರುವುದನ್ನು ಈ ಮೂಲಕ ಗುರುತಿಸಿಕೊಳ್ಳಲಾಗಿದೆ.

ಹಾಸ್ಯ ಧಾರಾವಾಹಿಗಳಲ್ಲಿ–ಪಂಚರಂಗಿ ಪೊಂ ಪೊಂ

ರೇಣುಕಾ: 'ಇದನ್ನು ಯಾಕ ನನ್ನ ಕೈಗೆ ಕೊಡ್ಲಾಕತ್ತೀರಿ. ಇದನ್ನ ಇಟ್ಟುಕೊಂಡು ನಾ ಡ್ಯಾನ್ಸ್ ಮಾಡ್ಲೀ...? ಇದು ನನಗ ಬ್ಯಾಡ'

ಶೀಲಾ: 'ಇದು ನಿಮ್ಮದಲ್ಲ ಅಂತ ಗೊತ್ತು. ಆದ್ರು ಇದನ್ನು ಇಟ್ಟುಕೊಳ್ಳಿ. ಇದು ನಿಮ್ಮ ಹತ್ರನ ಇದ್ರೆ ಸೇಫ್ ಅಂತ ಕೊಡ್ತಿದ್ದೀನಿ.'

ರೇಣುಕಾ: 'ಕತಿನು ಬಹಳ ಇಂಟ್ರಸ್ಟ್ ಆಗ್ಯಾದ. ಆದ್ರ ಇದನ್ನ ನನ್ನತ್ರ ಕೊಟ್ರ ನಿನಗೇನು ಲಾಭ ಆಗ್ತಾದ?'

ಶೀಲಾ: 'ಬಾಸ್ ನೀವೇಳಿದ ಹಾಗೆ ಆ ಸೀರೆ ವ್ಯಾಪಾರಿ ಹತ್ರ ಆ ಗೆಜ್ಜೆ ಕೊಟ್ಟಿದೀನಿ. ಅವ್ನತ್ರ ಆ ಗೆಜ್ಜೆ ಸೇಫಾಗಿರುತ್ತೆ ಅನ್ನೋ ನಂಬಿಕೆ ನನಗಿದೆ. ನಿಮ್ಗೆ ಯಾವಾಗ ಬೇಕಂತೀರೋ ಆಗ ತಂದುಕೊಡ್ತೀನಿ ಓಕೆ, ಬಾಸ್.'

ಮಂದಾಕಿನಿ: 'ಏಜ್ ಇರುವಾಗ್ಲೆ ಸ್ಟೇಜ್ ಹತ್ತದೆ ಇರೋರು ಏಜ್ ಆದ್ ಮೇಲೆ ಯಾಕ್ರಿ ಸ್ಟೇಜ್ ಹತ್ತುತ್ತೀರಾ'

ಎಂ.ಪಿ.: 'ಸ್ಟೇಜ್ ಹತ್ತೋದಕ್ಕೆ ಇಂಥದ್ದೇ ವಯೋಮಿತಿ ಅಂಥ ಇಲ್ಲ. ಸ್ಟೇಜ್ ಹತ್ತಿದ್ಮೇಲೆ ಇಳಿಯೋದ್ರ ಬಗ್ಗೆ ಗೊತ್ತಿರ್ಬೇಕು ಅಷ್ಟೇ? ಇಲ್ಲ ಅಂದ್ರೆ ಚಕ್ರವ್ಯೂಹದೊಳಗೆ ನುಗ್ಗಿದವರ ಗತಿಯಾಗಿಬಿಡುತ್ತೆ.'

ಎಂ.ಪಿ.: 'ಬಾ ಬೇಡ ಎಂದವರು ಯಾರು? ನೀನು ಬರ್ತೀನಿ ಅಂದ್ರೆ ೨೪ x ೭ ಓಪನ್ ಇರುತ್ತೆ.

ಪಾಂಡುರಂಗ ವಿಠಲ

ಜಾಜಿ: 'ಅಭಿ ನೀವೆಲ್ಲ ಒನ್ ಮಂತ್ ಎಲ್ಲೋ ಹೋಗಿದ್ರಿ ಅಂತ ಅಜ್ಞಾನಿಗಳು ಅಂದ್ರೆ ನಾನ್ ಸುಮ್ನೆ ಇರೋಲ್ಲ.

ಜಾಜಿ: 'ಹೋ... ಡೋಂಟ್ ಟಾಕ್ ಅಭಿ ಈ ರೀತಿ ವೇಷ ಹಾಕೊಂಡ್ಮೇಲೆ ಜೈಲಿಗೆ ಸೇರಿಬಿಟ್ಟಿದ್ದಾರೆ'

ರಂಗಮ್ಮ: ಕಲಕ್ಟ್ ಆಗಿ ಹೇಳಿದೆ ಕಣೆ ರಕಾರವನ್ನು ನಗು ಉಕ್ಕಿಸುವ ಉದ್ದೇಶದಿಂದ ಉಚ್ಚರಿಸುವುದನ್ನು ಬಿಡಿಸಲಾಗಿದೆ('ಕರೆಕ್ಟ್ ಆಗಿ ಹೇಳಿದೆ ಕಣೆ').

ಜಾಜಿ: 'ಅತ್ತೆ ನಿಮ್ಮ ಮಗನಿಗೆ ಸಪೋರ್ಟ್ ಮಾಡೋದು ಬಿಟ್ಟು ಬಿಡಿ'

ರಘುನಾಥ ಶೇಟು: 'ಜಾಜೀತು ಮೇಡಂ ಜಾಜೀತು ಮೇಡಂ'

ಪಾಂಡುರಂಗ: 'ಹೊ ಹೋ ರಾಘುನಾಥ ಶೇಟು ವ್ಹಾಟೀಜ್ ದಿ ಮ್ಯಾಟರ್'

ರಘುನಾಥ ಶೇಟು: 'ನೀವು ಪೋಲಿಸ್‌ಗೆ ಒಡವೆ ಕೊಡ್ತಾವು ರೇಡಿಗೆ ಮಾಡಿಕೊಂಡು ಬಂದವು ಏಕ್ ಹಜಾರ್ ರೆ ಕೊಡ್ತಾವೊ'

ರಘುನಾಥ ಶೇಟು: 'ವ್ಹಾವ್ ವಂಡರ್‌ಫುಲ್, ಬ್ಯೂಟಿಫುಲ್ ಚೆನ್ನಾಗಿ ಪಾಲೀಶ್ ಮಾಡಿದೀರಾ'

ಪಾರ್ವತಿ ಪರಮೇಶ್ವರ

ಸುಬ್ರಹ್ಮಣ್ಯ: 'ವೇದ ಅವ್ರ ನೀವು ಟ್ರೈನಿಂಗ್ ಹೋಗಿದ್ರಲ್ಲ ಅಲ್ಲಿ ನಾನು ನೆನಪ್ತಾಗ್ತಿದ್ನೇನ್ರಿ?'

'ತಮ್ಮಾ ಯಾರಂತ ಗೊತ್ತಾತೇಲೆ! ಅಪ್ಪನ್ನ ಹುಡುಕಕತ್ತೀನಿ ನನ್ನ ಗರ್ಲ್‌ಫ್ರೆಂಡ್ ವೇದ ಅವ್ರುದರಿ, ನಾವಿಬ್ರು ಜಾಸ್ತಿ ಲವ್ ಮಾಡ್ತಿದ್ದೆವು ಆ ಲವ್ ಜಾಸ್ತಿಯಾಗಿ ಮಗು ಆಗೈತಿ'

ನಾಗವಲ್ಲಿ: 'ಎಷ್ಟೇ ಆಗ್ಲಿ ನಮ್ಮ ಕ್ಲೋಸ್ ಫ್ರೆಂಡ್ ಕಣೆ, ದುಃಖಾನ ತೋಡಿಕೊ'

'ನಮ್ಮತ್ತೆ ಅಲ್ಪಾ ಮಾಡ್ರನ್ ಆದ್ರೆ ನಾನೇನು ಮಾಡ್ಲಿ'

'ರೀ ರೀ ಪಾಸ್ಟ್ ಪಾರ್ವಡಲ್ಲಿ ಓಡಿ ಬಂದಿದ್ದೀನಿ. ಪ್ಲಾಶ್ ಬ್ಯಾಕ್‌ಗೆ ಹೋಗರಿ'

ಎ 'ವಾಟ್ಸ್ ಫಿಗರ್, ಸಿಕ್ಸ್ ಬ್ಯುಲೆಟ್ ಟ್ರಿಗರ್ ಎಂದು ಹೇಳುತ್ತಾನೆ.'

ಸಿಲ್ಲಿ ಲಲ್ಲಿ

ಲಲಿತಮ್ಮ: 'ಅಡ್ರೆಸ್ ತೋರಿಸೋ ನೆಪದಲ್ಲಿ ಜೊಲ್ಲು ಸುರಿಸಿಕೊಂಡು ನಿಂತಿದ್ದೀರಾ ನೀವು'

ಸಿಲ್ಲಿ : 'ಡಾಕ್ಟ್ರೇ ನೀವ್ ಯಾಕೆ ಹೀಗೆ?'

ವಿಶಾಲ : 'ಮೇಡಂ ಡಾಕ್ಟ್ರನ್ನ ರಸ್ತೆಯಲ್ಲಿ ಬಯ್ದೆ ಇದ್ದುದೇ ಒಳ್ಳೆಯದಾಯ್ತು' ನಿಮ್ಗೆ ಬರೋ ಸ್ವಲ್ಪ ಓಟು ತಪ್ಪಿ ಹೊಗಿರೋದು.

ರಂಗನಾಥ: 'ಮೇಡಂ ವಿಶಾಲ ಹೇಳೋದು ಒಳ್ಳೇ ಪಾಯಿಂಟೆ. ದೇವರಪೂಜೆ ದೇವಸ್ಥಾನದಲ್ಲಿ ಆಗ್ಬೇಕು, ಗಂಡನ ಪೂಜೆ ಮನೆಯಲ್ಲೇ ಆಗ್ಬೇಕು.

ಗೋವಿಂದ: 'ಡಾಕ್ಟ್ರೇ, ಡಾಕ್ಟ್ರೇ ಪೇಸೆಂಟ್ ಕಡೆಯೋರು ಕ್ಲಿನಿಕ್‌ಗೆ ಬಂದಿದ್ರು'

ಗೋವಿಂದ: 'ಬಹಳ ಕೇಳಿದ್ರ ಇದನ್ನ ಡಾಕ್ಟ್ರಿಗೆ ಕೊಟ್ಟು ಬಿಡಿ ಅಂತ ಕೊಟ್ಟಿದ್ದಾರೆ.'

ಡಾ.ವಿಠಲ್: 'ಲೇಡಿ ಪೇಷಂಟ, ಜೆಂಟ್ಸ್ ಪೇಸೆಂಟೊ?

ಗುಡ್ಡದ ಭೂತ ಪ್ರಾದೇಶಿಕ ಧಾರಾವಾಹಿ

ಡ್ರೈವರ್: 'ಹಿಂದುಗಡೆ ಡಿಕ್ಕಿ ಒಳಗಡೆ'

ಗಿರಿಯಪ್ಪ: 'ಟ್ರಾನ್ಸ್‌ಫೋರ್ಟ್ ಕಂಪನಿಗೆ, ನಮ್ಮ ಲಗೇಜನ್ನು ಲಾರಿಯಲ್ಲಿ ಕಳಿಸಿದ್ದೆವು.'

ಡ್ರೈವರ್: 'ಅಲ್ಲಿ ಟ್ರೈನೊಂದು ಓಡಿಸ್ತಾರೆ, ಏನು ಸ್ಪೀಡ್ ಅಂತೀರಾ'

ಪ್ರಯಾಣಿಕ: 'ಅದಕ್ಕೆ ಆ ರೇಕಾರ್ಡು ಬ್ರೇಕ್ ಮಾಡ್ಬೇಡಿ'

ರತ್ನ: 'ಭೂತವನ್ನು ಪ್ಯಾರಲೈಜ್ ಮಾಡೋಣ ಅಂತ ನೋಡಿದ್ರೆ ಟ್ಯಾಕ್ ಫೈರ್ ಆಯ್ತು'

ಶ್ರೀನಿವಾಸ: 'ಪೊಲೀಸ್ ಕಂಪ್ಲೇಂಟ್ ಕೊಟ್ರೆ ಹ್ಯಾಗೆ'

ರತ್ನ: 'ಏನಂತ ಕಂಪ್ಲೇಂಟ್ ಕೊಡ್ತಿರಾ'

ರತ್ನ: 'ಅದು ಅಲ್ಲದೆ ಕಂಪ್ಲೇಂಟ್ ಯಂಕ್ವೈರಿ ಆಗುತ್ತೆ?

ಶ್ರೀನಿವಾಸ: 'ನಮ್ಮ ಕೆಲ್ಸಕ್ಕೆ ಯಾರ ಸಪೋರ್ಟ್ ಆಗ್ಲಿ, ಸಿಂಪತಿಯಾಗ್ಲಿ ಸಿಗೋದು ಅಸಾಧ್ಯ.'

ಶ್ರೀನಿವಾಸ: 'ನಾವ್ಯಾಕೆ ಬೇರೆ ಊರ್ನಲ್ಲಿ ರ್‍ಯಾಷನಲ್ ಆಗಿ ಸಹಾಯ ಯಾಕ್ ಪಡೀಬಾರ್ದು'

ರತ್ನ: 'ಐಡಿಯಾ ಈಸ್ ಫೈನ್, ಆದ್ರೆ ಅದನ್ನ ಹ್ಯಾಗೆ ಪಡೀತೀರಾ'

ಮಲೆಗಳಲ್ಲಿ ಮದುಮಗಳು

ಕರಿಂಸಾಬು: 'ಏಯ್, ಕಂಬಳಿ ಇಲ್ಲಿ ಬಾ' ನಿನ್ನ ಸಲಾಮ್ ಆಗಿರಲಿ ಎಲ್ಲಿಯೋ ನನ್ನ ಹಣ?

ಕರಿಂಸಾಬು: 'ಲೌಡಿ ಮಗನಿಗೆ ಎಷ್ಟು ದಿಮಾಕು, ಎಷ್ಟು ರೂಪಾಯಿ ಕೊಡಬೇಕು ನನಗೆ, ಅದನ್ನ ಚಿಲ್ಲರೆ ಅನ್ನುತ್ತಾನಲ್ಲ. ಹೆಗ್ಗಡೆಯವರ ಹಾಳು ಮಗ ಅಂತ ದಿಮಾಕು ಅವನಿಗೆ.

ದ್ಯಾವೆಗೌಡ: 'ಪಾದ್ರಿಗಳೇ ಆ ಬಚ್ಚನಿಗೆ ಬೈಸಿಕಲ್ ಬರ್ತಿರೋದನ್ನ ಹೇಳಿದ್ದೆ. ಅಂವ ಇನ್ನೂ ಬಂದಂಗಿಲ್ಲ, ನೀವು ಇಲ್ಲೇ ಇರಿ ನಾನು ಹೋಗಿ ನೋಡಿ ಬರ್ತೇನೆ.

'ಇದು ಎಂತದ್ದೋ ಮಹಾರಾಯ ಪುಳ ಪುಳ ಹೋಳಿತದಲ್ಲ, ಬಿಸೆಕಲ್ಲು''

'ಬಿಸೆಕಲ್ಲಿಗೆ ಎರಡು ಹೋಲುಂಟು ಆದ್ರೆ ಇದಕ್ಕೆ ಎರಡು ಚಕ್ರ ಉಂಟಲ್ಲ ಮರಾಯ'

ದ್ಯಾವೆಗೌಡ: 'ಹೇ ಅದು ಬಿಸೆಕಲ್ಲು ಅಲ್ಲೋ ಅದು ಬೈಸಿಕಲ್ಲು ಅಂತ.'

ಐತ: 'ದ್ಯಾವೈಗೌಡ್ರೆ ನೀವು ಸೈಕಲ್ ಹತ್ತಿ'

ಲುಂಗಿಸಾಬ್: 'ಇವತ್ತು ಗೊತ್ತಾಗ್ತಾದೆಯೋ ಹಣ್ಣುಳ್ಳ ಹೊತ್ತಾದ ರುಚಿ, ಮದುವೆ ಮಾಡಿಸ್ತೀನಿ ಅಂತ ಹೇಳಿ ಹುಡುಗೀನ ಪರಾರಿ ಮಾಡ್ತಿರಲ್ಲ. ಎಂಥ ದಗಲ್‌ಬಾಜಿಗಳು ನೀವು'.

ಪ್ರಾದೇಶಿಕ ಧಾರಾವಾಹಿಗಳಲ್ಲಿ ಅನ್ಯಭಾಷಾ ಬಳಕೆ ವಿರಳವಾಗಿದೆ. ಅಲ್ಲದೆ ಇಂಗ್ಲೀಷ್ ಭಾಷೆಯ ಬಳಕೆ ಕೇವಲ ಕೆಲವು ಮೇಲ್ವರ್ಗದ ಪಾತ್ರಗಳಿಗೆ ಮಾತ್ರ ಸೀಮಿತವಾಗಿದೆ. ನುಡಿಬೆರಕೆ ಮೂಲಕವೇ ಇಂಗ್ಲೀಷ್ ಭಾಷೆ ಬಳಕೆಯಾಗಿರುವುದುರಿಂದ ಇಂಗ್ಲೀಷ್ ಭಾಷೆಯ ಸ್ವರೂಪ ಕನ್ನಡ ಭಾಷೆಯ ಸ್ವರೂಪಕ್ಕೆ ಹೊಂದಿಕೊಂಡಿರುವುದರಿಂದ ನುಡಿ ಬೆರಕೆಗೆ ಕಾರಣವಾಗಿದೆ. ಪ್ರಾದೇಶಿಕ ಧಾರಾವಾಹಿಗಳಲ್ಲಿ ನುಡಿಬೆರಕೆ ಪ್ರಮಾಣ ಕಡಿಮೆ ಆಗಿರುವುದನ್ನು ಈ ಮೇಲಿನ ಉದಾಹರಣೆಗಳ ಮೂಲಕ ಗುರುತಿಸಿಕೊಳ್ಳಲಾಗಿದೆ.

೫.೨. ನುಡಿಜಗಿತ

'ನುಡಿಬೆರಕೆಯಲ್ಲಿ ನೀಡುವ ಮತ್ತು ಪಡೆಯುವ ಭಾಷೆಗಳು ಪರಸ್ಪರ ಅಂತರಾಟಕ್ಕೊಳಗಾಗುತ್ತವೆ(Interaction). ನುಡಿಜಗಿತವಾದರೋ ಆ ಭಾಷೆಗಳು ಒಂದರ ಪಕ್ಕದಲ್ಲೊಂದು ಕೆಲಸ ಮಾಡುತ್ತವೆ. ನುಡಿಬೆರಕೆ ಒಂದು ವಾಕ್ಯದೊಳಗೆ ನಡೆಯುತ್ತದೆ. ನುಡಿಜಗಿತ ವಾಕ್ಯಗಳ ನಡುವೆ ನಡೆಯುತ್ತದೆ. ನುಡಿಜಗಿತ ಸಾಮಾನ್ಯವಾಗಿ ಭಾಷಾ(ಸಾಮಾಜಿಕ) ಸಂದರ್ಭದಲ್ಲಿ ಉಂಟಾದ ಬದಲಾವಣೆಗೆ ಸಂವಾದಿಯಾಗಿ ನಡೆಯುತ್ತದೆ. ನುಡಿಬೆರಕೆಯಾದರೋ ಸಂದರ್ಭ ಬದಲಾಗದಿದ್ದರೂ ನಡೆಯುತ್ತದೆ. ಈ ವ್ಯತಾಸವನ್ನು ಕೆಳಗಿನ ಉದಾಹರಣೆಗಳಿಂದ ಸ್ಪಷ್ಟಪಡಿಸಬಹುದು. ಉದಾ: ಒಬ್ಬ ಕಿರಾಣಿ ಅಂಗಡಿಯ ಮಾಲೀಕ ತನ್ನ ಬಹುತೇಕ ಗ್ರಾಹಕರೊಡನೆ ಕನ್ನಡದಲ್ಲಿ ವ್ಯವಹರಿಸುತ್ತಾನೆಂದು ಇಟ್ಟುಕೊಳ್ಳಿ. ಅದೇ ವ್ಯಕ್ತಿ ಮಲೆಯಾಳಿಯೊಬ್ಬನೊಡನೆ

ಮಲಯಾಳಂನಲ್ಲೂ, ಸಾಮಾನ್ಯವಾಗಿ ಉರ್ದು ಮಾತನಾಡುವ ಮುಸ್ಲಿಂ ಗ್ರಾಹಕರೊಡನೆ ಉರ್ದುವಿನಲ್ಲೂ, ತಪಾಸಣೆಗೆ ಬಂದ ಆದಾಯ ತೆರಿಗೆ ಅಧಿಕಾರಿಯೊಡನೆ ಇಂಗ್ಲೀಷಿನಲ್ಲೂ ಮಾತನಾಡಬಹುದು. ಇದು ನುಡಿಜಿಗಿತ ಅಥವಾ ನುಡಿಪಲ್ಲಟ. ಇದರಲ್ಲಿ ಭಾಷಿಕರು ಬದಲಾದದ್ದರಿಂದ ಸಂದರ್ಭ ಬದಲಾಗಿದೆ. ಇನ್ನೊಂದು ಉದಾಹರಣೆಯನ್ನು ಗಮನಿಸಿ, ಮನೆಗೆಲಸದ ವಿಚಾರಗಳನ್ನು ಕನ್ನಡದಲ್ಲಿ ಮಾತನಾಡಿಕೊಳ್ಳುವ ಅಕ್ಕ-ತಮ್ಮ, ಕಾಲೇಜಿನ ವಿಚಾರಗಳನ್ನು ಮಾತನಾಡುವಾಗ ಇಂಗ್ಲೀಷಿಗೆ ಬದಲಾಗಬಹುದು. ಇದು ನುಡಿಜಿಗಿತವೇ. ಆದರೆ ಇಲ್ಲಿ ಸಂದರ್ಭದ ಬದಲಾವಣೆ, ಮಾತಿನ ವಿಷಯದಲ್ಲಾದ ಬದಲಾವಣೆಯಾಗಿದೆ. ಇನ್ನೊಂದು ಉದಾಹರಣೆಗೆ ಕೊಡುತ್ತೇನೆ. ಪರಸ್ಪರ ಪರಿಚಯವಿರುವ ಅಕ್ಕಪಕ್ಕದ ಮನೆಯಲ್ಲಿ ವಾಸಿಸುವ ವ್ಯಕ್ತಿಗಳು ಕಛೇರಿಯ ಸಂದರ್ಭದಲ್ಲಿ ಭೇಟಿಯಾದಾಗ ಕಛೇರಿ ಮಾತನ್ನು ಇಂಗ್ಲೀಷಿನಲ್ಲೂ, ಯೋಗಕ್ಷೇಮದ ವಿಚಾರಣೆಯನ್ನು ಕನ್ನಡದಲ್ಲೂ ಮಾತನಾಡಬಹುದು. ಇದು ನುಡಿಜಿಗಿತವೇ. ಇಲ್ಲಿಯೂ ವ್ಯವಹಾರದ ವಿಷಯ ಬದಲಾದಾಗ ಭಾಷೆಯೂ ಬದಲಾಗಿದೆ. ನುಡಿಬೆರಕೆಯಲ್ಲಿ ಈ ರೀತಿಯ ಭಾಷಾಸಂದರ್ಭದ ಬದಲಾವಣೆ ಇರಬೇಕಿಲ್ಲ. ಅದೇ ಭಾಷಿಕರು ಅದೇ ವ್ಯವಹಾರ ಅದೇ ಮಾತಿನ ವಿಷಯವನ್ನು ಕುರಿತು ಮಾತನಾಡುತ್ತಿರುವಾಗಲೇ, ಒಂದೇ ವಾಕ್ಯದೊಳಗೇ ಹಲವಾರು ಬಾರಿ ಒಂದು ಭಾಷೆಯಿಂದ ಇನ್ನೊಂದಕ್ಕೆ ಬದಲಾಗುತ್ತ ಮಾತನಾಡುತ್ತಿರುವುದು ನುಡಿಬೆರಕೆಯ ಅತ್ಯಂತ ಮಾಮೂಲಿ ಲಕ್ಷಣ."

ಈ ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಧಾರಾವಾಹಿಗಳಲ್ಲಿ ನುಡಿಜಿಗಿತ ಎಷ್ಟರ ಮಟ್ಟಿಗೆ ಆಗುತ್ತಿದೆ ಎಂಬುದನ್ನು ನಿದರ್ಶನಸಹಿತ ವಿವರಿಸಲಾಗಿದೆ.

ಸುವರ್ಣ ವಾಹಿನಿಯಲ್ಲಿ ದಿನಾಂಕ ೨೩-೮-೧೩ ರಂದು ರಾತ್ರಿ ೭.೩೦ಕ್ಕೆ ಅರಗಿಣಿ ಧಾರಾವಾಹಿಯಲ್ಲಿ ಈ ನುಡಿಜಿಗಿತದ ಸಂದರ್ಭವಿದೆ.

ಧನಲಕ್ಷ್ಮಿ: ಹಲ್ಲೋ ಆಯ್ ಬಾಯ್ ಬಾಯ್ ಅಕ್ಷರಾ, ನೀನು ಸೋ ಇನ್ನೋಸೆಂಟ್, ಅಜ್ಜಿ ಖಾರ ತಿನ್ನದೆ ಇರೋ ಅಷ್ಟು ಇನ್ನೋಸೆಂಟ್ ಏನೂ ಅಲ್ಲ. ಡಿಟೆಕ್ಟಿವ್ ಡಿಂಗು ತರ ಸಿದ್ಧಾರ್ಥ ರೂಂನ ಫುಲ್ ಸರ್ಚಿಂಗ್.

ಅಕ್ಷರಾ: ಅಜ್ಜೀನಾ ಸಿದ್ದಾರ್ಥ್ ರೂಂಲ್ಲಿ ಏನ್ ಮಾಡ್ತಿದ್ದಾರೆ.

ಧನಲಕ್ಷ್ಮಿ: ಹೂ ನೋಸ್, ಅಪ್ರಿಗೆ ಈ ಹೋಮಲ್ಲಿ ಕ್ವಶ್ಚನ್ ಮಾಡೋರು ಯಾರು? ಇದ್ದು ಇಲ್ಲದೆ ಡೆಸ್ಟ್ ಬಿನ್ ತರ ನಾನಿದ್ದೀನಿ.

ಅಕ್ಷರಾ: ಚಿಕ್ಕಮ್ಮ ವಿಷ್ಯಾನ ಎಲ್ಲಿಂದೆಲ್ಲಿಗೋ ತಗೊಂಡು ಹೋಗ್ತಾ ಇದೀರಲ್ಲ. ಅಜ್ಜಿ ಸಿದ್ಧಾರ್ಥ್ ರೂಂಗೆ ಹೆಜ್ಜೇನೆ ಇಡೋಲ್ಲ. ಅಂತದ್ರಲ್ಲಿ ಯಾವುದನ್ನೋ ಹುಡುಕೋಕೇ ಹೋಗ್ತಾ ಇದಾರೆ ಅಂದ್ರೇ.

ಧನಲಕ್ಷ್ಮಿ: ವಿಚ್ ಒನ್ ಅಂದ್ರೆ ವಿಕ್‌ನೆಸ್‌ನ ಸರ್ಚ್ ಮಾಡೋಕೆ ಟ್ರೈಯಿಂಗ್ ಅನ್ಸುತ್ತೆ.

ಅಕ್ಷರಾ: ವಿಕ್‌ನೆಸ್

ಧನಲಕ್ಷ್ಮಿ: ಪೂಜಾ ಸಿಂದ್ಯಾನ ಬಗ್ಗೆ ವಿಕ್‌ನೆಸ್ ಕಲೆಕ್ಟ್ ಮಾಡೋದಕ್ಕೆ ಹೋಗಿದ್ರು ಅನ್ಸುತ್ತೆ.

ಅಕ್ಷರಾ: ಅಯ್ಯೋ ದೇವ್ರೆ, ಅಜ್ಜೀಗೆ ಅನುಮಾನ ಗಟ್ಟಿಯಾಗಿದೆ ಅನ್ಸುತ್ತೆ. ಫ್ಲವರ್ ಬುಕ್ ನಾಟಕ ಬುಕ್‌ಗೆ ಅವರೇ ಸೂತ್ರಧಾರಿ ಅನ್ಸುತ್ತೆ.

ಧನಲಕ್ಷ್ಮಿ: ಹಲ್ಲೊ ಹಾಯ್ ಬಾಯ್ ಬಾಯ್, ಸಿದ್ಧಾರ್ಥ ಅವ್ನ್ ಇಷ್ಟಪಟ್ಟಿರೋ ಗರ್ಲ್‌ಫ್ರೆಂಡ್‌ನ ಚಾಯ್ಸ್ ಮಾಡೋ ಇಂಡಿಪೆಂಡೆನ್ಸ್ ಇಲ್ವಾ? ಹೋ ಮೈ ಗಾಡ್.

ಈ ಮೇಲಿನ ಉದಾಹರಣೆಗಳನ್ನು ಗಮನಿಸಿದಾಗ ಧನಲಕ್ಷ್ಮಿ ಬಟ್ಲರ್ ಇಂಗ್ಲೀಷನ್ನು ತನಗೆ ಹೇಗೆ ಬೇಕೋ ಹಾಗೆ ನಿಯಮವಿಲ್ಲದೇ ಬಳಸುತ್ತಿದ್ದಾಳೆ. ಇದು ಕೂಡ ಒಂದು ರೀತಿ ನುಡಿ ಜಿಗಿತಕ್ಕೆ ಕಾರಣವಾಗಿದೆ. ಅಕ್ಷರಾ ಶಿಕ್ಷಣ ಪಡೆದವಳು. ಧನಲಕ್ಷ್ಮಿ ಮಾತನಾಡುವ ಇಂಗ್ಲೀಷ್ ಅರ್ಥ ಮಾಡಿಕೊಂಡು ಅವಳ ಪ್ರತಿಯೊಂದು ಇಂಗ್ಲೀಷ್ ಪದಕ್ಕೆ ಕನ್ನಡದಲ್ಲಿ ಉತ್ತರಿಸುವ ಮೂಲಕ ಕನ್ನಡದಲ್ಲಿಯೇ ವ್ಯವಹರಿಸುವುದನ್ನು ಗುರುತಿಸಲಾಗಿದೆ. ನುಡಿಜಿಗಿತಕ್ಕೆ ಕಾರಣ ಹೇಗಿದೆಯೋ ಹಾಗೆ ನುಡಿ ಜಿಗಿತವಾಗಿದ್ದಕ್ಕೆ ಉತ್ತರ ಕೊಡುವುದು ಕೂಡ ಅಷ್ಟೇ ಕಷ್ಟದ ಕೆಲಸ. ಇಲ್ಲಿ ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ತಮ್ಮಲ್ಲಿ ಅನುವಾದಿಸಿಕೊಂಡು ಏಕಾಏಕಿ ಬೇರೊಂದು ಭಾಷೆಯನ್ನು ಪಳಗಿಸಿಕೊಂಡು ಉತ್ತರಿಸುವುದು ನುಡಿಜಿಗಿತಕ್ಕೆ ಕಾರಣವಾಗಿದೆ. ಕೇವಲ ಇಲ್ಲಿ ಅನ್ಯಭಾಷಾ ಬಳಕೆಯನ್ನು ಕನ್ನಡ ಭಾಷೆಯ ಸ್ವರೂಪವನ್ನು ಬಿಟ್ಟು ಇಂಗ್ಲೀಷ್ ಭಾಷೆಗೆ ಜಂಪ್ ಆಗುವುದು ಪುನಃ ಕನ್ನಡ ಭಾಷೆಗೆ ಹಿಂದಿರುಗುವುದು ಕೂಡ ನುಡಿ ಜಿಗಿತಕ್ಕೆ ಕಾರಣವಾಗಿದೆ. ಈ ಎರಡು ಪಾತ್ರಗಳು ವಿಶೇಷತೆಯಿಂದ ಕೂಡಿವೆ. ಇದು ನುಡಿಜಿಗಿತದ ಸ್ವರೂಪವಾಗಿದೆ.

ಸಿದ್ಧಾರ್ಥ್: (ಆತುರದಲ್ಲಿ) ಪೂಜಾ ಪೂಜಾ....(ಎಂದು ಕೂಗುತ್ತಾನೆ).

ಪೂಜಾ ಸಿಂಧ್ಯಾ: ಸಿದ್ದಾರ್ಥ್ ಯಾಕ್ ಕೂಗಿಕೋತಾ ಇದಿಯಾ.

ಸಿದ್ಧಾರ್ಥ್: ಮತ್ತೇನು ಮಾಡ್ಲಿ. ನೀನು ಮಾಡೋ ಕೆಲ್ಸಾನೆ ಅಂತದ್ದು. ನಮ್ಮ ಮನೆಗೆ ಫ್ಲವರ್ ಬೊಕ್ಕೆ ಕಳ್ಸಿದೀಯಾ ತಾನೆ. ಫಾರ್ ಮೈ ಲವ್ ಅಂತ ಟ್ಯಾಗ್ ಮಾಡಿ ಕಳ್ಸಿದೀಯಾ?

ಪೂಜಾ ಸಿಂಧ್ಯಾ: ವ್ಹಾಟ್ ಫ್ಲವರ್ ಬೊಕ್ಕೆನಾ?

ಸಿದ್ಧಾರ್ಥ್: ದಿಸ್ ಈಸ್ ಟೂ ಮಚ್ ಪೂಜಾ. ನಮ್ಮ ರಿಲೇಷನ್‌ಶಿಪ್ ಬಗ್ಗೆ ಎಲ್ಲಿ ಯಾವಾಗ ಹೇಳ್‌ಬೇಕು ಅಂತ ನನಗೆ ಚೆನ್ನಾಗಿ ಗೊತ್ತಿದೆ.

ಪೂಜಾ ಸಿಂಧ್ಯಾ: ನೋ ಸಿದ್ದಾರ್ಥ ಫ್ಲವರ್ ಬೊಕ್ಕೆ ಕಳ್ಸಿಲ್ಲ. ನಾನು ಯಾವತ್ತೂ ಮಾಡಿಲ್ಲ. ಯಾವತ್ತೂ ಮಾಡೋದಿಲ್ಲ. ನಾನು ಫ್ಲವರ್ ಬೊಕ್ಕೇನಾ ಕಳ್ಸಿಲ್ಲ ಸಿದ್ದಾರ್ಥ್.

ಸಿದ್ದಾರ್ಥ್: ಇಟ್ಸ್ ಓಕೆ ಲಿವಿಟ್. ನಮ್ ಬಿಜಿನೆಸ್ ನೋಡೋದಕ್ಕೆ ಬೇರೆಗೆಟ್ಸ್ ಬರ್ತಿದ್ದಾರೆ. ಮೀಟಿಂಗ್ ಅರೇಂಜ್ ಮಾಡು.

ಈ ಮೇಲಿನ ಉದಾಹರಣೆಗಳು ಇಂಗ್ಲೀಷ್ ಭಾಷೆಯಿಂದ ಕನ್ನಡಕ್ಕೆ, ಕನ್ನಡ ಭಾಷೆಯಿಂದ ಇಂಗ್ಲೀಷಿಗೆ ನುಡಿಜಿಗಿತವಾಗಿರುವುದನ್ನು ಗುರುತಿಸಿಕೊಳ್ಳಲಾಗಿದೆ. ಸಿದ್ದಾರ್ಥ್ ವಾಕ್ಯದ ಮಧ್ಯದಲ್ಲಿಯೇ ಕೆಲವು ಇಂಗ್ಲೀಷ್ ಪದಗಳನ್ನು ಬಳಸುತ್ತಾನೆ. ಕಾರಣ ಇವರಿಬ್ಬರಿಗೂ ಕನ್ನಡ-ಇಂಗ್ಲೀಷ್ ಭಾಷೆಯ ತಿಳುವಳಿಕೆ ಇರೋದ್ರಿಂದ ಕನ್ನಡ ಮಾತನಾಡುತ್ತಲೇ ಇಂಗ್ಲೀಷ್ ಪದಗಳನ್ನು ಕೆಲವೊಂದು ಸಲ ಇಡೀ ವಾಕ್ಯವಾಗಿ ಪೂರ್ಣಗೊಳಿಸುತ್ತಾರೆ. ಇನ್ನು ಕೆಲವೊಂದನ್ನು ವಾಕ್ಯದ ಮಧ್ಯದಲ್ಲಿ ಪದಗಳನ್ನು ಬಳಸುತ್ತಾರೆ. ಮೇಲ್ವರ್ಗಕ್ಕೆ ಸೇರಿದ ಕುಟುಂಬಗಳಾಗಿದ್ದ ನಗರವಾಸಿ ಗಳಾಗಿರುವುದರಿಂದಲೂ ಹಾಗೂ ದೊಡ್ಡ ಉದ್ದಿಮೆಯಲ್ಲಿರುವ ಕುಟುಂಬದಲ್ಲಿ ಮಾತಿನ ನಡುವೆ ನುಡಿಜಿಗಿತ ಆಗೋದು ಸಾಮಾನ್ಯ ಎಂಬುದನ್ನು ಈ ಉದಾಹರಣೆಗಳು ನಿರೂಪಿಸುತ್ತವೆ.

ದಿನಾಂಕ ೩೧-೫-೧೩ರಂದು ರಾತ್ರಿ ೧೧.೩೦ಗಂಟೆಗೆ ಉದಯ ಟಿ.ವಿ.ಯಲ್ಲಿ ರಾತ್ರಿ ೭.೩೦ಕ್ಕೆ ಬಂಗಾರ ಧಾರಾವಾಹಿಯಲ್ಲಿ ಪ್ರಸಾರವಾದ ನುಡಿ.(ಪೋಲಿಯೋ ಲಸಿಕೆ ಹಾಕುವ ಸಂದರ್ಭ)

ಕಾವೇರಿ: ಉಪಜಿಲ್ಲಾಧಿಕಾರಿಗೆ, ತನ್ನ ಕೆಳಗಿನ ಅಧಿಕಾರಿಗಳು 'ಗುಡ್ ಮಾರ್ನಿಂಗ್' ಎಂದು ಶುಭ ಕೋರುತ್ತಾರೆ. ಎಲ್ಲವು ರೆಡಿಯಾಗಿದೆಯಾ?

ಅಧಿಕಾರಿಗಳು: ನಿಮ್ಮ ಬರುವಿಕೆಯೊಂದೇ ಬಾಕಿ ಇತ್ತು ಎಂದು ತಾಲೂಕು ವೈದ್ಯಾಧಿಕಾರಿಗಳು ಪ್ರತಿಕ್ರಿಯಿಸುತ್ತಾರೆ.

ಕಾವೇರಿ: ಮಕ್ಕಳ ಹೆಸರು ಕೇಳುತ್ತ 'ಗುಡ್ ಗರ್ಲ್' ಕಾವ್ಯ ಎಂದು ಪೋಲಿಯೋ ಹನಿ ಹಾಕುತ್ತಾಳೆ. ಕಾರ್ಯಕ್ರಮ ಉದ್ಘಾಟಿಸಿ ಮುಂದಿನ ಕೆಲಸಕ್ಕೆ ಹೋಗಲು ಸಿದ್ಧರಾಗುತ್ತಾರೆ. ಅಧಿಕಾರಿಗಳು ಮೇಲಧಿಕಾರಿಯಾದ ಉಪ ಜಿಲ್ಲಾಧಿಕಾರಿಗೆ 'ಥ್ಯಾಂಕ್ಯು ಮೇಡಂ' ಎನ್ನುತ್ತಾರೆ. ಅದಕ್ಕೆ ಅವಳು 'ಇಟ್ಸ್ ಮೈ ಡ್ಯೂಟಿ' ಎನ್ನುತ್ತಾಳೆ. ಒಬ್ಬ ಅಧಿಕಾರಿ ಇನ್ನೊಬ್ಬ ಅಧಿಕಾರಿಯೊಂದಿಗೆ ಮಾತನಾಡುವಾಗ ನುಡಿಜಿಗಿತಕ್ಕೆ ಈ ಉದಾಹರಣೆಗಳು ಕಾರಣವಾಗುವುದನ್ನು ಗುರುತಿಸಿ ಕೊಳ್ಳಲಾಗಿದೆ.

ದಿನಾಂಕ ೬-೧೨-೧೩ರಂದು ಸುವರ್ಣವಾಹಿನಿಯ ಪಂಚರಂಗಿ ಪೊಂ ಪೊಂ ಧಾರಾವಾಹಿಯಲ್ಲಿ ಪ್ರಸಾರವಾದ ನುಡಿಜಿಗಿತ.

ಎಂ.ಡಿ: ಏನ್ ಮಂದಾ ಈ ತರ ಮಾತಾಡ್ತೀಯಾ, ನನಗೆ ನವರಸ ಕಲೆಗಳು ಗೊತ್ತು. ಆದ್ರೆ ಅದನ್ನ ಪ್ರದರ್ಶನ ಮಾಡೋಕೆ 'ಕರೆಕ್ಟಾಗಿ ಸ್ಟೇಜ್ ಸಿಗ್ತಾ ಇಲ್ಲ' ಅಷ್ಟೆ.

ಮಂದಾಕಿನಿ: ಏಜ್ ಇರುವಾಗ್ಲೆ ಸ್ಟೇಜ್ ಹತ್ತದೆ ಇರೋರು ಏಜ್ ಆದ್ಮೇಲೆ ಎಕ್ರಿ ಸ್ಟೇಜ್ ಹತ್ತುತ್ತೀರಾ.

ಎಂ.ಪಿ: ಸ್ಟೇಜ್ ಹತ್ತೋದಕ್ಕೆ ಇಂಥದ್ದೇ ವಯೋಮಿತಿ ಅಂಥ ಇಲ್ಲ. ಸ್ಟೇಜ್ ಹತ್ತಿದ್ಮೇಲೆ ಇಳಿಯೋದ್ರ ಬಗ್ಗೆ ಗೊತ್ತಿರ್ಬೇಕು ಅಷ್ಟೇ? ಇಲ್ಲಾ ಅಂದ್ರೆ ಚಕ್ರವ್ಯೂಹದೊಳಗೆ ನುಗ್ಗಿದವರ ಗತಿಯಾಗಿಬಿಡುತ್ತೆ.

ಈ ಮೇಲಿನ ಉದಾಹರಣೆಯಲ್ಲಿ ವಯಸ್ಸಾಗಿರುವ ಎಂ.ಪಿ. ಹಾಗೂ ತರುಣಿಯಾಗಿರುವ ಮಂದಾಕಿನಿಯರ ರಸಿಕತನದ ಮಾತುಗಳು ಹಾಸ್ಯದಿಂದ ಕೂಡಿವೆ. ಇಲ್ಲಿ ವಾಕ್ಯದ ಮಧ್ಯೆ ಇಂಗ್ಲೀಷ್ ಪದಗಳಿಗೆ ಜಿಗಿಯುವ ಪ್ರಕ್ರಿಯೆಯಿದೆ. ಇದು ಒಂದು ರೀತಿಯಾಗಿ ಪರೋಕ್ಷವಾಗಿ ಗುಪ್ತ ವಿಚಾರಗಳನ್ನು ಮಾತನಾಡುವುದಕ್ಕೆ ಬಳಕೆಯಾಗಿದೆ.

ದಿನಾಂಕ ೨೦-೧೧-೧೩ರಂದು ಜೀ ಕನ್ನಡ ವಾಹಿನಿಯಲ್ಲಿ ಪಾಂಡುರಂಗ ವಿಠ್ಠಲ ಧಾರಾವಾಹಿಯಲ್ಲಿ ಈ ಉದಾಹರಣೆಗಳು ನುಡಿಜಗಿತಕ್ಕೆ ಕಾರಣವಾಗಿವೆ.

ಜಾಜಿ: ಹಲೋ ಹೂ ಈಜ್ ದಿಸ್

ರಂಗಮ್ಮ: ಮುಂದೆ ಬಂದು ನೋಡಮ್ಮ ಗೊತ್ತಾಗುತ್ತೆ.

ಜಾಜಿ: ಅಭಿ, ನೀವಾ ವಾಟ್ ಈಜ್ ದಿಸ್ ನಾನ್ಸೆಸ್.

ಸಿಲ್ಲಿ ಲಲ್ಲಿ ಧಾರಾವಾಹಿಯಲ್ಲಿ ನುಡಿಜಗಿತ.

ವಿಠಲ್ ಡಾಕ್ಟರ್: 'ಜಸ್ಟ್ ಎ ಮಿನಿಟ್, ಐ ಯಾಮ್ ವಿಠಲ್ ಡಾಕ್ಟರ್ ವೆರಿ ಫೇಮಸ್ ಇನ್ ಸರ್ಜರಿಯನ್' ಏನೋ ಹುಡುಕ್ತಾ ಇದೀರಾ.

ಶೈಲಾ: ಈ ಅಡ್ರೆಸ್.

ಡಾ.ವಿಠಲ್: ಜಸ್ಟ್ ಎ ಮಿನಿಟ್, ಯುವರ್ ಸ್ವೀಟ್ ನೇಮ್ ಪ್ಲೀಸ್.

ಶೈಲಾ: ನನ್ನ ಹೆಸರು ಶೈಲಾ ಅಂತಾ. ಫೈನಲ್ ಇಯರ್ ಡಿಗ್ರಿ ಓದ್ತಾ ಇದೀನಿ.

ಉದಯವಾಹಿನಿಯ ಮದರಂಗಿ ಧಾರಾವಾಹಿಯಲ್ಲಿ ನುಡಿಜಗಿತ ಬಳಕೆ.

ಮೇಘಾ: ಸರ್ ಏನ್ ಸರ್ ಇದು.

ಎಂ.ಡಿ: ಡಿಸ್ಮಿಸ್ ಲೆಟರ್.

ಮೇಘಾ: ಅದು ನಂಗೊತ್ತು ಸಾರ್. ಯಾಕೆ ಅಂತ ಕೇಳ್ತಾ ಇದೀನಿ.

ಎಂ.ಡಿ: ನೀವ್ ಮಾಡಿರೋ ತಪ್ಪಿಗೆ.

ಮೇಘಾ: ಡಿಸ್ಮಿಸ್ ಮಾಡೋ ಅಂತ ತಪ್ಪು ನಾನೇನು ಮಾಡ್ದೆ ಸಾರ್.

ಎಂ.ಡಿ: ಸುಸೈಡ್ ಮಾಡಿಕೊಳ್ತೀನಿ ಅನ್ನೋ ವಿಷ್ಯಾನ ಏರ್‌ಗೆ ಬಿಟ್ಟದ್ದು.

ಮೇಘಾ: ಇದಕ್ಕಾಗ್ಲೆ ಕ್ಲಾರಿಫಿಕೇಶನ್ ಕೊಟ್ಟಾಯ್ತಲ್ವ

ಎಂ.ಡಿ: ನೀವೇನೋ ಕ್ಲಾರಿಫೀಕೇಶನ್ ಕೊಡ್ತೀರಾ, ಆದ್ರೆ ಆ ಹುಡುಗನ ಕಡೆಯವರು ಬಾಯಿಗೆ ಬಂದಂಗೆಲ್ಲ ಮಾತಾಡೋಗಿದ್ದಾರೆ. ಅವ್ನೇನಾದ್ರು ಸತ್ರೆ ನಾವಿಬ್ಬರು ಕಂಬಿ ಎಣಿಸ್ಬೇಕಾಗುತ್ತೆ.

ಮೇಘಾ: ಸಾರ್, ಇಂಥಾ ಪ್ರಾಬ್ಲಮ್ ಆಗ್ಬಾರ್ದು ಅಂತಾನೇ ನಾನೇ ಆ ಹುಡುಗನಿಗೆ ಮೀಟ್ ಮಾಡಿ ಮಾತಾಡ್ತೀನಿ ಅಂಥ ಅಂದೇ, ನೀವೇ ಬೇಡ ಅಂದ್ರಲ್ಲ ಸಾರ್. ನಿನ್ನೇನೆ ಪರ್ಮಿಷನ್ ಕೊಟ್ಟಿದ್ರೆ ನಾನು ಈ ವಿಷ್ಯಾ ಬೆಳೆಯೋಕೆ ಬಿಡ್ತಾ ಇರ್ಲಿಲ್ಲ ಸಾರ್.

ಎಂ.ಡಿ: ನಾನು ಬೇಡ ಅಂದದ್ದು ನಿಜ. ಆದ್ರೆ ಬೇಡ ಅಂದ ಕೆಲ್ಸಾನಾ ಮಾಡಿ ಬಂದ್ರಂತಲ್ಲ. ನೀವೇ ಅಲ್ಲಿಗೆ ಹೋಗಿ ಕಾಪಾಡಿದ್ರಂತೆ.

ಮೇಘಾ: ಅಲ್ಲ ಸಾರ್, ಆ ಹುಡುಗನ್ನ ಉಳಿಸಿದ್ದು ತಪ್ಪಾ?

ಎಂ.ಡಿ: ಹೌದು.

ಮೇಘಾ: ಅಲ್ಲ ಸಾರ್, ಸುಸೈಡ್ ಮಾಡಿಕೊಂಡಿದ್ದರೆ ಏನೇನು ಅನಾಹುತಾ ಆಗ್ತಿತ್ತು ಅಂತ ನೀವೇ ಯೋಚನೆ ಮಾಡಿ.

ಎಂ.ಡಿ: ಅನಾಹುತಾ ಆಗ್ತಿತ್ತೋ ಇಲ್ಲೋ, ಅದು ಸೆಕೆಂಡ್ರಿ, ಆದ್ರೆ ನೀವ್ ಅಲ್ಲಿಗೆ ಹೋದಾಗ ನಿಮ್ಮೆದುರುಗಡೇನೆ ಸತ್ತಿದ್ರೆ ಏನಾಗ್ತಾ ಇತ್ತು ಅನ್ನೋದನ್ನ ಯೋಚನೆ ಮಾಡಿ. ಅದನ್ನ ತಪ್ಪಿಸೋಕೆ ಅಲ್ಲಿಗೆ ಹೋಗ್ಬೇಡಿ ಅಂತ ಹೇಳಿದ್ದು, ಆದ್ರೆ ನೀವ್ ನನ್ನ ಮಾತ್ ಕೇಳ್ಲಿಲ್ಲ. ನನ್ನ ಮಾತು ಕೇಳ್ದೆ ಇರೋರು ನನ್ನ ಆಫೀಸಲ್ಲಿ ಕೆಲ್ಸ ಮಾಡ್ಬೇಕಾ? ಈ ಚಾನೆಲ್‌ಗೆ ಸಿ.ಒ ನಾನೋ ಅಥವಾ ನೀವೋ.

ಮೇಘ: ಸಾರ್, ನೀವ್ ಹೇಳ್ತಾ ಇರೋದು ಡಿಫರೆಂಟ್ ವಿಷ್ಯ. ನಾನ್ ಹೇಳ್ತಾ ಇರೋದು ಡಿಫರೆಂಟ್ ವಿಷ್ಯ ಸಾರ್.

ಎಂ.ಡಿ: ಎಲ್ಲದಕ್ಕೂ ಲಿಂಕ್ ಇದ್ದೇ ಇರುತ್ತೆ. ನನ್ನ ಮಾತು ಕೇಳ್ದೆ ಇರೋರ್ನ ಚಾನೆಲ್ನಲ್ಲಿ ಇಟ್ಕೊಳ್ಳೋದಿಲ್ಲ. ಈಗ ಅಂಥ ಪರಿಸ್ಥಿತಿ ನಿಮಗೆ ಬಂದಿದೆ ಅಷ್ಟೆ.

ಮೇಘ: ಆದ್ರೆ ಡಿಸ್ಮಿಸ್ ಮಾಡೋ ಅಂತ ತಪ್ಪು ನಾನೇನು ಮಾಡ್ಲಿಲ್ಲ ಸಾರ್. ಆ ಹುಡುಗ ಬದುಕಿರೋದ್ರಿಂದ ಏನೂ ಪ್ರಾಬ್ಲಮ್ ಆಗೋದಿಲ್ಲವಲ್ಲ.

ಎಂ.ಡಿ: ಈ ವಿಷ್ಯದಿಂದ ಪ್ರಾಬ್ಲಮ್ ಆಗ್ದೆ ಇರಬಹುದು. ಆದ್ರೆ ನಿಮ್ಮಿಂದ ತಪ್ಪಾಗೋದಿಲ್ಲ ಅನ್ನೋದಕ್ಕೆ ಏನು ಗ್ಯಾರೆಂಟಿ. ಅಷ್ಟಕ್ಕೂ ನಿಮ್ಮನ್ನ ಕೆಲಸದಿಂದ ತೆಗೆಯಲೇಬೇಕಾದದ್ದು ಆ ಹುಡುಗರ ಕಡೆ ವಾದ. ಅಂಥದೊಂದು ವಿಷ್ಯನ ಏರ್‌ಗೆ ಬಿಡೋರ್‍ನ ಕೆಲಸದಿಂದ ತೆಗೀರಿ. ಇಲ್ಲದಿದ್ರೆ ನಿಮ್ಮ ಸ್ಟೇಷನ್‌ಗೆ ಬೀಗ ಹಾಕ್ತೀವಿ ಅಂಥ ಅದೇ ಹುಡುಗನ ಕಡೆಯವ್ರು ಹೇಳಿದ್ದು. ಇಂಥ ಸಿಚುಯೇಷನ್‌ನಲ್ಲಿ ನಿಮಗಿಂತ ನಮಗೆ ಚಾನೆಲ್ ಉಳಿಯೋದೆ ಮುಖ್ಯ.

ಮೇಘಾ: ಆದ್ರೆ ನಾವ್ಯಾರು ಇಂಪಾರ್ಟೆಂಟ್ ಅಲ್ವಾ ಸಾರ್.

ಎಂ.ಡಿ: ಚಾನೆಲ್ ಇದ್ರೆ ತಾನೇ ನೀವೆಲ್ಲ ಇರೋದಕ್ಕೆ ಸಾಧ್ಯ. ನೋಡಿ ಮೇಘಾ ಅವ್ರೆ ತಪ್ಪು ಮಾಡಿದವರಿಗೆ ಶಿಕ್ಷೆ ಆಗಲೇಬೇಕು. ನೀವು ತಪ್ಪು ಮಾಡಿದೀರಾ. ಅದಕ್ಕೆ ಶಿಕ್ಷೆ ಕೊಟ್ಟಾಗಿದೆ. ಏನೇ ಹೇಳಿದ್ರು ಕೆಲ್ಸಕ್ಕೆ ವಾಪಸ್ಸು ತೆಗೆದುಕೊಳ್ಳೋಕೆ ಆಗಲ್ಲ. ನಿಮ್ಮ ಸೇವೆ ನಮಗೆ ಸಾಕು. ಇಲ್ಲಿಯವರೆಗೂ ನಮ್ಮ ಚಾನೆಲ್ ಒಂದು ಅವಕಾಶ ಕೊಟ್ಟು ನಿಮಗೆ ಒಂದಷ್ಟು ಅಭಿಮಾನಿಗಳು ಸಿಕ್ಕಿದ್ದಾರೆ. ಅದಕ್ಕೆ ನೀವೇ ನಮ್ಮ ಚಾನೆಲ್‌ಗೆ ಋಣಿಯಾಗಿರಬೇಕು. You may go now.

ಈ ಮೇಲಿನ ಸಂಭಾಷಣೆಯಲ್ಲಿ ನುಡಿಜಗಿತಕ್ಕೆ ಕೆಲವು ವಾಕ್ಯದ ಮಧ್ಯೆ ಇಂಗ್ಲೀಷ್ ಪದಗಳು ಕಾರಣವಾದರೆ ಇನ್ನು ಕೆಲವು ಶಬ್ದಗಳಲ್ಲಿ ವಾಕ್ಯಪೂರ್ಣಗೊಳ್ಳುವುದನ್ನ ಈ ಉದಾಹರಣೆ ನಿರೂಪಿಸುತ್ತದೆ. ಅಲ್ಲದೆ ಒಂದು ಆಫೀಸಿನಲ್ಲಿ ಕೆಲಸ ಮಾಡುವ ಮೇಲಧಿಕಾರಿ ಮತ್ತು ಕೆಳ ಅಧಿಕಾರಿಗಳಿಗೆ ಹೆಚ್ಚಾಗಿ ಇಂಗ್ಲೀಷ್ ಪದಗಳನ್ನ ಬಳಸಿಕೊಂಡು ನುಡಿಜಗಿತ ಮಾಡಿ ಮಾತ ನಾಡುವ ಮೂಲಕ ತಮ್ಮ ವಿಶಿಷ್ಟತೆಯನ್ನೋ ಅಥವಾ ಅಧಿಕಾರದ ಗತ್ತನ್ನೋ ಪ್ರದರ್ಶಿಸುವುದು ಕಾರಣವಾಗಿದೆ.

ನುಡಿಜಗಿತ ಕೇವಲ ಕೌಟುಂಬಿಕ ಮತ್ತು ಹಾಸ್ಯ ಧಾರಾವಾಹಿಗಳಿಗೆ ಸೀಮಿತವಾಗಿದೆ. ನುಡಿಬೆರಕೆ ಎಲ್ಲಾ ವರ್ಗಗಳಲ್ಲಿ ಸಹ ನುಡಿಬೆರಕೆಯನ್ನು ಮಾಡುವುದು ಅನಿವಾರ್ಯವಾಗಿದೆ. ಧಾರಾವಾಹಿಯ ಸಂದರ್ಭದಲ್ಲಿ ಇನ್ನೂ ಹೆಚ್ಚಾಗಿಯೇ ಬಳಕೆಯಾಗುತ್ತಿದೆ. ಆಧುನಿಕತೆಯ ಪ್ರಭಾವದಿಂದಾಗಿ ಗ್ರಾಮೀಣ, ನಗರವಾಸಿ, ಅಕ್ಷರಸ್ಥ, ಅನಕ್ಷರಸ್ಥ ಎನ್ನದೇ ಇಂದು ಸಂಸ್ಕೃತ–ಇಂಗ್ಲೀಷ್, ಹಿಂದಿ, ಉರ್ದು ಇತರೆ ಅನ್ಯಭಾಷೆಗಳನ್ನು ನಮಗೆ ಗೊತ್ತಿಲ್ಲದ ಹಾಗೆ ಬಳಸುತ್ತಿದ್ದೇವೆ. ಈ ಪ್ರಕ್ರಿಯೆಯೂ ನುಡಿಬೆರಕೆಗೆ ಕಾರಣವಾಗಿದೆ. ಆದರೆ ನುಡಿಜಗಿತ ಮಾತ್ರ ಒಂದಕ್ಕಿಂತ ಹೆಚ್ಚು ತಿಳುವಳಿಕೆ ಇರುವ ಭಾಷೆಯೊಂದಿಗೆ ನಡೆಯುತ್ತದೆ. ಒಂದೇ ಸಂದರ್ಭದಲ್ಲಿ ವಾಕ್ಯಗಳ ರಚನೆ ಅಥವಾ ಪೂರ್ಣ ವಾಕ್ಯವಾಗಿ ಇನ್ನೊಂದು ಭಾಷೆಯೊಂದನ್ನು ಬಳಸಿಕೊಳ್ಳುವುದು ನುಡಿಜಗಿತಕ್ಕೆ ಕಾರಣವಾಗಿದೆ.

ಇತ್ತೀಚಿನ ದಿನಗಳಲ್ಲಿ ಹೆಚ್ಚಾಗಿ ಮಾಧ್ಯಮಗಳಲ್ಲಿ ನುಡಿಜಿಗಿತ ಹೆಚ್ಚಾಗುತ್ತಿದೆ. ಹಾಗೆಯೇ ನುಡಿಜಿಗಿತ ಧಾರಾವಾಹಿಗಳಲ್ಲಿ ಅಷ್ಟೊಂದು ಬಳಕೆಯಾಗುತ್ತಿಲ್ಲ. ಕೇವಲ ಸಾಂದರ್ಭಿಕವಾಗಿ ಮಾತ್ರ ಕೆಲವು ಪಾತ್ರಗಳಿಗೆ ಸೀಮಿತವಾಗಿದೆ. ನುಡಿಜಿಗಿತ ಶಿಕ್ಷಣ ಕಲಿತ ಅಂದರೆ ಒಂದಕ್ಕಿಂತ ಹೆಚ್ಚು ಭಾಷೆಯ ಬಗ್ಗೆ ಅರಿವಿರುವವರು ಮಾತ್ರ ಮಾತಿನ ಮಧ್ಯೆ ನುಡಿಜಿಗಿತ ಮಾಡುವುದನ್ನು ಕೆಲವು ಉದಾಹರಣೆಗಳು ನಿರೂಪಿಸುತ್ತವೆ.

ಇಂದು ಟಿ.ವಿ. ಮಾಧ್ಯಮ ದೊಡ್ಡದಾಗಿ ಬೆಳೆದಿದೆ. ಕನ್ನಡ ಭಾಷೆಯೊಂದಿಗೆ ಅನ್ಯಭಾಷಾ ಬಳಕೆಯನ್ನು ಪ್ರಯೋಗಿಸುವುದು ಅನಿವಾರ್ಯವಾಗಿದೆ. ಈ ಹಿನ್ನೆಲೆಯಲ್ಲಿ ಧಾರಾವಾಹಿಗಳಲ್ಲಿ ತಕ್ಕಷ್ಟು ಅನ್ಯಭಾಷಾ ಪ್ರಯೋಗವಾಗುತ್ತಿದೆ. ಒಂದು ರೀತಿಯಲ್ಲಿ ಕನ್ನಡ ಭಾಷಾ ಬಳಕೆ ಉಳಿಯುತ್ತಿರುವುದು ಧಾರಾವಾಹಿಗಳಿಂದ ಎಂದರೆ ತಪ್ಪಾಗಲಾರದು. ಹಲವು ವಿದ್ವಾಂಸರು ಮಾಧ್ಯಮಗಳಿಂದ ಕನ್ನಡ ಭಾಷೆಗೆ ಪೆಟ್ಟು ಬೀಳುತ್ತಿದೆ ಎಂಬ ಆತಂಕ ವ್ಯಕ್ತಪಡಿಸಿದ್ದಾರೆ. ಧಾರಾವಾಹಿಗಳು ಕನ್ನಡ ಭಾಷೆಯನ್ನು ಕಟ್ಟಿಕೊಡುವುದನ್ನು ಈ ಅಧ್ಯಯನ ತಿಳಿಯಪಡಿಸುತ್ತದೆ. ಟಿ.ವಿ.ಯಲ್ಲಿ ನೇರವಾಗಿ ನಡೆಯುವ ಕಾರ್ಯಕ್ರಮಗಳಲ್ಲಿ ಹೆಚ್ಚಾಗಿ ಅನ್ಯ ಭಾಷಾ ಬಳಕೆ ಮಾಡುತ್ತಾರೆ. ಉದಾಹರಣೆಗೆ ರಿಯಾಲಿಟಿ ಶೋಗಳಲ್ಲಿ ಮತ್ತು ವಾರ್ತಾ ಚಾನೆಲ್‌ಗಳಲ್ಲಿ ಬಳಸುವುದರಿಂದ ನುಡಿಜಿಗಿತಕ್ಕೆ ಕಾರಣವಾಗುತ್ತಿವೆ. ಆತುರ ಆತುರ ಮಾತುಗಳು ಕೂಡ ನುಡಿಜಿಗಿತಕ್ಕೆ ಕಾರಣವಾಗಿವೆ.

ಅಂದರೆ ಸುದ್ದಿ ಮಾಧ್ಯಮಗಳಲ್ಲಿ ಹೆಚ್ಚಾಗಿ ಖಾಸಗಿ ವಾಹಿನಿಯವರು ಯಾವುದೇ ಭಾಷಾ ನಿಯಮಗಳನ್ನು ಪಾಲಿಸದೇ ತಮಗೆ ಬೇಕೆಂದ ಹಾಗೆ ಬೇರೆ ಬೇರೆ ಭಾಷೆಯನ್ನು ಬಳಸಿಕೊಂಡು ವೀಕ್ಷಕರನ್ನು ಹಿಡಿದಿಡುವ ಸಲುವಾಗಿ ಏನೆಲ್ಲ ತಂತ್ರಗಾರಿಕೆಯನ್ನು ಮಾಡಿ ಸುದ್ದಿಯನ್ನು ಮುಟ್ಟಿಸುವ ಭಾಷೆಯನ್ನು ತಿರುಚುವ ಪ್ರಯತ್ನ ಮಾಡುತ್ತಲೇ ಬಂದಿದ್ದಾರೆ. ಈಗಾಗಲೇ ಸಾಕಷ್ಟು ಟೀಕೆಗಳಿದ್ದಾಗಲೂ ಕೂಡ ನಮ್ಮ ಸರ್ಕಾರಗಳು ಮಾಧ್ಯಮಗಳನ್ನು ಪ್ರಶ್ನಿಸುವುದಕ್ಕೆ ಹೋಗಿಲ್ಲ. ಈ ಹಿನ್ನೆಲೆಯಲ್ಲಿ ವೀಕ್ಷಕರಿಗೆ ತಮಗೆ ಅರಿವಿಲ್ಲದಂತೆ ಅನ್ಯ ಭಾಷೆಯನ್ನು ಸ್ವೀಕರಿಸುವಂತೆ ಮಾಡುತ್ತಾರೆ. ಕಾರಣ ಟಿ.ಆರ್.ಪಿ. ಹೆಚ್ಚಿಸಿಕೊಳ್ಳುವ ನೆಪದಲ್ಲಿ ಏನೆಲ್ಲ ಸರ್ಕಸ್‌ಗಳನ್ನು ಮಾಡುತ್ತಿದ್ದಾರೆ. ಈ ಎಲ್ಲವನ್ನು ಗಮನದಲ್ಲಿಟ್ಟುಕೊಳ್ಳುವುದಾದರೆ ಧಾರಾವಾಹಿಗಳಲ್ಲಿ ಬಳಕೆಗೊಳ್ಳುವ ಭಾಷೆ ತನ್ನ ಸ್ವರೂಪವನ್ನು ಬಿಟ್ಟುಕೊಡದೇ ಇನ್ನೂ ಹೆಚ್ಚಾಗಿ ಕನ್ನಡ ಭಾಷಾಬಳಕೆಯನ್ನು ಮಾಡುತ್ತಿರುವುದು ಉಚಿತವೆನಿಸುತ್ತಿದೆ. ಕೊನೆಯ ಪಕ್ಷ ಮಾಧ್ಯಮಗಳೇ ಸಿನಿಮಾ ಮತ್ತು ಧಾರಾವಾಹಿಗಳು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುತ್ತವೆ. ಈ ಎರಡು ಕಾರ್ಯಕ್ರಮಗಳಲ್ಲಿ ಅನ್ಯ ಭಾಷೆ ತಕ್ಕಷ್ಟು ಬಳಕೆಯಾಗು ತ್ತಿರುವುದನ್ನು ಕಂಡುಕೊಳ್ಳಲಾಗಿದೆ.

ಅಡಿಟಿಪ್ಪಣಿಗಳು

೧. ಶಂಕ್ರಪ್ಪ, ೨೦೦೮, **ಕನ್ನಡ ದಿನಪತ್ರಿಕೆಗಳಲ್ಲಿ ಅನ್ಯಭಾಷಾ ಬಳಕೆ ಎಂ.ಫಿಲ್.ಅಪ್ರಕಟಿತ ಸಂಪ್ರಬಂಧ,** ಪು.೨.

೨. ಅನ್ನಪೂರ್ಣ ಗುಡದೂರು, ೨೦೦೯, **ಕನ್ನಡ ಕಾದಂಬರಿಗಳಲ್ಲಿ ಭಾಷಾಪ್ರಭೇದಗಳು,** ಪು.೧೨೩.

೩. ಅದೇ, ಪು.೧೨೩

೪. ಅದೇ, ಪು.೧೨೩.

೫. ಅದೇ, ಪು.೧೨೩.

ಅಧ್ಯಾಯ ಆರು

ಸಮಾರೋಪ

ಅಧ್ಯಾಯ ಆರು

ಸಮಾರೋಪ

"ದೂರದರ್ಶನ ಧಾರಾವಾಹಿಗಳಲ್ಲಿ ಕನ್ನಡ"(ಆಯ್ದ ಧಾರಾವಾಹಿಗಳನ್ನು ಅನುಲಕ್ಷಿಸಿ ಎಂಬ ಶೀರ್ಷಿಕೆಯುಳ್ಳ ಈ ಮಹಾಪ್ರಬಂಧವು ಧಾರಾವಾಹಿಗಳಲ್ಲಿ ಬಳಕೆಯಾಗಿರುವ ಕನ್ನಡ ಭಾಷೆಯ ಸ್ವರೂಪವನ್ನು ವಿಶ್ಲೇಷಣೆಗೆ ಒಳಪಡಿಸಿದ ಪ್ರಯತ್ನವಾಗಿದೆ. ದೂರದರ್ಶನದಲ್ಲಿ ದಿನ ನಿತ್ಯ ವಿವಿಧ ವಾಹಿನಿಗಳಲ್ಲಿ ಪ್ರಸಾರವಾಗಿರುವ ಧಾರಾವಾಹಿಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಆಯ್ಕೆ ಪ್ರಕ್ರಿಯೆಯಲ್ಲಿ ವಿಭಾಗಕ್ರಮವನ್ನು ಅನುಸರಿಸಿಕೊಳ್ಳಲಾಗಿದೆ. ಇದು ಅಧ್ಯಯನದ ಮಿತಿಯೂ ಹೌದು. ಒಟ್ಟಾರೆ ವಿವಿಧ ಕನ್ನಡ ವಾಹಿನಿಗಳಲ್ಲಿ ಪ್ರಸಾರವಾಗುವ ಧಾರಾವಾಹಿಗಳನ್ನು ನಾಲ್ಕು ಭಾಗಗಳಾಗಿ ವಿಂಗಡಿಸಿಕೊಳ್ಳಲಾಗಿದೆ.

೧. ಕೌಟುಂಬಿಕ ಧಾರಾವಾಹಿಗಳು

೨. ಹಾಸ್ಯ ಧಾರಾವಾಹಿಗಳು

೩. ಪ್ರಾದೇಶಿಕ ಧಾರಾವಾಹಿಗಳು

೪. ಚಾರಿತ್ರಿಕ ಧಾರಾವಾಹಿಗಳು

ಈ ಮೇಲ್ಕಂಡ ವಿಭಾಗಕ್ರಮದಲ್ಲಿ ಅಧ್ಯಯನ ಮಾಡಲಾಗಿದೆ. ಈ ಎಲ್ಲ ವಿಭಾಗ ಕ್ರಮದಲ್ಲಿ ೨೦ಕ್ಕೂ ಹೆಚ್ಚು ಧಾರಾವಾಹಿಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಅಲ್ಲದೆ ಒಂದೊಂದು ಧಾರಾವಾಹಿಗಳ ಕನಿಷ್ಠ ೨೦ಕ್ಕೂ ಹೆಚ್ಚು ಎಪಿಸೋಡ್‌ಗಳನ್ನು ವೀಕ್ಷಿಸಲಾಗಿದೆ.

ಧಾರಾವಾಹಿಗಳಲ್ಲಿ ಬಳಕೆಯಾಗುವ ಒಳನುಡಿಗಳು, ಸಾಮಾಜಿಕ ಅಂಶಗಳಲ್ಲಿ ಬರುವ ಕೌಟುಂಬಿಕ ಧಾರಾವಾಹಿಗಳಲ್ಲಿ ಸಂಬೋಧನಾ ರೂಪಗಳು, ಬೈಗುಳಗಳ ಬಳಕೆ, ವ್ಯಕ್ತಿನಾಮಗಳು, ಗಾದೆ ಮಾತುಗಳ ಬಳಕೆ, ಅನ್ಯಭಾಷಾ ಬಳಕೆ, ನುಡಿಬೆರಕೆ, ನುಡಿಜಿಗಿತ ಈ ಎಲ್ಲ ಅಂಶಗಳನ್ನು ಸಾಮಾಜಿಕ ವರ್ಗಗಳ ಆಧಾರದ ಮೇಲೆ ಕನ್ನಡ ಭಾಷೆಯ ಸ್ವರೂಪವು ಹೇಗೆ ಭಿನ್ನಭಿನ್ನ

ಮಾದರಿಯಲ್ಲಿ ಬಳಕೆಯಾಗಿದೆ ಎಂಬುದನ್ನು ಕಂಡುಕೊಳ್ಳಲಾಗಿದೆ. ಈ ಎಲ್ಲ ಧಾರಾವಾಹಿಗಳಲ್ಲಿ ಬದಲಾಗುತ್ತಿರುವ ಭಾಷಾಸ್ವರೂಪವು ಕನ್ನಡ ಭಾಷೆಯ ಮೇಲೆ ಆಗುತ್ತಿರುವ ಪರಿಣಾಮವನ್ನು ಉದಾಹರಣೆ ಸಹಿತ ವಿಶ್ಲೇಷಿಸಲಾಗಿದೆ. ಧಾರಾವಾಹಿಗಳಲ್ಲಿ ಮೂರು ವರ್ಗಗಳನ್ನಾಗಿ ರೂಪಿಸಿಕೊಳ್ಳಲಾಗಿದೆ. ಅಂದರೆ ಮೇಲ್ವರ್ಗ(ಶ್ರೀಮಂತರು), ಮಧ್ಯಮವರ್ಗ, ಕೆಳವರ್ಗ(ಬಡವರು) ಈ ಹಿನ್ನೆಲೆಯಲ್ಲಿ ಭಾಷಾಬಳಕೆಯ ಪ್ರಭಾವವನ್ನು ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ. ಅಲ್ಲದೆ ಅಧಿಕಾರ, ಶಿಕ್ಷಣ, ಲಿಂಗವ್ಯವಸ್ಥೆಯಲ್ಲಿ ಭಾಷಾಬಳಕೆಯ ಸಂದರ್ಭದಲ್ಲಿ ಭಿನ್ನ ಭಿನ್ನ ಮಾದರಿಯ ಅಂಶಗಳ ವೈರುಧ್ಯದಿಂದ ಕೂಡಿರುವುದನ್ನು ಕಂಡುಕೊಳ್ಳಲಾಗಿದೆ.

ಅಧ್ಯಾಯ ಒಂದು 'ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವಿಧಾನ'ವನ್ನು ತಿಳಿಸುತ್ತದೆ.

ಅಧ್ಯಾಯ ಎರಡು 'ಧಾರಾವಾಹಿಗಳು ಚಾರಿತ್ರಿಕ ಹಿನ್ನೆಲೆ' ಎಂಬ ಶೀರ್ಷಿಕೆಯಲ್ಲಿ ಧಾರಾವಾಹಿ ಪದದ ಅರ್ಥ ಮತ್ತು ವಿವರಣೆಯನ್ನು ನೀಡಲಾಗಿದೆ. ಧಾರಾವಾಹಿಗಳ ಹುಟ್ಟು, ಬೆಳವಣಿಗೆ ಮತ್ತು ಇತಿಹಾಸ, ಧಾರಾವಾಹಿಗಳು ಮೊದಲು ಪ್ರಚಾರಗೊಂಡ ಹಿನ್ನೆಲೆ ಹಾಗೂ ಆಯ್ದ ಧಾರಾವಾಹಿಗಳ ವರ್ಗೀಕರಣ ಹಾಗೂ ಇದುವರೆಗೂ ನಡೆದ ಅಧ್ಯಯನಗಳ ಸಮೀಕ್ಷೆಯನ್ನು ಕುರಿತು ವಿವರಿಸಲಾಗಿದೆ.

ಅಧ್ಯಾಯ ಮೂರು 'ಒಳನುಡಿಗಳ ಬಳಕೆ'. ಈ ಅಧ್ಯಾಯದಲ್ಲಿ ಧಾರಾವಾಹಿಗಳಲ್ಲಿ ಬಳಕೆಯಾಗುವ ವಿವಿಧ ಪ್ರಾದೇಶಿಕ ಪ್ರಭೇದಗಳನ್ನು ಅಥವಾ ಒಳನುಡಿಗಳ ಪ್ರಮಾಣವನ್ನು ಆಧಾರಸಹಿತ ಉದಾಹರಣೆಗಳೊಂದಿಗೆ ವಿಶ್ಲೇಷಿಸಲಾಗಿದೆ. ಅಲ್ಲದೆ ಯಾವ ಯಾವ ಧಾರಾವಾಹಿಗಳಲ್ಲಿ ಹೆಚ್ಚು ಒಳನುಡಿಗಳನ್ನು ಬಳಸಲಾಗಿದೆ ಮತ್ತು ಹೆಚ್ಚು ಬಳಸದೆ ಇರಲು ಕಾರಣಗಳೇನು ಎಂಬುದನ್ನು ಕುರಿತು ಚರ್ಚಿಸಲಾಗಿದೆ. ಬದಲಾಗುತ್ತಿರುವ ಸಂದರ್ಭದಲ್ಲಿ ಹೇಗೆ ಪರಿಣಾಮಕಾರಿಯಾಗಿದೆ ಎಂಬುದನ್ನು ಆಧಾರಸಹಿತ ಹಾಗೂ ವಿವಿಧ ವಿದ್ವಾಂಸರ ಅಭಿಪ್ರಾಯಗಳ ಹಿನ್ನೆಲೆಯಲ್ಲಿ ಕನ್ನಡ ಭಾಷೆಯ ಉಳಿವಿಗಾಗಿ ಹಾಗೂ ಭಾಷೆಯ ಸ್ವರೂಪ ಹೇಗಿರಬೇಕು ಎಂಬುದನ್ನು ಚರ್ಚಿಸಿದ ಹಿನ್ನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ. ಈ ಅಧ್ಯಾಯದಲ್ಲಿ ಪ್ರಾದೇಶಿಕ ಧಾರಾವಾಹಿಗಳಲ್ಲಿ ಹೆಚ್ಚಾಗಿ ಒಳನುಡಿಗಳನ್ನು ಬಳಸಲಾಗಿದೆ. ಹಾಸ್ಯ ಧಾರಾವಾಹಿಗಳಲ್ಲಿ ಒಳನುಡಿಗಳ ಬಳಕೆಯು ಭಿನ್ನ ಮಾದರಿಯದ್ದಾಗಿದೆ. ಕಾರಣ ಹಾಸ್ಯ ಅಥವಾ ನಗುವನ್ನೇ ಕೇಂದ್ರೀಕರಿಸಿರುವುದರಿಂದ ಒಂದು ಪರಿಸರದ ಇಲ್ಲ ಪ್ರಾದೇಶಿಕತೆಯ ಒಳನುಡಿಗಳು ಅವಮಾನಿಸುವ ರೀತಿಯಲ್ಲಿ ಬಳಕೆಯಾಗುತ್ತಿವೆ. ಅಂದರೆ ನಗೆಚಟಾಕಿಗೆ ಸೀಮಿತವಾಗಿವೆ. ಇದರಿಂದ ಒಳನುಡಿಗಳನ್ನು ಗೇಲಿ ಮಾಡಿದಂತಾಗುತ್ತದೆ. ಈ ಎಚ್ಚರಿಕೆ ಇಲ್ಲದೆ 'ಹೇಗೆಂದರೆ ಹಾಗೆ ಒಳನುಡಿಗಳನ್ನು ಬಳಸಿಕೊಳ್ಳುತ್ತಿರುವುದು ವಿಷಾದದ ಸಂಗತಿಯಾಗಿದೆ. ಕೌಟುಂಬಿಕ ಧಾರಾವಾಹಿಗಳು ಮಧ್ಯಮವರ್ಗ

ಹಾಗೂ ಕೆಳವರ್ಗದ ಪಾತ್ರಗಳಿಗೆ ಸೀಮಿತವಾಗಿರು ವುದನ್ನು ಗುರುತಿಸಿಕೊಳ್ಳಲಾಗಿದೆ. ಅಲ್ಲದೆ ಕೆಳವರ್ಗದ ಕುಟುಂಬ ಕಾಲಕ್ರಮೇಣ ಮೇಲ್‌ಸ್ತರಕ್ಕೆ ಹೋದಾಗ ಒಳನುಡಿಗಳನ್ನು ಕಳಚಿಕೊಳ್ಳುವುದನ್ನು ಗುರುತಿಸಿಕೊಳ್ಳಲಾಗಿದೆ. ಚಾರಿತ್ರಿಕ ಧಾರಾವಾಹಿ ಗಳಲ್ಲಿ ಸಂಪೂರ್ಣವಾಗಿ ಸಂಸ್ಕೃತಭೂಯಿಷ್ಟವಾದ ಕನ್ನಡವನ್ನೇ ಹೆಚ್ಚಾಗಿ ಬಳಸುತ್ತಿರುವುದ ರಿಂದ ಕೆಲವೇ ಕೆಲವು ಕೆಳವರ್ಗದ ಪಾತ್ರಗಳು ಒಳನುಡಿಗಳನ್ನು ಬಳಸುವುದನ್ನು ಉದಾಹರಣೆ ಸಹಿತ ವಿವರಿಸಿಕೊಳ್ಳಲಾಗಿದೆ.

ಅಧ್ಯಾಯ ನಾಲ್ಕು 'ಸಾಮಾಜಿಕ ವಿನ್ಯಾಸ' ಈ ಅಧ್ಯಾಯವು ಅಧ್ಯಯನದ ಪ್ರಾಮುಖ್ಯತೆ ಯನ್ನು ತಿಳಿಸುತ್ತದೆ. ಕಾರಣ ಸಮಾಜದಲ್ಲಿ ಜರುಗುವ ಘಟನೆಗಳನ್ನು ಆಧರಿಸಿ ಕ್ಷಣ ಮಾತ್ರದಲ್ಲಿಯೇ ದೂರದರ್ಶನದಲ್ಲಿ ಕಿರುತೆರೆ ಚಿತ್ರಗಳಲ್ಲಿ ಪ್ರಸಾರಾವಾಗುವುದು ಕೂಡ ಭಿನ್ನ ಭಿನ್ನ ಸ್ವರೂಪವನ್ನು ಪಡೆದುಕೊಳ್ಳುತ್ತಾ ಸಾಗುವುದನ್ನು ಗುರುತಿಸಿಕೊಳ್ಳಲಾಗಿದೆ. ಈ ಸಂಬೋಧನಾ ರೂಪಗಳು ವೈರುಧ್ಯದಿಂದ ಕೂಡಿವೆ. ಕಾರಣ ಮೇಲ್ವರ್ಗದ ಕುಟುಂಬಗಳಲ್ಲಿ ಮಧ್ಯವಯಸ್ಕರು ಅಂದರೆ ಎರಡನೇ ತಲೆಮಾರಿನವರು ಕೂಡ ಗಂಡ-ಹೆಂಡತಿಯರ ಸಂಬೋಧನಾ ರೂಪಗಳು ಏಕವಚನದಿಂದ ಕೂಡಿರುವುದನ್ನು ಗುರುತಿಸಿಕೊಳ್ಳಲಾಗಿದೆ. ಕಾರಣ ವಾಸ್ತವದಲ್ಲಿ ಮಧ್ಯವಯಸ್ಕರಾದ ಎರಡನೇ ತಲೆಮಾರಿನವರು ಪರಸ್ಪರ ಏಕವಚನದಿಂದ ಸಂಬೋಧಿಸುವುದು ನಿಷಿದ್ಧ. ಗಂಡ ಮಾತ್ರ ಹೆಂಡತಿಯನ್ನು ಏಕವಚನದಲ್ಲಿ ಸಂಬೋಧಿಸುವುದಾಗಿದೆ. ಆದರೆ ಹೆಂಡತಿ ಗೌರ ಸೂಚಕ ಸಂಬೋಧನೆಗಳನ್ನು ಬಳಸದೆ ಹೆಸರು ಹಿಡಿದು ಕರೆಯುವುದು ವೈರುಧ್ಯದಿಂದ ಕೂಡಿದೆ. ೩ನೇ ತಲೆಮಾರಿನಲ್ಲಿ ಪರಸ್ಪರರು ಏಕವಚನ ಬಳಸುವುದು ಸಾಮಾನ್ಯ.

ಬೈಗುಳಗಳ ಬಳಕೆಯು ಕೂಡ ತುಂಬಾ ಸೂಕ್ಷ್ಮವಾದ ಅಂಶಗಳಲ್ಲೊಂದಾಗಿದೆ. ಧಾರಾವಾಹಿಗಳಲ್ಲಿ ಸಿದ್ಧಮಾದರಿಯ ಬಯ್ಗುಳಗಳನ್ನು ಬಳಸುತ್ತಿರುವುದು ಒಂದು ರೀತಿಯ ಉಚಿತವೆನ್ನಿಸುತ್ತದೆ. ಯಾವುದೇ ಧಾರಾವಾಹಿಗಳಲ್ಲಿ ಚಾರಿತ್ರಿಕ ವಧೆ ಮಾಡುವಂತಹ ಬಯ್ಗುಳಗಳನ್ನು ಬಳಸುವುದು ತುಂಬಾ ವಿರಳವಾಗಿದೆ. ಆದರೆ ಬೈಗುಳಗಳ ಸಿದ್ಧ ಮಾದರಿಯಾಗಿದ್ದರೂ ಸಹ ಕೆಲವೊಂದು ಸಲ ಅಧಿಕಾರ, ಶಿಕ್ಷಣ, ಅಂತಸ್ತು ಇವುಗಳ ಭಾಷೆ ಯನ್ನು ನಿಯಂತ್ರಿಸುವ ಹಾಗೂ ಹರಿಬಿಡುವ ಪ್ರಕ್ರಿಯೆಯು ಆಯಾಯ ವರ್ಗಗಳಿಗೆ ಸೀಮಿತವಾಗಿರುವುದನ್ನು ಗುರುತಿಸಿಕೊಳ್ಳಲಾಗಿದೆ. ಸಂದರ್ಭಕ್ಕೆ ತಕ್ಕಂತೆ ಇಂಗ್ಲೀಷ್ ಭಾಷೆಯನ್ನು ಬಳಸಿಕೊಂಡು ಆಯಾ ಸಾಮಾಜಿಕ ವರ್ಗ ಹಾಗೂ ತಲೆಮಾರುಗಳ ಹಿನ್ನೆಲೆಯಲ್ಲಿ ಬಳಕೆಯಾಗುತ್ತಿರುವುದನ್ನು ಗುರುತಿಸಿಕೊಳ್ಳಲಾಗಿದೆ.

ವ್ಯಕ್ತಿನಾಮಗಳು ಧಾರಾವಾಹಿಗಳ ಮಟ್ಟಿಗೆ ಪರಿಣಾಮಕಾರಿ ಬೆಳವಣಿಗೆಯನ್ನು ಮಾಡುತ್ತಿವೆ ಎಂದರೆ ತಪ್ಪಾಗಲಾರದು. ೧ನೇ ತಲೆಮಾರಿನ ಸಾಂಪ್ರದಾಯಿಕ ವ್ಯಕ್ತಿನಾಮಗಳು ಆಯಾಯ

ಸಾಮಾಜಿಕ ವರ್ಗಗಳಲ್ಲಿ ವ್ಯತ್ಯಾಸವಾಗದೆ ಇರುವುದನ್ನು ಗುರುತಿಸಿಕೊಳ್ಳಲಾಗಿದೆ. ೨ನೇ ತಲೆಮಾರು ಹಾಗೂ ೩ನೇ ತಲೆಮಾರುಗಳಲ್ಲಿ ಸಾಂಪ್ರದಾಯಿಕ ವ್ಯಕ್ತಿನಾಮಗಳನ್ನು ಕಳಚಿಕೊಂಡು ಭಿನ್ನ ಭಿನ್ನ ಮಾದರಿಯ ವ್ಯಕ್ತಿನಾಮಗಳನ್ನು ಬಳಸಿಕೊಳ್ಳುತ್ತಿರುವುದನ್ನು ಆಯಾಯ ವಿಭಾಗಕ್ರಮದ ಧಾರಾವಾಹಿಗಳಲ್ಲಿ ಯಾವ ಯಾವ ಪ್ರಮಾಣದಲ್ಲಿ ಯಾವ ಯಾವ ವರ್ಗಕ್ಕೆ ಸೀಮಿತವಾಗಿವೆ ಎಂಬುದನ್ನು ಗುರುತಿಸಿಕೊಳ್ಳಲಾಗಿದೆ.

ಧಾರಾವಾಹಿಗಳ ಶೀರ್ಷಿಕೆಗಳು ಮೊದಲ ಕಾಲಘಟ್ಟದಲ್ಲಿ ಧಾರಾವಾಹಿ ಶೀರ್ಷಿಕೆಗಳು ಸಾಂಪ್ರದಾಯಿಕತೆಯಿಂದ ಕೂಡಿದವುಗಳಾಗಿವೆ. ಇತ್ತೀಚಿನ ಕಳೆದ ಒಂದು ದಶಕದಿಂದ ಮಹಿಳೆ ಯರನ್ನೇ ಕೇಂದ್ರೀಕರಿಸಿ ಧಾರಾವಾಹಿಗಳನ್ನು ನಿರ್ಮಿಸುತ್ತಿರುವುದರಿಂದ ಸ್ತ್ರೀವ್ಯಕ್ತಿನಾಮ ಗಳನ್ನು ಬಳಸಿಕೊಳ್ಳುತ್ತಿರುವುದನ್ನು ಗುರುತಿಸಿಕೊಳ್ಳಲಾಗಿದೆ. ಧಾರಾವಾಹಿ ಶೀರ್ಷಿಕೆಗಳು ಸ್ಪರ್ಧಾತ್ಮಕ ಜಗತ್ತಿಗೆ ಬದಲಾವಣೆಯಾಗುತ್ತಿರುವುದನ್ನು ಗುರುತಿಸಿಕೊಳ್ಳಲಾಗಿದೆ. ಕಾರಣ ದೂರದರ್ಶನವು ಇಂದು ತುಂಬಾ ಪರಿಣಾಮಕಾರಿ ಮಾಧ್ಯಮವಾಗಿರುವುದರಿಂದ ಕನ್ನಡದ ವಾಹಿನಿಗಳ ಅಬ್ಬರ ಹೆಚ್ಚಾಗಿದೆ. ಈ ಹಿನ್ನೆಲೆಯಲ್ಲಿ ಪ್ರತಿಯೊಂದು ವಾಹಿನಿಯವರು ಕೂಡ ತಮ್ಮ ಟಿ.ಆರ್.ಪಿ. ಯನ್ನು ಉಳಿಸಿಕೊಳ್ಳುವ ಭರಾಟೆಯಲ್ಲಿ ಶೀರ್ಷಿಕೆಗಳು ವೀಕ್ಷಕರನ್ನು ಆಕರ್ಷಿಸುವಂತಿರಬೇಕು ಎಂಬ ಮನೋಧೋರಣೆ ತೋರುತ್ತಿರುವುದು ಅತಿ ಶೀಘ್ರದಲ್ಲಿಯೇ ಭಿನ್ನ ಭಿನ್ನ ಮಾದರಿಯ ಅಥವಾ ಸಿದ್ಧಮಾದರಿಯ ಶೀರ್ಷಿಕೆಗಳನ್ನು ಬಳಸಿಕೊಳ್ಳುತ್ತಿದ್ದಾರೆ. ಇತ್ತೀಚೆಗೆ ಜನಪ್ರಿಯವಾಗು ತ್ತಿರುವ ಚಲನಚಿತ್ರಗಳ ಶೀರ್ಷಿಕೆಗಳನ್ನು ಧಾರಾವಾಹಿಗಳ ಶೀರ್ಷಿಕೆಯಾಗಿ ಬಳಸಿಕೊಳ್ಳುತ್ತಿರುವುದನ್ನು ಗುರುತಿಸಿಕೊಳ್ಳಲಾಗಿದೆ. ಧಾರಾವಾಹಿಗಳ ಕಥೆಯ ಹಂದರಕ್ಕೂ ಶೀರ್ಷಿಕೆಗಳಿಗೂ ಯಾವುದೇ ಸಂಬಂಧವಿರದೆ ಇರುವುದನ್ನು ಉದಾಹರಣೆ ಸಹಿತ ವಿವರಿಸಿಕೊಳ್ಳಲಾಗಿದೆ.

ಗಾದೆ ಮಾತುಗಳ ಬಳಕೆಯು ಹೆಚ್ಚಾಗಿ ೧ನೇ ತಲೆಮಾರು ಹಾಗೂ ೨ನೇ ತಲೆಮಾರುಗಳಲ್ಲಿ ಬಳಕೆಯಾಗುತ್ತಿವೆ. ಒಂದು ವೇಳೆ ೨ನೇ ತಲೆಮಾರಿನಲ್ಲಿ ಬಳಕೆಯಾಗುತ್ತಿರುವುದು ನಿಜವೇ ಆಗಿದ್ದರೆ ಇಂಗ್ಲೀಷ್ ಭಾಷೆಯನ್ನು ಕನ್ನಡ ಭಾಷೆಯ ಜಾಯಮಾನಕ್ಕೆ ಹೊಂದಿಕೊಳ್ಳುವಂತೆ ಅಂತ್ಯಪ್ರಾಸವಾಗಿ ಬಳಕೆಯಾಗುತ್ತಿದೆ. ಅಲ್ಲದೆ ಹೆಚ್ಚಾಗಿ ಹಾಸ್ಯ ಧಾರಾವಾಹಿಗಳಲ್ಲಿ ಕೆಲವೊಂದು ಗಾದೆ ಮಾತುಗಳನ್ನು ಗೇಲಿ ಮಾಡುವುದಕ್ಕಾಗಿಯೇ ಹುಟ್ಟಿಕೊಂಡಿವೆಯೇನೋ ಅನ್ನವಷ್ಟರ ಮಟ್ಟಿಗೆ ಆಯಾಯ ಹಾಸ್ಯ ಪಾತ್ರಗಳು ತಮಗೆ ಹೇಗೆ ಬೇಕೆಂದರೆ ಹಾಗೆ ಬಳಸಿಕೊಳ್ಳುತ್ತಿವೆ. ಆದರೆ ಕೌಟುಂಬಿಕ, ಪ್ರಾದೇಶಿಕ, ಚಾರಿತ್ರಿಕ ಧಾರಾವಾಹಿಗಳಲ್ಲಿ ಸಂದರ್ಭೋಚಿತವಾಗಿ ಬಳಕೆ ಯಾಗುತ್ತಿವೆ. ಇಂದಿಗೂ ಕೂಡ ಗಾದೆ ಮಾತುಗಳ ಬಳಕೆಯನ್ನು ಪ್ರಸಾರ ಮಾಧ್ಯಮಗಳು ಬಳಸುತ್ತಿರುವುದು ಕನ್ನಡ ಭಾಷೆಯ ಸೊಗಡನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡುತ್ತಿವೆ ಎಂದರೆ ತಪ್ಪಾಗಲಾರದು.

ಅಧ್ಯಾಯ ಐದು 'ಅನ್ಯ ಭಾಷಾ ಬಳಕೆ'. ಈ ಅಧ್ಯಾಯವು ಆಧುನಿಕತೆಯ ಪ್ರಭಾವ ಕನ್ನಡ ಭಾಷೆಯ ಮೇಲೆ ಆಗಿರುವ ಪರಿಣಾಮವನ್ನು ತಿಳಿಯಬಯಸುತ್ತದೆ. ಇಂದು ಅನ್ಯ ಭಾಷಾ ಬಳಕೆಯ ಸಾಮಾನ್ಯವಾಗಿದೆ. ಅಂದರೆ ಪ್ರಾಚೀನ ಕಾಲಘಟ್ಟವನ್ನು ಅನುಸರಿಸಿದ ಮಾದರಿಯ ಆರಂಭಿಕದಲ್ಲಿ ಸಂಸ್ಕೃತ ಭಾಷೆಯ ಪ್ರಭಾವದಿಂದಾಗಿ ಕನ್ನಡ ತನ್ನ ಜಾಯಮಾನಕ್ಕೆ ಒಗ್ಗಿಕೊಳ್ಳುವಂತೆ ಸ್ವೀಕರಣ ಮಾಡಿಕೊಂಡಿದೆ. ಅಂದರೆ ಕನ್ನಡ ಭಾಷೆಯ ಮೇಲೆ ಒಂದಲ್ಲ ಒಂದು ಭಾಷೆ ಪ್ರಭಾವ ಬೀರಿ ಕಾಲ ಕಾಲಕ್ಕೆ ಅನ್ಯಭಾಷೆಯನ್ನು ಸ್ವೀಕರಿಸುವ ಗುಣವನ್ನು ಪಡೆದುಕೊಂಡಿರುವುದನ್ನು ಈಗಾಗಲೇ ಗುರುತಿಸಲಾಗಿದೆ. ಆದರೆ ಇಂದು ದೂರದರ್ಶನ ಪ್ರಭಾವಿ ಮಾಧ್ಯಮವಾಗಿದೆ. ಇದು ಉಳಿದೆಲ್ಲ ಮಾಧ್ಯಮಗಳಿಗಿಂತಲೂ ತುಸು ಭಿನ್ನ ಮಾದರಿಯದ್ದು. ಅಲ್ಲದೆ ಹೆಚ್ಚು ಪರಿಣಾಮವನ್ನುಂಟು ಮಾಡುವಂತದ್ದಾಗಿದೆ. ಈ ಹಿನ್ನೆಲೆಯಲ್ಲಿ ಅನ್ಯಭಾಷೆಯ ಬಳಕೆ ಸಹಜವಾಗಿದೆ. ಆದರೆ ಧಾರಾವಾಹಿಗಳ ಸಂದರ್ಭದಲ್ಲಿ ಅತಿ ಹೆಚ್ಚಾಗಿ ಕೌಟುಂಬಿಕ ಧಾರಾವಾಹಿಗಳು ಹಾಗೂ ಹಾಸ್ಯ ಧಾರಾವಾಹಿಗಳು ಹೆಚ್ಚು ಹೆಚ್ಚಾಗಿ ಇಂಗ್ಲೀಷ್ ಭಾಷೆಯನ್ನು ಬಳಸಿಕೊಳ್ಳುತ್ತಿರುವುದನ್ನು ವಿವಿಧ ವಿದ್ವಾಂಸರ ವಿಮರ್ಶೆಗೆ ಮತ್ತು ಚರ್ಚೆಗೆ ಗುರಿಯಾಗಿರುವುದನ್ನು ಗುರುತಿಸಿಕೊಳ್ಳಲಾಗಿದೆ. ಅಲ್ಲದೆ ಕೆಲವು ವಿದ್ವಾಂಸರು ಕಥೆಯ ಹಂದರಕ್ಕ ತಕ್ಕಷ್ಟು ಬಳಸಿಕೊಳ್ಳು ತ್ತಿರುವುದು ಅನಿವಾರ್ಯ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಅಧ್ಯಯನ ಮಾಡಿದಾಗ ವಿಭಾಗಕ್ರಮದಲ್ಲಿ ಹಾಗೂ ತಲೆಮಾರುಗಳ ಕ್ರಮದಲ್ಲಿ ಬಳಕೆಯಾಗುತ್ತಿರುವ ಪ್ರಮಾಣವನ್ನು ಗುರುತಿಸಿಕೊಳ್ಳಲಾಗಿದೆ. ಅಲ್ಲದೆ ಭಾಷಿಕ ಅಧ್ಯಯನದಲ್ಲಿ ನುಡಿಬೆರಕೆ–ನುಡಿಜಿಗಿತ ಪರಿಣಾಮಕಾರಿಯಾದ ಅಧ್ಯಯನಗಳಾಗಿವೆ. ಈ ಹಿನ್ನೆಲೆಯಲ್ಲಿ ಅನ್ಯಭಾಷೆ ಬಳಕೆಯ ಪ್ರಭಾವ ಮತ್ತು ಪರಿಣಾಮಗಳನ್ನು ಕುರಿತು ವಿಶ್ಲೇಷಿಸಲಾಗಿದೆ.

ಫಲಿತಗಳು

೧. ಭಾಷಾ ಬಳಕೆಯ ದೃಷ್ಟಿಯಿಂದ ಧಾರಾವಾಹಿಗಳಲ್ಲಿ ಬಳಕೆಯಾಗುತ್ತಿರುವ ಕನ್ನಡ ನುಡಿ ಬಳಕೆಯ ವಲಯವನ್ನು ವಿಸ್ತರಿಸಿಕೊಳ್ಳುತ್ತಿದೆ. ಹಾಗೆಯೇ ಹೊಸ ಹೊಸ ವಲಯಗಳಿಗೆ ಕನ್ನಡ ನುಡಿ ಸಜ್ಜುಗೊಳ್ಳುತ್ತಿದೆ ಎಂಬುದು ಅಧ್ಯಯನದಿಂದ ತಿಳಿದುಬರುತ್ತದೆ. ಉದಾಹರಣೆಗೆ: ಪಂಚರಂಗಿ ಪೊಂ ಪೊಂ ಧಾರವಾಹಿಯಲ್ಲಿ ಮಂಗಳೂರು, ಉತ್ತರ ಕರ್ನಾಟಕದ ಹಾಗೂ ಬೆಂಗಳೂರು ಪರಿಸರದ ಒಳನುಡಿಗಳನ್ನು ಬಳಸಿ ಪಾತ್ರಗಳನ್ನು ರೂಪಿಸಲಾಗಿದೆ.

   ೧. ಮೀನಾನಾಥ ಹಾಗೂ ಮೀನಾರ ಸಂದರ್ಭ–ಮಂಗಳೂರಿನ ಒಳನುಡಿ

   ೨. ಮೈಲಾರಿ–ರೇಣುಕ ಇವರ ಪಾತ್ರಗಳು–ಉತ್ತರ ಕರ್ನಾಟಕದ ಒಳನುಡಿಗಳ ಬಳಕೆಯನ್ನು ಮಾಡುತ್ತಿವೆ.

   ೩. ಎಂ.ಪಿ. ಹಾಗೂ ಶೀಲಾರ ಒಳನುಡಿ–ಬೆಂಗಳೂರು ಪರಿಸರದ್ದಾಗಿದೆ.

ಮದರಂಗಿ ಧಾರಾವಾಹಿಯಲ್ಲಿ

೧. ಹರಿಶ್ಚಂದ್ರ ಸೋಡಂಕಿ ಹಾಗೂ ಸತ್ಯವತಿ-ಧಾರಾವಾಡದ ಕನ್ನಡನುಡಿ

೨. ರಾಗಣ್ಣ, ನಾಣಿ, ರಮಾ ಇತರರು-ಮಂಗಳೂರು ಒಳನುಡಿ

ಕಾರಣ ಒಳನುಡಿಗಳ ಬಳಕೆಯು ಕೇವಲ ಸಾಹಿತ್ಯ ಕೃತಿಗಳಿಗೆ ಮಾತ್ರ ಸೀಮಿತವಾಗಿದ್ದು, ಓದುಗ ವಲಯವನ್ನು ಮಾತ್ರ ತಲುಪುತ್ತಿತ್ತು. ಆದರೆ ದೂರದರ್ಶನ ಮಾಧ್ಯಮ ಅನಕ್ಷರಸ್ತರನ್ನೊಳಗೊಂಡಂತೆ ಎಲ್ಲ ವರ್ಗದ ಜನರಿಗೆ ವಿವಿಧ ಪ್ರಾದೇಶಿಕ ಒಳನುಡಿಗಳ ಬಳಕೆಯ ಅರಿವೆಗೆ ಬರುವಂತೆ ದೂರದರ್ಶನ ಮಾಧ್ಯಮ ತಲುಪಿಸುವಲ್ಲಿ ಯಶಸ್ವಿಯಾಗಿದೆ.

ಈ ಎಲ್ಲಾ ಒಳನುಡಿಗಳು ಒಂದೇ ಧಾರವಾಹಿಯಲ್ಲಿ ಬಳಕೆಯಾಗುತ್ತಿರುವುದು ಕರ್ನಾಟಕದ ಇತರೆ ಪ್ರಭೇದ ಅಥವಾ ಒಳನುಡಿಗಳನ್ನು ಆಡುವವರಿಗೆ ಸುಲಭವಾಗಿ ಅರ್ಥಮಾಡಿಕೊಳ್ಳಲು ಸಹಕಾರಿಯಾಗಿದೆ. ಅಂದರೆ ಸಂವಹನಕ್ಕೆ ಯಾವುದೇ ಅಡ್ಡಿ ಇಲ್ಲದೆ ಇರುವುದರಿಂದ ಹೆಚ್ಚು, ಹೆಚ್ಚು ಪ್ರಾದೇಶಿಕ ಒಳನುಡಿಗಳನ್ನು ಬಳಸಿಕೊಳ್ಳುವುದರಿಂದ ಕನ್ನಡ ನುಡಿಯ ಬಳಕೆಯ ವಲಯವನ್ನು ವಿಸ್ತರಿಸಿಕೊಳ್ಳುತ್ತಿದೆ. ಅಲ್ಲದೆ ಉತ್ತರ ಕರ್ನಾಟ ಹಾಗೂ ಮಂಗಳೂರಿನಂತಹ ಪ್ರಾದೇಶಿಕ ಒಳನುಡಿಗಳನ್ನು ಹಾಸ್ಯಕ್ಕಾಗಿಯೇ ಬಳಸಿಕೊಳ್ಳುವುದಲ್ಲದೆ ಗೇಲಿ ಮಾಡುವಂತಿದೆ ಎಂಬ ಆರೋಪವನ್ನು ಎದುರಿಸುತ್ತಿದ್ದಾಗಲು ಸಂವಹನಕ್ಕೆನು ಅಡ್ಡಿಯಾಗುತ್ತಿಲ್ಲ. ಈ ರೀತಿ ಬಳಸಿಕೊಳ್ಳುತ್ತಿರುವುದು ವಿಷಾದದ ಸಂಗತಿಯೇ ಸರಿ.

ಈ ಮೇಲ್ಕಾಣಿಸಿದ ಪಾತ್ರಗಳು ಪ್ರಾದೇಶಿಕ ಒಳನುಡಿಗಳನ್ನು ಬಳಸಿಕೊಳ್ಳುತ್ತಿವೆ. ಧಾರಾವಾಹಿಯಲ್ಲಿ ಹಾಸ್ಯವನ್ನು ಹೊರತುಪಡಿಸಿ, ಗಂಭೀರ ಸ್ವಭಾವದ ಪಾತ್ರಳು ಇವೆ. ಈ ಬೆಳವಣಿಗೆಯು ಧನಾತ್ಮಕವಾಗಿದ್ದು, ಬಳಕೆಯ ವಲಯವನನು ವಿಸ್ತರಿಸಿಕೊಳ್ಳುತ್ತಿರುವುದು ಕನ್ನಡ ನುಡಿಯನ್ನು ಮರುಕಟ್ಟುವಿಕೆಯಲ್ಲಿ ದೂರದರ್ಶನ ಮಾಧ್ಯಮ ತಕ್ಕಷ್ಟದರೂ ಕೆಲಸ ಮಾಡುವಲ್ಲಿ ಯಶಸ್ವಿಯಾಗಿದೆ. ಈಗಾಗಲೇ ಮೂಡಲಮನೆ, ಮಲೆಗಳಲ್ಲಿ ಮದುಮಗಳು, ಗೃಹಭಂಗ, ಗುಡ್ಡದ ಧೂತ ಧಾರಾವಾಹಿಗಳು ಜನಮಾನಸದಲ್ಲಿ ಉಳಿದಿವೆಯಾದರೂ ಕೇವಲ ಒಂದೇ ಪ್ರಾದೇಶಿಕ ಒಳನುಡಿಯನ್ನು ಬಳಸಿಕೊಳ್ಳುವುದಕ್ಕಿಂತ ಬೇರೆ ಬೇರೆ ಪ್ರದೇಶದ ಒಳನುಡಿಗಳನ್ನು ಒಂದೇ ಧಾರಾವಾಹಿಯಲ್ಲಿ ಒಟ್ಟೊಟ್ಟಿಗೆ ಬಳಸುವುದರಿಂದ ಹೆಚ್ಚು ಪರಿಣಾಮಕಾರಿಯಾಗುತ್ತದೆ. ಇದರಿಂದ ಜನಪ್ರಿಯತೆಯನ್ನು ಪಡೆದುಕೊಳ್ಳುವುದ ರೊಂದಿಗೆ ಕನ್ನಡ ನುಡಿಯು ಪ್ರೇಕ್ಷಕರ ಮೆಚ್ಚುಗೆ ಹಾಗೂ ಕನ್ನಡ ನುಡಿ ಉಳಿವಿಗೆ ಕಾರಣವಾಗುತ್ತದೆ.

೨. ಧಾರಾವಾಹಿಗಳು ಮತ್ತು ಕನ್ನಡ ನುಡಿ ಸಂಬಂಧವನ್ನು ಕುರಿತು ಮಾತಾನಾಡುವಾಗ ಧಾರಾವಾಹಿಗಳಲ್ಲಿ ಬಳಕೆಯಾಗುವ ಕನ್ನಡ ನುಡಿ ನಿಯಮರಹಿತ ಭಾಷಿಕ ರಚನೆಗಳೆಂದು ಕಂಡುಬರುತ್ತದೆ. ಇಂತಹ ನಿಯಮರಹಿತ ರಚನೆಗಳು ತಮಾಷೆ ಹಾಗೂ ವ್ಯಂಗ್ಯದ ನೆಲೆಯಲ್ಲಿ ಮಾತ್ರ ಬಳಕೆಯಾಗುತ್ತಿರುವುದು ಅಧ್ಯಯನದಿಂದ ತಿಳಿದುಕೊಳ್ಳಲಾಗಿದೆ. ಉದಾಹರಣೆಗೆ ಅರಗಿಣಿ ಧಾರಾವಾಹಿಯಲ್ಲಿ ಧನಲಕ್ಷ್ಮಿಯ ಮಾತುಗಳು ನಿಯಮರಹಿತ ರಚನೆಗಳಾಗಿದ್ದು, ವ್ಯಂಗ್ಯದ ನೆಲೆಗಳಲ್ಲಿ ಮಾತ್ರ ಬಳಕೆಯಾಗುತ್ತಿರುವುದನ್ನು ಕಂಡು ಕೊಳ್ಳಲಾಗಿದೆ. ಉದಾಹರಣೆಗೆ: ೧. ದಿನಾಂಕ ೨೫.೦೧.೨೦೧೩ರಂದು ರಾತ್ರಿ ೧೦.೩೦ ಗಂಟೆಗೆ ಜೀ ಟಿವಿ ಕನ್ನಡ ವಾಹಿನಿಯ ಪಾರ್ವತಿ ಪರಮೇಶ್ವರ ಧಾರಾವಾಹಿಯಲ್ಲಿ ಮಂತ್ರಿಗಳು ಆಕ್ರಮವಾಗಿ ಸಂಪಾದಿಸಿದ ಆಸ್ತಿಯ ಬಗೆಗೆ ಪತ್ರಿಕೆಯಲ್ಲಿ ಪ್ರಕಟವಾದ ಮೇಲೆ ಮಂತ್ರಿಯ ಕಡೆಯವರು ಲೇಖಕನನ್ನು ಎದುರಿಸುತ್ತಾರೆ. ಆಗ ಲೇಖಕ ಮಂತ್ರಿಗೆ ಪೋನಿನ ಮೂಲಕ ಮಾತನಾಡುತ್ತಾ 'ನಾಳೆ ನಿಮ್ಮನ್ನು ಜೈಲಿಗೆ ತುಂಬುತ್ತಾರೆ' ಎನ್ನುತ್ತಾನೆ. ಈ ವಾಕ್ಯ ರಚನೆಯನ್ನು ಗಮನಿಸಿದಾಗ ಬರಹದ ಕನ್ನಡ ವಾಕ್ಯರಚನೆಗಿಂತ ಬೇರೆಯಾಗಿರುವುದು ತಿಳಿದುಬರುತ್ತದೆ. ಭವಿಷ್ಯ ನಾಳೆ ನಿಮ್ಮನ್ನು ಜೈಲಿಗೆ ಕಳುಹಿಸುತ್ತಾರೆ/ ಹಾಕಿಸುತ್ತಾರೆ ಎಂದು ಇರಬೇಕಾದದ್ದು, ತುಂಬುತ್ತಾರೆ. ಎಂದು ಬಳಕೆಯಾಗಿರುವುದು ಗಮನಿಸುವಂತಹ ಅಂಶ. ಇಂತಹ ವಾಕ್ಯರಚನೆಗಳು ಸ್ಕ್ರಿಪ್ಟ್‌ನಲ್ಲಿ ಸರಿಯಿದ್ದು, ಸಂಭಾಷಣೆ ಯಲ್ಲಿ ವ್ಯತ್ಯಾಸವಿದೆ ಎಂದೆನಿಸುತ್ತದೆ.

೨. ದಿನಾಂಕ ೨೩.೮.೨೦೦೧೩ರಂದು ರಾತ್ರಿ ೮ ಗಂಟೆಗೆ ಸುವರ್ಣವಾಹನಿಯ ಅರಗಿಣಿ ಧಾರಾವಾಹಿಯಲ್ಲಿ

ಧನಲಕ್ಷ್ಮಿ: ಹಲೋ ಆಯ್ ಬಾಯ್ ಅಕ್ಷರಾ ನೀನು ಸೋ ಇನ್ನೊಸೆಂಟ್. ಅಜ್ಜಿ ಖಾರ ತಿನ್ನೋದೆ ಇರೋ ಅಪ್ಪು ಇನ್ನೋಸೆಂಟ್ ಏನು ಅಲ್ಲ. ಡಿಟೆಕ್ಟಿವ್ ಡಿಂಗ್‌ತರ ಸಿದ್ಧಾರ್ಥ ರೂಂನ ಫುಲ್ ಸರ್ಚಿಂಗ್.

ಅಕ್ಷರಾ: ಅಜ್ಜೀನಾ ಸಿದ್ಧಾರ್ಥ ರೂಮಲ್ಲಿ ಏನ್ ಮಾಡ್ತೀದ್ದಾರೆ.

ಧನಲಕ್ಷ್ಮಿ: ಹೂ ನೋಸ್, ಅವ್ರಿಗೆ ಈ ಹೋಮಲ್ಲಿಕ್ಷನ್ ಮಾಡೋರು ಯಾರು ಇದ್ದು ಇಲ್ಲದೆ ಡೆಸ್ಟಬಿನ್ ತರ ನಾನಿದೀನಿ.

೩. ಕೌಟುಂಬಿಕ ಮತ್ತು ಹಾಸ್ಯ ಧಾರಾವಾಹಿಗಳಲ್ಲಿ ನುಡಿಬೆರಕೆ ಮತ್ತು ನುಡಿಜಿಗಿತವು ಹೆಚ್ಚಾಗಿ ಈ ಧಾರಾವಾಹಿಗಳಲ್ಲಿ ಆಗುವುದನ್ನು ಕಂಡುಕೊಳ್ಳಲಾಗಿದೆ. ಉದಾಹರಣೆ

ಸಿದ್ಧಾರ್ಥ: ದಿಸ್ ಈಜ್ ಟೂ ಮಚ್ ಪೂಜಾ. ನಮ್ಮ ರಿಲೇಷನ್‌ಶಿಫ್ ಬಗ್ಗೆ ಎಲ್ಲಿ ಯಾವಾಗ ಹೇಳಬೇಕು ಅಂತ ನನಗೆ ಚೆನ್ನಾಗಿ ಗೊತ್ತಿದೆ.

ಪೂಜಾ ಸಿಂಧ್ಯ: ನೋ ಸಿದ್ದಾರ್ಥ ನಾನು ಫ್ಲವರ್ ಬೊಕ್ಕೆ ಕಳ್ಸಿಲ್ಲ. ನಾನು ಯಾವತ್ತು ಇಂಥ ಕೆಲ್ಸ ಮಾಡಿಲ್ಲ. ಮಾಡೋದಿಲ್ಲ. ನಾನು ಫ್ಲವರ್ ಬೊಕ್ಕೆನಾ ಕಳ್ಸಿಲ್ಲ ಸಿದ್ದಾರ್ಥ.

ಸಿದ್ದಾರ್ಥ: ಇಟ್ಸ್ ಓಕೆ ಲಿವಿಟ್, ನಮ್ಮ ಬಿಜಿನಸೆಸ್ ನೋಡದಕ್ಕೆ ಬಿಲ್‌ಗೇಟ್ಸ್ ಬರ್ತಿದಾರೆ ಮೀಟಿಂಗ್ ಆರೆಂಜ್ ಮಾಡು. ಕಾರಣ ಆಧುನಿಕತೆಯ ಪ್ರಭಾವದಿಂದ ನಗರವಾಸಿಗಳು ಹಾಗೂ ವಿದ್ಯಾವಂತ ಜನಸಮುದಾಯಗಳು ನುಡಿಬೆರಕೆ ಮತ್ತು ನುಡಿಜಿಗಿತ ಹೆಚ್ಚಾಗಿ ಆಗುತ್ತದೆ. ಧಾರಾವಾಹಿಗಳಲ್ಲಿ ಬಳಕೆಯಾಗುತ್ತಿರುವ ಕನ್ನಡದ ರಚನೆ, ಕನ್ನಡದ ನುಡಿ ರಚನೆಯ ಜಯಮಾನಕ್ಕನುಗುಣವಾಗಿ ಬಳಕೆಯಾಗುತ್ತಿದೆ ಎಂದೆನಿಸುತ್ತದೆ.

೪. ಧಾರಾವಾಹಿಗಳ ಭಾಷಾ ಬಳಕೆಯ ದೃಷ್ಟಿಯಿಂದ ಸಾಮಾಜಿಕರ ಭಾಷಾ ಬಳಕೆಯಲ್ಲಿ ಬದಲಾವಣೆ ಕಂಡುಬರುತ್ತದೆ. ಉದಾಹರಣೆ ಲಕ್ಷ್ಮೀ ಬಾರಮ್ಮ ಧಾರಾವಾಹಿಯಲ್ಲಿ ಕೈಲಾಸ್ ಹಾಗೂ ಕಲ್ಪನಾರ ಸನ್ನಿವೇಶ. ದಿನಾಂಕ ೧೪-೦೩-೨೦೧೩ರಂದು ಈಟಿವಿ ಕನ್ನಡವಾಹಿನಿಯಲ್ಲಿ

ಕಲ್ಪನಾ: 'ಕೈಲಾಸ್ ಸದ್ಯಕ್ಕೆ ನೀನಗೇನು ಗೊತ್ತಾಗೋದು ಬ್ಯಾಡ ಟೈಮ್ ಬಂದಾಗ ನಾನೇ ನಿನಗೆ ಎಲ್ಲಾ ಹೇಳ್ತೀನಿ' ತಮ್ಮ ಮಗಳು ಶ್ರುತಿಯನ್ನು ಚಂದುಗೆ ಕೊಟ್ಟು ಮದುವೆ ಮಾಡುವ ವಿಷಯವನ್ನು ತನ್ನ ತಂಗಿಯರ ಜೊತೆ ಮಾತನಾಡುತ್ತಿದ್ದಾಗ ಕೈಲಾಸ್ ಅಲ್ಲಿಗೆ ಬರುತ್ತಾನೆ. ಇವರಾಡುವ ಮಾತುಗಳನ್ನು ಕೇಳಿಸಿಕೊಂಡ ನಂತರ ನನಗೂ ಸ್ವಲ್ಪ ಹೇಳಿದ್ರೆ ನಾನು ನಗ್ತೀನಿ ಎನ್ನುತ್ತಾನೆ. ಆಗ ಕಲ್ಪನಾ ಈ ಸಂಬೋಧನೆ ಬಳಸುತ್ತಾನೆ. ಕಲ್ಪನಾ ಅವರು ತಮ್ಮ ಗಂಡನಾದ ಕೈಲಾಸ್ ಅವರನ್ನು ಸಂಬೋಧನೆ ಮಾಡುವಾಗ ಕೈಲಾಸ್ ಎಂದೇ ಸಂಬೋಧನೆ ಮಾಡುತ್ತಾರೆ. ಅಂದರೆ ಸಾಮಾಜಿಕವಾಗಿ ೨ನೇ ತಲೆಮಾರಿನವರಲ್ಲಿ ಸಂಬೋಧನೆ ಹಂತದಲ್ಲಿ ಬದಲಾವಣೆ ಯಾಗುತ್ತಿರುವುದು ಕಂಡುಬರುತ್ತದೆ.

೫. ಪ್ರಾದೇಶಿಕ ಧಾರವಾಹಿಗಳನ್ನು ಹೊರತುಪಡಿಸಿ ಕೌಟುಂಬಿಕ ಧಾರಾವಾಹಿಗಳಲ್ಲಿ ಮಧ್ಯಮ ಮತ್ತು ಕೆಳವರ್ಗದ ಪಾತ್ರಗಳು ಒಳನುಡಿಗಳನ್ನು ಬಳಸುತ್ತವೆ. ದಿನಾಂಕ ೨೩.೦೮. ೨೦೧೩ರಂದು ಸುವರ್ಣವಾಹಿನಿಯಲ್ಲಿ ರಾತ್ರಿ ೮ ಗಂಟೆಗೆ ಅರಗಿಣಿ ಧಾರಾವಾಹಿಯಲ್ಲಿ ಖುಷಿ: ದುರ್ಗಾದೇವಿ ನೀ ಇಲ್ಲದೆ ಇರೋ ಜಾಗ ಇಲ್ಲ ಅನ್ನೋದಕ್ಕೆ ಇದೆ ಸಾಕು. ಅರೆ ದೀಪಾ ಐತಿ, ಎಣ್ಣೆನೂ ತಿ, ಬತ್ತಿನೂ ಐತಿ, ಆದ್ರೆ ಹಚ್ಚಿಲ್ಲ. ಇಲ್ಲರೋ ಜನಕ್ಕೂ ದೀಪಾನು ಹಚ್ಚೊದಕ್ಕೆ ಪುರುಸೊತ್ತು ಇಲ್ಲ ಅನ್ನಾಂಗ ಕಾಣಿಸ್ತದ. ನಿನ್ನ ಶೋಕೇಸ್ ಗೊಂಬೆ ಅಂತ ಅಂದುಕೊಂಡು ಬಿಟ್ಟಿದಾರೆ. ಅದಕ್ಯಾ ಯಾರ ಮರಿನಾಗು ಸಂತೋಷ ಅನ್ನೋದು ಕಾಣುವಲ್ದು.

ದಿನಾಂಕ ೪.೩.೨೦೧೩ರಂದು ಈಟಿವಿ ಕನ್ನಡ ವಾಹಿನಿ 'ಲಕ್ಷ್ಮೀ ಬಾರಮ್ಮ' ರಾತ್ರಿ ೭.೩೦ಕ್ಕೆ ಪ್ರಸಾರಾವಾದ ಧಾರಾವಾಹಿಯಲ್ಲಿ

ಪೂಜಾರಪ್ಪ: ಮುಹೂರ್ತ ಮೀರಿ ಹೊಗ್ತಾ ಇದೆ. ಮಾಂಗಲ್ಯಧಾರಣೆ ಮಾಡಿಬಹುದಾ

ಮನೆಯವರು: ಸ್ವಲ್ಪ ತಡೀರಿ ಬುದ್ದಿ ನಮಗೆ ಬೇಕಾದವರೊಬ್ಬರು ಬರ್ಬೇಕು.

ಪೂಜಾರಪ್ಪ: ಮುಹೂರ್ತ ಯಾರನ್ನು ಕಾಯೋದಿಲ್ಲಮ್ಮ, ಅಷ್ಟು ಬೇಕಾಧವರಾದ್ರೆ ಇಷ್ಟೊತ್ತದ್ರು ಬೇಗ ಯಾಕ್ ಬಂದಿಲ್ಲ.

ಕಾವೇರಮ್ಮ: ಈಚೆಗೆ ನಮ್ಮೂರ್‍ನಾಗೆ ಈ ಹುಡುಗಿ ಮಾಂಗಲ್ಯ ಮುಟ್ಟಿಲ್ಲ ಅಂದ್ರೆ ಮದುವೇನೆ ಆಗೋಕಿಲ್ಲ ಇತ್ಯಾದಿ.

ಕಾರಣ ಮಧ್ಯಮವರ್ಗದವರು, ಕೆಳವರ್ಗದವರು, ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದಿರುವುದರಿಂದ ಅವರು ದಿನನಿತ್ಯದ ವ್ಯವಹಾರಗಳನ್ನು ಒಳನುಡಿಗಳ ಮೂಲಕವೇ ನಿರ್ವಹಿಸಬೇಕಾಗಿದೆ. ಶೈಕ್ಷಣಿಕವಾಗಿ, ಆರ್ಥಿಕವಾಗಿ ಮುಂದುವರಿದಿರುವ ಮೇಲ್ವರ್ಗದ ಭಾಷಾ ಬಳಕೆಯಲ್ಲಿ ಪ್ರಮಾಣೀಕರಣ, ಆಧುನೀಕರಣಕ್ಕೆ ಹೆಚ್ಚು ತೆರೆದುಕೊಂಡಿರುತ್ತಾರೆ. ಮೇಲ್ವರ್ಗದಿಂದ ದೂರ ಉಳಿದಿವೆಯಾದರೂ ಕುತಂತ್ರ ಅಥವಾ ಕಪಟ ಬುದ್ಧಿಯನ್ನುಳ್ಳ ಪಾತ್ರಗಳಿಗೆ ಸೀಮಿತವಾಗಿವೆ.

೬. ಕುತಂತ್ರಕ್ಕಾಗಿ ಸಾಮಾಜಿಕ ಅಂತಸ್ತು ಮತ್ತು ಅಧಿಕಾರಯುತ ಎನ್ನಿಸಿಕೊಳ್ಳುವ ರಾಜಕಾರಣಿಗಳು(ಎಂ.ಎಲ್.ಎ.) ಒಳನುಡಿಗಳನ್ನು ಬಳಸುತ್ತಾರೆ. ಉದಾಹರಣೆಗೆ ದಿನಾಂಕ ೨೭.೫. ೨೦೧೩ರಂದು ರಾತ್ರಿ ೭ ಗಂಟೆಗೆ ಈಟಿವಿ ಕನ್ನಡ ವಾಹಿನಿಯ ಅಕ್ಕ ಧಾರಾವಾಹಿಯಲ್ಲಿ

ಮೋಚಿ(ರೌಡಿ): ಗೆಂಡೆಚೂರಿ ಹಾಕೊದಕ್ಕಿಂತ ಮುಂಚೆ ಅಣ್ಣನ್ನ ಒಂದು ಮಾತು ಕೇಳುವ ಬರ್ಲ್ಲಾ.

ರುದ್ರಣ್ಣ(ಎಂಎಲ್ಎ): ಅಡ್ಡದಿಡ್ಡಿ ಮಾತಾಡಿದ್ರೆ, ಅಡ್ಡದಿಡ್ಡಿ ಸೀಳ್‌ಬಿಟ್ಟು, ಅಡಿಕೆಮರಕ್ಕೆ ನೇತಾಗ್ಬಿಡ್ತೀನಿ. ನಿಮ್ಮ ಹೆಣವಾ, ಸಿಕಿದ್ದೇನ್ಲಾ?

ಮೋಚಿ: ಚಿಕ್ಕಿದ್ಲಣ್ಣ

ರುದ್ರಣ್ಣ: ಮತ್ತೆನ್ಲಾ

ಮೋಚಿ: ಅಣ್ಣಾ ಕಣ್ಣಿಗೆ ಕಾಣಿಸಿದ್ಲು ಹಾಕಿ ಬಿಡುಕಾ ಅಂತ ಕೇಳಕೆ ಫೋನು ಮಾಡ್ದೆ.

ರುದ್ರಣ್ಣ: ಹಾಕಿ ಬುಡಿ; ಹಾಕಿ ಬುಡಿ; ಮಹಲ್‌ನಲ್ಲಿ ಹಾಕಿ ಬಿಡಿ. ಅದು ಪಬ್ಲಿಕ್ ಪ್ಲೇಸ್. ನಂದು ಪಬ್ಲಿಕ್ ಫೇಸು. ಸಿ.ಸಿ.ಕ್ಯಾಮರಾದಲ್ಲಿ ಗಬಕ್ ಅಮತ ಹಿಡಿಕಂಡ್ ಬಿಡ್ತಾರೆ. ಎಲ್ಲರ್‍ನೂ ಪೊಲೀಸ್ ಸ್ಟೇಷನಲ್ಲಿ ನಿಲ್ಲಿಸಿಬುಟ್ಟು ಕೈಗೆ ಪ್ಲೇಟುಕೊಟ್ಟು ಬುಟ್ಟು ಹೇಳ್ತಾರೆ

ಸಾಲಾಗಿ ನಿಂತು ಹಾಡಿ ಬಿಡು ನಮ್ಮ ಎಂ.ಎಲ್.ಎ. ಸಾಹೇಬ್ರು ಕೊಟ್ಟದು ಸುಪಾರಿಯ ಅಂತ. ಕಾರಣ ಅಕ್ಕ ಧಾರಾವಾಹಿಯಲ್ಲಿ ರುದ್ರಣ್ಣನ ಪಾತ್ರವು ಭೂಗತಪಾತಕಿಗಳ ಸಂಬಂಧವಿಟ್ಟುಕೊಂಡಿರುವುದರಿಂದ ಒಳನುಡಿಗಳಲ್ಲಿ ವ್ಯವಹರಿಸುವುದು ಸಹಜವಾಗಿದೆ. ಭೂಗತಪಾತಕಿಗಳು ಒಳನುಡಿಗಳಲ್ಲಿ ವ್ಯವಹರಿಸುವುದು ಆರ್ಥಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದಿರುವುದರಿಂದ ಪ್ರಮಾಣೀಕರಣ ಕನ್ನಡಕ್ಕೆ ತೆರೆದುಕೊಂಡಿಲ್ಲ. ಆದ್ದರಿಂದ ರಾಜಕಾರಣಿಗಳು ಮತ್ತು ಭೂಗತಪಾತಕಿಗಳು ಕುತಂತ್ರಕ್ಕಾಗಿ ಒಳನುಡಿಗಳನ್ನು ಬಳಸುವುದನ್ನು ಗಮನಿಸಲಾಗಿದೆ.

೭. ಕೆಳವರ್ಗದ ವೃತ್ತಿಯನ್ನು ನಿರ್ವಹಿಸುತ್ತಿದ್ದವರು ಕಾಲಾನಂತರ ಆರ್ಥಿಕವಾಗಿ ಮೇಲ್ವರ್ಗಕ್ಕೆ ತಲುಪಿದಾಗ ತನ್ನ ಒಳನುಡಿಗಳನ್ನು ಕಳಚಿಕೊಂಡು ಪ್ರಮಾಣೀಕರಣ ಕನ್ನಡವನ್ನೇ ಬಳಸುತ್ತಾರೆ. ಉದಾಹರಣೆ(ಕೆಳವರ್ಗದಲ್ಲಿ ಇದ್ದಾಗ)

ದಿನಾಂಕ: ೦೨-೦೫-೨೦೧೩ರಂದು ರಾತ್ರಿ ೭.೩೦ಕ್ಕೆ ಉದಯವಾಹಿನಿಯ ಜೋಕಾಲಿ ಧಾರವಾಹಿಯಲ್ಲಿ.

ಅರ್ಚನಾ: ನೀನು ಹೋಗು ಕೈಕಾಲು ತೊಳ್ಕೊಂಡು ಬಾ, ಊಟಕ್ಕೆ ಬಡಿಸ್ತೀನಿ.

ರಮೇಶ: ನನಗೆ ಊಟ ಬೇಡ

ಅರ್ಚನಾ: ಯಾಕೆ

ರಮೇಶ: ಅದು ಮತ್ತೆ ನಾನು ಗ್ಯಾರೇಜ್‌ಗೆ ಹೋಗ್‌ಬೇಕು.

ಅರ್ಚನಾ: ಕೆಲ್ಸ ಜಾಸ್ತಿ ಇದೆಯಾ

ರಮೇಶ: ಹಾಂ...... ಅದು ಕಂಪನಿಯಿಂದ ಹತ್ತು ಗಾಡಿ ಕಳಿಸ್ತೀವಿ ಅಂತ ಹೇಳಿದ್ರಲ್ಲ ಅದೂs ಹತ್ತು ಗಆಡೀನು ಒಟ್ಟಿಗೆ ಕಳ್ಸಿಬಿಟ್ಟಿದ್ದಾರೆ. ಒಂದು ವಾರ್ದೊಳಗೆ ರೆಡಿ ಮಾಡಿಕೊಡಕ್ಕಾಗಲ್ಲ.

(ಮೇಲ್ವರ್ಗಕ್ಕೆ ತಲುಪಿದಾಗ)

ದಿನಾಂಕ ೨೬-೦೭-೨೦೧೩ ರಂದು ರಾತ್ರಿ ೭.೩೦ಕ್ಕೆ ಉದಯ ವಾಹಿನಿಯ ಜೋಕಾಲಿ ಧಾರಾವಾಹಿಯಲ್ಲಿ.

ಅರ್ಚನಾ: ರೀ ಇವತ್ತು ಎಷ್ಟು ಸಂತೋಷ ಆಗ್ತಾ ಇದೆ ಗೊತ್ತಾ. ಮದುವೆ ಆದಾಗಿನಿಂದ ಮೊನ್ನೆ ಮೊನ್ನೆವರ್ಗೂ ತುಂಬಾ ಕಷ್ಟದಲ್ಲಿದ್ವಿ, ಕಷ್ಟ, ನೋವು, ದುಃಖ, ಅವಮಾನ ಎಲ್ಲಾ ಅನುಭವಿಸಿ ಬಿಟ್ಟಿದೀವಿ. ಏನೂ ಇಲ್ಲದೆ ಫುಟ್‌ಬಾತ್‌ನಲ್ಲಿ ಮಲ್ಗಿದ್ವಿ, ಅದ್ರೇ ಇವತ್ತು ದೊಡ್ಡ ಬಂಗ್ಲೆ ಕಟ್ಟಿದ್ದೀವಿ. ಅವತ್ತು ನಮ್ಮನ್ನ ದೂರ ಮಾಡ್ದೊರೆಲ್ಲ ಇವತ್ತು ಹತ್ರ

ಆಗಿದ್ದಾರೆ. ನಾನು ಇವತ್ತು ಈ ಮಟ್ಟಕ್ಕೆ ಬಂದು ಇಷ್ಟು ಸಂತೋಷವಾಗಿರ್ತಿನಿ ಅಂತ ನನ್ ಕನ್ಸ್ ಮನ್ಸ್‌ಲ್ಲಿ ಅಂದುಕೊಂಡಿರ್ಲಿಲ್ಲ. ಇಷ್ಟಕ್ಕೆಲ್ಲ ಕಾರಣ ನಿಮ್ಮ ಶ್ರಮ, ನಿಮ್ಮ ಪ್ರಾಮಾಣಿಕತೆ.

ರಮೇಶ: ಇಲ್ಲ ಅರ್ಚನಾ ನಿನ್ನ ಪ್ರೋತ್ಸಾಹ, ನಿನ್ನ ಉತ್ಸಾಹ, ಹೆಜ್ಜೆ ಹೆಜ್ಜೆಗೂ ನೀನ್ ನನಗೆ ಧೈರ್ಯ ಹೇಳ್ದೆ ಇದ್ದಿದ್ರೆ ನಾನು ಎಲ್ಲೊ ಒಂದು ಕಡೆ ಸೋತು ಹೋಗ್ತಿದ್ದೆ. ನಮ್ಮ ಜೀವನದಲ್ಲಿ ಇಷ್ಟೊಂದು ಗೆಲುವು ಸಾಧಿಸೋಕೆ ನೀನು ಮತ್ತು ನಂದಿನಿಯೇ ಕಾರಣ.

ಅರ್ಚನಾ: ಹೌದು ರೀ ನಾವು ಈ ಮಟ್ಟಕ್ಕೆ ಬೆಳೆಯೋಕೆ ಕಾರಣನೇ ನಂದಿನಿ.

ಕಾರಣ ಈ ಪ್ರಕ್ರಿಯೆಯು ಇಂತದ್ದೇ ವರ್ಗಕ್ಕೆ ಇಂತದ್ದೆ ಸಂಬೋಧನೆಗಳಿರಬೇಕು ಎಂಬಂತೆ ನಿರ್ದೇಶಿಸುವಂತಿದೆ. ಉದಾಹರಣೆಗೆ ಸಂಬೋಧನಾ ರೂಪಗಳಲ್ಲಿ ಬಳಕೆ ಯಾಗಿರುವುದನ್ನು ಜೋಕಾಲಿ ಧಾರಾವಾಹಿಯಲ್ಲಿ ಅರ್ಚನ ಮತ್ತು ರಮೇಶ ಸನ್ನಿವೇಶದಲ್ಲಿ ಗುರುತಿಸಿ ಕೊಳ್ಳಲಾಗಿದೆ. ಧಾರಾವಾಹಿಗಳಲ್ಲಿ ಕೆಳವರ್ಗದ ಪಾತ್ರಗಳಿಗೆ ಏಕವಚನ ರೂಪದ ಸಂಬೋಧನೆಗಳು, ಮೇಲ್ವರ್ಗದ ಪಾತ್ರಗಳಿಗೆ ಗೌರವರೂಪದ ಸಂಬೋಧನೆಗಳು ಬಳಕೆ ಯಾಗುತ್ತಿವೆ ಎಂದೆನಿಸುತ್ತದೆ.

೮. ಮೇಲುವರ್ಗ ಹಾಗೂ ಮಧ್ಯಮವರ್ಗದವರು, ಕೆಳವರ್ಗದವರನ್ನು ಏಕವಚನದಿಂದ ಸಂಬೋಧಿಸುತ್ತಾರೆ. ಉದಾಹರಣೆಗೆ

ಗೃಹಭಂಗ ಧಾರಾವಾಹಿಯ ಮೊದಲ ಎಪಿಸೋಡ್‌ನಲ್ಲಿ ಬಳಕೆಯಾದ ಸಂಬೋಧನಾ ರೂಪ.

ಗಂಗಮ್ಮ: ಏನಂದೆ, ಏನಂದೆ, ಮುಂಡೆದೆ.

ಅಪ್ಪಣ್ಣ: ನಾನಲ್ಲ ಮುಂಡೆ, ನೀನೆ ಮುಂಡೆ

ಗಂಗಮ್ಮ: ಏನಂದೆ ನನ್ನೆ ಮುಂಡೆ ಅಂತಿಯಾ ಅಯ್ಯೋ ಅನಿಷ್ಟ ಮುಂಡೆದೆ ಹೇಯ್ ಬೋರಾ(ಕೂಲಿ ಕೆಲಸದವನನು ಕರೆಯುತ್ತಾ) ಅವನ್ನ ಹಿಡ್ಕೊಳೋ ಎನ್ನುತ್ತಾಳೆ.

ಬೋರಾ: ಆಯ್ತು ಅಮ್ಮರೇ, ಬುದ್ದಿ, ಬುದ್ದಿ, ಬುದ್ದಿ, ಓಡ್ಬೇಡಿ.

ಅಪ್ಪಣ್ಣ: ಬೀಡೋ, ಲೇಯ್ ಬೋರಾ ಬಿಡೊ, ಬೋರಾ ಬಿಡೋ.

ಕಾರಣ ಇದು ಸಹಜವಾದಂತಹ ಭಾಷಿಕ ವಿಚಾರವಾಗಿದ್ದರೂ ಸಮಾಜದಲ್ಲಿ ಬಳಕೆಯಾಗು ತ್ತಿರುವ ಸಾಮಾಜಿಕ ಸಂಬೋಧನಾ ರೂಪಗಳು ಬದ್ಧವಾಗಿರುವುದು ಗಮನಿಸುವಂತಹ ಅಂಶವಾಗಿದೆ.

೯. ಹಾಸ್ಯ ಧಾರಾವಾಹಿಗಳಲ್ಲಿ ನಗೆ ಉಕ್ಕಿಸಲು ಕೆಲವು ಗೌರವ ಸಂಬೋಧನೆಗಳನ್ನು ಮತ್ತು ಏಕವಚನ, ಸಂಬೋಧನೆಗಳನ್ನು ಬಳಸುತ್ತಾರೆ.

ದಿನಾಂಕ ೨೦-೧೧-೧೩ರಂದು ರಾತ್ರಿ ೧೦.೩೦ಕ್ಕೆ ಜೀ ಕನ್ನಡ ವಾಹಿನಿಯ ಪಾಂಡುರಂಗ ವಿಠಲ ಧಾರಾವಾಹಿಯಲ್ಲಿ.

ಪಾಂಡುರಂಗ: ಎಲ್ಲರೂ ಹೇಗಿದ್ದಾರೆ ಅಜ್ಞಾನಿಗಳೆ.

ಜಾಜಿ: ನೀವೆಲ್ಲ ಒನ್ ಮಂತ್ ಎಲ್ಲೋಗ್ರಿ..... ಅಜ್ಞಾನಿಗಳು ಅಂತ ಅಂದ್ರೆ ನಾನ್ ಸುಮ್ನಿರಲ್ಲ.

ಪಾಂಡುರಂಗ: ನಾನು ಸುಜ್ಞಾನಿ ಆದ ಮೇಲೆ ನೀವೆಲ್ಲ ಅಜ್ಞಾನಿಗಳು ತಾನೇ!

ಜಾಜಿ: ಅತ್ತೇ ನಿಮ್ಮಗನಿಗೆ ಸಪೋರ್ಟ್ ಮಾಡೋದು ಬಿಟ್ಬು ಬಿಡಿ.

ಪಾಂಡುರಂಗ: ಒಂದು ತಿಂಗಳ ಹಿಂದೆ ನೀವು ನನ್ನ ಜೊತೆ ಜಗಳ ಆಡಿದ್ದು ನೆನಪಿದೇಯಾ, ನೆನಪಿಲ್ಲಂತಾದ್ರೆ ಅಲ್ನೋಡಿ ಎಲ್ಲಾ ನೆನಪಾಗುತ್ತೆ.

ಕಾರಣ ಹಾಸ್ಯಕ್ಕಾಗಿ ಏಕವಚನ ಸಂಬೋಧನೆ ಮಾಡುವುದು ಸಹಜ. ಆದರೆ ವ್ಯಂಗ್ಯಕ್ಕಾಗಿ ಗೌರವ ಸಂಬೋಧನೆ ಮಾಡುವುದು ವಿಶೇಷವಾಗಿದೆ.

೧೦. ಕೌಟುಂಬಿಕ ಧಾರಾವಾಹಿಗಳಲ್ಲಿ ಇಂಗ್ಲಿಷ್ ಪದ ಬಳಕೆ ಮಾಡಿ ಬಯ್ಯುತ್ತಾರೆ. ಉದಾಹರಣೆಗೆ

ದಿನಾಂಕ ೨೩-೦೮-೨೦೧೩ರಂದು ರಾತ್ರಿ ೮.೦೦ ಗಂಟೆಗೆ ಸುವರ್ಣವಾಹಿನಿಯ 'ಅರಗಿಣಿ' ಧಾರಾವಾಹಿಯಲ್ಲಿ ಬಳಕೆಯಾದ ಬೈಯ್ಗುಳ.

ಸಿದ್ಧಾರ್ಥ: ದಿಸ್ ಈಜ್ ಟೂ ಮಚ್ ಪೂಜಾ. ನಮ್ಮ ರಿಲೇಷಷಿಪ್ ಬಗ್ಗೆ ಎಲ್ಲಿ ಯಾವಾಗ ಹೇಳ್ಬೇಕು ಅಂತ ನನಗೆ ಚೆನ್ನಾಗಿ ಗೊತ್ತಿದೆ.

ಖುಷಿ ಸಹೋದ್ಯೋಗಿ: ಚೆನ್ನಾರಿ ನಿನ್ನ ಬಾಯಿ ಮಾತ್ರ ಅಲ್ಲ, ನಿನ್ನ ಕೈ ಕಾಲು ಸುಮ್ಮಿರೊಲ್ವಲ್ಲ. ನನ್ ಫ್ರೆಂಡ್‌ಗೆ ಗಾಸಿಪ್ ಹೇಳೋದು ಬಾಕಿ ಇತ್ತು.

ಖುಷಿ: ಸಾರಿ ಕಣ್‌ರಿ(ಎನ್ನುತ್ತಾ) ಇನ್ವೆಂಟ್ರಿ ಕಛೇರಿ ನಂಬರ್ ಬೇಕಾಗಿತ್ತು ಕಣ್‌ರಿ.

ಸಹೋದ್ಯೋಗಿ: ಅದಕ್ಕೆ ಪೋನ್ ಬೀಳಿಸಿ ಬಿಡೋದಾ, ಬೀ ಕೇರ್ ಫುಲ್ ಚೆನ್ನಾರಿ, ಈ ವೋವರ್ ಸ್ಪೀಡ್ ಒಳ್ಳೆಯದಲ್ಲ.

ಕಾರಣ ಶೈಕ್ಷಣಿಕವಾಗಿ, ಆರ್ಥಿಕವಾಗಿ ವಿದ್ಯಾವಂತ ಕೌಟುಂಬಿಕ ಧಾರಾವಾಹಿಯಲ್ಲಿ ಬರುವ ಪಾತ್ರಗಳ ಮಾತಿನಲ್ಲಿ ಇಂಗ್ಲಿಷ್ ಪದ ಬಳಕೆ ಮಾತ್ರವಲ್ಲದೆ, ಇಂಗ್ಲಿಷ್‌ನಲ್ಲೇ ಬಯ್ಗುಳ ಮಾಡುವುದು ವಿಶೇಷವಾಗಿದೆ.

೧೧. ಪ್ರಾದೇಶಿಕ ಧಾರಾವಾಹಿಗಳಲ್ಲಿ ಅನ್ಯಭಾಷಾ ಬಳಕೆಯಾಗದೆ ಒಳನುಡಿಗಳಲ್ಲಿ ಬಯ್ಗುಳಗಳ ಬಳಕೆಯಾಗುತ್ತವೆ. ಉದಹಾರಣೆಗೆ

ಮಲೆಗಳಲ್ಲಿ ಮದು ಮಗಳು ಧಾರಾವಾಹಿಯ ಮೊದಲ ಮತ್ತು ಎರಡನೇ ಎಪಿಸೋಡ್‌ನಲ್ಲಿ ಬೈಗುಳ ಬಳಕೆ.

ಸುಬ್ಬಣ್ಣ ಹೆಗ್ಗಡೆ: ಅವ್ನ ಮನೆ ಹಾಳಾಗಾ ಎತ್ತ ಸತ್ನೊ.

ತಿಮ್ಮಯ್ಯ ಹೆಗ್ಗಡೆ: ಎಲ್ಲಿ ಸತ್ರೋ ನಿಮ್ ಬಿಡಾರಕ್ಕೆ ಬೆಂಕಿ ಬೀಳಾ, ಊರಿಗೆಲ್ಲ ಹಗಲಾದ್ರು ನಿಮ್ಗಿನ್ನ ಬಿಳಿ ಬೀಳ್ಲಿಲ್ವೆನ್ರೋ.....

ಯಾರು ಇಲ್ಲೇನ್ರೋ ಕೇರೀಲಿ, ಎಲ್ಲಿ ಹಾಳಾದ್ರೋ ಎಲ್ಲಾ, ಎಲ್ಲಿ ಕುಟ್ಟಿ ನಾಶ್ನ ಆದ್ರೇನೋ... ತ್ಥೂ.... ಹೇ, ಹೇ, ಸಿದ್ಧಾ, ತಿಮ್ಮ ಬೈರಾ, ಸಣ್ಣ, ಕೂಕೊಣಕ್ಕೆ ಏನು ಆಗಿದೆ ನಿಮ್ಗೆ? ನಿಮ್ಮ ಗಂಟ್ಲು ಕೆಟ್ಟೋಗಾ ತ್ಥೂ.... ಮುಂಡೆ ಮಕ್ಳಾ,

ತ್ಥೂ...... ಎಷ್ಟು ಕೂಗು ಬೇಕೋ ನಿಮ್ಮನ್ನ, ಸೋಮಾರಿ ನನ್ಮಕ್ಳ, ದಿಕ್ಕಿನ್ನ ಹೊತ್ತು ಹಾಳಾಗ್ಯದೇ ಏನಾ? ಬಿಸಿಲು ನೆತ್ತಿಗೆ ಬಂದ್ರು ನೀವ್ ಮಾತ್ರ ಬರಲ್ಲಾ.

ಕಾರಣ ಪ್ರಾದೇಶಿಕ ಧಾರಾವಾಹಿಗಳಲ್ಲಿ ಒಳನುಡಿಗಳು ಪ್ರಧಾನವಾಗಿ ಬಳಕೆಯಾಗುತ್ತವೆ. ಅದರಲ್ಲೂ ಹೆಚ್ಚಿನ ಪ್ರಮಾಣದಲ್ಲಿ ಅನಕ್ಷರಸ್ಥ ಪಾತ್ರಗಳೇ ಬರುವುದರಿಂದ ಅವರ ಮಾತಿನ ಮೇಲೆ ಬೇರೆ ಭಾಷೆಯ ಪ್ರಭಾವ ತುಂಬ ಕಡಿಮೆ.

೧೨. ಐತಿಹಾಸಿಕ ಧಾರಾವಾಹಿಗಳಲ್ಲಿಯೂ ಕೂಡ ಕಡಿಮೆ ಪ್ರಮಾಣದಲ್ಲಿ ಬಯ್ಗುಳಗಳು ಬಳಕೆಯಾದರು ಸಂಸ್ಕೃತಭೂಯಿಷ್ಟವಾದ ಕನ್ನಡ ಮತ್ತು ಉರ್ದು ಭಾಷಾ ಬಳಕೆಯಲ್ಲಿ ಬಯ್ಯುವುದನ್ನು ಕಂಡುಕೊಳ್ಳಲಾಗಿದೆ(ಉರ್ದುಭಾಷೆ ಮುಸ್ಲಿಂ ಪಾತ್ರಗಳಿಗೆ ಸೀಮಿತವಾಗಿವೆ).

ದಿನಾಂಕ ೦೧-೦೨-೨೦೦೩ರಂದು ರಾತ್ರಿ ೮.೩೦ಕ್ಕೆ ಸುವರ್ಣವಾಹಿನಿಯ ಕೆಳದಿ ಚೆನ್ನಮ್ಮ ಧಾರಾವಾಹಿಯಲ್ಲಿ ಬಳಕೆಯಾದ ಬಯ್ಗುಳಗಳು.

ಸಯ್ಯದ್ ಸರ್ಜಖಾನ್: "ವೊಸ್ಲಾಲಾ ವೊಸ್ಲಾರಿಕೆ ಜೀಲಾಲ್ ಖಾನ್ ಹೀಗೆ ಆಗುತ್ತೆ ಅಂತ ಹೇಳೋದಕ್ಕೆ ನಾನೇನು ದೇವರು ಅಲ್ಲ.

ಸಯ್ಯದ್ ಸರ್ಜಖಾನ್: "ಜೀತ್ ಹಾಮಾರಿ ಹೋಗಾ" ಜೀನ್ನಪಂತ್ ಇರೋವರಿಗೂ ನಿಮಗೆ ಏನು ಆಗೋದಿಲ್ಲ.

ಸಯ್ಯದ್ ಸರ್ಜಖಾನ್: "ಸರ್ವನಾಶ ಹೋಗ್ಯೆ"

ದಿನಾಂಕ ೫-೩-೧೪ರಂದು ರಾತ್ರಿ ೮.೩೦ಕ್ಕೆ ಈ ಟಿ.ವಿ ಕನ್ನಡ ವಾಹಿನಿಯ ಶ್ರೀ ರಾಘವೇಂದ್ರ ಮಹಿಮೆ ಧಾರಾವಾಹಿಯಲ್ಲಿ ಬಳಕೆಯಾದ ಬಯ್ಗುಳ.

ಉಲ್ಲಾಜಿ: ದೇಕೊ ಹೇ ಕಾಮ್ ಕಿಸಿಕೋ ಅಭಿ ಮೂಲಹೊನಾಚಾಯಿಯೇ ಅಲ್ಲ ಕೋ ನಾಭೀ ಹೋನಾಜಾಯಿಯೇ ಐಸ ಹೇ ಕರೆಂಗೆ ಮುಲ್ಲ ಹೇ ಹಮಾರಾ ಮುನ್ಸಿಕ ಸಮಾಜಾರ್ ಅಲ್ಲಕೋ ಕತಂ, ಕತಂ ಖರೇಂಗೆ, ತುಮ್ ಜಾವ್.

ಕಾರಣ ಭಾಷಾ ಬಳಕೆಯ ದೃಷ್ಟಿಯಿಂದ ಧಾರಾವಾಹಿಗಳನ್ನು ವಿಂಗಡಿಸಬಹುದು. ಸಾಮಾಜಿಕ ಧಾರಾವಾಹಿಗಳಲ್ಲಿ ಬಳಕೆಯಾಗುವ ಭಾಷೆಗೂ ಐತಿಹಾಸಿಕ ಧಾರಾವಾಹಿಗಳಲ್ಲಿ ಬಳಕೆಯಾಗುವ ಭಾಷೆಗೂ ವ್ಯತ್ಯಾಸವಿದೆ. ಐತಿಹಾಸಿಕ ಧಾರಾವಾಹಿಗಳಲ್ಲಿ ಬಳಕೆಯಾಗಿರುವ ಭಾಷೆ ಬಯ್ಗುಳ ಹಂತದಲ್ಲಿಯು ಉರ್ದು ಹಾಗೂ ಸಂಸ್ಕೃತ ಭೂಯಿಷ್ಟವಾಗಿರುವ ಪದಗಳು ಬಳಕೆಯಾಗಿರು ವುದು ಕಂಡುಬರುತ್ತದೆ. ಐತಿಹಾಸಿಕ ಧಾರಾವಾಹಿಗಳ ವಸ್ತುವೆ ಐತಿಹಾಸಿಕವಾಗಿರುವುದರಿಂದ ಭಾಷಾ ಬಳಕೆಯು ಆಯಾ ಕಾಲಘಟ್ಟದ ಭಾಷಾ ಬಳಕೆ ಆಗುವುದು ಸಹಜ.

೧೩. ಧಾರಾವಾಹಿ ಶೀರ್ಷಿಕೆಗಳಿಗೆ ದಶಕದಿಂದ ಈಚೆಗೆ ವ್ಯಕ್ತಿನಾಮಗಳನ್ನು ಬಳಸಿಕೊಳ್ಳುವ ಮೂಲಕ ಹೊಸ ಪ್ರಯೋಗವನ್ನು ಮಾಡಿದ್ದಾರೆ. ಅಲ್ಲದೆ ಮಹಿಳಾ ವೀಕ್ಷಕರನ್ನು ಕೇಂದ್ರೀಕರಿಸಿರುವುದರಿಂದ ಮಹಿಳಾ ಶೀರ್ಷಿಕೆಗಳೇ ಹೆಚ್ಚಾಗಿವೆ. ಅಲ್ಲದೆ ಕಳೆದೆರಡು ವರ್ಷದಿಂದ ಈವರೆಗೆ ಜನಪ್ರಿಯ ಚಲನಚಿತ್ರಗಳ ಶೀರ್ಷಿಕೆಗಳನ್ನು ಬಳಸಿಕೊಳ್ಳಲಾಗುತ್ತಿದೆ. ಉದಾಹರಣೆಗೆ: ವ್ಯಕ್ತಿನಾಮಗಳು.

ಚಿ.ಸೌ.ಸಾವಿತ್ರಿ, ಲಕುಮಿ, ಸೂರ್ಯಕಾಂತಿ, ಕಲ್ಯಾಣಿ, ಲಕ್ಷ್ಮಿ ಬಾರಮ್ಮ, ಪುಟ್ಟಗೌರಿ ಮದುವೆ, ಅರಗಿಣಿ, ಅಮೃತವರ್ಷಿಣಿ, ಅಕ್ಕ, ಕೆಳದಿ ಚನ್ನಮ್ಮ, ಸೀತೆ ಹಾಗೂ ಜನಪ್ರಿಯ ಚಲನ ಚಿತ್ರಗಳ ಶೀರ್ಷಿಕೆಗಳು. ಜೊತೆ ಜೊತೆಯಲಿ, ಮಿಲನ, ಮುಂಗಾರು ಮಳೆ, ಚಂದ್ರಚಕೋರಿ, ಗಾಳಿಪಟ, ಅಗ್ನಿಸಾಕ್ಷಿ ಇತ್ಯಾದಿ ಧಾರಾವಾಹಿಗಳನ್ನು ಬಳಸಿಕೊಳ್ಳಲಾಗಿದೆ.

ಕಾರಣ ಇತ್ತೀಚಿನ ದಿನಗಳಲ್ಲಿ ಮಹಿಳಾಪರ ಚಿಂತನೆಗಳ ಪ್ರಭಾವದಿಂದ ಹಾಗೂ ಧಾರಾವಾಹಿಗಳನ್ನು ಹೆಚ್ಚು ಮಹಿಳೆಯರೇ ವಿಕ್ಷಿಸುವುದರಿಂದ ಮಹಿಳೆಯರನ್ನೇ ಕೇಂದ್ರವಾಗಿರಿಸಿಕೊಂಡು ಶೀರ್ಷಿಕೆಗಳನ್ನು ನೀಡುತ್ತಿರುವುದು ತಂತ್ರವೇ ಸರಿ. ಹಾಗೆಯೇ ಧಾರಾವಾಹಿಗಳಿಗೆ ಬೇಡಿಕೆ ತರುವುದಕ್ಕಾಗಿ ಜನಪ್ರಿಯ ಚಲನಚಿತ್ರಗಳ ಶೀರ್ಷಿಕೆಗಳನ್ನು ನೀಡಲಾಗುತ್ತದೆ ಎಂದೆನಿಸುತ್ತದೆ.

೧೪. ವ್ಯಕ್ತಿನಾಮಗಳು ಸಹ ಮೊದಲ ತಲೆಮಾರುಗಳು ಸಾಮಾಜಿಕ ಮತ್ತು ಆರ್ಥಿಕ ಅಂತಸ್ತನ್ನು ಸೂಚಿಸಿದರೆ ಎರಡನೇ ತಲೆಮಾರುಗಳು ದೂರ ಸರಿದಿದ್ದು ಅಲ್ಲಲ್ಲಿ ಕಾಣಿಸಿಕೊಳ್ಳುತ್ತವೆ. ಮೂರನೆಯ ತಲೆಮಾರುಗಳು ಯಾವ ಸಾಮಾಜಿಕ ವರ್ಗ, ಯಾವ ಅಂತಸ್ತನ್ನು ಗುರುತಿಸಲು ಸಾಧ್ಯವಿಲ್ಲದೆ ಇರುವುದನ್ನು ವ್ಯಕ್ತಿನಾಮಗಳಿಂದ ತಿಳಿಯಲಾಗಿದೆ. ಉದಾಹರಣೆಗೆ

ಅರಗಿಣಿ ಧಾರಾವಾಹಿಯಲ್ಲಿ ಆಧುನಿಕ ವ್ಯಕ್ತಿನಾಮಗಳು: ಸಿದ್ದಾರ್ಥ ಪಾಟೀಲ್, ಶಶಾಂಕ್, ಪೂಜಾ ಸಿಂದ್ಯಾ, ಅಕ್ಷರಾ, ಖುಷಿ, ಧನಲಕ್ಷ್ಮಿ, ಪಾವಣಿ, ಅಮೃತವರ್ಷಿಣಿ ಧಾರಾವಾಹಿಯಲ್ಲಿ ವಿಜಯ್, ವಿನಯ್, ಅಮೃತವರ್ಷಿಣಿ, ಯಶೋಧ, ಕೋಮಲ.

ಬಂಗಾರ ಧಾರವಾಹಿಯಲ್ಲಿ: ಸಿದ್ಧಾರ್ಥ, ಚಂದ್ರಮೋಹನ, ಕಾವೇರಿ, ಚಂದ್ರಾ, ಸೌಪಾನಿಕಾ.

ಲಕ್ಷ್ಮೀ ಬಾರಮ್ಮ ಧಾರಾವಾಹಿಯಲ್ಲಿ: ಚಂದು, ರಾಮು, ಲಕ್ಷ್ಮಿ, ಪಾರ್ವತಿ, ಕಲ್ಪನಾ, ನೇತ್ರಾ, ಕುಮುದಾ, ಶ್ರುತಿ.

ಮಹಾಪರ್ವ ಧಾರಾವಾಹಿಯಲ್ಲಿ ಚಿಂತನ್, ಚಿನ್ಮಯಿ, ವಿದ್ಯಾಧರ, ಪರಿಣಿತ, ಪರೀಕ್ಷಿತ್.

ಕಾರಣ ವ್ಯಕ್ತಿನಾಮಗಳು ಇತ್ತೀಚೆಗೆ ತನ್ನ ಸಾಮಾಜಿಕ ಚಹರೆಯನ್ನು ಕಳಚಿಕೊಳ್ಳುತ್ತಿವೆ ಎಂಬ ಅಭಿಪ್ರಾಯದ ಹಿನ್ನೆಲೆಯಲ್ಲಿ ಮೂರು ತಲೆಮಾರಿನ ವ್ಯಕ್ತಿ ನಾಮಗಳ ಸ್ವರೂಪವನ್ನು ಗಮನಿಸಿದಾಗ ತಿಳಿದುಬರುತ್ತದೆ. ಏಕೆ ವ್ಯಕ್ತಿನಾಮಗಳಲ್ಲಿ ಬದಲಾವಣೆ ಕಂಡುಬರುತ್ತದೆ ಎಂದರೆ ತಮ್ಮ ಸಾಮಾಜಿಕ ಚಹರೆಯನ್ನು ಇನ್ನೊಂದು ಸಾಮಾಜಿಕ ಚಹರೆಯೊಂದಿಗೆ ಸಮಾನತೆಯನ್ನು ಕಾಪಾಡಲು ಈ ರೀತಿ ಬದಲಾವಣೆ ಯಾಗುತ್ತಿದೆ ಎಂದೆನಿಸುತ್ತದೆ.

೧೫. ಗಾದೆ ಮಾತುಗಳನ್ನು ಒಂದನೇ ತಲೆಮಾರು ಮತ್ತು ಎರಡನೇ ತಲೆಮಾರಿನವರು ಧಾರಾವಾಹಿಗಳಲ್ಲಿ ಹೆಚ್ಚಾಗಿ ಬಳಸುತ್ತಾರೆ. ಮೂರನೇ ತಲೆಮಾರು ಬಳಕೆಯಲ್ಲಿ ತುಸು ದೂರ ಉಳಿದಿದ್ದಾರೆ. ಉದಾಹರಣೆಗೆ: ದಿನಾಂಕ ೯-೭-೧೩ ರಂದು ರಾತ್ರಿ ೨.೩೦ಕ್ಕೆ ಸುವರ್ಣವಾಹಿನಿಯ 'ಅಮೃತವರ್ಷಿಣಿ' ಧಾರಾವಾಹಿಯಲ್ಲಿ ಬಳಕೆಯಾದ ೨ನೇ ತಲೆಮಾರಿನ ಗಾದೆ ಮಾತು.

ಯಶೋಧ: 'ಆತುರಗೆಟ್ಟು ಆಂಜಾನೇಯಂತರ 'ಸೂರ್ಯನ್ನ ಹಣ್ಣು ಎಂದುಕೊಂಡು ತಿನ್ನೋದಕ್ಕೋಗಿ ಮೂತಿ ಸುಟ್ಟುಕೊಂಡ್ನಲ್ಲ" ಹಾಗೆ ನೀನು ಮನೆ ಬಿಟ್ಟು ಬಂದು ಏನಾದ್ರು ಯಡವಟ್ಟು ಮಾಡಿಕೊಂಡ್ಬಿಟ್ಟೀಯಾ.

ಉದಯ ವಾಹಿನಿಯಲ್ಲಿ ರಾತ್ರಿ ೯.೩೦ಕ್ಕೆ ಮದರಂಗಿ ಧಾರಾವಾಹಿಯ ೧೦ನೇ ಎಪಿಸೋಡನಲ್ಲಿ ೨ನೇ ತಲೆಮಾರಿನವರು ಬಳಸಿದ ಗಾದೆ ಮಾತು.

ಸತ್ಯವತಿ: "ಉಣಸಿ ಮರ ಮುಪ್ಪಾದ್ರು ಉಳಿ ಮುಪ್ಪೇನು?

ಸತ್ಯವತಿ: 'ಬೀಜದಂಗ ಮರ ಅಪ್ಪನಂಗ ಮಗಳು'

ಕಾರಣ ಗಾದೆ, ಒಗಟು, ನುಡಿಗಟ್ಟುಗಳ ಇತ್ತೀಚಿನ ದಿನಗಳಲ್ಲಿ ಹೊಸ ತಲೆಮಾರಿನಲ್ಲಿ ಬಳಕೆಯಿಂದ ತಪ್ಪಿವೆ. ಬಳಕೆಯಾಗುವ ಸಂದರ್ಭಗಳೇ ಇಲ್ಲವಾಗಿ ಅವು ಮೊದಲು

ಮತ್ತು ಎರಡನೆಯ ತಲೆಮಾರಿನಲ್ಲಿ ಬಳಕೆಯಲ್ಲಿರುವುದನ್ನು ಗಮನಿಸಲಾಗಿದೆ. ಅಲ್ಲದೆ ನಗರವಾಸಿಗಳಾಗಿರು ವುದರಿಂದ ಮೂರನೇ ತಲೆಮಾರುಗಳಿಂದ ದೂರ ಉಳಿದಿವೆ. ನಗರ ವಾಸಿಗಳಲ್ಲಿ ಬಳಕೆ ಪ್ರಮಾಣ ಕಡಿಮೆ ಎಂದೆನಿಸುತ್ತದೆ.

೧೬. ಕೌಟುಂಬಿಕ ಮತ್ತು ಪ್ರಾದೇಶಿಕ ಧಾರಾವಾಹಿಗಳಲ್ಲಿ ಗಾದೆ ಮಾತುಗಳು ಹೆಚ್ಚಾಗಿ ಬಳಕೆಯಾಗುತ್ತಿವೆ. ಉದಾಹರಣೆಗೆ

೧. ಗುಡ್ಡದ ಭೂತ ಧಾರವಾಹಿಯಲ್ಲಿ ೨ನೇ ತಲೆಮಾರು ಬಳಸಿದ ಗಾದೆ ಮಾತು.

ಶ್ರೀನಿವಾಸ: ಅಂಗೈ ತೋರಿಸಿ ಅವಲಕ್ಷಣ ಅನ್ನಿಸಿಕೊಂಡಂಗಾಯ್ತು.

೨. ಗೃಹಭಂಗ ಧಾರಾವಾಹಿಯಲ್ಲಿ ೧ನೇ ತಲೆಮಾರಿನವರು ಬಳಸಿದ ಗಾದೆಮಾತು.

ಮಹಾದೇವಯ್ಯ: 'ಬೀಸೋ ದೊಣ್ಣೆ ತಪ್ಪಿಸ್ಕೊಳಿ'

ಕಾರಣ ಕೌಟುಂಬಿಕ ಮತ್ತು ಪ್ರಾದೇಶಿಕ ಧಾರಾವಾಹಿಗಳಲ್ಲಿ ಬರುವ ಪಾತ್ರಗಳು ಹೆಚ್ಚು ಹೆಚ್ಚು ಹಳ್ಳಿ ಸೋಗಡಿನ ವಸ್ತು ಮತ್ತು ಪಾತ್ರಗಳಾಗಿರುವುದರಿಂದ ಸಹಜವಾಗಿಯೇ ಗಾದೆ ಮಾತುಗಳು ಬಳಕೆಯಾಗುತ್ತಿವೆ.

೧೭. ಉತ್ತರ ಕರ್ನಾಟಕದ ಕನ್ನಡವನ್ನು ಹಾಸ್ಯಕ್ಕೆ ಬಳಕೆ ಮಾಡಲಾಗಿದೆ. ಉದಾಹರಣೆಗೆ

ದಿನಾಂಕ ೬-೧೨-೨೦೧೩ ರಂದು ರಾತ್ರಿ ೧೦.೩೦ಕ್ಕೆ ಸುವರ್ಣವಾಹಿನಿಯ ಪಂಚರಂಗಿ ಪೊಂ ಪೊಂ ಧಾರಾವಾಹಿಯಲ್ಲಿ ಉತ್ತರ ಕರ್ನಾಟಕದ ಒಳನುಡಿ ಬಳಕೆಯನ್ನು ರೇಣುಕಾ ಮತ್ತು ಮೈಲಾರಿ ಎಂಬ ಪಾತ್ರಗಳು ನಿರೂಪಿಸುತ್ತವೆ.

ರೇಣುಕಾ: ಸವದತ್ತಿ ಎಲ್ಲವ್ವ ಇವ್ರನ್ನ ನೋಡಿದ್ರೆ ಕಟ್ಟಿಕೋ ಬೇಕು ಅನಿಸ್ಲಕ್ಕತ್ತದಾ.

ಮೈಲಾರಿ: ಸಿದ್ದಾರ್ಥರೂಢ ಇದೇನಪ್ಪ ಗೆಜ್ಜೆ ಶಬ್ದ ಕೇಳ್ಲಾ ಕತ್ತಾದಾ. ಈಕೀನಾ ಹೇ ಈಕೀನಾ... ಈಕಿ ಎಲ್ಲಿ ಎಲ್ಲಿ ವಾದ್ಲು ನಮ್ಮಿಗ್ಯೇಕೆ ದೆವ್ವನ್ನ ಕಳಿಸಿದ್ಯಾಪ್ಪ ಸಿದ್ದಾರೂಢ, ಯಾವ್ದೋಕ ದೆವ್ವಾ ಬಂದೈತಿ ಅಂದುಕೊಂಡ್ರಾ ನನ್ನ ಹೆಂಡ್ತಿ ಮೈಯಾಗ ಬಂದದಾ.

ಬದಲಾದ ಗಾದೆ ಮಾತು.

ಕಾರಣ ಹಾಸ್ಯವು ಹೆಚ್ಚು ಪರಿಣಾಮಕಾರಿಯಾಗಿ ಮುಟ್ಟಿಸುವ ದೃಷ್ಟಿಯಿಂದ ಉತ್ತರ ಕರ್ನಾಟಕದ ಒಳ ನುಡಿಗಳನ್ನು ಬಳಸಲಾಗುತ್ತದೆ ಎನಿಸುತ್ತದೆ. ವಿಶೇಷವಾಗಿ ಹಾಸ್ಯದಲ್ಲಿ ಬಳಕೆಯಾಗುತ್ತಿರುವ ಉತ್ತರ ಕರ್ನಾಟಕದ ಒಳನುಡಿ ಸಂವಹನಕ್ಕೆ ಅಡ್ಡಿಯಾಗುತ್ತಿಲ್ಲ ಎನ್ನುವುದು ಗಮನಿಸುವಂತಹ ಅಂಶವಾಗಿದೆ.

ಅನುಬಂಧಗಳು

೧. ಆಕರಗಳು

೨. ಆಯ್ದ ಧಾರಾವಾಹಿಗಳ ವಿವರ

ಆಕರಗಳು

ಪರಾಮರ್ಶನ ಗ್ರಂಥಗಳು

೧. ಅಂಗಡಿ ಎಸ್.ಎಸ್., ೨೦೦೨, **ಸಂಬಂಧ ವಾಚಕಗಳು ಮತ್ತು ಸಂಬೋಧನೆಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨. ಅಂಗಡಿ ಎಸ್.ಎಸ್., ೨೦೦೦, **ಕನ್ನಡ ಕ್ರಿಯಾಪದಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩. ಅಂಗಡಿ ಎಸ್.ಎಸ್., ೧೯೯೬, **ಭಾಷಾ ಕ್ಷೇತ್ರಕಾರ್ಯ**, ಸಮಾಜ ಪುಸ್ತಕಾಲಯ, ಧಾರವಾಡ.

೪. ಅಶೋಕ ಕುಮಾರ ರಂಜೇರೆ(ಸಂ), ೨೦೦೦, **ವಿವಿಧ ವೃತ್ತಿ ಪದಕೋಶ**, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫. ಅಶೋಕಕುಮಾರ ರಂಜೇರೆ(ಸಂ), ೨೦೧೦, **ಪದವಿನ್ಯಾಸ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬. ಕಲಬುರ್ಗಿ ಎಂ.ಎಂ., ೧೯೮೯, **ಕನ್ನಡ ನಾಮವಿಜ್ಞಾನ**, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೭. ಕಲಬುರ್ಗಿ ಎಂ.ಎಂ., ೧೯೯೨, **ಕನ್ನಡ ಸಂಶೋಧನಾಶಾಸ್ತ್ರ**, ಸೌಜನ್ಯ ಪ್ರಕಾಶನ, ಧಾರವಾಡ.

೮. ಕಲಾವತಿ ಬಿ.ಜಿ., ೨೦೧೦, **ಮಾಧ್ಯಮ ಮತ್ತು ಮಹಿಳೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೯. ಕೃಷ್ಣಯ್ಯ ಎಂ.ಎಚ್., ೧೯೯೯, **ಸಂಕ್ಷಿಪ್ತ ಕನ್ನಡ ಭಾಷೆಯ ಚರಿತ್ರೆ**, ಅಂಕಿತ ಪುಸ್ತಕ, ಬೆಂಗಳೂರು.

೧೦. ಕೃಷ್ಣಪರಮೇಶ್ವರ ಭಟ್ಟ, ೨೦೧೩, **ಭಾಷೆ ಮತ್ತು ಸಾಮಾಜಿಕ ಸಂದರ್ಭ**, ಅಭಿನವ

ಪ್ರಕಾಶನ, ಬೆಂಗಳೂರು.

೧೧. ಕುಶಾಲಪ್ಪಗೌಡ ಕೆ., ೨೦೧೪, **ಕನ್ನಡ ಸಂಕ್ಷಿಪ್ತ ವ್ಯಾಕರಣ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೨. ಕೆಂಪೇಗೌಡ ಕೆ., ೧೯೯೩, **ಸಾಮಾನ್ಯ ಭಾಷಾ ವಿಜ್ಞಾನ**, ಭಾರತಿ ಪ್ರಕಾಶನ, ಮೈಸೂರು.

೧೩. ಕೆಂಪೇಗೌಡ ಕೆ., ೨೦೦೩, **ಕನ್ನಡ ಉಪಭಾಷೆಗಳ ಅಧ್ಯಯನ**, ಭಾರತೀ ಪ್ರಕಾಶನ, ಮೈಸೂರು.

೧೪. ಚಂದ್ರಶೇಖರ್ ಬಿ.ಎಸ್., ೨೦೦೩, **ಸಂವಹನ ಮಾಧ್ಯಮಗಳು**, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೫. ಚಿದಾನಂದಮೂರ್ತಿ ಎಂ., ೨೦೧೨, **ಭಾಷಾ ವಿಜ್ಞಾನದ ಮೂಲತತ್ವಗಳು**, ಡಿ.ವಿ.ಕೆ.ಮೂರ್ತಿ ಪ್ರಕಾಶನ, ಮೈಸೂರು.

೧೬. ಧಾರವಾಡಕರ ರಾ.ಯ., ೨೦೦೪, **ಕನ್ನಡ ಭಾಷಾಶಾಸ್ತ್ರ**, ಗೀತಾ ಬುಕ್‌ಹೌಸ್, ಮೈಸೂರು.

೧೭. ನಂಜಯ್ಯ ಹೊಂಗನೂರು, ೨೦೦೯, **ಸ್ಥಳನಾಮಗಳು**, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೧೮. ನಾಗಭೂಷಣಸ್ವಾಮಿ ಓ.ಎಲ್., ೨೦೧೩, **ನುಡಿಯೊಳಗಾಗಿ**, ಅಭಿನವ ಪ್ರಕಾಶನ, ಬೆಂಗಳೂರು.

೧೯. ನಾಗಭೂಷಣಸ್ವಾಮಿ ಓ.ಎಲ್., ೨೦೧೩, **ವಿಮರ್ಶೆಯ ಪರಿಭಾಷೆ**, ಅಭಿನವ ಪ್ರಕಾಶನ, ಬೆಂಗಳೂರು.

೨೦. ನಾಗರಾಜ ಕೆ.ವಿ., ೧೯೯೭, **ಸಮೂಹ ಮಾಧ್ಯಮಗಳು ಮತ್ತು ಸಮಾಜ**, ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು.

೨೧. ನಾಗರಾಜ ಸಿ.ಪಿ., ೧೯೮೩, **ಕನ್ನಡ ಬಯ್ಗುಳ ಅಧ್ಯಯನ**, ಎಂ.ಫಿಲ್. ಪ್ರಬಂಧ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೨೨. ನಾಗರಾಜಯ್ಯ ಹಂಪ, ೧೯೯೧, **ದ್ರಾವಿಡ ಭಾಷಾವಿಜ್ಞಾನ**, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೨೩. ನಾಯಕ ಡಿ.ಬಿ., ೨೦೦೩, **ಸಮೂಹ ಮಾಧ್ಯಮಗಳು ಮತ್ತು ಸಮಾಜ**, ಬಂಜಾರ ಪ್ರಕಾಶನ, ಗುಲಬರ್ಗಾ.

೨೪. ನಾರಾಯಣ ಕೆ.ವಿ., ೧೯೯೫, **ಕನ್ನಡಶೈಲಿ ಕೈಪಿಡಿ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ,

ಹಂಪಿ.

೨೫. ನಾರಾಯಣ ಕೆ.ವಿ., ೧೯೯೯, **ದ್ವಿಭಾಷಿಕತೆ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೬. ನಾರಾಯಣ ಕೆ.ವಿ., ೨೦೦೪, **ಮತ್ತೆ ಭಾಷೆಯ ಸುತ್ತಮುತ್ತ,** ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೨೭. ನಾರಾಯಣ ಕೆ.ವಿ.(ಸಂ), ೨೦೦೯, **ಭಾಷೆ ವಿಶ್ವಕೋಶ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೮. ನಾರಾಯಣ ಕೆ.ವಿ., ೨೦೦೭, **ಕನ್ನಡ ಜಗತ್ತು ಅರ್ಧಶತಮಾನ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೯. ನಾರಾಯಣ ಕೆ.ವಿ., ೨೦೧೦, **ತೊಂಡು ಮೇವು,** ಸಂಪುಟ ೧ರಿಂದ ೯, ಬರಹ ಪಬ್ಲಿಷಿಂಗ್ ಹೌಸ್, ಬೆಂಗಳೂರು.

೩೦. ನಾರಾಯಣ ಕೆ.ವಿ.(ಸಂ), ೧೯೯೯, **ಸ್ಥಳನಾಮಗಳು: ಪರಿವರ್ತನೆ ಮತ್ತು ಪ್ರಭಾವ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೧. ನಾರಾಯಣ ಕೆ.ವಿ.(ಸಂ), ೧೯೯೯, **ವ್ಯಕ್ತಿನಾಮಗಳು: ಸ್ವರೂಪ ಮತ್ತು ವಿಶ್ಲೇಷಣೆ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೨. ನೇಗಿನಹಾಳ ಎಂ.ಬಿ., ೧೯೯೯, **ನೇಗಿನಹಾಳ ಪ್ರಬಂಧಗಳು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೩. ಪದ್ಮರಾಜ ದಂಡಾವತಿ(ಸಂ), ೨೦೦೧, **ಪತ್ರಿಕಾ ಭಾಷೆ, ಕರ್ನಾಟಕ ಮಾಧ್ಯಮ ಅಕಾಡೆಮಿ,** ಬೆಂಗಳೂರು.

೩೪. ಪದ್ಮರಾಜ ದಂಡಾವತಿ(ಸಂ), ೨೦೦೪, **ರಿಪೋರ್ಟಿಂಗ್,** ಕರ್ನಾಟಕ ಮಾಧ್ಯಮ ಅಕಾಡೆಮಿ, ಬೆಂಗಳೂರು.

೩೫. ಪಾಂಡುರಂಗಬಾಬು ಡಿ., ೨೦೦೫, **ನುಡಿ ನೋಟ,** ಆಕಾಶ ಪ್ರಕಾಶನ, ಹೊಸಪೇಟೆ.

೩೬. ಪಾಂಡುರಂಗಬಾಬು ಡಿ., ೨೦೦೫, **ನಮ್ಮಾತು,** ಆಕಾಶ ಪ್ರಕಾಶನ, ಹೊಸಪೇಟೆ.

೩೭. ಪಾಂಡುರಂಗಬಾಬು ಡಿ., ೨೦೧೦, **ನಮ್ಮ ಆಟಗಳ ನುಡಿಕಟ್ಟು,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೮. ಬರಗೂರು ರಾಮಚಂದ್ರಪ್ಪ, ೧೯೮೯, **ಶ್ರಮ, ಸಂಸ್ಕೃತಿ ಮತ್ತು ಸೃಜನಶೀಲತೆ,** ಅಂಕಿತ

ಪ್ರಕಾಶನ, ಬೆಂಗಳೂರು.

೩೯. ಪೂರ್ಣಿಮಾ ಟಿ.ಸಿ., ೨೦೦೩, **ಆಧುನಿಕ ಸಂವಹನ ಮಾಧ್ಯಮಗಳು ಮತ್ತು ಕನ್ನಡದ ಅಭಿವೃದ್ಧಿ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೦. ಮಹಾದೇವಯ್ಯ ಪಿ., ೨೦೦೪, **ಕನ್ನಡ ಮತ್ತು ಜನತೆ**, ಸಾರಾ ಎಂಟರ್‌ಪ್ರೈಸಸ್, ಮೈಸೂರು.

೪೧. ಮಹಾದೇವಯ್ಯ ಪಿ., ೨೦೦೬, **ದಿನ ದಿನ ೩**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೨. ಮಹಾದೇವಯ್ಯ ಪಿ., ೨೦೦೦, **ಸಾಮಾಜಿಕ ಉಪಭಾಷೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೩. ಮಹಾದೇವಯ್ಯ ಪಿ., ೨೦೦೬, **ಕನ್ನಡ ಬಳಕೆ: ಸಾಮಾಜಿಕ ವಿನ್ಯಾಸ**, ವಿಜಯಲಕ್ಷ್ಮಿ ಪ್ರಕಾಶನ, ಮೈಸೂರು

೪೪. ರಾಜೇಶ್ವರಿ ಮಹೇಶ್ವರಯ್ಯ, ೧೯೮೭, **ಆಧುನಿಕ ವರ್ಣನಾತ್ಮಕ ಭಾಷಾವಿಜ್ಞಾನ**, ಸಮಾಜ ಪುಸ್ತಕಾಲಯ, ಧಾರವಾಡ.

೪೫. ರಾಮಚಂದ್ರರಾವ್ ಬಿ., ೧೯೯೮, **ಕನ್ನಡ ಭಾಷೆಯ ಇತಿಹಾಸ**, ಡಿ.ವಿ.ಕೆ.ಮೂರ್ತಿ ಪ್ರಕಾಶನ, ಮೈಸೂರು.

೪೬. ರಾಘವನ್ ನಂಬಿಯಾರ್ ಕೆ.ಎಂ., ೨೦೧೨, **ದ್ರಾವಿಡ ನಾಡು-ನುಡಿ**, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು.

೪೭. ರೇಣುಕಾ ಕೋಡಗುಂಟಿ(ಸಂ), ೨೦೧೧, **ಕನ್ನಡ ಭಾಷಾವಿಜ್ಞಾನ ಸಂಶೋಧನೆ: ಇಂದು** ಭಂಡಾರ ಪ್ರಕಾಶನ, ಮಸ್ಕಿ.

೪೮. ಲಿಂಗದೇವರು ಹಳೆಮನೆ(ಸಂ), ೨೦೧೧, **ಅರುಹು-ಕುರುಹು**, ಕನ್ನಡ ಭಾಷಾಧ್ಯಯನ, ವಿಶೇಷ ಸಂಚಿಕೆ, ಮೈಸೂರು.

೪೯. ವೆಂಕಟಸುಬ್ಬಯ್ಯ ಜಿ., ೨೦೧೦, ಇಗೋ **ಕನ್ನಡ ಸಾಮಾಜಿಕ ನಿಘಂಟು**, ನವಕರ್ನಾಟಕ ಪ್ರಕಾಶನ, ಬೆಂಗಳೂರು.

೫೦. ವೆಂಕಟಸುಬ್ಬಯ್ಯ ಜಿ.(ಸಂ), ೧೯೯೮, **ಎರವಲು ಪದಕೋಶ**, ನವಕರ್ನಾಟಕ ಪ್ರಕಾಶನ, ಬೆಂಗಳೂರು.

೫೧. ಶಂಕರಭಟ್ ಡಿ.ಎನ್., ೧೯೯೫, **ಕನ್ನಡ ಭಾಷೆಯ ಕಲ್ಪಿತ ಚರಿತ್ರೆ**, ಪ್ರಸಾರಾಂಗ, ಕನ್ನಡ

ವಿಶ್ವವಿದ್ಯಾಲಯ, ಹಂಪಿ.

೫೨. ಶಂಕರಭಟ್ ಡಿ.ಎನ್., ೧೯೯೭, **ಭಾಷೆಯ ಬಗೆಗೆ ನೀವೇನು ಬಲ್ಲಿರಿ,** ಕರ್ನಾಟಕ ಸಂಘ, ಪುತ್ತೂರು.

೫೩. ಶಂಕರಭಟ್ ಡಿ.ಎನ್., ೨೦೦೪, **ಕನ್ನಡ ಪದಗಳ ಒಳರಚನೆ,** ಭಾಷಾ ಪ್ರಕಾಶನ, ಮೈಸೂರು.

೫೪. ಶಂಕರ ಭಟ್ ಡಿ.ಎನ್., ೨೦೦೪, **ಕನ್ನಡ ವಾಕ್ಯಗಳ ಒಳರಚನೆ,** ಭಾಷಾ ಪ್ರಕಾಶನ, ಮೈಸೂರು.

೫೫. ಶೆಟ್ಟರ್ ಷ., ೨೦೧೪, **ಹಳಗನ್ನಡ ಲಿಪಿ, ಲಿಪಿಕಾರ, ಲಿಪಿ ವ್ಯವಸಾಯ,** ಅಭಿನವ ಪ್ರಕಾಶನ, ಬೆಂಗಳೂರು

೫೬. ಶ್ರೀಧರ ಎಸ್.ಎನ್., ೧೯೯೫, **ಇಂದಿನ ಕನ್ನಡ: ರಚನೆ ಮತ್ತು ಬಳಕೆ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫೭. ಸಂಗಮೇಶ ಸವದತ್ತಿಮಠ, ೧೯೯೦, **ದ್ರಾವಿಡ ಭಾಷಾವಿಜ್ಞಾನ,** ರೂಪರಶ್ಮಿ ಪ್ರಕಾಶನ, ಗುಲಬರ್ಗಾ.

೫೮. ಸಂಗಮೇಶ ಸವದತ್ತಿಮಠ, ೧೯೯೯, **ಭಾಷಾ ಲೇಖ,** ರೂಪದರ್ಶಿ ಪ್ರಕಾಶನ, ಗುಲಬರ್ಗಾ.

೫೯. ಸಂಗಮೇಶ ಸವದತ್ತಿಮಠ, ೨೦೦೦, **ಕನ್ನಡ ಭಾಷೆಯ ಸ್ವರೂಪ,** ರೂಪರಶ್ಮಿ ಪ್ರಕಾಶನ, ಗುಲಬರ್ಗಾ.

೬೦. ಸಣ್ಣ ಪಾಪಯ್ಯ, ೨೦೧೦, **ಚಿತ್ರದುರ್ಗ ಪರಿಸರದ ವ್ಯಕ್ತಿನಾಮಗಳು,** ಭಂಡಾರ ಪ್ರಕಾಶನ, ಮಸ್ಕಿ.

೬೧. ಸಾಂಬಮೂರ್ತಿ, ೨೦೦೪, **ಭಾಷೆ ಮತ್ತು ಅಶಾಬ್ದಿಕ ಸಂವಹನ,** ಸಿ.ವಿ.ಜಿ.ಪ್ರಕಾಶನ, ಬೆಂಗಳೂರು.

೬೨. ಸಾಂಬಮೂರ್ತಿ, ೨೦೦೯, **ಭಾಷಾ ತಂತ್ರಜ್ಞಾನ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬೩. ಸೋಮಶೇಖರಗೌಡ, ೨೦೦೦, **ಇಂದಿನ ಕನ್ನಡ ಭಾಷಾ ಬಳಕೆ,** ವೆಂಕಣ್ಣಯ್ಯ ಪ್ರತಿಷ್ಠಾನ, ಮೈಸೂರು.

೬೪. ಸೋಮಶೇಖರಗೌಡ, ೨೦೦೦, **ಭಾಷೆ: ರಚನೆ ಮತ್ತು ಬಳಕೆ,** ತಳುಕಿನ ವೆಂಕಣ್ಣಯ್ಯ

ಸ್ಮಾರಕ ಗ್ರಂಥಮಾಲೆ, ಮೈಸೂರು.

೬೬. ಹಂದ್ರಾಳ ಗವಿಸಿದ್ದಪ್ಪ, ೨೦೧೦, **ಬೈಗುಳಗಳಲ್ಲಿ ಮಹಿಳೆ,** ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪಿಎಚ್.ಡಿ.ಸಂಶೋಧನ ಪ್ರಬಂಧಗಳು

೧. ಅನ್ನಪೂರ್ಣ ಗುಡದೂರು, ೨೦೦೯, **ಕನ್ನಡ ಕಾದಂಬರಿಗಳಲ್ಲಿ ಭಾಷಾ ಪ್ರಭೇದಗಳು,** ಪಿಎಚ್.ಡಿ.ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨. ಕಾವೇರಿ ಪಿ.ಸಾಗರ, ೨೦೧೨, **ದೂರದರ್ಶನ ಧಾರಾವಾಹಿಗಳಲ್ಲಿ ಮಹಿಳಾ ಪ್ರತಿನಿಧೀಕರಣ,** ಪಿಎಚ್.ಡಿ.ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩. ಪ್ರೇಮ ಪಲ್ಲವಿ ಸಿ.ಬಿ., ೨೦೦೮, **ಕನ್ನಡ ಚಲನಚಿತ್ರಗಳಲ್ಲಿ ಕನ್ನಡ ಭಾಷೆಯ ಬಳಕೆ,** ಪಿಎಚ್.ಡಿ.ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪. ಶಶಿಧರ ನರೇಂದ್ರ, ೨೦೧೧, **ಕನ್ನಡ ನಾಟಕಗಳ ಭಾಷೆ,** ಪಿಎಚ್.ಡಿ.ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಎಂ.ಫಿಲ್.ಪ್ರಬಂಧಗಳು

೧. ಅಜಾಪ್ಪ ಬಾಬು, ೨೦೧೦, **ಬೆಳ್ಳ ಕಾದಂಬರಿ: ಭಾಷಿಕ ಅಧ್ಯಯನ,** ಎಂ.ಫಿಲ್.ಸಂಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨. ಬಸವರಾಜ ಬಿ., ೨೦೦೮, **ಹೋರಾಟದ ಪರಿಭಾಷೆ,** ಎಂ.ಫಿಲ್.ಸಂಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩. ನಾಗರಾಜ ಸಿ.ಪಿ, ೧೯೮೭, **ಕನ್ನಡ ಬಯ್ಗಳ ಅಧ್ಯಯನ,** ಎಂ.ಫಿಲ್.ಸಂಪ್ರಬಂಧ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೪. ರಂಗಸ್ವಾಮಿ ಎಚ್.ಬಿ., ೨೦೧೧, **ದೂರದರ್ಶನದಲ್ಲಿ ಸುದ್ದಿ ಭಾಷಾ ಬದಲಾವಣೆ: ಒಂದು ಅಧ್ಯಯನ,** ಅಧ್ಯಯನ ಸಂಸ್ಥೆ, ಕಾವ್ಯಮಂಡಳ, ಬೆಂಗಳೂರು, ಕನ್ನಡ ವಿಶ್ವವಿದ್ಯಾಲಯದ ಮಾನ್ಯತಾ ಕೇಂದ್ರ.

೫. ಶಂಕ್ರಪ್ಪ, ೨೦೦೮, **ಕನ್ನಡ ದಿನಪತ್ರಿಕೆಗಳಲ್ಲಿ ಅನ್ಯ ಭಾಷಾ ಬಳಕೆ,** ಎಂ.ಫಿಲ್.ಸಂಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬. ಶ್ವೇತಾ ಆರ್., ೨೦೦೯, **ಸಮೂಹ ಮಾಧ್ಯಮಗಳು ಮತ್ತು ಭಾಷೆ,** ಎಂ.ಫಿಲ್.ಸಂಪ್ರಬಂಧ,

ಕನ್ನಡ ವಿಶ್ವವಿದ್ಯಾಲಯ, ಹಂಪಿ.

೭. ಸೂಗಣ್ಣ, ೨೦೦೭, **ಕನ್ನಡ ದಿನಪತ್ರಿಕೆಗಳಲ್ಲಿನ ಕ್ರೀಡಾಪುಟದ ಭಾಷೆ,** ಎಂ.ಫಿಲ್.ಸಂಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೮. ಹೊಲೆಪ್ಪ ಸಂಡೂರು, ೨೦೦೭, **ದೂರದರ್ಶನದಲ್ಲಿ ಕ್ರೈಂನ್ಯೂಸ್: ಭಾಷಿಕ ಅಧ್ಯಯನ,** ಎಂ.ಫಿಲ್.ಸಂಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ದಿನಪತ್ರಿಕೆಗಳು

೧. ಪ್ರಜಾವಾಣಿ

೨. ವಿಜಯವಾಣಿ

೩. ವಿಜಯ ಕರ್ನಾಟಕ

೪. ಕನ್ನಡ ಪ್ರಭ

೫. ಸಂಯುಕ್ತ ಕರ್ನಾಟಕ

೬. ಉದಯವಾಣಿ

ವಾರಪತ್ರಿಕೆಗಳು

೧. ಸುಧಾ(೨೦೧೨ರಿಂದ ೨೦೧೫)

೨. ತರಂಗ(೨೦೧೨ರಿಂದ ೨೦೧೫)

೩. ಕರ್ಮವೀರ(೨೦೧೨ರಿಂದ ೨೦೧೫)

೪. ವಿಜಯ Next((೨೦೧೨ರಿಂದ ೨೦೧೫)

ಅರ್ಧಮಾಸಿಕ ಪತ್ರಿಕೆಗಳು

೧. ಓ ಮನಸೆ(೧-೧೫ ನವೆಂಬರ್ ೨೦೧೪) ಸಂಚಿಕೆ ೧೦೧

ಮಾಸಿಕ ಪತ್ರಿಕೆಗಳು

೧. ನಮ್ಮ ಕನ್ನಡ

ತ್ರೈಮಾಸಿಕ ಪತ್ರಿಕೆಗಳು

೧. ಸಾಹಿತ್ಯ ಪರಿಷತ್ ಪತ್ರಿಕೆ(೨೦೧೨ರಿಂದ ೨೦೧೫)

ಸಿ.ಡಿ. ಮತ್ತು ಅಂತರ್‌ಜಾಲ

೧. ಮಲೆಗಳಲ್ಲಿ ಮದುಮಗಳು

೨. ನಾಕುತಂತಿ

೩. ಮಾಯಾಮೃಗ

೪. ಮದರಂಗಿ

೫. ಸಾಧನೆ

೬. ಪ್ರೀತಿಪ್ರೇಮ

೭. ಗೃಹಭಂಗ

೮. ಕಥೆಗಾರ

೯. ತಕದಿಮಿತ

೧೦. ಅಳಿಗುಳಿಮನೆ

ಆಯ್ದ ಧಾರಾವಾಹಿಗಳ ವಿವರ

೧. ಕೌಟುಂಬಿಕ ಧಾರಾವಾಹಿಗಳು

೧. ಅರಗಿಣಿ(ಸುವರ್ಣ ಟಿವಿ)
೨. ಬಂಗಾರ(ಉದಯ ಟಿವಿ)
೩. ಜೋಕಾಲಿ(ಉದಯ ಟಿವಿ)
೪. ಮಹಾಪರ್ವ(ಈಟಿವಿ ಟಿವಿ)
೫. ಮಾಯಾಮೃಗ(ಚಂದನ ಟಿವಿ)
೬. ಲಕ್ಷ್ಮೀಬಾರಮ್ಮ(ಈಟಿವಿ ಟಿವಿ)
೭. ಮದರಂಗಿ(ಉದಯ ಟಿವಿ)
೮. ನಾಕುತಂತಿ(ಈಟಿವಿ ಟಿವಿ)
೯. ಅಮೃತ ವರ್ಷಿಣಿ(ಸುವರ್ಣ ಟಿವಿ)
೧೦. ಅಕ್ಕ(ಸುವರ್ಣ ಟಿವಿ)
೧೧. ಬದುಕು(ಸುವರ್ಣ ಟಿವಿ)

೨. ಹಾಸ್ಯ ಧಾರಾವಾಹಿಗಳು

೧. ಪಂಚರಂಗಿ ಪೊಂ ಪೊಂ(ಸುವರ್ಣ ಟಿವಿ)
೨. ಪಾರ್ವತಿ ಪರಮೇಶ್ವರ(ಜೀ ಕನ್ನಡ ಟಿವಿ)
೩. ಪಾಂಡುರಂಗ ವಿಠಲ(ಜೀ ಕನ್ನಡ ಟಿವಿ)
೪. ಸಿಲ್ಲಿಲಲ್ಲಿ(ಈಟಿವಿ ಟಿವಿ)

೩. ಪ್ರಾದೇಶಿಕ ಧಾರಾವಾಹಿಗಳು

೧. ಮಲೆಗಳಲ್ಲಿ ಮದುಮಗಳು(ಚಂದನ ಟಿವಿ)
೨. ಗೃಹಭಂಗ(ಚಂದನ ಟಿವಿ)
೩. ಗುಡ್ಡದ ಭೂತ(ಚಂದನ ಟಿವಿ)
೪. ಕಥೆಗಾರ(ಚಂದನ ಟಿವಿ)

೪. ಚಾರಿತ್ರಿಕ ಧಾರಾವಾಹಿಗಳು

೧. ಸೀತೆ(ಉದಯ ಟಿವಿ)
೨. ರಾಘವೇಂದ್ರ ಮಹಿಮೆ(ಈಟಿವಿ ಟಿವಿ)
೩. ಕೆಳದಿ ಚೆನ್ನಮ್ಮ(ಸುವರ್ಣ ಟಿವಿ)
೪. ಸಂತಪ್ತ(Bscoot ಟಿವಿ)